
prajavani.net prajavani
ಶನಿವಾರ, ಜೂನ್ 27, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 177 | ಪುಟ 20
www.prajavani.net

ರೌನಕ್ ಗೆಲುವಿನ ಓಟ



ಭಾರತದ ಬ್ಯಾಡ್ಮಿಂಟನ್ ತಾರೆ ರೌನಕ್ ಚೌಹಾನ್ ಅವರು ಆರನೇ ಶ್ರೇಯಾಂಕದ ಚೌ ಟಿಯೆನ್ ಚೆನ್ (ಚೀನಾ ತೈಪೆ) ಅವರಿಗೆ ಆಘಾತ ನೀಡಿ, ಅಮೆರಿಕ ಓಪನ್ ಕ್ವಾರ್ಟರ್ ಫೈನಲ್ ತಲುಪಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಮೂರು ತಿಂಗಳಾದರೂ ಕಲಾವಿದರಿಗೆ ಸಿಗದ ಮಾಸಾಶನ 6 | ಆ್ಯಪಲ್: ಉತ್ಪನ್ನಗಳ ಬೆಲೆ ಭಾರಿ ಏರಿಕೆ 10

ಭೂಕಂಪ: ಮೃತರ ಸಂಖ್ಯೆ 920ಕ್ಕೆ ಏರಿಕೆ

ಲಾಗ್ವೈರಾ (ವೆನೆಜುವೆಲಾ) (ಎಪಿ): ವೆನೆಜುವೆಲಾದಲ್ಲಿ ಬುಧವಾರ ಸಂಜೆ ಸಂಭವಿಸಿದ ಎರಡು ಪ್ರಬಲ ಭೂಕಂಪಗಳಲ್ಲಿ ಮೃತಪಟ್ಟವರ ಸಂಖ್ಯೆ ಶುಕ್ರವಾರ 920ಕ್ಕೆ ಏರಿಕೆಯಾಗಿದ್ದು, 3,300ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸುವ ಕಾರ್ಯಾಚರಣೆ ನಡೆಯುತ್ತಿದ್ದು, ಹಲವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಇನ್ನೂ ಸಾವಿರಾರು ಜನರು ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಮುಂದುವರಿದಿದೆ.

ವಿವರ 10

‘ನೋಂದಣಿ ಮಾಡಿದರೆ ಆರೋಪವೇ ಇರಲ್ಲ’

ಉಡುಪಿ: ‘ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್‌ಎಸ್‌ಎಸ್) ನೋಂದಣಿ ಮಾಡಿಸಿದರೆ ಯಾರಿಗೂ ಆರೋಪ ಮಾಡಲು ಅವಕಾಶ ಇರುವುದಿಲ್ಲ’ ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಶುಕ್ರವಾರ ಹೇಳಿದರು. ಆರ್‌ಎಸ್‌ಎಸ್ ನೋಂದಣಿ ವಿಚಾರವಾಗಿ ಗೃಹಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಅವರು ಸುದ್ದಿಗಾರರ ಬಳಿ ಪ್ರತಿಕ್ರಿಯಿಸಿದರು.



ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ದೇಣಿಗೆಗೆ ‘ಕನ್ನ’: 8 ಬಂಧನ

ರಾಮಮಂದಿರ ದೇಣಿಗೆ ದುರುಪಯೋಗ ವಿವಾದ • ಆರೋಪಿಗಳಿಂದ ₹79.85 ಲಕ್ಷ ನಗದು ವಶಕ್ಕೆ

ಅಯೋಧ್ಯೆ (ಪಿಟಿಐ): ರಾಮ ಮಂದಿರಕ್ಕೆ ಬಂದ ದೇಣಿಗೆ ದುರುಪಯೋಗಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಎಫ್‌ಐಆರ್‌ನಲ್ಲಿ ಹೆಸರಿಸಲಾದ 8 ಮಂದಿಯನ್ನು ಬಂಧಿಸಿದ್ದಾರೆ.

ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯ ಕೃಷ್ಣ ಮೋಹನ್ ನೀಡಿದ ದೂರಿನ ಅನ್ವಯ 8 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಹಣದ ಅವ್ಯವಹಾರದ ಕುರಿತಂತೆ ತನಿಖೆ ನಡೆಸಲು ಉತ್ತರ ಪ್ರದೇಶ ಸರ್ಕಾರವು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿತ್ತು. ಎಫ್‌ಐಆರ್ ಹಾಗೂ ಎಸ್‌ಐಟಿಯ ಪ್ರಾಥಮಿಕ ತನಿಖೆಯ ಶಿಫಾರಸು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ವಿಚಾರಣೆಗಾಗಿ ಜೂನ್ 29ರವರೆಗೆ ವಶಕ್ಕೆ ಪಡೆಯಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

5





ಅಯೋಧ್ಯೆ ಮೇಲೆ ಕೆಟ್ಟ ದೃಷ್ಟಿ ಹಾಕಬೇಡಿ. ರಾಮನ ಘನತೆಯನ್ನು ಎತ್ತಿಹಿಡಿಯಬೇಕು. ಈಗಾಗಲೇ ಎಸ್‌ಐಟಿ ರಚಿಸಲಾಗಿದ್ದು, ಜನರ ನಂಬಿಕೆಯನ್ನು ಗಾಸಿಗೊಳಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು

ಯೋಗಿ ಆದಿತ್ಯನಾಥ
ಉತ್ತರಪ್ರದೇಶ ಮುಖ್ಯಮಂತ್ರಿ

ಚಂಪತ್ ರಾಯ್, ಮಿಶ್ರಾ ರಾಜೀನಾಮೆ



ಚಂಪತ್ ರಾಯ್

ದೇಣಿಗೆ ದುರುಪಯೋಗ ವಿಚಾರವು ತೀವ್ರ ಟೀಕೆಗೆ ಗುರಿಯಾದ ಬೆನ್ನಲ್ಲೇ, ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ರಾಜೀನಾಮೆ ಸಲ್ಲಿಸಿದ್ದಾರೆ. ಟ್ರಸ್ಟ್‌ನ ಮತ್ತೊಬ್ಬ ಸದಸ್ಯ ಅನಿಲ್ ಮಿಶ್ರಾ ಕೂಡ ಟ್ರಸ್ಟ್‌ನ ಅಧ್ಯಕ್ಷ ಮಹಂತ್ ನೃತ್ಯ ಗೋಪಾಲ್ ದಾಸ್ ಅವರಿಗೆ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೇಣಿಗೆ ದುರುಪಯೋಗದ ಆರೋಪ ಕೇಳಿಬಂದ ತಕ್ಷಣ, ನಿಷ್ಪಕ್ಷಪಾತ ತನಿಖೆ ನಡೆಸಲು ರಾಯ್ ಹಾಗೂ ಮಿಶ್ರಾ ರಾಜೀನಾಮೆಗೆ ವಿರೋಧ ಪಕ್ಷಗಳು ಒತ್ತಾಯಿಸಿದ್ದವು. ಇದೀಗ ಅವರು ರಾಜೀನಾಮೆ ನೀಡಿದ್ದಾರೆ. ಎಫ್‌ಐಆರ್‌ನಲ್ಲಿ ಈ ಇಬ್ಬರ ಹೆಸರೂ ಉಲ್ಲೇಖಿತವಾಗಿಲ್ಲ. ‘ರಾಯ್ ರಾಜೀನಾಮೆ ಕುರಿತಂತೆ ಯಾವುದೇ ಮಾಹಿತಿ ಇಲ್ಲ’ ಎಂದು ವಿಶ್ವ ಹಿಂದೂ ಪರಿಷತ್ ವಕ್ತಾರ ವಿನೋದ್ ಬನ್ಸಾಲ್ ತಿಳಿಸಿದ್ದಾರೆ.

‘₹1 ಕೋಟಿ ದೇಣಿಗೆಗೆ ರಸೀದಿ ಸಿಕ್ಕಿಲ್ಲ’



ಮುಂಬೈ (ಪಿಟಿಐ): ‘ರಾಮಮಂದಿರ ನಿರ್ಮಾಣಕ್ಕೆ ಶಿವಸೇನಾ ಪಕ್ಷವು ನೀಡಿದ ₹1 ಕೋಟಿ ದೇಣಿಗೆಗೆ ಇವರೆಗೂ ರಸೀದಿ ಸಿಕ್ಕಿಲ್ಲ’ ಎಂದು ಶಿವಸೇನೆ (ಉದ್ಧವ್ ಠಾಕ್ರೆ ಬಣ) ನಾಯಕ ಸಂಜಯ್ ರಾವುತ್ ತಿಳಿಸಿದ್ದಾರೆ.

5

‘ಬಿಜೆಪಿಯದ್ದು ನಕಲಿ ಹಿಂದುತ್ವ’

ಸಂಭಲ್ (ಪಿಟಿಐ): ದೇಣಿಗೆ ವಿಚಾರದಲ್ಲಿ ದೊಡ್ಡವರನ್ನು ರಕ್ಷಿಸುವ ಉದ್ದೇಶದಿಂದ ಕೆಳಹಂತದ ನೌಕರರನ್ನು ಗುರಿ ಯಾಗಿಸಿಕೊಂಡ ಸರ್ಕಾರದ ನಿರ್ಧಾರದ ವಿರುದ್ಧ ಉತ್ತರಾಖಂಡ ಜ್ಯೋತಿರ್ಮಠದ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಕಿಡಿಕಾರಿದ್ದಾರೆ.

5

ಎನ್‌ಸಿಇಆರ್‌ಟಿ ಪಠ್ಯದಲ್ಲಿ ಮನುಸ್ಮೃತಿ ಶ್ಲೋಕ

ವಿವರ 11

ನವದೆಹಲಿ (ಪಿಟಿಐ): ‘ವೇದ ಕಾಲದಲ್ಲಿ ಮಹಿಳೆಯರಿಗೆ ಗೌರವ ನೀಡಲಾಗುತ್ತಿತ್ತು. ಕಾಲಕ್ರಮೇಣ ಮಹಿಳೆಯರ ಬಗೆಗಿನ ಗೌರವ ಕಡಿಮೆ ಆಯಿತು’ ಎಂದು ಹೇಳುವ ಮನುಸ್ಮೃತಿಯ ಶ್ಲೋಕವೊಂದನ್ನು ಎನ್‌ಸಿಇಆರ್‌ಟಿ ಸಮಾಜವಿಜ್ಞಾನ ಪಠ್ಯಪುಸ್ತಕದಲ್ಲಿ ಸೇರಿಸಲಾಗಿದೆ.

ಚಿನಕುರುಳಿ — ಪ್ರಕಾಶ್ ಶೆಟ್ಟಿ



12 ಲಕ್ಷ ತೆರಿಗೆ ಪಾವತಿದಾರರ ಮೇಲೆ ಕಣ್ಗಾವಲು: ಡಿ.ಕೆ. ಶಿವಕುಮಾರ್ ಎಚ್ಚರಿಕೆ

‘ಜಿಎಸ್‌ಟಿ ವಂಚನೆ ತಡೆಗೆ ಹದ್ದಿನಕಣ್ಣು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರಕು ಮತ್ತು ಸೇವಾ ತೆರಿಗೆ ಪಾವತಿಯ ರಸೀದಿ, ದಾಖಲೆಗಳಿಲ್ಲದ ಸರಕು ಸಾಗಣೆ ವಾಹನಗಳು ಚೆಕ್‌ಪೋಸ್ಟ್ ಹಾಗೂ ರಾಜ್ಯದ ಗಡಿಯನ್ನು ದಾಟದಂತೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು. ತೆರಿಗೆ ಸೋರಿಕೆಗೆ ಅವಕಾಶ ನೀಡಬಾರದು. ಜಿಎಸ್‌ಟಿಯಡಿ ನೋಂದಾಯಿಸಿರುವ 12 ಲಕ್ಷ ತೆರಿಗೆ ಪಾವತಿದಾರರ ಮೇಲೂ ನಿಗಾ ವಹಿಸಬೇಕು’ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದರು.

ಸರ್ಕಾರಿ ರಜಾದಿನವಾದ ಶುಕ್ರವಾರ ವಾಣಿಜ್ಯ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯನ್ನು ನಡೆಸಿದ ಅವರು ಹಲವು ನಿರ್ದೇಶನಗಳನ್ನು ಅಧಿಕಾರಿಗಳಿಗೆ ನೀಡಿದರು. ‘ಪಕ್ಕದ ರಾಜ್ಯಗಳ ವಾಣಿಜ್ಯ ತೆರಿಗೆ ಇಲಾಖೆ, ಜಾರಿ ವಿಭಾಗಗಳ ಸಮನ್ವಯ ಸಾಧಿಸಬೇಕು. ಮಾಹಿತಿ ಹಂಚಿಕೆ, ಜಂಟಿ ಕಾರ್ಯಾಚರಣೆಗಳ ಮೂಲಕ ಜಿಎಸ್‌ಟಿ ಸೋರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬೇಕು’ ಎಂದು ಸೂಚಿಸಿದರು.

6



ನನ್ನ ಸಾರ್ವಜನಿಕ ಜೀವನಕ್ಕೆ 38 ವರ್ಷಗಳ ಅನುಭವ ಇದೆ. ಹಲವು ಖಾತೆಗಳನ್ನು ನಿರ್ವಹಿಸಿದ್ದೇನೆ. ಹಣಕಾಸು ಇಲಾಖೆಯ ಕಾರ್ಯವೈಖರಿ ಅರ್ಥಮಾಡಿಕೊಳ್ಳುತ್ತಿದ್ದೇನೆ. ಅಧಿಕಾರಿಗಳು ಮುಕ್ತವಾಗಿ ಸಲಹೆ ನೀಡಬಹುದು

ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

‘ಸಿ.ಎಂ’ ಪ್ರತ್ಯೇಕ ಪಡೆ

‘ವಾಣಿಜ್ಯ ತೆರಿಗೆ ಸಂಗ್ರಹದ ಮೇಲೆ ಕಣ್ಣಿಡಲು, ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಲೋಪ ಪತ್ತೆ ಮಾಡಲು ನನ್ನದೇ ಪ್ರತ್ಯೇಕ ಪಡೆ (ವ್ಯವಸ್ಥೆ) ಇದೆ. ಚಿಕ್ಕಪೇಟೆಯಿಂದ ಗಾಂಧಿನಗರದವರೆಗೆ, ಗಡಿ ಜಿಲ್ಲೆಗಳೂ ಸೇರಿದಂತೆ ರಾಜ್ಯದ ಎಲ್ಲ ಭಾಗಗಳಲ್ಲೂ ಸಂಪರ್ಕಗಳಿವೆ’ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

6

Pigeon®

EX ಅನ್ನು ಮಾಡಿ EXCHANGE!



UP TO 50% OFF*

ನಿಮ್ಮ ಹಳೆಯ ಕಿಚನ್ ಅಪ್ಲಯನ್ಸ್ ಅಥವಾ ಕುಕ್‌ವೇರ್ ತಂದು,
ಹೊಸದಾದ ಉತ್ಪನ್ನವನ್ನು ಮನೆಗೆ ತೆಗೆದುಕೊಂಡು ಹೋಗಿ.
ನಿಮ್ಮ ಕಿಚನ್ ಎಕ್ಸ್ ಅನ್ನು ಇಂದೇ ಎಕ್ಸ್‌ಚೇಂಜ್ ಮಾಡಿಕೊಳ್ಳಿ

ಪಿಜನ್ ಕುಕ್‌ವೇರ್ ಮತ್ತು ಕಿಚನ್ ಉಪಕರಣಗಳ ವಿಶಾಲ ಶ್ರೇಣಿಯಿಂದ ಆಯ್ಕೆಮಾಡಿ

ಪ್ರೆಶರ್ ಕುಕ್ಕರ್‌ಗಳು | ಕುಕ್‌ಟಾಪ್‌ಗಳು | ಏರ್ ಫ್ರೈಯರ್‌ಗಳು | ಮಿಕ್ಸರ್ ಗ್ರೈಂಡರ್‌ಗಳು | ಜ್ಯೂಸರ್‌ಗಳು | ಒಟಿಜಿಗಳು | ಕುಕ್‌ವೇರ್ | ಕಿಚನ್ ಯುಟಿಲಿಟೀಸ್ | ಕೆಟಲ್‌ಗಳು
ಎಲೆಕ್ಟ್ರಿಕ್ ರೈಸ್ ಕುಕ್ಕರ್‌ಗಳು | ಇಂಡಕ್ಷನ್/ಇನ್ಫ್ರಾರೆಡ್ ಕುಕ್‌ಟಾಪ್‌ಗಳು | ಎಲೆಕ್ಟ್ರಿಕ್ ಪ್ರೆಶರ್ ಕುಕ್ಕರ್‌ಗಳು | ಬಾಟಲಿಗಳು | ಚಿಮ್ನಿಗಳು | ಹಾಬ್‌ಗಳು | ಇಸ್ತ್ರಿಗಳು

ತರಲಾಗುವ ಹಳೆಯ ಉತ್ಪನ್ನವು ಯಾವುದೇ ಬ್ರ್ಯಾಂಡ್ / ಯಾವುದೇ ಸ್ಥಿತಿ / ಯಾವುದೇ ಅಪ್ಲಯನ್ಸ್ ಆಗಿರಬಹುದು.

STOVEKRAFT®

*For T&C, refer to stovekraft.com/exkokaroexchange

Follow us on:

Bangalore: Madhukar Domestic Appliances Pvt. Ltd.: 9844763986, 9591481866, 9035081280, 9035081281, 9035081282, 9035081283, 9035081284, 9035081285, 9945110994
Sushan Marketing: 9538349353, 6363458344 **Upcountry: Tej Marketing:** 9880466627, 9448246982 **For Corporate and Bulk Enquiries:** 9945002973, 9880280171

Pigeon Exclusive Stores: Bangalore: Frazer Town 080 43779137 Rammurthy Nagar: 08049566539 Mathikere: 9880716920 Rajaji Nagar: 080 31623108 Uttrahalli: 9535154377 Sri Nivas Nagar: 080 49729369 Malleshwaram: 080 35507820 Kasturi Nagar: 9538663296 RT Nagar: 080 40157865 Chanasandra: 080 35665045 Vidyaranyapura: 080 49752346 Vajrahalli: 077 60961690 RR Nagar: 080 41531911 JP Nagar 8Th Phase: 080 35711422 Jaya Nagar 4Th Blk: 080 41600779 BTM 2Nd Bangalore 080 31648532 Basaveshwar Nagar: 080 49709474 Hesarghatta Main Road: 080 35223220 Ananth Nagar: 080 43705652 Hoskote Bangalore: 080 23900438 Horamavu: 7829301990 Vijay Nagar: 080 47566259 Jigani: 080 22440170 Hegganahalli Peenya 2Nd Stage Bangalore: 080 31212223 Sarjapur Rd: 080 68785663 Banashankari 3Rd: 080 48665527 Andrahallli: 8660074851 Vignana Nagar: 080 49708551 JP Nagar 24Th Main: 9902607041 Chunchaghatta: 080 35511267 Bagalur Main Road: 080 41136844 Harohalli: 09740034281 Yelahanka NT: 080 40942163 Sunkadakatte: 080 25998167 Byadarahalli Magdi Rd: 733 8141336 Devasandra Main Road: 8748822410 Yelachenahalli: 9513287456 Nagarabhavi Circle: 080 22220032 Kaggadasapura: 080 41505349 Dinnur Main Road: 8042134626 Sultan Palya: 8041675326 ITI Layout Bangalore: 8022200332 Kammanahalli: Peace Layout: 8031212318 9Th Block Jayanagar: 080 35970710 Bommanahalli Main Rd: 8035992343 Kudlu Main Road: 9380484500 Nelamangala Main Road: 9535508139 Sarjapura Vinayakanagar: 6361 646601 Sanjay Nagar: 6360 102526 RK Hegde Nagar: 080 69956098 TC Palya Main Road: 080 45461923 Malur: 08151450448 Kodihalli Gate (Sahakar Nagar): 8049721126 Kaggalipura: 9886707968 Anekal Main Road: 9742983668 Chandapura: 7337778486

For franchise enquiries and corporate/bulk orders, contact: 9620350367

For any service related queries, please contact: | 6364914202

Locate your nearest
Pigeon Exclusive Store

ವಿದ್ಯುತ್ ಸ್ಪರ್ಶ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಟ್ರಿನಿಟಿ ನಿಲ್ದಾಣದ ಹೊರಭಾಗದಲ್ಲಿ ಬೆಳಕಿನ ವ್ಯವಸ್ಥೆಯ ಕೆಲಸ ಮಾಡುತ್ತಿದ್ದ ಕಾರ್ಮಿಕ ಶುಕ್ರವಾರ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದ್ದಾರೆ.

ಎಂ/ಎಸ್ ಎಂ.ಆರ್. ಎಲೆಕ್ಟ್ರಿಕಲ್ಸ್ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕರಾಗಿದ್ದ ಗುರಪ್ಪ (70) ಮೃತಪಟ್ಟವರು.

ನಮ್ಮ ಮೆಟ್ರೊ ಪಿಲ್ಲರ್‌ಗಳಿಗೆ ಬೆಳಕಿನ ವ್ಯವಸ್ಥೆಯನ್ನು ಎಂ/ಎಸ್ ಎಂ.ಆರ್. ಎಲೆಕ್ಟ್ರಿಕಲ್ಸ್ ಸಂಸ್ಥೆ ನಿರ್ವಹಿಸುತ್ತಿತ್ತು. ಶುಕ್ರವಾರ ಮಧ್ಯಾಹ್ನ 3.52ಕ್ಕೆ ಟ್ರಿನಿಟಿ ಮೆಟ್ರೊ ನಿಲ್ದಾಣದ ಹೊರಭಾಗದಲ್ಲಿರುವ ಪಿಲ್ಲರ್ ಸಂಖ್ಯೆ 153ರ ಸಮೀಪ ಭೂಮಿಯಲ್ಲಿ ಅರ್ಥ್ ಪಿಟ್ ಕಾಮಗಾರಿ ನಡೆಸುವ ವೇಳೆ ವಿದ್ಯುತ್ ಸ್ಪರ್ಶವಾಗಿ ಗುರಪ್ಪ ಗಂಭೀರವಾಗಿ ಗಾಯಗೊಂಡಿದ್ದರು.

ಅವರನ್ನು ತಕ್ಷಣವೇ ಸೇಂಟ್ ಫಿಲೋಮಿನಾ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ದಾಖಲಿಸಲಾಯಿತು. ಆದರೆ, ಆಸ್ಪತ್ರೆಗೆ ತಲುಪುವಷ್ಟರಲ್ಲಿ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು. ಘಟನೆಯ ನಿಖರ ಕಾರಣ ಪತ್ತೆಹಚ್ಚುವ ಕಾರ್ಯ ಪ್ರಗತಿಯಲ್ಲಿದ್ದು, ಪ್ರಕರಣ ಕುರಿತು ಸಮಗ್ರ ತನಿಖೆ ನಡೆಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ನಮ್ಮ ಮೆಟ್ರೊ ರೈಲಿನ ಡೋರ್ ಗೈಡ್‌ವೇಯಲ್ಲಿ ಸಿಲುಕಿಕೊಂಡಿದ್ದ ಲೋಹದ ಸರ

ಮೆಟ್ರೊ ಬಾಗಿಲು ಮುಚ್ಚಲು ಅಡ್ಡಿಯಾಗಿದ್ದ ಚೈನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ಗುರುವಾರ ಮೆಟ್ರೊ ರೈಲಿನ ಬಾಗಿಲು ಮುಚ್ಚಲಾಗದೇ ಸಂಚಾರ ಸ್ಥಗಿತಗೊಳ್ಳಲು ಸರ ಕಾರಣ ಎಂಬುದನ್ನು ಮೆಟ್ರೊ ಕಾರ್ಯಾಚರಣೆ ಮತ್ತು ನಿರ್ವಹಣಾ ತಂಡ ಪತ್ತೆ ಹಚ್ಚಿದೆ.

ಪ್ರಯಾಣಿಕರೊಬ್ಬರ ಲೋಹದ ಸರ ರೈಲಿನ ಡೋರ್ ಗೈಡ್‌ವೇಯಲ್ಲಿ ಸಿಲುಕಿಕೊಂಡಿದ್ದರಿಂದ ಬಾಗಿಲುಗಳು ಸರಿಯಾಗಿ ಮುಚ್ಚಲು ಸಾಧ್ಯವಾಗದೆ ತಾತ್ಕಾಲಿಕವಾಗಿ ಸಂಚಾರ ಸ್ಥಗಿತಗೊಂಡಿತ್ತು. ರೈಲಿನ ಉಪಕರಣಗಳಲ್ಲಿ ಯಾವುದೇ ತಾಂತ್ರಿಕ ದೋಷ ಕಂಡುಬಂದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಗುರುವಾರ ರಾತ್ರಿ 7.36ಕ್ಕೆ ಬಂದ ಮೆಟ್ರೊ ರೈಲಿನ ಬಾಗಿಲು ತೆರೆದ ಬಳಿಕ ಮುಚ್ಚಲು ಆಗದ ಕಾರಣ ರಾತ್ರಿ 7.54ರವರೆಗೆ ಮೆಟ್ರೊ ಸಂಚಾರ ಸ್ಥಗಿತವಾಗಿತ್ತು. ಈ ಮೆಟ್ರೊದಲ್ಲಿದ್ದ ಎಲ್ಲ ಪ್ರಯಾಣಿಕರನ್ನು ಇಳಿಸಲಾಗಿತ್ತು.

ಹಿರಿಯ ನಾಗರಿಕರಿಗೆ ಮನೆಗಳ ನಿರ್ಮಾಣ

ಬೆಂಗಳೂರು: ವಿಶೇಷವಾಗಿ ಹಿರಿಯ ನಾಗರಿಕರಿಗಾಗಿ ರೂಪಿಸಿರುವ ವಸತಿ ಯೋಜನೆಗೆ ಗೋಪಾಲನ್ ಒಲಿಂಪಿಕ್ ಪ್ರೈಮಸ್ ಸಂಸ್ಥೆಯು ಚಾಲನೆ ನೀಡಿದೆ.

ಮೊದಲ ಹಂತದಲ್ಲಿ 1030 ಚದರ ಅಡಿಯ 120 ಮನೆಗಳನ್ನು ನಿರ್ಮಿಸುತ್ತಿದ್ದು, ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ. ಬೇಡಿಕೆ ಆಧರಿಸಿ ಇನ್ನೂ ಎರಡು ಹಂತಗಳಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಕಂಪನಿಯ ಮುಖ್ಯಸ್ಥ ಆದರ್ಶ್ ನರಹರಿ ತಿಳಿಸಿದರು.

‘ಬಹು-ಪೀಳಿಗೆಯ ಮನೆ’ ಪರಿಕಲ್ಪನೆಯಡಿ ಒಂಟಿತನ ಹೋಗಲಾಡಿಸಲು ಮತ್ತು ಸಮುದಾಯ ಬಾಂಧವ್ಯವನ್ನು ಬೆಳೆಸಲು ಹಿರಿಯರು, ಕುಟುಂಬಗಳು ಮತ್ತು ಯುವ ನಿವಾಸಿಗಳ ನಡುವಿನ ಪರಸ್ಪರ ಸಂವಹನವನ್ನು ಇದು ಉತ್ತೇಜಿಸುತ್ತದೆ. ಮುಂದಿನ 5 ವರ್ಷಗಳಲ್ಲಿ ಈ ಮಾದರಿಯನ್ನು ದೇಶದಾದ್ಯಂತ ವಿಸ್ತರಿಸುವ ಗುರಿ ಇದೆ ಎಂದು ಅವರು ಹೇಳಿದರು.

ಎಸ್.ಎಂ. ಕೃಷ್ಣ ರಸ್ತೆಗೆ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ, ಜೂನ್ 27ರಂದು ವಾಕಥಾನ್, ಹಸಿರು ಅಭಿಯಾನ ಮತ್ತು ಎಸ್.ಎಂ. ಕೃಷ್ಣ ರಸ್ತೆಗೆ ಚಾಲನೆ ನೀಡುವ ಕಾರ್ಯಕ್ರಮಗಳು ನಡೆಯಲಿವೆ.

ನಾಡಪ್ರಭು ಕೆಂಪೇಗೌಡರ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಭಾಗಿತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

10ಕೆ ಹಾಗೂ 5 ಕೆ ವಾಕಥಾನ್ ನಡೆಯಲಿದ್ದು, 15 ಲಕ್ಷ ಸಸಿ ನೆಡುವ ಹಸಿರು ಅಭಿಯಾನಕ್ಕೆ ಶನಿವಾರ ಬೆಳಿಗ್ಗೆ ಚಾಲನೆ ನೀಡಲಾಗುತ್ತದೆ. ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಕೆಂಪೇಗೌಡ ಪ್ರತಿಮೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾಲಾರ್ಪಣೆ ಮಾಡಲಿದ್ದಾರೆ. ಯಲಹಂಕ ಹಾಗೂ ವಿಧಾನಸೌಧದಲ್ಲಿರುವ ಕೆಂಪೇಗೌಡ ಪ್ರತಿಮೆಗೂ ಪುಷ್ಪಾರ್ಚನೆ ನಡೆಯಲಿದೆ.

ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆ ಸಂಪರ್ಕಿಸುವ 'ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ದಶಪಥ ರಸ್ತೆ'ಗೆ ಡಿ.ಕೆ. ಶಿವಕುಮಾರ್ ಅವರು ಚಲ್ಲಘಟ್ಟದಲ್ಲಿ ಚಾಲನೆ ನೀಡಲಿದ್ದು, ನಂತರ ನಡೆಯುವ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಾಧಕರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಮಾಗಡಿಯ ಕೆಂಪಾಪುರದಲ್ಲಿರುವ ಕೆಂಪೇಗೌಡ ಸಮಾಧಿಯಿಂದ ಪುರಜ್ಯೋತಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಎಚ್.ಸಿ. ಬಾಲಕೃಷ್ಣ ಚಾಲನೆ ನೀಡಲಿದ್ದಾರೆ. ಕೆಂಪಾಬುಧಿ ಕೆರೆ ಗಡಿ ಗೋಪುರದಿಂದ ಪುರಜ್ಯೋತಿಗೆ ಶಾಸಕ ಜಮೀರ್ ಅಹಮದ್ ಖಾನ್, ಶಾಸಕ ರವಿ ಸುಬ್ರಮಣ್ಯ; ಲಾಲ್‌ಬಾಗ್ ಗಡಿಗೋಪುರದಿಂದ ದಿವ್ಯಜ್ಯೋತಿಗೆ ಸಚಿವ ಕೃಷ್ಣ ಬೈರೇಗೌಡ, ಶಾಸಕ ಉದಯ್ ಬಿ. ಗರುಡಾಚಾರ್; ಮೇಖ್ರಿ ವೃತ್ತ ಗಡಿ ಗೋಪುರದಿಂದ ಪುರಜ್ಯೋತಿಗೆ ಸಚಿವ ಬೈರತಿ ಸುರೇಶ್, ಶಾಸಕ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ; ಹಲಸೂರು ಕೆರೆ ಗಡಿ ಗೋಪುರದಿಂದ ಪುರಜ್ಯೋತಿಗೆ ಸಚಿವ ಕೆ.ಜೆ. ಜಾರ್ಜ್, ಶಾಸಕ ರಿಜ್ವಾನ್ ಹರ್ಷದ್; ಆವತಿ ಚೆನ್ನಕೇಶವ ದೇವಾಲಯದ ಆವರಣದಿಂದ ಪುರಜ್ಯೋತಿಗೆ ಸಚಿವ ಕೆ.ಎಚ್. ಮುನಿಯಪ್ಪ; ಹುತ್ರಿದುರ್ಗದ ಬಯಲು ಬಿಸಿಲು ಬಸವಣ್ಣನ ಸ್ಥಳದಿಂದ ಪುರಜ್ಯೋತಿಗೆ ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ, ಶಾಸಕ ಎಚ್.ಡಿ. ರಂಗನಾಥ್ ಚಾಲನೆ ನೀಡಲಿದ್ದಾರೆ.

ಏಳು ಕಡೆಯಿಂದ ಶನಿವಾರ ಬೆಳಿಗ್ಗೆ 7 ಗಂಟೆಗೆ ಹೊರಡುವ ಈ ಪುರಜ್ಯೋತಿಗಳನ್ನು, ಶಿವಕುಮಾರ್, ಪರಮೇಶ್ವರ ಅವರು 'ಎಸ್.ಎಂ. ಕೃಷ್ಣ ದಶಪಥ ರಸ್ತೆ'ಯಲ್ಲಿ ಸ್ವೀಕರಿಸುವರು ಎಂದು ಪ್ರಕಟಣೆ ತಿಳಿಸಿದೆ.



ವೃಕ್ಷಾರೋಪಣ ಕಾರ್ಯಕ್ರಮದ ಭಾಗವಾಗಿ ಡಾ.ಟಿ. ನವೀನ್ ಹಾಗೂ ಸಿಬ್ಬಂದಿ ಗಿಡಗಳನ್ನು ನೆಟ್ಟರು

ಕಿದ್ವಾಯಿ ಆಸ್ಪತ್ರೆ: 100 ಗಿಡಗಳ ನೆಡುವ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಗಿಡಗಳನ್ನು ನೆಡುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಆರೋಗ್ಯಯುತ ಜೀವನಕ್ಕೆ ಮನೆಗೊಂದು ಮರವನ್ನಾದರೂ ಬೆಳೆಸಬೇಕು' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಟಿ. ನವೀನ್ ಅಭಿಪ್ರಾಯಪಟ್ಟರು.

ನಗರದಲ್ಲಿ ಬಿಡಿಎ ಹಮ್ಮಿಕೊಂಡಿರುವ ವೃಕ್ಷಾರೋಪಣ ಅಭಿಯಾನದ ಭಾಗವಾಗಿ ಸಂಸ್ಥೆ ತನ್ನ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 100 ಗಿಡಗಳನ್ನು ನೆಡುವ ಸಂಕಲ್ಪ ಮಾಡಿತು.

ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಡಾ.ಟಿ. ನವೀನ್, 'ಜಲ ಸಂರಕ್ಷಣೆ, ವೃಕ್ಷಾರೋಪಣ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಭವಿಷ್ಯದ ಪೀಳಿಗೆಗೆ ಹಸಿರು ಮತ್ತು ಸಮೃದ್ಧ ಭೂಮಿಯನ್ನು ಉಳಿಸಬೇಕು. ಸಂಸ್ಥೆಯ ಆವರಣದಲ್ಲಿ ಶುದ್ಧ ವಾತಾವರಣ ನಿರ್ಮಾಣಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ' ಎಂದರು.

'ಸಂಸ್ಥೆಯ ಆವರಣದಲ್ಲಿ ಪ್ರತಿವರ್ಷವೂ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಡುವ ಸಂಕಲ್ಪ ಮಾಡಲಾಗಿದೆ. ರೋಗಿಗಳಿಗೆ ಮಾನಸಿಕ ನೆಮ್ಮದಿ ಮತ್ತು ಮನೆಯ ವಾತಾವರಣ ಕಲ್ಪಿಸಲು ಆವರಣದಲ್ಲಿ 30 ಸಾವಿರಕ್ಕೂ ಹೆಚ್ಚು ಗಿಡ–ಮರಗಳನ್ನು ಹೊಂದಲಾಗಿದೆ' ಎಂದರು.

'ರಾಜ್ಯದಲ್ಲಿ ಅತಿ ಹೆಚ್ಚು ಸಸ್ಯ ಸಂಕುಲ ಹೊಂದಿರುವ ಆಸ್ಪತ್ರೆಗಳ ಪೈಕಿ ಕಿದ್ವಾಯಿ ಸಂಸ್ಥೆ ಮುಂಚೂಣಿಯಲ್ಲಿದೆ. ಪರಿಸರ ಸಂರಕ್ಷಣೆ ಮತ್ತು ವ್ಯವಸ್ಥಾಪನಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗೆ ರಾಜ್ಯ ಸರ್ಕಾರ ನೀಡುವ ಪರಿಸರ ಪ್ರಶಸ್ತಿಯನ್ನೂ ಸಂಸ್ಥೆ ಪಡೆದಿದೆ' ಎಂದು ಸ್ಮರಿಸಿಕೊಂಡರು.

ಸಂಸ್ಥೆಯ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಂಠೀರವ ಕ್ರೀಡಾಂಗಣದ ಸುತ್ತಮುತ್ತ ವಾಹನ ನಿಲುಗಡೆ ನಿರ್ಬಂಧ

ಬೆಂಗಳೂರು: ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಂಠೀರವ ಕ್ರೀಡಾಂಗಣದಲ್ಲಿ ಜೂನ್ 28ರಂದು 'ನಶೆಮುಕ್ತ ಭಾರತ ಹಾಗೂ ಅಂತರರಾಷ್ಟ್ರೀಯ ಮಾದಕ ವ್ಯಸನ–ಅಕ್ರಮ ಕಳ್ಳ ಸಾಗಾಣಿಕೆ ವಿರೋಧಿ ದಿನ'ದ ಅಂಗವಾಗಿ ಕಾರ್ಯಕ್ರಮವನ್ನು ಆಯೋಜಿಸಿದ್ದು, ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದಲ್ಲಿ ಹೆಚ್ಚಿನ ಸಾರ್ವಜನಿಕರು ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಕ್ರೀಡಾಂಗಣದ ಸುತ್ತಮುತ್ತಲ ರಸ್ತೆಗಳಲ್ಲಿ ಅಂದು ವಾಹನಗಳ ನಿಲುಗಡೆಯನ್ನು ನಿರ್ಬಂಧಿಸಲಾಗಿದೆ.

ಪಾರ್ಕಿಂಗ್ ನಿಷೇಧಿತ ರಸ್ತೆಗಳು: ಶೇಷಾದ್ರಿ ರಸ್ತೆ, ನೃಪತುಂಗ ರಸ್ತೆ, ಕೆ.ಜಿ ರಸ್ತೆ, ಕೆ.ಬಿ ರಸ್ತೆ, ವಿಠ್ಠಲಮಲ್ಯ ರಸ್ತೆ, ಆರ್‌ಆರ್‌ಎಂಆರ್ ರಸ್ತೆ.

ಕಾರ್ಯಕ್ರಮಕ್ಕೆ ಆಗಮಿಸುವ ವಾಹನಗಳಿಗೆ ಪಾರ್ಕಿಂಗ್ ಸ್ಥಳಗಳು: ಸೇಂಟ್ ಜೋಸೆಫ್ ಪ್ರೌಢಶಾಲೆ ಮೈದಾನ, ಸ್ವಾತಂತ್ರ್ಯ ಉದ್ಯಾನದ ಬಹುಮಹಡಿ ಪಾರ್ಕಿಂಗ್ ಕಟ್ಟಡ, ಅರಮನೆ ಮೈದಾನದ ಗೇಟ್ ಸಂಖ್ಯೆ 4.

ಬೆನ್ನುಮೂಳೆ ವಿರೂಪ: ಬಾಲಕಿಗೆ ಚಿಕಿತ್ಸೆ

ಬೆಂಗಳೂರು: ಬೆನ್ನುಮೂಳೆ ವಿರೂಪಗೊಂಡು ನಡೆದಾಡಲು ಸಮಸ್ಯೆ ಎದುರಿಸುತ್ತಿದ್ದ ಹತ್ತು ವರ್ಷದ ಬಾಲಕಿಗೆ ಇಲ್ಲಿನ ಗ್ಲೆನಿಗಲ್ಸ್ ಬಿಜಿಎಸ್ ಆಸ್ಪತ್ರೆಯ ವೈದ್ಯರು ಒದಗಿಸಿದ ಚಿಕಿತ್ಸೆ ಯಶಸ್ವಿಯಾಗಿದೆ.

ಬಾಲಕಿಯು 'ಆರ್ನಾಲ್ಡ್ ಚಿಯಾರಿ' ವಿರೂಪತೆ, 'ಸಿರಿಂಗೊಮೈಲಿಯಾ' ಎಂಬ ಬೆನ್ನುಹುರಿಯ ಅಸ್ವಸ್ಥತೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದಳು. ಇದರಿಂದಾಗಿ ಆಕೆಯ ಬೆನ್ನುಮೂಳೆ 40 ಡಿಗ್ರಿ ವಕ್ರಗೊಂಡಿತ್ತು. ಆಕೆಗೆ ನೇರವಾಗಿ ನಡೆದಾಡಲು ಸಾಧ್ಯವಾಗುತ್ತಿರಲಿಲ್ಲ. ಆಕೆಗೆ ಡಾ. ನವೀನ್ ಮಂಡ್ಯ ಅಪ್ಪಾಜಿಗೌಡ ಅವರ ನೇತೃತ್ವದಲ್ಲಿ, ಡಾ. ಕೇಶವ್ ಜಿ.ಸಿ., ಡಾ. ಶ್ರೀಧರ್ ಜಿ. ಅವರನ್ನು ಒಳಗೊಂಡ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸಿದೆ ಎಂದು ಆಸ್ಪತ್ರೆ ತಿಳಿಸಿದೆ.

'ಬೆನ್ನುಮೂಳೆ ವಕ್ರತೆಯಿಂದ ದೈನಂದಿನ ಚಟುವಟಿಕೆ ಬಾಲಕಿಗೆ ಕಷ್ಟಸಾಧ್ಯವಾಗಿತ್ತು. ಹೆಚ್ಚಿನ ವೈದ್ಯಕೀಯ ಪರೀಕ್ಷೆಯಿಂದ ಅಪರೂಪದ ನರರೋಗಕ್ಕೆ ಒಳಗಾಗಿರುವುದು ದೃಢಪಟ್ಟಿತು. ಸೂಕ್ತ ಸಮಯಕ್ಕೆ ಚಿಕಿತ್ಸೆ ಒದಗಿಸಿದ ಪರಿಣಾಮ ಸಮಸ್ಯೆ ನಿವಾರಣೆಯಾಗಿದ್ದು, ಆಕೆ ಎಲ್ಲರಂತೆ ಶಾಲೆಗೆ ತೆರಳಲು ಸಾಧ್ಯವಾಗಿದೆ' ಎಂದು ಡಾ. ನವೀನ್ ಮಂಡ್ಯ ಅಪ್ಪಾಜಿಗೌಡ ಹೇಳಿದ್ದಾರೆ.

ಯುವ ಆಂದೋಲನ ಜುಲೈ 25ರಿಂದ

ಬೆಂಗಳೂರು: ನಗರದ ಪ್ರಯೋಗ ಶಿಕ್ಷಣ ಸಂಶೋಧನಾ ಸಂಸ್ಥೆಯು ಅಂತರರಾಷ್ಟ್ರೀಯ ಭೂವಿಜ್ಞಾನ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ, ಜುಲೈ 25 ರಿಂದ 29ರವರೆಗೆ ದ್ವಿತೀಯ ಅಂತರರಾಷ್ಟ್ರೀಯ ಭೂವಿಜ್ಞಾನ ಯುವ ಆಂದೋಲನವನ್ನು ಆಯೋಜಿಸಲಿದೆ.

ಕೇಂದ್ರ ಸರ್ಕಾರದ ಭೂವಿಜ್ಞಾನ ಸಚಿವಾಲಯದ ಸಹಕಾರದೊಂದಿಗೆ ನಡೆಯಲಿರುವ ಆಂದೋಲನದಲ್ಲಿ ಭೂವಿಜ್ಞಾನ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ.ನಿರ್ ಓರೈಯನ್, ಸಲಹೆಗಾರರಾದ ಆರ್. ಶಂಕರ್ ಮತ್ತು ಐಐಟಿ ಬಾಂಬೆಯ ಭೂವಿಜ್ಞಾನ ವಿಭಾಗದ ಪ್ರೊ.ವಿಕ್ರಮ್ ವಿಶಾಲ್ ಪಾಲ್ಗೊಳ್ಳಲಿದ್ದಾರೆ. ಭೂ ವ್ಯವಸ್ಥೆಗಳ ಶಿಕ್ಷಣ, ಸಾಮಾಜಿಕ ಮತ್ತು ಸಹಯೋಗದ ಕಲಿಕೆ ಹಾಗೂ ನಾಯಕತ್ವದ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆಯೋಜಿಸಲಾಗಿದ್ದು, ಶಿಲಾಗೋಳ, ಜಲಗೋಳ, ವಾಯುಗೋಳ, ಜೀವಿಗೋಳ ಹಾಗೂ ಹಿಮಗೋಳಈನದ ಕುರಿತ ಪ್ರಯೋಗಗಳು, ಕ್ಷೇತ್ರ ಅಧ್ಯಯನಗಳು - ದತ್ತಾಂಶ ಆಧಾರಿತ ವಿಶ್ಲೇಷಣೆಗಳೂ ನಡೆಯಲಿವೆ ಎಂದು ಆರ್.ಶಂಕರ್ ತಿಳಿಸಿದ್ದಾರೆ.

ಉದ್ಯೋಗ ಮೇಳ

ಬೆಂಗಳೂರು: ಗ್ರೀನ್ ಸ್ಕಿಲ್ಸ್ ಮತ್ತು ಅಪ್ಲೈಡ್ ಎಐ ಫಾರ್ ಕ್ಲೈಮೇಟ್ ಆಕ್ಷನ್ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) ಪ್ರಾರಂಭವಾದ ಕೆಲವೇ ತಿಂಗಳಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿ ಮುಂಚೂಣಿಯಲ್ಲಿದೆ.

ದೇಶದಾದ್ಯಂತ ಯುವಕರಿಗೆ 50,000 ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿದೆ. ಈ ನಿಟ್ಟಿನಲ್ಲಿ 1ಎಂ1ಬಿ ಮತ್ತು ಸಿಒಇ ಆಶ್ರಯದಲ್ಲಿ ಉದ್ಯೋಗ ಮೇಳ ಆಯೋಜಿಸಿತ್ತು. ಎಂಜಿನಿಯರಿಂಗ್, ಡಿಪ್ಲೊಮಾ, ಐಟಿಐ, ಮ್ಯಾನೇಜ್‌ಮೆಂಟ್ ಮತ್ತು ವಿಜ್ಞಾನ ಕ್ಷೇತ್ರದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಸ್ಥಳದಲ್ಲೇ ನೇಮಕಾತಿ ಆದೇಶ ನೀಡಲಾಯಿತು. 'ಇದು ಕೇವಲ ಉದ್ಯೋಗ ಕಲ್ಪಿಸಿಕೊಡುವುದು ಅಷ್ಟೇ ಅಲ್ಲ, ಯುವಕರಿಗೆ ಅರ್ಥಪೂರ್ಣ ಮತ್ತು ಸುಸ್ಥಿರ ವೃತ್ತಿ ಜೀವನದ ಮಾರ್ಗಗಳನ್ನು ಸೃಷ್ಟಿಸುವ ವ್ಯವಸ್ಥೆಯಾಗಿದೆ' ಎಂದು 1ಎಂ1ಬಿನ ಉಪಾಧ್ಯಕ್ಷ ಸಫೀನ್ ಮ್ಯಾಥ್ಯೂ ಹೇಳಿದರು.

ಭಕ್ತಿಭಾವದಿಂದ ಮೊಹರಂ ಆಚರಣೆ

ಮೆರವಣಿಗೆ ನಡೆಸಿ ಹಸನ್– ಹುಸೇನ್ ತ್ಯಾಗ ಸ್ಮರಿಸಿದ ಮುಸ್ಲಿಮರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಪ್ಪುಬಟ್ಟೆ ಧರಿಸಿ ಸಾವಿರಾರು ಮಂದಿಯ ಮೆರವಣಿಗೆ
- ಮಕ್ಕಳು, ಯುವಕರು ವೃದ್ಧರಿಂದ ದೇಹದಂಡನೆ

ಬೆಂಗಳೂರು: ತ್ಯಾಗ, ಬಲಿದಾನದ ಸಂಕೇತವಾಗಿ ನಗರದ ಜಾನ್ಸನ್ ಮಾರುಕಟ್ಟೆ ಬಳಿ ಶಿಯಾ ಮುಸ್ಲಿಮರು ಭಕ್ತಿಯಿಂದ ಮೊಹರಂ ಆಚರಿಸಿದರು. ಮೆರವಣಿಗೆ ನಡೆಸಿ, ದೇಹದಂಡನೆ ಮಾಡಿ ಹಸನ್– ಹುಸೇನ್ ತ್ಯಾಗವನ್ನು ಸ್ಮರಿಸಿದರು.

ಜಾನ್ಸನ್ ಮಾರುಕಟ್ಟೆಯ ಅಲಿ ಅಸ್ಕರ್ ಮಸೀದಿಯಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು. ಶೋಕಾಚರಣೆ ಸಂಕೇತವಾಗಿ ಕಪ್ಪುಬಟ್ಟೆ ಧರಿಸಿ ಸಾವಿರಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡರು. ವಿಶೇಷಾಲಂಕೃತ ಸ್ತಬ್ಧಚಿತ್ರಗಳು ಸಾಗಿಬಂದವು. ಸಾವಿರಾರು ಮಂದಿ ಪಾಲ್ಗೊಂಡಿದ್ದರಿಂದ ಮಾರುಕಟ್ಟೆಯ ಅಕ್ಕಪಕ್ಕದ ರಸ್ತೆಯಲ್ಲಿ ಮಧ್ಯಾಹ್ನ ವಾಹನ ಸಂಚಾರ ನಿರ್ಬಂಧಿಸಲಾಯಿತು.

ಮಕ್ಕಳು, ಯುವಕರು ಮತ್ತು ವೃದ್ಧರು ದೇಹದಂಡನೆ ಮಾಡಿಕೊಂಡರು. 'ಅಲಿ ದೂಲಾ' ಎಂದು ಕೂಗುತ್ತಾ ದಾರಕ್ಕೆ ಕಟ್ಟಿದ್ದ ಬ್ಲೇಡ್‌ಗಳ ಗೊಂಚಲನ್ನು ಜನರು ತಮ್ಮ ಎದೆಗೆ ಹಾಗೂ ಬೆನ್ನಿಗೆ ಹೊಡೆದುಕೊಂಡರು. ಅವರ ದೇಹದಿಂದ ರಕ್ತ ಚಿಮ್ಮಿತು. ಬಹುತೇಕರು ಎದೆಗೆ ಕೈಗಳಿಂದ ಬಡಿದುಕೊಂಡು ಶೋಕ ಗೀತೆಗಳನ್ನು ಹಾಡಿದರು.

ಅಲಿ ಅಸ್ಕರ್ ಮಸೀದಿಯಲ್ಲದೇ ನಗರದ ವಿವಿಧ ಮಸೀದಿಗಳಲ್ಲಿಯೂ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಜಾನ್ಸನ್ ಮಾರುಕಟ್ಟೆ ಬಳಿ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ಆಂಬುಲೆನ್ಸ್, ಶುಶ್ರೂಷಕರನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು.



ಮೊಹರಂ ಪ್ರಯುಕ್ತ ಶುಕ್ರವಾರ ನಗರದ ಜಾನ್ಸನ್ ಮಾರುಕಟ್ಟೆ ಬಳಿ ಅಲಿ ಆಸ್ಕರ್ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ನಡೆದ ಮೆರವಣಿಗೆಯಲ್ಲಿ ಶಿಯಾ ಮುಸ್ಲಿಮರು ಭಕ್ತಿಯಿಂದ ದೇಹದಂಡನೆ ಮಾಡಿದರು

ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಭಾವೈಕ್ಯದ ಪ್ರತೀಕವಾಗಿರುವ ಮೊಹರಂ ಅನ್ನು ರಾಜಧಾನಿ ಸುತ್ತಮುತ್ತಲ ಬಡಾವಣೆಗಳಲ್ಲೂ ಶ್ರದ್ಧಾಭಕ್ತಿಯಿಂದ ಆಚರಿಸಿದರು. ಅಲ್ಲಾ ಮತ್ತು ಬೀಬಿ ಫಾತಿಮಾರ ಹೆಸರಿನಲ್ಲಿ ಹಾಡು ಹಾಡಲಾಯಿತು. ಜನರು ಭಾವುಕರಾಗಿ ದೀರ್ಘ ದಂಡನಮಸ್ಕಾರ ಹಾಕಿ ಧನ್ಯರಾದರು.

'ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಮೊಮ್ಮಕ್ಕಳಾದ ಹಸನ್– ಹುಸೇನ್ ಧರ್ಮದ ಉಳಿವಿಗಾಗಿ ಹಾಗೂ ನ್ಯಾಯಕ್ಕಾಗಿ ಹೋರಾಡಿ ಯುದ್ಧದಲ್ಲಿ ಮರಣ ಹೊಂದಿದರು. ಅವರ ಸಾವಿನ ಸ್ಮರಣಾರ್ಥ ಈ ಶೋಕ ದಿನ ಹಮ್ಮಿಕೊಂಡಿದ್ದೇವೆ' ಎಂದು ಸಮಾಜದ ಮುಖಂಡರು ಹೇಳಿದರು.

ಶಿವಾಜಿನಗರದ ಹಜರತ್ ಕಂಬಲ್‌ಪೋಷ್ ರಸ್ತೆಯಲ್ಲಿ ಪ್ರತಿಷ್ಠಾಪಿಸಲಾದ ಆಲಾಯಿ ದೇವರ ಸನ್ನಿಧಿಯಲ್ಲಿ ವಿಶೇಷ ಪ್ರಾರ್ಥನೆಗಳು ನಡೆದವು. ವ್ರತಾಚರಣೆ ಮಾಡಿದ್ದ ಮುಸ್ಲಿಮರಿಗೆ ಮಸೀದಿಯಲ್ಲಿ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನ ಆರಂಭ

ಕಾವ್ಯ ದುರಿತ ಕಾಲದ ಸಂಗಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಲಿತ್ತು ಕಾವ್ಯದ ಅನುರಣನ, ಕವಿಗಳ ಸಮ್ಮಿಲನ... ಯುದ್ಧ, ಬಿಕ್ಕಟ್ಟುಗಳು ಜಗತ್ತಿನಲ್ಲಿ ಸೃಷ್ಟಿಸುತ್ತಿರುವ ದ್ವೇಷ, ಅಸಮಾನತೆ, ಅಹಿಂಸೆಗೆ ಕಾವ್ಯ ಮಾನವೀಯತೆಯ ಪಾಠ ಹೇಳಬಲ್ಲುದೆಂಬ ಭರವಸೆಯ ಬೆಳಕು ಅಲ್ಲಿ ಹೊರಸೂಸಿತು...

ಇಲ್ಲಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಶುಕ್ರವಾರ ಆರಂಭವಾದ ಮೂರು ದಿನಗಳ ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನ ಹೀಗೊಂದು ವಿಶ್ವಾಸವನ್ನು ಮೊಳೆಯಿಸಿತು.

ಕಾವ್ಯವು ಜಗತ್ತಿನಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ ಎಂಬ ಪ್ರತಿಪಾದನೆಯೂ ಇತ್ತು. ಆದರೆ, ಪರಿವರ್ತನೆಯ ಕನಸನ್ನು ಬಿತ್ತಬಲ್ಲದೆಂಬ ಆಶಾವಾದವೂ ಇತ್ತು. ಹೀಗಾಗಿಯೇ, ಅಲ್ಲಿ ಪಾಲ್ಗೊಂಡ ವಿವಿಧ ದೇಶಗಳ ಕವಿಗಳು, 'ಕಾವ್ಯದ ಭಾಷೆ ಒಂದೇ, ಅದು ಎಲ್ಲರನ್ನೂ ಪ್ರೀತಿಸಬೇಕೆಂದು ಹೇಳಿಕೊಡುವ ಭಾಷೆ. ದುರಿತ ಕಾಲದ ಸಂಗಾತಿ' ಎಂದು ಒಕ್ಕೊರಲ ಭಾವವನ್ನು ಸ್ಫುರಿಸಿದರು.

'ಬಹುಮುಖಿ' ಸಂಸ್ಥೆಯು ಹಮ್ಮಿಕೊಂಡಿರುವ ಸಮ್ಮಿಲನದ ಆಶಯ ಭಾಷಣ ಮಾಡಿದ ಕವಿ ಎಚ್.ಎಸ್.ಶಿವಪ್ರಕಾಶ್, 'ಕಾವ್ಯದ ಮೂಲಕ ಜಗತ್ತನ್ನು ಬದಲಾಯಿಸುವ ಹಂಬಲದಲ್ಲೇ ಚಳವಳಿಗಳು ನಡೆದಿವೆ. ಆದರೆ ಯಾವ ಕವಿಯಿಂದಲೂ ಅದು ಸಾಧ್ಯವಾಗಿಲ್ಲ. ಆದರೆ ಕಾವ್ಯವು ಸದಾ ಬಿಕ್ಕಟ್ಟಿನಲ್ಲೇ ಇರುತ್ತದೆ. ಅಸಾಧ್ಯವಾದುದರೆಡೆಗೇ ತುಡಿಯುತ್ತದೆ' ಎಂದರು.

ಗೋಪಾಲಕೃಷ್ಣ ಅಡಿಗರ 'ಅಮೃತವಾಹಿನಿಯೊಂದು ಹರಿಯುತಿದೆ ಮಾನವನ ಎದೆಯಿಂದಲೆದೆಗೆ ಸತತ' ಎಂಬ ಸಾಲನ್ನು ಉಲ್ಲೇಖಿಸಿ, 'ಅಮೃತತ್ವವೇ ಕಾವ್ಯದ ಗುಣವೂ ಹೌದು' ಎಂದು ಪ್ರತಿಪಾದಿಸಿದರು.



ಕಾರ್ಯಕ್ರಮದಲ್ಲಿ ಎಚ್.ಎಸ್. ಶಿವಪ್ರಕಾಶ್ ಹಾಗೂ ಎಲ್. ಹನುಮಂತಯ್ಯ ಉಭಯ ಕುಶಲೋಪರಿ ನಡೆಸಿದರು. ಇಸ್ರೇಲ್ ಕವಯಿತ್ರಿ ದಿತಿ ರೋನೆನ್ ಹಾಗೂ ಕೇರಳಂ ಕವಯತ್ರಿ ರತಿ ಸಕ್ಸೇನಾ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

7 ದೇಶ, 20 ಭಾಷೆ, 40 ಕವಿಗಳು

ಕಾವ್ಯ ಸಮ್ಮಿಲನದಲ್ಲಿ ಭಾರತವೂ ಸೇರಿ ಏಳು ದೇಶಗಳ, 20 ಭಾಷೆಗಳ 40 ಕವಿಗಳು ಪಾಲ್ಗೊಂಡಿದ್ದಾರೆ. ಕನ್ನಡ, ಹೀಬ್ರೂ, ಕಾಶ್ಮೀರಿ, ಸಿಂಧಿ, ಅಸ್ಸಾಮಿ, ಕರ್ಬುಕ್, ತೆಲುಗು, ಈಜಿಪ್ಟ್, ಸಿಂಗಪುರ, ಖುರ್ದಿಶ್, ಮರಾಠಿ, ಹಿಂದಿ, ಸ್ಪ್ಯಾನಿಷ್, ಇಕ್ವೆಡಾರ್, ಬೆಂಗಾಲಿ, ಇಂಗ್ಲಿಷ್ ಭಾಷೆಯ ಕವಿತೆಗಳ ಓದು ಮತ್ತು ಸಂವಾದ ನಡೆಯಲಿದೆ.

27ರಂದು 'ಮಂಟೇಸ್ವಾಮಿ ಕಥಾ ಪ್ರಸಂಗ' ನಾಟಕ ಪ್ರದರ್ಶನವೂ ನಡೆಯಲಿದೆ. 28ರಂದು ವಿಮರ್ಶಕ, ಅನುವಾದಕ ಪ್ರೊ.ಓ.ಎಲ್. ನಾಗಭೂಷಣಸ್ವಾಮಿ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ. ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಸಮ್ಮಿಲನವನ್ನು ಉದ್ಘಾಟಿಸಿದ ಕೇರಳಂನ ಕವಯಿತ್ರಿ ರತಿ ಸಕ್ಸೇನಾ, 'ಕಾವ್ಯದ ಭಾಷೆಯು ವಿಜ್ಞಾನ, ತತ್ವಜ್ಞಾನದ ಭಾಷೆಗಿಂತಲೂ ಪರಿಣಾಮಕಾರಿ. ಹೀಗಾಗಿಯೇ ಉಮರ್ ಖಯ್ಯಾಂ ಗಣಿತಜ್ಞನಾದರೂ ಕವಿಯಾಗಿಯೇ ಹೆಚ್ಚು ಪ್ರಸಿದ್ಧ. ಭಾರತೀಯ ಗಣಿತಶಾಸ್ತ್ರ ಮತ್ತು ಖಗೋಳಶಾಸ್ತ್ರ ತಜ್ಞ ಭಾಸ್ಕರಾಚಾರ್ಯರು ತಮ್ಮ ಲೀಲಾವತಿ ಕೃತಿಯನ್ನು ಕಾವ್ಯಾತ್ಮಕ ಭಾಷೆಯಲ್ಲಿ ರಚಿಸಿದರು' ಎಂದು ಪ್ರತಿಪಾದಿಸಿದರು.

ಅತಿಥಿಯಾಗಿದ್ದ ಇಸ್ರೇಲ್ ಕವಯಿತ್ರಿ ದಿತಿ ರೋನೆನ್ ಅವರು ಹೀಬ್ರೂ ಭಾಷೆಯಿಂದ ಅನುವಾದಗೊಂಡ ತಮ್ಮ 'ಮನೆ ಸಿದ್ಧವಾಗಿದೆ' ಎಂಬ ಕವಿತೆಯನ್ನು ಓದಿ ಗಮನ ಸೆಳೆದರು.

ಅಧ್ಯಕ್ಷತೆ ವಹಿಸಿದ್ದ ಕವಿ ಎಲ್. ಹನುಮಂತಯ್ಯ, 'ಆದಿಮ ಕಾಲದಿಂದಲೂ ಕಾವ್ಯವು ಜಗತ್ತಿನೆಲ್ಲೆಡೆ ಶೋಷಿತರ ದನಿಯಾಗಿದೆ' ಎಂದು ಅಭಿಪ್ರಾಯಪಟ್ಟರು. ಸಂಘಟಕ ಶ್ರೀಹರ್ಷ ಪಾಲ್ಗೊಂಡಿದ್ದರು. ನಂತರ ನಡೆದ ಮೂರು ಗೋಷ್ಠಿಗಳಲ್ಲಿ ವಿವಿಧ ಭಾಷೆಗಳ ಕವಿಗಳು ಕವಿತೆ ಓದಿ ಸಂವಾದದಲ್ಲಿ ಪಾಲ್ಗೊಂಡರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್ ಹೇಳಿಕೆ

ಗಾಯಕ್ಕೆ ಮುಲಾಮು ಹಚ್ಚುವ 'ಸ್ವಾತಂತ್ರ್ಯದ ಓಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಬರುವ ಸಮಯದಲ್ಲಿ ಉಂಟಾದ ಗಾಯವನ್ನು ಮಾಯದಂತೆ ನೋಡಿಕೊಳ್ಳುವ ಬುದ್ಧಿಪೂರ್ವಕ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಇಂಥ ಸಂದರ್ಭದಲ್ಲಿ ಮುಲಾಮು ಹಚ್ಚಿ, ಗಾಯ ಮಾಯುವಂತೆ ಮಾಡುವ ಪ್ರಯತ್ನವನ್ನು ಬೊಳುವಾರು ಮಹಮ್ಮದ್ ಕುಂಞಿ ಅವರು 'ಸ್ವಾತಂತ್ರ್ಯದ ಓಟ' ಕೃತಿಯ ಮೂಲಕ ಮಾಡಿದ್ದಾರೆ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್ ಹೇಳಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 2024-25ನೇ ಸಾಲಿನ ಅಕಾಡೆಮಿಯ ಪುಸ್ತಕ ಬಹುಮಾನ ಪ್ರದಾನ ಹಾಗೂ 'ಸ್ವಾತಂತ್ರ್ಯದ ಓಟ' ನಾಟಕ ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಹಿಂಸಾತ್ಮಕ, ಸತ್ಯಾಗ್ರಹ, ಉಪವಾಸ, ಪಾದಯಾತ್ರೆಯಂತಹ ಹೊಸ ಹೊಸ ಪ್ರಯೋಗಗಳ ಮುಖಾಂತರ ಸ್ವಾತಂತ್ರ್ಯವನ್ನು ಪಡೆಯಲಾಗಿತ್ತು. ಸ್ವಾತಂತ್ರ್ಯ ಬಂದ ಕೆಲವೇ ತಿಂಗಳುಗಳಲ್ಲಿ ಈ ಪ್ರಯೋಗಗಳು ನಾಶವಾಗುವ ಘಟನೆಗಳು ಗಡಿಯ ಎರಡೂ ಬದಿಗಳಲ್ಲಿ ನಡೆದಿದ್ದವು. ಅದರ ಪರಿಣಾಮವನ್ನು ಎದುರಿಸುತ್ತಿರುವ ದೊಡ್ಡ ಜನಸಂಖ್ಯೆ ಗಡಿಯ ಈ ಭಾಗದಲ್ಲಿ ಇವತ್ತೂ ಇದೆ. ಅಂದು ಆದ ಗಾಯ ನಿವಾರಣೆಯಾಗದಂತೆ ತಡೆಯುವ ಕೆಲಸಗಳು ಇಂದಿಗೂ ಮಾಡಲಾಗುತ್ತಿದೆ ಎಂದರು.



ಕರ್ನಾಟಕ ನಾಟಕ ಅಕಾಡೆಮಿಯ 2024–25ರ ವಾರ್ಷಿಕ ಪ್ರಶಸ್ತಿಯನ್ನು ರೋಹಿಣಿ ರಘುನಂದನ್ ಅವರಿಗೆ, ಪುಸ್ತಕ ಬಹುಮಾನ ಪ್ರಶಸ್ತಿಯನ್ನು ರಾಮಕೃಷ್ಣ ಮರಾಠೆ ಅವರಿಗೆ, ವಾರ್ಷಿಕ ಪ್ರಶಸ್ತಿಯನ್ನು ಪಿ.ಎ. ಮಂಜಪ್ಪ ಅವರಿಗೆ ನೀಡಿ ಗೌರವಿಸಲಾಯಿತು. ಜೆಪಿಜಿ ಚಂದ್ರು, ಬಿ. ನೀಲಮ್ಮ, ಬಿ. ಎಸ್. ಮಂಜುನಾಥ ಸ್ವಾಮಿ, ಬಿ.ಎಲ್. ಶಂಕರ್, ಟಿ.ಎನ್. ಸೀತಾರಾಮ್, ಕೆ.ವಿ. ನಾಗರಾಜ ಮೂರ್ತಿ, ಪ್ರಸನ್ನ ಡಿ. ಸಾಗರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಪರೂಪದ ಅಹಿಂಸಾ ಹೋರಾಟದ ಮಾದರಿಯನ್ನು ಜಗತ್ತಿಗೆ ನೀಡಿದ್ದು ಭಾರತ. ಅದಕ್ಕೆ ಪ್ರೇರಣೆ ನೀಡಿದವರು ಮಹಾತ್ಮ ಗಾಂಧಿ. ಆದರೆ, ಇತ್ತೀಚೆಗೆ ಕೇಂದ್ರ ಸಚಿವರೊಬ್ಬರು 'ಪ್ರಪಂಚದ ಯಾವುದೇ ಭಾಗಕ್ಕೆ ಹೋದರೂ ಭಾರತವನ್ನು ಗಾಂಧಿಯ ಭಾರತ ಎಂದು ಗುರುತಿಸುತ್ತಿದ್ದರು. ಕಳೆದೊಂದು ದಶಕದ ಈಚೆಗೆ ಆ ರೀತಿ ಗುರುತಿಸುತ್ತಿಲ್ಲ, ಬೇರೆ ರೀತಿಯಲ್ಲಿ ಗುರುತಿಸುತ್ತಿದ್ದಾರೆ' ಎಂದು ಕುಹಕವಾಡಿದ್ದರು. ಉದ್ದೇಶಪೂರ್ವಕವಾಗಿ ಇತಿಹಾಸವನ್ನು ಮರುವ್ಯಾಖ್ಯಾನಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದರು.

'ಒಂದು ಸಾವಿರಕ್ಕೂ ಹೆಚ್ಚು ಪುಟಗಳ ಕಾದಂಬರಿಯನ್ನು ಬರೆಯುವುದು ಸುಲಭದ ಕೆಲಸವಲ್ಲ. ಅಷ್ಟು ಸುದೀರ್ಘವಾದ ಕಾದಂಬರಿಯನ್ನು ರಂಗರೂಪಕ್ಕೆ ತರುವುದು ಇನ್ನೊಂದು ದೊಡ್ಡ ಸವಾಲು. ಆದರೆ, ರಂಗಾಯಣದವರು ರಂಗಕ್ಕೆ ತರುವಲ್ಲಿ ಯಶಸ್ವಿ ಯಾಗಿದ್ದಾರೆ. ಭಾರತದ ಪ್ರಜಾಪ್ರಭುತ್ವಕ್ಕೆ ಹಾಗೂ ಸ್ವಾತಂತ್ರ್ಯದ ಸುದೀರ್ಘ ಹೋರಾಟದ ಹಿನ್ನೆಲೆಗೆ ನ್ಯಾಯ ಒದಗಿಸುವಲ್ಲಿ ಈ ನಾಟಕ ದೊಡ್ಡ ಪಾತ್ರ ವಹಿಸಲಿದೆ. ಮನುಷ್ಯ ಎಷ್ಟರ ಮಟ್ಟಿಗೆ ಸ್ವಾರ್ಥಿ ಮತ್ತು ಸಂಕುಚಿತ ಮನೋಭಾವದವನಾಗಬಹುದು ಎಂಬುದಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದ ಘಟನಾವಳಿಗಳೇ ಸಾಕ್ಷಿ' ಎಂದರು.

ಚಿತ್ರ ನಿರ್ದೇಶಕ ಟಿ.ಎನ್.ಸೀತಾರಾಮ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ, ಶಿವಮೊಗ್ಗ ರಂಗಾಯಣದ ನಿರ್ದೇಶಕ ಪ್ರಸನ್ನ ಡಿ.ಸಾಗರ ಭಾಗವಹಿಸಿದ್ದರು.

ಎನ್‌ಇಪಿ ಅನುಷ್ಠಾನ: ರಾಷ್ಟ್ರೀಯ ಸಮ್ಮೇಳನ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ 2020 ಅನುಷ್ಠಾನ; ಭಾರತೀಯ ಜ್ಞಾನ ಪರಂಪರೆಗಳ ಸಂಯೋಜನೆ' ಕುರಿತ ರಾಷ್ಟ್ರೀಯ ಸಮ್ಮೇಳನಕ್ಕೆ ನಗರದ ಆರ್ಟ್ ಆಫ್ ಲಿವಿಂಗ್ ಅಂತರ ರಾಷ್ಟ್ರೀಯ ಕೇಂದ್ರದಲ್ಲಿ ಶುಕ್ರವಾರ ಚಾಲನೆ ದೊರಕಿತು.

ಭಾರತೀಯ ಶಿಕ್ಷಣ ಮಂಡಳವು ಆಯೋಜಿಸಿರುವ ಸಮ್ಮೇಳನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮುಖ್ಯ ಅತಿಥಿಯಾಗಿದ್ದರು. ಮಂಡಳದ ಅಧ್ಯಕ್ಷ ಪ್ರೊ. ಸಚ್ಚಿದಾನಂದ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಮೂರು ದಿನಗಳ ಕಾಲ ನಡೆಯಲಿರುವ ಸಮ್ಮೇಳನದಲ್ಲಿ ದೇಶದ ಎಲ್ಲಾ 45 ಪ್ರಾಂತ್ಯಗಳಿಂದ ಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಂಶೋಧಕರು ಪಾಲ್ಗೊಂಡಿದ್ದಾರೆ.

ಕೊನೆಗೂ ಸಿಕ್ಕಿಬಿದ್ದ ಶ್ವೇತಾ ಪ್ರಿಯಕರ ಕೆನೆತ್

ತ್ರಿವಳಿ ಕೊಲೆ ಪ್ರಕರಣ: 15 ದಿನ ಪೊಲೀಸ್ ಕಸ್ಟಡಿಗೆ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್ ಪುರದ ಸೀಗೇಹಳ್ಳಿಯ ಡಾಮಿನಿಕ್ ಲೇಔಟ್‌ನ ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ನಡೆದಿದ್ದ ತ್ರಿವಳಿ ಕೊಲೆ ಪ್ರಕರಣದಲ್ಲಿ ಶ್ವೇತಾ ಪ್ರಿಯಕರ ಕೆನೆತ್‌ನನ್ನು ಕೆ.ಆರ್ ಪುರ ಠಾಣೆಯ ಪೊಲೀಸರು ಬಂಧಿಸಿ, ಕಸ್ಟಡಿಗೆ ಪಡೆದುಕೊಂಡಿದ್ದಾರೆ.



ಶ್ವೇತಾ

ತ್ರಿವಳಿ ಕೊಲೆ ಪ್ರಕರಣದ ತನಿಖೆ ಹಾಗೂ ಆರೋಪಿಗಳ ಪತ್ತೆಗೆ 10 ತಂಡಗಳನ್ನು ರಚಿಸಲಾಗಿತ್ತು. ಶ್ವೇತಾಳನ್ನು ಎರಡು ದಿನದ ಹಿಂದೆ ಪುದುಚೆರಿಯ ರೈಲು ನಿಲ್ದಾಣದ ಬಳಿ ಬಂಧಿಸ ಲಾಗಿತ್ತು. ಆಕೆಯ ಪ್ರಿಯಕರ ಕೆನೆತ್ ಸುಳಿವು ಸಿಕ್ಕಿರಲಿಲ್ಲ.

ಒಂದು ತಂಡವು ಪುದುಚೆರಿಯಲ್ಲೇ ಕಾರ್ಯಾಚರಣೆ ನಡೆಸುತ್ತಿತ್ತು. ಅಲ್ಲಿನ ಪೊಲೀಸರಿಗೂ ಮಾಹಿತಿ ನೀಡಲಾಗಿತ್ತು. ಬಾರ್‌ವೊಂದಕ್ಕೆ ಆರೋಪಿ ಬಂದು ಮದ್ಯ ಸೇವನೆ ಮಾಡುತ್ತಿರುವ ಮಾಹಿತಿ ತಿಳಿದು ಪುದುಚೆರಿಯ ಸ್ಥಳೀಯ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದರು ಎಂದು ಮೂಲಗಳು ತಿಳಿಸಿವೆ.

‘ಒರ್ಲೇನ್‌ಪೇಟ್ ಠಾಣೆಯ ಪೊಲೀಸರು ಗ್ರಾಹಕರ ಸೋಗಿನಲ್ಲಿ ಬಾರ್‌ಗೆ ತೆರಳಿದ್ದರು. ಬಾರ್‌ನಲ್ಲಿ ಮದ್ಯ ಸೇವನೆ ಮಾಡುತ್ತಿದ್ದ ಆರೋಪಿ, ಪೊಲೀಸರೆಂದು ಅನುಮಾನ ಬಂದು ಓಡಿಹೋಗಲು ಆರಂಭಿಸಿದ್ದ. ಎಎಸ್‌ಐ ರಾಮಲಿಂಗಮ್ ಅವರು ಆರೋಪಿಯ ಬೆನ್ನತ್ತಿ ಹಿಡಿದರು’ ಎಂದು ಮೂಲಗಳು ಹೇಳಿವೆ.

‘ಆರೋಪಿಯನ್ನು ವಶಕ್ಕೆ ಪಡೆದು ನಗರಕ್ಕೆ ಕರೆ ತರಲಾಗಿದೆ. ಆರೋಪಿಯಿಂದ ಪ್ರಾಥಮಿಕ ಮಾಹಿತಿ ಪಡೆದು, ನ್ಯಾಯಾಲಯಕ್ಕೆ ಶುಕ್ರವಾರ ಸಂಜೆ ಹಾಜರು ಪಡಿಸಲಾಯಿತು. ಕೆನೆತ್‌ನನ್ನು 15 ದಿನ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ಸೋಮಸುಂದರ್ (52), ಅವರ ಪತ್ನಿ ಮುತ್ತುಲಕ್ಷ್ಮಿ (48) ಹಾಗೂ ಕಿರಿಯ ಮಗಳು ಸುಪ್ರಿಯಾ (19) ಅವರ ಕೊಲೆ ನಡೆದಿತ್ತು. ಸೋಮಸುಂದರ ಹಾಗೂ ಮುತ್ತುಲಕ್ಷ್ಮಿ ಪುತ್ರಿ ಶ್ವೇತಾ ಹಾಗೂ ಆಕೆಯ ಪ್ರಿಯಕರ ಕೆನೆತ್ ಕೊಲೆ ಮಾಡಿ ಪುದುಚೆರಿಗೆ ತೆರಳಿ ತಲೆಮರೆಸಿಕೊಂಡಿದ್ದರು.



ಕೊಲೆ ಪ್ರಕರಣದ ಆರೋಪಿ ಕೆನೆತ್ ಬೆನ್ನತ್ತಿ ಹಿಡಿದ ಪುದುಚೆರಿ ಪೊಲೀಸರು

ಜೂನ್ 22ರಂದು ಮೂವರ ಕೊಲೆ ನಡೆದಿತ್ತು. ಆರಂಭದಲ್ಲಿ ತನಿಖೆಗೆ ಆರು ತಂಡ ರಚನೆ ಮಾಡಲಾಗಿತ್ತು. ಬಳಿಕ ವಿಶೇಷ ತಂಡಗಳ ಸಂಖ್ಯೆಯನ್ನು 10ಕ್ಕೆ ಏರಿಕೆ ಮಾಡಲಾಗಿತ್ತು. ಪುದುಚೆರಿಯ ಮೂರು ಪೊಲೀಸ್ ತಂಡಗಳು ಆರೋಪಿಗಳ ಪತ್ತೆ ಹಾಗೂ ಬಂಧನಕ್ಕೆ ನೆರವು ನೀಡಿವೆ. ಆ ತಂಡಕ್ಕೆ ಪ್ರಶಂಸನೀಯ ಪತ್ರ ಕಳುಹಿಸುತ್ತೇವೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.

‘ಆರೋಪಿಗಳು ಪುದುಚೆರಿಗೆ ತೆರಳಿದ ಮೇಲೆ ಮೊಬೈಲ್ ಬಳಕೆ ಮಾಡುತ್ತಿರಲಿಲ್ಲ. ಯಾರನ್ನೂ ಸಂಪರ್ಕ ಮಾಡಿರಲಿಲ್ಲ. ಕೆಲವು ತಾಂತ್ರಿಕ ಸುಳಿವು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಇದೊಂದು ಸೂಕ್ಷ್ಮ ಪ್ರಕರಣ’ ಎಂದು ಮಾಹಿತಿ ನೀಡಿದರು.

ಒಟ್ಟಿಗೆ ತೆರಳಿ ಬೇರ್ಪಟ್ಟಿದ್ದರು: ಕೊಲೆ ಕೃತ್ಯದ ಬಳಿಕ ಆ ಪೇಯಿಂಗ್ ಗೆಸ್ಟ್‌ಗೆ ಹೋಗಿದ್ದ ಕೆನೆತ್, ಅಲ್ಲಿದ್ದ ತನ್ನ ಬೈಕ್ ತೆಗೆದುಕೊಂಡು ಶ್ವೇತಾ ಜತೆಗೆ ಮಾರತ್‌ಹಳ್ಳಿ ಮಾರ್ಗವಾಗಿ ಸರ್ಜಾಪುರಕ್ಕೆ ಹೋಗಿದ್ದ. ಬಳಿಕ ಇಬ್ಬರೂ ಅದೇ ಬೈಕ್‌ನಲ್ಲಿ ಹೊಸೂರು, ಕೃಷ್ಣಗಿರಿ ಮಾರ್ಗವಾಗಿ ತಿರುವಣ್ಣಾಮಲೈ ತಲುಪಿದ್ದರು. ಅಲ್ಲಿಂದ ಇಬ್ಬರೂ ಪ್ರತ್ಯೇಕವಾಗಿ ಶ್ವೇತಾ, ಬಸ್‌ನಲ್ಲಿ ಪುದುಚೇರಿಗೆ ಹೋಗಿದ್ದಳು. ಆಕೆಯಿಂದ ಬೇರ್ಪಟ್ಟ ಕೆನೆತ್, ಬೇರೆಡೆಗೆ ಹೋಗಿದ್ದ. ಒರ್ಲೇನ್‌ಪೇಟ್ ಠಾಣೆಯ ಸುತ್ತಮುತ್ತ ಓಡಾಟ ನಡೆಸುತ್ತಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು’ ಎಂದು ಮೂಲಗಳು ತಿಳಿಸಿವೆ.

ಪತಿ–ಪತ್ನಿ ಎಂದು ಪರಿಚಯಿಸಿಕೊಂಡಿದ್ದರು

ಡಾಮಿನಿಕ್ ಲೇಔಟ್‌ನ ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಅನ್ನು ಬಾಡಿಗೆಗೆ ಪಡೆದು ಕೆನೆತ್ ಹಾಗೂ ಶ್ವೇತಾ ನೆಲಸಿದ್ದರು. ಅಪಾರ್ಟ್‌ಮೆಂಟ್ ಮಾಲೀಕರಿಗೆ ತಾವು ಪತಿ– ಪತ್ನಿ ಎಂದು ಪರಿಚಯಿಸಿಕೊಂಡಿದ್ದರು. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದರು. ಫ್ಲ್ಯಾಟ್‌ಗೆ ₹ 23 ಸಾವಿರ ಬಾಡಿಗೆ ಕೊಡುತ್ತಿದ್ದರು. ಕೆನೆತ್‌ನ ಹೆಸರಿನಲ್ಲಿ ಫ್ಲಾಟ್‌ನ ಬಾಡಿಗೆ ಕರಾರು ಪತ್ರ ಮಾಡಿಸಲಾಗಿತ್ತು. ಕೆನೆತ್ ಬಿಟ್ಟು ಬರುವಂತೆ ತಾಯಿ ಮುತ್ತುಲಕ್ಷ್ಮಿ ಪದೇ ಪದೇ ಹೇಳುತ್ತಿದ್ದರು. ಜೂನ್ 22ರಂದು ಮೂವರು ಫ್ಲ್ಯಾಟ್‌ಗೆ ಬಂದಿದ್ದರು. ಆಗ ಗಲಾಟೆ ನಡೆದು, ಸೋಮಸುಂದರ್, ಮುತ್ತುಲಕ್ಷ್ಮಿ ಹಾಗೂ ಸುಪ್ರಿಯಾ ಅವರನ್ನು ಇಬ್ಬರೂ ಕೊಲೆ ಮಾಡಿದ್ದರು ಎಂದು ತನಿಖಾಧಿಕಾರಿ ಮಾಹಿತಿ ನೀಡಿದರು.

ಉದ್ಯಮಿ ಆತ್ಮಹತ್ಯೆ: ನಟಿ ಹೇಳಿಕೆ ದಾಖಲು

ಕೃಷಿ ತಾಪಂಡ, ವೈಶಾಕ್ ಮೊಬೈಲ್ ಪರಿಶೀಲಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರೇಜ್ ಹಾಗೂ ಆಟೊ ಮೊಬೈಲ್ ಶಾಪ್‌ನ ಮಾಲೀಕ ವೈಶಾಕ್ ಆತ್ಮಹತ್ಯೆ ಪ್ರಕರಣದಲ್ಲಿ ನಟಿ, ‘ಬಿಗ್‌ಬಾಸ್’ ಕನ್ನಡ ರಿಯಾಲಿಟಿ ಶೋನ ಮಾಜಿ ಸ್ಪರ್ಧಿ ಕೃಷಿ ತಾಪಂಡ ಅವರಿಂದ ಆರ್.ಆರ್ ನಗರ ಠಾಣೆ ಪೊಲೀಸರು, ಪ್ರಾಥಮಿಕ ಹೇಳಿಕೆ ದಾಖಲಿಸಿಕೊಂಡಿದ್ದಾರೆ.


ಕೃಷಿ ತಾಪಂಡ ಅವರ ಆರ್.ಆರ್ ನಗರದ ಎಲಿಗೆಂಟ್ ಟೆರಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಸಂಖ್ಯೆ 403ರಲ್ಲಿ ವೈಶಾಕ್ ಅವರ ಮೃತದೇಹವು ಬುಧವಾರ ರಾತ್ರಿ ಪತ್ತೆಯಾಗಿತ್ತು.



ಕೃಷಿ ತಾಪಂಡ

ಅಂದು ರಾತ್ರಿ 11ರ ಸುಮಾರಿಗೆ ವೈಶಾಕ್ ಅವರ ತಂದೆಗೆ ಪೊಲೀಸರು ಕರೆ ಮಾಡಿ ‘ನಿಮ್ಮ ಪುತ್ರನ ಮೃತದೇಹ ಪತ್ತೆಯಾಗಿದೆ’ ಎಂದು ಮಾಹಿತಿ ನೀಡಿದ್ದರು.

ವೈಶಾಕ್ ಅವರ ತಂದೆ, ಪತ್ನಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ನೇಣು ಬಿಗಿದ ಸ್ಥಿತಿಯಲ್ಲಿ ಉದ್ಯಮಿಯ ಮೃತದೇಹ ಸಿಕ್ಕಿತ್ತು. ಉದ್ಯಮಿ ಪತ್ನಿ ಮೇಘನಾ ನೀಡಿದ ದೂರು ಆಧರಿಸಿ ಪೊಲೀಸರು ‘ಅನುಮಾನಾಸ್ಪದ ಸಾವು’ ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದಾರೆ.



ವೈಶಾಕ್

‘ಕಳೆದ ಮೂರು ದಿನಗಳಿಂದ ನಾನು ಫ್ಲ್ಯಾಟ್‌ನಲ್ಲಿ ಇರಲಿಲ್ಲ. ವೈಯಕ್ತಿಕ ಕಾರಣದಿಂದ ಕ್ಷೇಮವನಕ್ಕೆ ಹೋಗಿದ್ದೆ’ ಎಂದು ಪೊಲೀಸರ ಎದುರು ನಟಿ ಹೇಳಿಕೆ ನೀಡಿದ್ದಾರೆ.

‘ಬುಧವಾರ ರಾತ್ರಿ ಸುಮಾರು 11 ಗಂಟೆಗೆ ಫ್ಲ್ಯಾಟ್‌ಗೆ ಬಂದಾಗ ಬಾಗಿಲು ಹಾಕಿತ್ತು. ಎರಡು ಕೀಗಳಿದ್ದವು. ಅದರಲ್ಲಿ ಒಂದು ಕೀ ನನ್ನ ಬಳಿ ಇದ್ದರೆ, ಮತ್ತೊಂದು ಕೀ ವೈಶಾಕ್ ಬಳಿ ಇರುತ್ತಿತ್ತು. ನನ್ನ ಬಳಿಯಿದ್ದ ಮತ್ತೊಂದು ಕೀಯನ್ನು ಬಳಸಿ ಬಾಗಿಲು ತೆರೆದು ಒಳಗೆ ಹೋಗಿದ್ದೆ. ಬಾಗಿಲು ತೆರೆದಾಗ ವೈಶಾಕ್ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬಂದಿತ್ತು. ತಕ್ಷಣವೇ ಪೊಲೀಸ್ ‘ಕಂಟ್ರೋಲ್ ರೂಂ’ಗೆ ಕರೆ ಮಾಡಿ ಘಟನೆ ಸಂಬಂಧ ಮಾಹಿತಿ ನೀಡಿದ್ದೆ. ಕೆಲವೇ ಕ್ಷಣಗಳಲ್ಲಿ ಪೊಲೀಸರು ಸ್ಥಳಕ್ಕೆ ಬಂದರು. ಅದಾದ ಮೇಲೆ ವೈಶಾಕ್ ಕುಟುಂಬಸ್ಥರು ಫ್ಲ್ಯಾಟ್ ಬಳಿಗೆ ಬಂದಿದ್ದರು’ ಎಂದು ಅವರು ಹೇಳಿಕೆ ನೀಡಿದ್ದಾರೆ ಎಂಬುದು ಗೊತ್ತಾಗಿದೆ.

‘ಬೇರೆ ಆಯಾಮದಲ್ಲೂ ತನಿಖೆ’

ಕೃಷಿ ತಾಪಂಡ ಅವರ ಮೊಬೈಲ್ ಪಡೆದು ಪರಿಶೀಲನೆ ನಡೆಸಲಾಗಿದೆ. ಇಬ್ಬರ ನಡುವೆ ವಾಟ್ಸ್‌ಆ್ಯಪ್‌ನಲ್ಲಿ ವಿನಿಮಯ ಆಗಿರುವ ಸಂದೇಶಗಳು, ಕರೆಗಳ ವಿವರ ಪರಿಶೀಲನೆ ನಡೆಸಲಾಗಿದೆ.

ಅನುಮಾನಕ್ಕೆ ಆಸ್ಪದ ನೀಡುವಂತ ಸಂದೇಶಗಳು ಪತ್ತೆಯಾಗಿಲ್ಲ. ಕೃಷಿ ಅವರ ಮೊಬೈಲ್ ವಾಪಸ್ ನೀಡಲಾಗಿದೆ. ವೈಶಾಕ್ ಮೊಬೈಲ್ ಪರಿಶೀಲನಾ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉದ್ಯಮಿಯ ಆತ್ಮಹತ್ಯೆಗೆ ಬೇರೆ ಏನಾದರೂ ಕಾರಣವಿತ್ತೇ ಎಂಬ ಆಯಾಮದಲ್ಲೂ ತನಿಖೆ ಸಾಗುತ್ತಿದೆ.

ಉದ್ಯಮ ನಡೆಸಲು ಸಾಲ ಮಾಡಿಕೊಂಡಿದ್ದರೇ? ಏನಾದರೂ ಒತ್ತಡವಿತ್ತೇ? ಮಾನಸಿಕವಾಗಿ ನೊಂದಿದ್ದರೇ ಎಂಬುದರ ಕುರಿತೂ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ವಿನೀಶ್ ಕಾರು ಚಾಲನೆ ಮಾಡುತ್ತಿರಲಿಲ್ಲ: ವಿಜಯಲಕ್ಷ್ಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರ ಪುತ್ರ ವಿನೀಶ್ ಸಂಚರಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿ ವಾಗ್ವಾದ ನಡೆದಿದೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ವಿಜಯಲಕ್ಷ್ಮಿ ದರ್ಶನ್ ಅವರು ಇನ್‌ಸ್ಟಾಗ್ರಾಂ ಮೂಲಕ ಸ್ಪಷ್ಟನೆ ನೀಡಿದ್ದಾರೆ.

ಅಪಘಾತದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಆ ವಿಡಿಯೊಗೆ ಸಂಬಂಧಿಸಿದಂತೆ ವಿನೀಶ್ ತಾಯಿ ವಿಜಯಲಕ್ಷ್ಮಿ ಪ್ರತಿಕ್ರಿಯೆ ನೀಡಿದ್ದಾರೆ.

‘ಸಣ್ಣ ಅಪಘಾತ ಸಂಭವಿಸಿದೆ. ಪುತ್ರ ವಿನೀಶ್ ಕಾರು ಚಾಲನೆ ಮಾಡುತ್ತಿರಲಿಲ್ಲ. ನಮ್ಮ ಚಾಲಕ ಕಾರು ಚಾಲನೆ ಮಾಡುತ್ತಿದ್ದರು. ಅಪಘಾತದ ಬಳಿಕ ಪುತ್ರ ಕಾರಿನಿಂದ ಕೆಳಕ್ಕೆ ಇಳಿದು, ಅಪಘಾತಕ್ಕೆ ಒಳಗಾದವರ ಯೋಗಕ್ಷೇಮ ವಿಚಾರಿಸಿದ್ದಾರೆ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ವಿನೀಶ್ ಅಪಘಾತಕ್ಕೀಡಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಕೆಲವು ಮಾಧ್ಯಮಗಳು ಪ್ರಸಾರ ಮಾಡುತ್ತಿರುವ ಸುದ್ದಿ ಸುಳ್ಳು. ಎದುರು ವಾಹನದಲ್ಲಿ ಇದ್ದವರು ತಮ್ಮದೇ ತಪ್ಪು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಜತೆಗೆ, ಕ್ಷಮೆ ಕೂಡಾ ಕೇಳಿದ್ದಾರೆ. ವಿನೀಶ್ ಸುರಕ್ಷಿತವಾಗಿದ್ದು ಚೆನ್ನಾಗಿದ್ದಾರೆ. ಘಟನೆಯನ್ನು ಕೆಲವರು ದಾರಿ ತಪ್ಪಿಸುವಂತೆ ಪ್ರಸ್ತುತ ಪಡಿಸುತ್ತಿದ್ದಾರೆ. ನಮ್ಮ ಕುಟುಂಬವು ಕಠಿಣ ಪರಿಸ್ಥಿತಿ ಯಲ್ಲಿದೆ. ಮತ್ತಷ್ಟು ತೊಂದರೆ ಕೊಡ ಬೇಡಿ. ಮಾಹಿತಿಯನ್ನು ಪ್ರಕಟಿಸುವ ಅಥವಾ ಪ್ರಸಾರ ಮಾಡುವ ಮೊದಲು ಸತ್ಯವನ್ನು ಪರಿಶೀಲಿಸಿ’ ಎಂದು ವಿಜಯಲಕ್ಷ್ಮಿ ಮನವಿ ಮಾಡಿದ್ದಾರೆ.

ನಕಲಿ ಚಿನ್ನ ನೀಡಿ ₹23 ಲಕ್ಷ ದೋಚಿದವನ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನಿನಲ್ಲಿ ಕೊಳವೆಬಾವಿ ಕೊರೆಸುವ ವೇಳೆ 1.5 ಕೆ.ಜಿ ಚಿನ್ನದ ಆಭರಣ ಸಿಕ್ಕಿದೆ ಎಂದು ನಂಬಿಸಿ, ನಕಲಿ ಚಿನ್ನವನ್ನು ಕಾರ್ ಡೀಲರ್ ಒಬ್ಬರಿಗೆ ನೀಡಿ ₹25 ಲಕ್ಷ ಪಡೆದು ವಂಚಿಸಿದ್ದ ಆರೋಪಿಯನ್ನು ತಿಲಕ್‌ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಳ್ಳಾರಿಯ ಹನುಮಂತಪ್ಪ(41) ಬಂಧಿತ ಆರೋಪಿ.

ಆರೋಪಿಯಿಂದ ₹19.93 ಲಕ್ಷ ಜಪ್ತಿ ಮಾಡಲಾಗಿದೆ. ಕೇರಳದ ಶಿಶಿರ್ ವಂಚನೆಗೆ ಒಳಗಾಗಿ ದೂರು ನೀಡಿದ್ದರು. ಆ ದೂರು ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ವಿಜಯನಗರದಲ್ಲಿ ಕಾರು ಡೀಲರ್ ಆಗಿರುವ ಶಿಶಿರ್ ಅವರನ್ನು ಕೆಲವು ದಿನಗಳ ಹಿಂದೆ ಹನುಮಂತಪ್ಪ ಹಾಗೂ ಆತನ ಸಹಚರರು ಭೇಟಿ ಮಾಡಿದ್ದರು. ಹರಪನಹಳ್ಳಿಯಲ್ಲಿರುವ ಸ್ನೇಹಿತರು, ತಮ್ಮ ಜಮೀನಿನಲ್ಲಿ ಕೊಳವೆಬಾವಿ ಕೊರೆಸುವಾಗ ಸುಮಾರು 1.5 ಕೆ.ಜಿ ಚಿನ್ನ ಸಿಕ್ಕಿದೆ ಎಂದು ಆರೋಪಿ ಹನುಮಂತಪ್ಪ, ಶಿಶಿರ್‌ಗೆ ಸುಳ್ಳು ಹೇಳಿದ್ದ.

ಅಪರಾಧ ಸುದ್ದಿ

ಶಿಶಿರ್ ನಂಬಿಕೆ ಗಿಟ್ಟಿಸಿಕೊಳ್ಳಲು ಅದನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದಾಗಿ ಹೇಳಿ, ಚಿನ್ನ ಹೋಲುವ ಫೋಟೊಗಳನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದ.

ನಂತರ, ತಿಲಕನಗರದ ಹೋಟೆಲ್‌ವೊಂದಕ್ಕೆ ಶಿಶಿರ್ ಅವರನ್ನು ಕರೆಸಿಕೊಂಡು 2 ಗ್ರಾಂ ಚಿನ್ನವನ್ನು ತೋರಿಸಲಾಗಿತ್ತು. ಆ ಚಿನ್ನದ ಬಿಲ್ಲೆಯನ್ನು ಪಡೆದುಕೊಂಡ ಶಿಶಿರ್, ಚಿನ್ನದಂಗಡಿಯಲ್ಲಿ ಪರೀಕ್ಷಿಸಿದಾಗ ಅಸಲಿ ಚಿನ್ನ ಎಂಬುದು ಪತ್ತೆಯಾಗಿತ್ತು.

ಬಳಿಕ, ಆರೋಪಿಗಳು 1.5 ಕೆ.ಜಿ ಚಿನ್ನದಂತಿರುವ ನಕಲಿ ಬಿಲ್ಲೆಗಳನ್ನು ನೀಡಿ ₹23 ಲಕ್ಷ ಪಡೆದು ಪರಾರಿಯಾಗಿದ್ದರು. ಆ ಬಿಲ್ಲೆಗಳನ್ನು ಚಿನ್ನದಂಗಡಿಯಲ್ಲಿ ಪರೀಕ್ಷಿಸಿದಾಗ, ನಕಲಿ ಚಿನ್ನ ಎಂಬುದು ಗೊತ್ತಾಗಿತ್ತು. ಶಿಶಿರ್ ದೂರು ನೀಡಿದ್ದರು. ದೂರು ಆಧರಿಸಿ ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿ 48ರ ಡಾಬಾವೊಂದರ ಬಳಿ ಹನುಮಂತಪ್ಪನನ್ನು ವಶಕ್ಕೆ ಪಡೆದು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಕೊಂಬೆ ಬಿದ್ದು ಸವಾರ ಗಂಭೀರ

ಬೆಂಗಳೂರು: ರಾಜಾಜಿನಗರದ ರಾಮಮಂದಿರ ರಸ್ತೆಯಲ್ಲಿ ಬೈಕ್ ಸವಾರ ಸುರೇಶ್ (50) ಅವರ ಮೇಲೆ ಮರದ ಕೊಂಬೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬುಧವಾರ ಸಂಜೆ 5 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಸುರೇಶ್ ಅವರು ಕೆಲಸದ ನಿಮಿತ್ತ ಬೈಕ್‌ನಲ್ಲಿ ತೆರಳುತ್ತಿದ್ದರು. ಆಗ ಘಟನೆ ಸಂಭವಿಸಿದೆ.

ಕೊಂಬೆ ಬಿದ್ದ ರಭಸಕ್ಕೆ ತಲೆಗೆ ಪೆಟ್ಟು ಬಿದ್ದಿದೆ. ಯಶವಂತಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಸ್ಥಿತಿ ಗಂಭೀರವಾಗಿದೆ ಎಂದು ಮೂಲಗಳು ತಿಳಿಸಿವೆ.

ಘಟನೆ ನಡೆದ ಸ್ಥಳದಲ್ಲಿ ಹಲವು ಒಣಗಿದ ಮರಗಳು ಮತ್ತು ಕೊಂಬೆಗಳಿದ್ದು, ತೆರವುಗೊಳಿಸುವಂತೆ ಜಿಬಿಎ ಅರಣ್ಯ ವಿಭಾಗಕ್ಕೆ ಮನವಿ ಮಾಡಿದ್ದೆವು. ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಚಿಕ್ಕಬಳ್ಳಾಪುರದಿಂದ ಸ್ಪರ್ಧೆ: ಶಾಸಕ ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರದಿಂದ ನಾವು ಸಂದೀಪ್ ರೆಡ್ಡಿ ಅವರಿಗೆ ಬಿಜೆಪಿ ಟಿಕೆಟ್ ಕೇಳುತ್ತೇವೆ. ಇಲ್ಲಿನ ಜನರು ಅನುಮತಿ ನೀಡಿದರೆ ನಾನೇ ಸ್ಪರ್ಧಿಸುತ್ತೇನೆ’ ಎಂದು ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರು ತಿಳಿಸಿದರು.



ಎಸ್‌.ಆರ್. ವಿಶ್ವನಾಥ್

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನನ್ನ ವಿಷಯಕ್ಕೆ ಬಂದರೆ ಸಂಸದ ಡಾ.ಕೆ.ಸುಧಾಕರ್ ಬುಡಕ್ಕೆ ಕೈಹಾಕುವೆ. ಚಿಕ್ಕಬಳ್ಳಾಪುರದಲ್ಲೇ ಕೆಂಪೇಗೌಡರ ಜಯಂತಿ ಮಾಡುವೆ’ ಎಂದರು.

‘2008ರಿಂದ ಯಲಹಂಕ ಕ್ಷೇತ್ರದಲ್ಲಿ ಶಾಸಕನಾಗಿದ್ದೇನೆ. ಅಂದಿನಿಂದ ಪ್ರತಿ ವರ್ಷವೂ ಎಲ್ಲರನ್ನೂ ಸೇರಿಸಿಕೊಂಡು ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸುತ್ತಿದ್ದೇನೆ. ಆದರೆ ಈಗ ನಮ್ಮ ಪಕ್ಷದ ಸಂಸದರೇ ಆದ ಡಾ.ಕೆ.ಸುಧಾಕರ್ ನಮ್ಮನ್ನು ಹೊರಗಿಟ್ಟು ಯಲಹಂಕದಲ್ಲಿ ಶನಿವಾರ ಜಯಂತಿ, ವಾಕಥಾನ್ ಮಾಡುತ್ತಿದ್ದಾರೆ. ಒಂದೇ ಪಕ್ಷದಲ್ಲಿ ಇದ್ದರೂ ಈ ಕಾರ್ಯಕ್ರಮದ ಬಗ್ಗೆ ನಮಗೆ ಮಾಹಿತಿಯೇ ಇಲ್ಲ. ಆದ ಕಾರಣ ನಾನು ಇಲ್ಲಿಗೆ ಬಂದು ಮಾತನಾಡುತ್ತಿದ್ದೇನೆ’ ಎಂದು ಹೇಳಿದರು.

‘ನಾವೂ ಜೂ. 27ರಂದೇ ಕೆಂಪೇಗೌಡ ಜಯಂತಿ ಮಾಡುತ್ತೇವೆ. ಯಾರ ಕಾರ್ಯಕ್ರಮಕ್ಕೆ ಹೆಚ್ಚು ಜನರು ಸೇರುತ್ತಾರೋ ನೋಡಿ. ಯಲಹಂಕದಲ್ಲಿ ಈಗ ಒಕ್ಕಲಿಗರ ಸಂಘ ಎಚ್ಚರವಾಗಿದೆ. ರಾಜಕೀಯವಾಗಿ ಕೆಂಪೇಗೌಡ ಜಯಂತಿ ಮಾಡಲು ಹೊರಟಿದ್ದಾರೆ’ ಎಂದು ಆರೋಪಿಸಿದರು.

‘ಕಳೆದ ಲೋಕಸಭಾ ಚುನಾವಣೆಯಲ್ಲಿ ಸುಧಾಕರ್‌ಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿದೆವು. ಆದರೆ ಸುಧಾಕರ್ ನಮ್ಮ ಮನೆಗೆ ಬಂದು ಹೋದ ನಂತರ ಅವರ ಪರ ಕೆಲಸ ಮಾಡಿದೆವು. ಆದರೆ ಅವರು ಯಲಹಂಕದಲ್ಲಿ ವಿಶ್ವನಾಥ್ ಮೋಸ ಮಾಡಿದರು ಎಂದು ಎಲ್ಲೆಡೆ ಹೇಳಿಕೊಂಡು ಬರುತ್ತಿದ್ದಾರೆ. ನಾವು ಕೆಲಸ ಮಾಡದಿದ್ದರೆ ಅವರಿಗೆ 70 ಸಾವಿರ ಮತಗಳ ಲೀಡ್ ಬರುತ್ತಿತ್ತೇ’ ಎಂದು ಪ್ರಶ್ನಿಸಿದರು.

ಯಲಹಂಕದಲ್ಲಿ ಎರಡು ಕಡೆ ಕೆಂಪೇಗೌಡ ಜಯಂತಿ ಮಾಡಿದರೆ ಕೆಟ್ಟ ಸಂದೇಶ ಹೋಗುತ್ತದೆ. ಆದರೆ ಅವರು ಹಟಕ್ಕೆ ಬಿದ್ದು ಮಾಡುತ್ತಿದ್ದಾರೆ. ಬಿಜೆಪಿ ಸಂಸದರಾಗಿ ಕಾಂಗ್ರೆಸ್‌ನವರ ಮನೆ ಬಾಗಿಲಿಗೆ ಹೋಗುತ್ತಿದ್ದಾರೆ. ಯಲಹಂಕದಲ್ಲಿ ನಾವು ತಳಮಟ್ಟದಿಂದ ಪಕ್ಷ ಕಟ್ಟಿದ್ದೇವೆ ಎಂದರು.

‘ಕೆಂಪೇಗೌಡರ ಜಯಂತಿ ಸರ್ವಜನಾಂಗದ ಶಾಂತಿಯ ತೋಟದ ಪ್ರತೀಕ’

ಸಂಭ್ರಮದ ಬಂಡಿದೇವರ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಜಯಂತಿ ಮತ್ತು ಬೆಂಗಳೂರು ಬಂಡಿದೇವರ ಉತ್ಸವವು ಸರ್ವಜನಾಂಗದ ಶಾಂತಿಯ ತೋಟದ ಪ್ರತೀಕ ಎಂದು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ದಕ್ಷಿಣ ಕರ್ನಾಟಕದ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಯಾದ ‘ಬಂಡಿದೇವರ ಉತ್ಸವ’ಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ಜನರಿಗಾಗಿ ಕೆಂಪೇಗೌಡರು ಬಂಡಿದೇವರ ಉತ್ಸವ ಆಚರಿಸುತ್ತಿದ್ದರು. ಆ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದು, ಕೆಂಪೇಗೌಡರ ಜಯಂತಿ ಸಂದರ್ಭದಲ್ಲಿಯೇ ಉತ್ಸವ ಆಚರಿಸುವುದನ್ನು ಕಳೆದ ವರ್ಷ ಎಲ್ಲರ ನಿರ್ಧಾರದಂತೆ ಆರಂಭಿಸಲಾಯಿತು. ಸದಾ ಕಾಲ ಉತ್ಸವ ಮುಂದುವರಿಯಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಶುಕ್ರವಾರ ಬೆಳಿಗ್ಗೆ ಬಸವನಗುಡಿಯ ದೊಡ್ಡಬಸವನ ಗುಡಿಯಲ್ಲಿ ಪೂಜೆ ಸಲ್ಲಿಸಲಾಯಿತು. ಗಂಗೆಯನ್ನು ಹೊತ್ತು ವಿವಿ ಪುರ ಒಕ್ಕಲಿಗರ ಸಂಘದ ಆವರಣಕ್ಕೆ ಬಂಡಿದೇವರನ್ನು ಕರೆತರಲಾಯಿತು. ಅಲ್ಲಿ ನೀರು ಮತ್ತು ಸಿಹಿ ತಯಾರಿಸಿ ಪೊಟ್ಟಣಗಳಲ್ಲಿ ತುಂಬುವ ಆಚರಣೆಯನ್ನು ಹೆಣ್ಣುಮಕ್ಕಳು ಮಾಡಿದರು.



ಬಂಡಿದೇವರ ಉತ್ಸವದಲ್ಲಿ ನಂಜಾವಧೂತ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಸಂಜೆ ಜಿಬಿಎ ಕಚೇರಿ ಬಳಿಯಿಂದ ಅಲಂಕೃತ ಬಂಡಿಗಳಲ್ಲಿ ಬಂಡಿದೇವರ ಮೆರವಣಿಗೆ ಆರಂಭವಾಯಿತು. ವಿಧಾನ ಸೌಧದವರೆಗೆ ಮೆರವಣಿಗೆ ನಡೆಯಿತು. ವಿಧಾನಸೌಧದ ಆವರಣದಲ್ಲಿರುವ ನಾಡಪ್ರಭು ಕೆಂಪೇಗೌಡದ ಪ್ರತಿಮೆಗೆ ಗೌರವ ಸಲ್ಲಿಸಿದ ಬಳಿಕ ಬಂಡಿದೇವರ ಮುಖ್ಯ ಉತ್ಸವ ನಡೆಯಿತು.

‘ಉದ್ಯಮಿ ಒಕ್ಕಲಿಗ’. ಫಸ್ಟ್ ಸರ್ಕಲ್ ಸಹಕಾರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ, ಬಂಡಿದೇವರ ಉತ್ಸವ ಸಮಿತಿ ಗೌರವಾಧ್ಯಕ್ಷ ಜಯರಾಮ್ ರಾಯಪುರ, ಮಲೆನಾಡು ಪ್ರದೇಶಾಭಿ ವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡ, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ಮೊದಲಾದವರು ಭಾಗವಹಿಸಿದ್ದರು.

ಕೊಂಡಕ್ಕೆ ಬಿದ್ದ ಮೂವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ (ಚಾಮರಾಜನಗರ): ತಾಲ್ಲೂಕಿನ ಮುಳ್ಳೂರು ಗ್ರಾಮದಲ್ಲಿ ಶುಕ್ರವಾರ ನಡೆದ ಕುರುಬನಕಟ್ಟೆ ಸಿದ್ದಪ್ಪಾಜಿ ಕೊಂಡೋತ್ಸವದ ವೇಳೆ ಕೊಂಡಕ್ಕೆ ಬಿದ್ದ ಮೂವರು ಗಾಯಗೊಂಡಿದ್ದಾರೆ.

ಗ್ರಾಮದ ಜಯಂತ್, ಗಂಗಾಧರ್, ಸಿದ್ದಪ್ಪ ಗಾಯಗೊಂಡವರು. ಗಾಯಾಳುಗಳಿಗೆ ಸರ್ಕಾರಿ ಉಪ ವಿಭಾಗ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಂಡಾಯಗಳನ್ನು ಹೊತ್ತು ಕೊಂಡ ಹಾಯುವ ವೇಳೆ ಘಟನೆ ನಡೆದಿದೆ.

‘ಯತ್ನಾಳ್ ಕ್ಷಮೆ ಕೇಳಿದರೂ ಮಾತು ಅಳಿಸಲಾಗದು’

ಚಿನ್ನ ಕಳ್ಳಸಾಗಣೆ: ರನ್ಯಾ ರಾವ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿನ್ನ ಕಳ್ಳಸಾಗಣೆ ಹಗರಣದ ಆರೋಪಿ ನಟಿ ರನ್ಯಾ ರಾವ್ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಆಡಿರುವ ಮಾತುಗಳು ಘನತೆಗೆ ತಕ್ಕನಾಗಿಲ್ಲ. ಒಂದು ವೇಳೆ ಅವರು ಕ್ಷಮೆ ಯಾಚನೆ ಮಾಡಿದರೂ, ಅವರ ಮಾತುಗಳನ್ನು ಅಳಿಸಿಹಾಕಲು ಸಾಧ್ಯವಿಲ್ಲ’ ಎಂದು ಹೈಕೋರ್ಟ್ ತೀವ್ರ ವೇದನೆ ವ್ಯಕ್ತಪಡಿಸಿದೆ.

‘ನನ್ನ ವಿರುದ್ಧ ರನ್ಯಾ ರಾವ್ ಸಂಬಂಧಿ ಅಕುಲಾ ಅನುರಾಧ ನೀಡಿರುವ ದೂರಿನ ಅನ್ವಯ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಯತ್ನಾಳ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರನ್ಯಾ ರಾವ್ ಪರ ಹೈಕೋರ್ಟ್ ವಕೀಲ ವೈ.ಎಲ್. ಮಹೇಶ್, ‘ಯತ್ನಾಳ್ ಅವರ ಆಡಿರುವ ಮಾತುಗಳಲ್ಲಿನ ಆಕ್ಷೇಪಾರ್ಹ ಪದಕ್ಕೆ ಬೇರೇನಾದರೂ ಅರ್ಥ ಇದೆ ಎಂದಾಗಿದ್ದರೆ ಅದನ್ನು ನಂಬಬಹುದಿತ್ತು. ಆದರೆ, ಉತ್ತರ ಕರ್ನಾಟಕ ಭಾಷಾ ಶೈಲಿಯನ್ನು ಹೊರತುಪಡಿಸಿಯೂ ಇತರೆ ಭಾಷಾ ಪ್ರಭೇದಗಳಲ್ಲಿ ಯತ್ನಾಳ್ ಬಳಸಿರುವ ಪದಕ್ಕೆ ಒಂದೇ ಅರ್ಥವಿದೆ’ ಎಂದು ಸಮಜಾಯಿಷಿ ನೀಡಿದರು.



‘ಈ ಹಗರಣದಲ್ಲಿ ಇಬ್ಬರು ಸಚಿವರು ಭಾಗಿಯಾಗಿದ್ದು ಅವರ ಹೆಸರು ಬಹಿರಂಗಪಡಿಸಲಾಗುವುದು ಎಂದೂ ಅವರು ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದರು. ಆದರೆ, ಇದುವರೆಗೂ ಅವರು ಯಾರು ಎಂದು ಹೆಸರು ಬಹಿರಂಗಪಡಿಸಿಲ್ಲ. ತಮ್ಮ ರಾಜಕೀಯ ಪ್ರತೀಕಾರ ತೀರಿಸಿಕೊಳ್ಳುವ ಭರದಲ್ಲಿ ಅವರು ನಟಿ ರನ್ಯಾ ರಾವ್ ಬಗ್ಗೆ ತೀರಾ ಲಘುವಾಗಿ ಮಾತನಾಡಿದ್ದಾರೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಯತ್ನಾಳ್ ಪರ ವಕೀಲ ವೆಂಕಟೇಶ್ ಪಿ.ದಳವಾಯಿ,‘ಯತ್ನಾಳ್ ಅವರು ಎಲ್ಲಾ ಮಹಿಳೆಯರನ್ನು ಕುರಿತು ಈ ಹೇಳಿಕೆ ನೀಡಿಲ್ಲ. ಆಕ್ಷೇಪಾರ್ಹ ಎನ್ನಲಾದ ಹೇಳಿಕೆ ನೀಡಿದ ದಿನ ರನ್ಯಾ ರಾವ್ ನ್ಯಾಯಾಂಗ ಬಂಧನದಲ್ಲಿದ್ದರು. ಅರ್ಜಿದಾರರ ಹೇಳಿಕೆಯನ್ನು ಆಕೆ ಗಮನಿಸಿರುವ ಅಥವಾ ಕೇಳಿರುವ ಸಾಧ್ಯತೆ ಇಲ್ಲ. ಹಾಗಾಗಿ, ದೂರಿನಲ್ಲಿರುವ ಅಂಶಗಳು ರನ್ಯಾ ಅವರಿಗೆ ತಿಳಿದಿತ್ತು ಎಂಬುದು ಸರಿಯಲ್ಲ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಯವರು, ‘ಯತ್ನಾಳ್ ಕ್ಷಮೆ ಕೇಳಿದರೂ ಅವರು ಹೇಳಿರುವುದನ್ನು ಅಳಿಸಿ ಹಾಕಲಾಗದು. ಸಿ.ಟಿ.ರವಿ (ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಸದನದಲ್ಲಿ ಆಕ್ಷೇಪಾರ್ಹ ಪದ ಬಳಕೆ ಪ್ರಕರಣ) ತಮ್ಮ ವಿರುದ್ಧದ ಪ್ರಕರಣದಲ್ಲಿ ಕ್ಷಮೆ ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ, ನಾನು ಅದನ್ನು ಒಪ್ಪಿರಲಿಲ್ಲ. ಈ ಪ್ರಕರಣದಲ್ಲಿ ನಾನಾಗಿದ್ದರೆ ಮಧ್ಯಂತರ ತಡೆಯನ್ನೇ ನೀಡುತ್ತಿರಲಿಲ್ಲ’ ಎಂದು ಮೌಖಿಕವಾಗಿ ನುಡಿದರು.

ಮಧ್ಯಂತರ ಆದೇಶ ವಿಸ್ತರಿಸಿ ವಿಚಾರಣೆಯನ್ನು ಜುಲೈ 17ಕ್ಕೆ ಮುಂದೂಡಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಅವರಿದ್ದ ಏಕಸದಸ್ಯ ನ್ಯಾಯಪೀಠ 2025ರ ಏಪ್ರಿಲ್ 1ರಂದು ಮಧ್ಯಂತರ ತಡೆ ನೀಡಿ ಆದೇಶಿಸಿತ್ತು.

ಪ್ರಕರಣವೇನು?: ‘ಯತ್ನಾಳ್ ಅವರು ಬೇಜವಾಬ್ದಾರಿಯಿಂದ ಅಸಭ್ಯವಾಗಿ ಮತ್ತು ಲೈಂಗಿಕ ಅರ್ಥ ಕಲ್ಪಿಸಿ ರನ್ಯಾ ರಾವ್ ಅವರ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿ ಅಕುಲಾ ಅನುರಾಧ ಅವರು 2026ರ ಮಾರ್ಚ್ 18ರಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಇದನ್ನು ಆಧರಿಸಿ ಪೊಲೀಸರು ಯತ್ನಾಳ್ ವಿರುದ್ಧ ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 79ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ.

ಉಬರ್: ಪ್ರಭಜೀತ್ ಸಿಂಗ್ ರಾಜೀನಾಮೆ

ನವದೆಹಲಿ (ಪಿಟಿಐ): ಉಬರ್ ಇಂಡಿಯಾದ ಅಧ್ಯಕ್ಷ ಪ್ರಭಜೀತ್ ಸಿಂಗ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. 2015ರ ಆಗಸ್ಟ್‌ನಲ್ಲಿ ಉಬರ್‌ಗೆ ಸೇರಿದ್ದ ಸಿಂಗ್ ಅವರು, 2020ರಲ್ಲಿ ಕಂಪನಿಯ ದಕ್ಷಿಣ ಏಷ್ಯಾದ ಅಧ್ಯಕ್ಷರಾಗಿ ನೇಮಕವಾಗಿದ್ದರು.

ಪ್ರಭಜೀತ್ ಸಿಂಗ್ ಅವರು ಉಬರ್‌ನಲ್ಲಿನ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದು ಕಂಪನಿ ತಿಳಿಸಿದೆ.



ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆಯುವ ‘ಜುವೆನೈಲ್ ಸ್ಪಿಂಟರ್ಸ್ ಮಿಲಿಯನ್ ರೇಸ್’ಗೆ ಪ್ರಾಯೋಜಕತ್ವ ನೀಡಿರುವ ಎಸ್‌.ಎಂ.ಕಾಮಾ ಮ್ಯೂಸಿಕ್ ಅಂಡ್ ಪ್ರೊಡಕ್ಷನ್ ಪ್ರೈವೇಟ್ ಲಿಮಿಟೆಡ್‌ನ ಮಾಲೀಕ ಸೋಲಿ ಮೆರ್ವಾನ್ ಕಾಮಾ ಅವರು ಶುಕ್ರವಾರ ಟ್ರೋಫಿಯನ್ನು ಬಿಟಿಸಿ ರೇಸಿಂಗ್ ಮತ್ತು ಪ್ರಾಯೋಜಕತ್ವ ಉಪಸಮಿತಿ ಅಧ್ಯಕ್ಷ ಆರ್‌.ಮಂಜುನಾಥ್ (ಎಡ) ಅವರಿಗೆ ಹಸ್ತಾಂತರಿಸಿದರು

ಬೆಂಗಳೂರು ರೇಸ್

ಐರನ್ ಮಿರೇಜ್ ಗೆಲ್ಲುವ ನಿರೀಕ್ಷೆ

ಎಸ್.ಎಂ.ಕಾಮಾ ಮ್ಯೂಸಿಕ್ ಅಂಡ್ ಪ್ರೊಡಕ್ಷನ್ ಪ್ರೈವೇಟ್ ಲಿಮಿಟೆಡ್ ಜುವೆನೈಲ್ ಸ್ಪ್ರಿಂಟರ್ಸ್ ಮಿಲಿಯನ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐರನ್ ಮಿರೇಜ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರಾಂಪೇಜ್ 1, ಶೈನಿಂಗ್ ಪಾತ್ 2, ಅಶ್ವ ನ್ಯೂ ಯಾರ್ಕ್ 5

2ನೇ ರೇಸ್: ಬೆಸಿಲಿಕ 8, ಬೆಸ್ಟ್‌ಐಡೆಂಟಿಫಿಕೇಶನ್ 6, ಅಹರ್ನೆ 7

3ನೇ ರೇಸ್: ಯೂಆರ್‌ಎಮ್ಯಾನ್‌ಆರ್‌ಬೋರ್ನ್ 5, ಮ್ಯಾಗ್ನಸ್ 1, ಮಾನಾ 4

4ನೇ ರೇಸ್: ಪ್ರಾಮಿಸ್‌ಆಫ್‌ದಿಫ್ಯೂಚರ್ 7, ಸೂಪರ್‌ಸ್ಟಾರ್ 6, ಕ್ವಾಂತೆ 3

5ನೇ ರೇಸ್: ಐರನ್ ಮಿರೇಜ್ 2, ಬ್ಯೂರ್‌ವೆಸ್ಟ್‌ನಿಕ್ 1, ಎ ಗ್ರೇಟ್ ಬರ್ಘ್ 3

6ನೇ ರೇಸ್: ಶೈನಿಂಗ್ ವೇಸ್ 3, ಡೇರಿಂಗ್ಟನ್ 1, ಅನ್ನಬೆಲ್ಲೆ 9

7ನೇ ರೇಸ್: ಅಕ್ವಾಸ್ಟಿಕ್ 3, ಡೆನ್‌ಸೆಟ್ಟೊ 6, ಸೆನೋರ್ ಚೆರಿ 1

ಉತ್ತಮ ಬೆಟ್: ರಾಂಪೇಜ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಚಿತ್ರಕಲಾ ಸ್ಪರ್ಧೆ ಜುಲೈ 4ರಂದು

ಬೆಂಗಳೂರು: ಕಲಾ ದರ್ಪಣದಲ್ಲಿ ಕನ್ನಡ ಅಸ್ಮಿತೆ ಪ್ರಯುಕ್ತ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಮಕ್ಕಳಿಗಾಗಿ ಜುಲೈ 4ಕ್ಕೆ ನಯನ ಸಭಾಂಗಣದಲ್ಲಿ ಆಯೋಜಿಸಲಾಗಿದೆ.


8 ವರ್ಷದ ಒಳಗಿನ, 13ವರ್ಷದ ಒಳಗಿನ, 20ವರ್ಷದ ಒಳಗಿನ ಮಕ್ಕಳಿಗೆ ಸ್ಪರ್ಧೆ ನಡೆಯಲಿದೆ. ಭಾಗವಹಿಸಿದ ಎಲ್ಲರಿಗೂ ನೋಟ್ ಪುಸ್ತಕ ಹಾಗೂ ಪ್ರಮಾಣಪತ್ರಗಳನ್ನು ನೀಡಲಾಗುವುದು. ಪ್ರತಿ ವರ್ಗದಲ್ಲಿ 3 ಜನ ವಿಜೇತರಿಗೆ ಟ್ರೋಫಿ ಹಾಗೂ ಪ್ರಮಾಣಪತ್ರ ನೀಡಲಾಗುತ್ತದೆ. ಪ್ರತಿ ವರ್ಗದಲ್ಲೂ 10 ವಿಶೇಷ ಬಹುಮಾನ ಹಾಗೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ ಶಾಲಾ ತಂಡಗಳಿಗೆ ಸ್ಕೂಲ್ ಅವಾರ್ಡ್ ನೀಡಲಾಗುವುದು. ಆಸಕ್ತರು ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮಹಿಳಾ ಕಲಾವಿದರು, ಮಹಿಳಾ ಸಮಾಜ ಸೇವಕರಿಗೆ ಮಹಿಳಾ ಸಾಧಕಿ ಪ್ರಶಸ್ತಿ, ಬಾಲಪ್ರತಿಭೆಗಳಿಗೆ ‘ಯುವರತ್ನ’ ಕಲಾ ದರ್ಪಣ ಪ್ರೋತ್ಸಾಹ ಪ್ರಶಸ್ತಿ ನೀಡಲಾಗುವುದು. ಜೂನ್ 27ರ ಒಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದು ಆಯೋಜಕರು ತಿಳಿಸಿದ್ದಾರೆ. ಮಾಹಿತಿಗಾಗಿ 93806 71947 ಸಂಪರ್ಕಿಸಬಹುದು.

ಪ್ರಾಸಿಕ್ಯೂಷನ್‌ಗೆ ನಿರ್ದೇಶನ ನೀಡಿದ ಹೈಕೋರ್ಟ್ ಪೀಠ

ಬೀದಿನಾಯಿಗಳ ನಾಪತ್ತೆ: ಬಲವಂತದ ಕ್ರಮ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಗ್ಗದಾಸಪುರದಲ್ಲಿರುವ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಎರಡನೇ ಹಂತದ ಕ್ಯಾಂಪಸ್‌ನಲ್ಲಿದ್ದ 21 ಬೀದಿ ನಾಯಿಗಳು ಈಗ ಎಲ್ಲಿವೆ’ ಎಂದು ಪ್ರಶ್ನಿಸಿರುವ ಹೈಕೋರ್ಟ್, ಈ ಸಂಬಂಧ ದಾಖಲಾಗಿರುವ ದೂರಿಗೆ ಸಂಬಂಧಿಸಿದಂತೆ ಡಿಆರ್‌ಡಿಒ ಅಧಿಕಾರಿಗಳ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿದೆ.



ತಮ್ಮ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿ ಸಿ.ವಿ. ರಾಮನ್ ನಗರದಲ್ಲಿರುವ ಡಿಆರ್‌ಡಿಒ ಟೌನ್‌ಷಿಪ್ ಮೊದಲನೇ ಹಂತದ ಎಸ್ಟೇಟ್ ಮ್ಯಾನೇಜರ್ ರಾಕೇಶ್ ಕುಮಾರ್ ಸಾಹು ಹಾಗೂ ಡಿಆರ್‌ಡಿಒ ಸ್ವಚ್ಛತಾ ಮೇಲ್ವಿಚಾರಕ ಟಿ.ಜಿ. ಸುಧಾಕರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ‘ಡಿಆರ್‌ಡಿಒ ಕ್ಯಾಂಪಸ್‌ಗೆ ಯಾರು ಪ್ರವೇಶಿಸಿದರು? ಪ್ರಾಣಿಗಳಿಗೆ ಏನಾಯಿತು ಎಂಬುದಕ್ಕೆ ಅರ್ಜಿದಾರರನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲ. ನಾಯಿಗಳನ್ನು ಸೆರೆಹಿಡಿಯಲಾಗಿದೆ ಅಥವಾ ಅವು ಕಣ್ಮರೆಯಾಗಿವೆ ಎಂಬ ಸಂಗತಿಯಲ್ಲಿ ಸಿಬ್ಬಂದಿಯ ಯಾವುದೇ ಪಾತ್ರವಿಲ್ಲ. ಆದಾಗ್ಯೂ, ನಾಯಿಗಳನ್ನು ಯಾರು ತೆಗೆದುಕೊಂಡು ಹೋದರು ಮತ್ತು ಅವುಗಳ ಪ್ರಸ್ತುತ ಸ್ಥಿತಿ ಏನೆಂಬುದನ್ನು ಖಚಿತಪಡಿಸಿಕೊಳ್ಳಲು ತನಿಖೆ ಅಗತ್ಯ’ ಎಂದು ಪ್ರತಿಪಾದಿಸಿದರು.

ಪ್ರತಿವಾದಿ ಪರ ಹಾಜರಾಗಿದ್ದ ಹೈಕೋರ್ಟ್ ವಕೀಲೆ ವೈಶಾಲಿ ಹೆಗ್ಡೆ ಅರ್ಜಿದಾರರ ಪರ ವಕೀಲರ ಹೇಳಿಕೆಯನ್ನು ಅಲ್ಲಗಳೆದರು. ‘ಡಿಆರ್‌ಡಿಒ ಟೌನ್‌ಶಿಪ್ ಒಳಗೆ ಅನುಮತಿಯಿಲ್ಲದೆ ಯಾರೂ ಪ್ರವೇಶಿಸಲಾಗದು. ಸಾಕಷ್ಟು ಭದ್ರತೆಯನ್ನು ಹೊಂದಿರುವ ಈ ಕ್ಯಾಂಪಸ್‌ನಲ್ಲಿ ಯಾರು ಒಳ ಪ್ರವೇಶಿಸಿದರು? ನಾಯಿಗಳನ್ನು ಯಾರು ತೆಗೆದುಕೊಂಡು ಹೋದರು ಮತ್ತು ಅವುಗಳು ಈಗ ಎಲ್ಲಿವೆ ಎಂಬ ಪ್ರಶ್ನೆಗಳು ತನಿಖೆಗೆ ಅಗತ್ಯವಾದ ವಿಷಯ’ ಎಂದು ವಾದಿಸಿದರು.

ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, ‘ಎಫ್‌ಐಆರ್‌ನಲ್ಲಿ ಅಪರಾಧಗಳನ್ನು ತಪ್ಪಾಗಿ ಉಲ್ಲೇಖಿಸಿರಬಹುದು. ಆದರೆ ಡಿಆರ್‌ಡಿಒ ಟೌನ್‌ಶಿಪ್‌ನಲ್ಲಿ ಕೊನೆಯದಾಗಿ ಕಾಣಿಸಿಕೊಂಡ 21 ನಾಯಿಗಳು ಏನಾದವು ಎಂಬುದನ್ನು ಖಚಿತಪಡಿಸಿಕೊಳ್ಳಲು ತನಿಖೆಯನ್ನು ಮುಂದುವರಿಸಲು ಅನುಮತಿಸಬೇಕು’ ಎಂದು ಮನವಿ ಮಾಡಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ತನಿಖೆಗೆ ಸಹಕರಿಸಬೇಕು’ ಎಂದು ಅರ್ಜಿದಾರರಿಗೆ ನಿರ್ದೇಶಿಸಿತು. ಅಂತೆಯೇ, ‘ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳಬಾರದು. ನಾಯಿಗಳು ಕಣ್ಮರೆಯಾಗಿರುವ ಬಗ್ಗೆ ಆಗಸ್ಟ್ 11ರೊಳಗೆ ತನಿಖಾ ವರದಿಯನ್ನು ಸಲ್ಲಿಸಿ’ ಎಂದು ಮಹದೇವಪುರ ಠಾಣೆಯ ಪೊಲೀಸರಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣ: ‘ಡಿಆರ್‌ಡಿಒ ಕ್ಯಾಂಪಸ್‌ನಲ್ಲಿ 2026ರ ಮಾರ್ಚ್ 5 ರಂದು 21 ಬೀದಿ ನಾಯಿಗಳ ಮೇಲೆ ದೌರ್ಜನ್ಯ ನಡೆದಿದೆ. ಅವುಗಳ ಕಾಲು ಮತ್ತು ಬಾಯಿಗಳನ್ನು ಕಟ್ಟಿ ಗೋಣಿಚೀಲದಲ್ಲಿ ಹಾಕಿ ಸಾಗಿಸಲಾಗಿದೆ. ಮೂರು ನಾಯಿಗಳನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ’ ಎಂಬ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು.

ಈ ಬಗ್ಗೆ ಪ್ರಾಣಿಪ್ರಿಯ ಕಾರ್ಯಕರ್ತರು ಸಾಮಾಜಿಕ ಮಾಧ್ಯಮಗಳ ಮೂಲಕ ಕಳವಳ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರು (ಬೆಂಗಳೂರು ಪೂರ್ವ) ಮಹದೇವಪುರ ಪೊಲೀಸ್ ಠಾಣೆಯಲ್ಲಿ 2026ರ ಮಾರ್ಚ್ 9ರಂದು ದೂರು ನೀಡಿದ್ದರು.

ಮುಖ್ಯಾಂಶಗಳು

- ಜಾಲತಾಣಗಳಲ್ಲಿ ಹರಿದಾಡಿದ್ದ ದೃಶ್ಯ
- ಡಿಆರ್‌ಡಿಒ ಕ್ಯಾಂಪಸ್‌ನಲ್ಲಿದ್ದ 21 ಬೀದಿ ನಾಯಿ ಈಗ ಎಲ್ಲಿವೆ?
- ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ

ಟೌನ್‌ಶಿಪ್: ಮೊಳಗಿದ ಪರ ವಿರೋಧ ದನಿ

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ: ಬೈರಮಂಗಲಕ್ಕೆ ಇಂದು ಎಚ್‌ಡಿಕೆ ಭೇಟಿ

• ಓದೇಶ ಸಕಲೇಶಪುರ

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆ ವಿರುದ್ಧದ ದನಿಗೆ ಪ್ರತಿಯಾಗಿ ಟೌನ್‌ಶಿಪ್ ಪರವಾದ ದನಿಯೂ ಮೊಳಗಿದೆ. ಯೋಜನಾ ಪ್ರದೇಶದ ಗ್ರಾಮ ಪಂಚಾಯಿತಿ ಕೇಂದ್ರವಾದ ಬೈರಮಂಗಲ ಗ್ರಾಮವು ಪರ-ವಿರೋಧದ ಹೋರಾಟದ ಅಖಾಡವಾಗಿ ಬದಲಾಗಿದೆ.

ಟೌನ್‌ಶಿಪ್ ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಬೆನ್ನಲ್ಲೇ ಯೋಜನೆ ವಿರುದ್ಧವಾಗಿರುವವರು, 'ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ರೈತರ ಭೂ ಹಿತರಕ್ಷಣಾ ಸಮಿತಿ' ಹೆಸರಿನಲ್ಲಿ ಒಂದೂವರೆ ವರ್ಷದಿಂದ ಹೋರಾಟ ನಡೆಸುತ್ತಿದ್ದಾರೆ. ವಿರೋಧ ಪಕ್ಷಗಳ ಜೊತೆಗೆ ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಸಹ ಹೋರಾಟ ಬೆಂಬಲಿಸಿವೆ.

ಅದೇ ಬೈರಮಂಗಲ ವೃತ್ತದ ಬಳಿ ಟೌನ್‌ಶಿಪ್ ಬೇಕೆನ್ನುವ ಯೋಜನಾ ಪ್ರದೇಶದ ರೈತರು ಸಹ ಪೆಂಡಾಲ್ ಹಾಕಿಕೊಂಡು ಧರಣಿ ಶುರು ಮಾಡಿದ್ದಾರೆ. ಯೋಜನೆ ಅನುಷ್ಠಾನದ ಹೊಣೆ ಹೊತ್ತಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಜಿಬಿಡಿಎ) ನಿರ್ದೇಶಕರ ಜೊತೆಗೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಸಹ ಧರಣಿಗೆ ಕೈಜೋಡಿಸಿದ್ದಾರೆ.

ಎಚ್‌ಡಿಕೆ ಭೇಟಿ: ಯೋಜನೆ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಬಹಿರಂಗ ಚರ್ಚೆಯ ಸವಾಲು ಹಾಕಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಶನಿವಾರ ಬೈರಮಂಗಲಕ್ಕೆ ಭೇಟಿ ನೀಡಿ, ಟೌನ್‌ಶಿಪ್ ವಿರುದ್ಧದ ಹೋರಾಟಕ್ಕೆ ಮತ್ತಷ್ಟು ಶಕ್ತಿ ತುಂಬಲು ಮುಂದಾಗಿದ್ದಾರೆ. ಜೊತೆಗೆ ಹೋರಾಟದ ಸ್ಥಳಕ್ಕೆ ಚರ್ಚೆಗೆ ಬರುವಂತೆ ಮುಖ್ಯಮಂತ್ರಿಗೆ ಆಹ್ವಾನ ನೀಡಿದ್ದಾರೆ.

ಕಟ್ಟೆಚ್ಚರ: ಟೌನ್‌ಶಿಪ್ ವಿಚಾರಕ್ಕಾಗಿ ಬೈರಮಂಗಲದಲ್ಲಿ ಶುರುವಾಗಿರುವ ಪರ– ವಿರೋಧದ ಹೋರಾಟವು ರಾಜಕೀಯ ಸ್ವರೂಪ ಪಡೆದಿರುವುದರಿಂದ ಇಡೀ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಪೊಲೀಸರು ಭದ್ರತೆ ಒದಗಿಸಿದ್ದು, ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಹ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

ಸದ್ಯ ಯೋಜನೆಗೆ 3 ಗ್ರಾಮಗಳಲ್ಲಿ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿ ಪರಿಹಾರ ವಿತರಣೆ ಆರಂಭಿಸಲಾಗಿದೆ. ತಿಂಗಳಾಂತ್ಯದಲ್ಲಿ ಉಳಿದ 6 ಗ್ರಾಮಗಳಲ್ಲೂ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಬೀಳಲಿದೆ ಎಂದು ಜಿಬಿಡಿಎ ಮೂಲಗಳು ತಿಳಿಸಿವೆ.

> **ಟೌನ್‌ಶಿಪ್ ವಿರುದ್ಧದ ಹೋರಾಟಕ್ಕೆ ಬೆಂಬಲ ವ್ಯಕ್ತವಾಗುತ್ತಿದೆ. ಇದರಿಂದ ಹೆದರಿರುವ ಕಾಂಗ್ರೆಸ್ ನಾಯಕರು, ಕೆಲ ರೈತರು, ಕಾರ್ಯಕರ್ತರ ಮೂಲಕ ಪರವಾಗಿ ಧರಣಿ ಮಾಡಿಸುತ್ತಿದ್ದಾರೆ**
> **ಕೆ.ರಾಮಯ್ಯ,** ಅಧ್ಯಕ್ಷ,ಬೈರಮಂಗಲ, ಕಂಚುಗಾರನಹಳ್ಳಿ ಗ್ರಾ.ಪಂ ರೈತರ ಭೂ ಹಿತರಕ್ಷಣಾ ಸಮಿತಿ

> **ರೈತರು ಒಪ್ಪಿರುವ ಟೌನ್‌ಶಿಪ್ ವಿಷಯದಲ್ಲಿ ವಿರೋಧ ಪಕ್ಷಗಳು ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿವೆ. ಯೋಜನೆ ಆರಂಭಿಸಿದ ಜೆಡಿಎಸ್ ತನ್ನ ಅಸ್ತಿತ್ವಕ್ಕಾಗಿ ಹೋರಾಟಕ್ಕಿಳಿದಿದೆ**
> **ರಾಜಣ್ಣ,** ಹೊಸೂರು, ಟೌನ್‌ಶಿಪ್ ಪರ ಹೋರಾಟಗಾರ





ಬಿಡದಿ ಟೌನ್‌ಶಿಪ್ ವಿರೋಧಿಸಿ ಬೈರಮಂಗಲ ವೃತ್ತದಲ್ಲಿ ರೈತರು ನಡೆಸುತ್ತಿರುವ ಧರಣಿಯಲ್ಲಿ ಜೆಡಿಎಸ್ ಮಾಜಿ ಶಾಸಕ ಎ. ಮಂಜುನಾಥ್ ಹಾಗೂ ಕೆಆರ್‌ಎಸ್ ಪಕ್ಷದ ಸಂಸ್ಥಾಪಕ ರವಿಕೃಷ್ಣಾ ರೆಡ್ಡಿ ಪಾಲ್ಗೊಂಡಿದ್ದರು (ಎಡಚಿತ್ರ) ಬಿಡದಿ ಟೌನ್‌ಶಿಪ್ ಪರ ರೈತರು ಬೈರಮಂಗಲದಲ್ಲಿ ಶುಕ್ರವಾರ ಧರಣಿ ನಡೆಸಿದರು

ಪರಿಹಾರದ ಚೆಕ್ ವಿತರಣೆ

ಯೋಜನಾ ಪ್ರದೇಶದ ಕೆಂಪಯ್ಯನಪಾಳ್ಯ, ಮಂಡಲಹಳ್ಳಿ, ವಡೇರಹಳ್ಳಿಯಲ್ಲಿ ಭೂ ಸ್ವಾಧೀನಕ್ಕೆ ಜೂನ್ 6ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅದಾದ ಎರಡೇ ವಾರಕ್ಕೆ ಜೂನ್ 19ರಂದು ಭೂಮಿ ಕೊಡಲು ಒಪ್ಪಿದವರಿಗೆ ಶಾಸಕ ಎಚ್.ಸಿ.ಬಾಲಕೃಷ್ಣ ಪರಿಹಾರದ ಚೆಕ್ ವಿತರಣೆಗೆ ಚಾಲನೆ ನೀಡಿದ್ದರು. ಅದರ ಬೆನ್ನಲ್ಲೇ ಭೂ ಮಾಲೀಕರನ್ನು ಜಿಬಿಡಿಎ ಕಚೇರಿಗೆ ಕರೆದು ಪರಿಹಾರ ಚೆಕ್ ವಿತರಿಸಲಾಗುತ್ತಿದೆ.

ಡಿಕೆಶಿಯದ್ದು ದುರ್ಯೋಧನ ನಡೆ

'ಟೌನ್‌ಶಿಪ್ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದುರ್ಯೋಧನನ ರೀತಿ ನಡೆದುಕೊಳ್ಳುತ್ತಿದ್ದಾರೆ. ಯಾವುದೇ ಕಾರಣಕ್ಕೂ ಯೋಜನೆಗೆ ರೈತರಿಂದ ಬಲವಂತವಾಗಿ ಭೂಮಿ ಕಿತ್ತುಕೊಳ್ಳಬಾರದು' ಎಂದು ಕೆಆರ್‌ಎಸ್ ಪಕ್ಷದ ಅಧ್ಯಕ್ಷ ರವಿಕೃಷ್ಣಾ ರೆಡ್ಡಿ ಹೇಳಿದರು.

ಈ ವಿಷಯದಲ್ಲಿ ರಾಜಕೀಯ ಪ್ರತಿಷ್ಠೆ ಬಿಟ್ಟು ರೈತರ ಹಿತಾಸಕ್ತಿ ಕುರಿತು ಯೋಚಿಸಬೇಕು. ಲಕ್ಷಾಂತರ ಮರಗಳಿರುವ ಈ ಹಸಿರು ಪ್ರಕೃತಿ ನಾಶಮಾಡಿ ನಗರೀಕರಣ ಮಾಡುವ ಅಗತ್ಯವಿಲ್ಲ. ಇಲ್ಲಿನ ರೈತರ ಹೋರಾಟಕ್ಕೆ ಬಹುತೇಕ ರೈತ, ದಲಿತ, ಕನ್ನಡಪರ ಸಂಘಟನೆಗಳು ಬೆಂಬಲ ನೀಡಿವೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದೂ ಆಗ್ರಹಿಸಿದರು.

'ಕಳಪೆ ಕಾಮಗಾರಿ ಪ್ರಶ್ನಿಸಿ'

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: 'ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟವನ್ನು ಸ್ಥಳೀಯರೇ ಪರೀಕ್ಷಿಸಬೇಕು. ದೋಷ ಕಂಡು ಬಂದರೆ, ಕಳಪೆಯಾಗಿದ್ದರೆ ಮುಲಾಜಿಲ್ಲದೆ ಪ್ರಶ್ನಿಸಬೇಕು' ಎಂದು ನೆಲಮಂಗಲ ಶಾಸಕ ಎನ್. ಶ್ರೀನಿವಾಸ್ ಪ್ರತಿಪಾದಿಸಿದರು.

ಶುಕ್ರವಾರ ಸೋಂಪುರದ ವಿವಿಧ ವಾರ್ಡ್‌ಗಳಲ್ಲಿ ₹ 4 ಕೋಟಿ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಗುತ್ತಿಗೆದಾರರು ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಕಡ್ಡಾಯ' ಎಂದರು.

ದೊಡ್ಡಬಳ್ಳಾಪುರ ರಸ್ತೆಯಿಂದ ರೈಲ್ವೆ ನಿಲ್ದಾಣ ಹಾಗೂ ವಿ ಕೇರ್ ಶಾಲೆವರೆಗೆ, ವಾರ್ಡ್-1ರ ಅಲ್ಪಸಂಖ್ಯಾತರ ಕಾಲೊನಿ, ಮಧುಗಿರಿ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿ 48ರವರೆಗೆ ಇಂದಿರಾ ಕಾಲೊನಿಯಲ್ಲಿ, ವಾರ್ಡ್-3ರ ಆಗಳಕುಪ್ಪೆ ರಸ್ತೆಯಿಂದ ವಿನಾಯಕ ಬಡಾವಣೆವರೆಗೆ ಮತ್ತು ಟೀಚರ್ಸ್ ಕಾಲೋನಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾರ್ಯ ನಡೆಯಲಿದೆ ಎಂದು ತಿಳಿಸಿದರು.



ದಾಬಸ್‌ಪೇಟೆಯ ಟೀಚರ್ಸ್ ಕಾಲೊನಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಶಾಸಕ ಶ್ರೀನಿವಾಸ್ ಚಾಲನೆ ನೀಡಿದರು.



ಅಂಜನಾಪುರದ ಬಿಡಿಎ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಅಖಿಲ ಭಾರತ ಕುರುಹಿನ ಶೆಟ್ಟಿ(ನೇಕಾರ) ವಿದ್ಯಾರ್ಥಿ ನಿಲಯದ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯ ಎಸ್.ಕೇಶವ ಪ್ರಸಾದ್ ನೆರವೇರಿಸಿದರು. ಸಂಸ್ಥೆಯ ಅಧ್ಯಕ್ಷ ಆರ್. ಲಕ್ಷ್ಮೀ ನಾರಾಯಣ ಮತ್ತಿತರರು ಇದ್ದರು

ಅವ್ಯವಸ್ಥೆ: ಶಾಸಕರ ಅಸಮಾಧಾನ

ಪೀಣ್ಯ ದಾಸರಹಳ್ಳಿ: ಇಲ್ಲಿನ ಮಲ್ಲಸಂದ್ರ ವಾರ್ಡ್‌ನಲ್ಲಿರುವ ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸಾ ಕೇಂದ್ರದಲ್ಲಿ ಸ್ವಚ್ಛತೆ ನಿರ್ವಹಣೆ ಇಲ್ಲ, ನಾಯಿಗಳಿಗೆ ಸಮರ್ಪಕ ಆಹಾರ ಪೂರೈಸುತ್ತಿಲ್ಲ, ನಾಯಿಗಳಿಗೆ ಕುಡಿಯಲು ನೀರೂ ಇಲ್ಲ..

ಶಾಸಕ ಎಸ್ ಮುನಿರಾಜು ಅವರು ಶುಕ್ರವಾರ ಕೇಂದ್ರಕ್ಕೆ ದಿಢೀರನೆ ಭೇಟಿ ನೀಡಿದಾಗ ಕಂಡು ಬಂದ ಅವ್ಯವಸ್ಥೆ ಇದು. ಅದರಿಂದ ತೀವ್ರ ಅಸಮಾಧಾನಗೊಂಡ ಶಾಸಕರು ಪಶು ವೈದ್ಯಾಧಿಕಾರಿ ಡಾ. ಸುನಿಲ್ ಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡರು.

'ಕೇಂದ್ರವನ್ನು ಸ್ವಚ್ಛವಾಗಿ ಇರಿಸದಿರುವುದು ಸರಿಯಲ್ಲ. ನೀರಿನ ಸಮಸ್ಯೆ ಇದ್ದರೂ ಪರಿಹರಿಸದೇ ನಿರ್ಲಕ್ಷ್ಯ ವಹಿಸಲಾಗಿದೆ. ಉತ್ತರ ಭಾರತ ಮೂಲದ 18ಕ್ಕೂ ಹೆಚ್ಚು ಸಿಬ್ಬಂದಿಯೂ ಹೀನಾಯ ಸ್ಥಿತಿಯಲ್ಲಿದ್ದಾರೆ. ನಾಯಿಗಳನ್ನು ಹಿಡಿದು ತರುವ ಕೆಲಸವನ್ನು ಮಾಡಿದರೂ, ದುರ್ನಾತದ ನಡುವೆ ಕೇಂದ್ರದಲ್ಲೇ ವಾಸವಿದ್ದಾರೆ. ಕೂಡಲೇ ಈ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದು ಸೂಚಿಸಿದರು.

'ನಾಯಿಗಳಿಗೂ ಬದುಕುವ ಹಕ್ಕು ಇರುವಂತೆಯೇ ಆರೈಕೆ ಮಾಡುವವರಿಗೂ ಉತ್ತಮ ವಾತಾವರಣದಲ್ಲಿ ಬದುಕುವ ಹಕ್ಕು ಇದೆ. ಕೂಡಲೇ ಅವರಿಗೆ ಪ್ರತ್ಯೇಕ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಬೇಕು. ಸೌಕರ್ಯಗಳನ್ನು ಕಲ್ಪಿಸಬೇಕು' ಎಂದರು.

ಪಶು ವೈದ್ಯಾಧಿಕಾರಿ ಪ್ರತಿಕ್ರಿಯಿಸಿ, 'ಪ್ರತಿದಿನ ಸ್ವಚ್ಛತೆ ಮಾಡಿಸಿದರೂ ದುರ್ನಾತವಿರುತ್ತದೆ. ಸ್ವಯಂಸೇವಾ ಸಂಸ್ಥೆಯೇ ನಾಯಿಗಳಿಗೆ ಆಹಾರ ಪೂರೈಕೆ ಮತ್ತು ಸಿಬ್ಬಂದಿಯ ನಿರ್ವಹಣೆಯ ಜವಾಬ್ದಾರಿ ಹೊತ್ತಿದೆ. ಜನರು ಬಿಟ್ಟು ಹೋಗುವ ನಾಯಿ ಮರಿಗಳ ಆರೈಕೆಯನ್ನೂ ಕೇಂದ್ರದಲ್ಲೇ ಮಾಡಲಾಗುತ್ತಿದೆ' ಎಂದು ತಿಳಿಸಿದರು.



ಮಲ್ಲಸಂದ್ರ ವಾರ್ಡ್‌ನಲ್ಲಿರುವ ಬೀದಿ ನಾಯಿಗಳ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸಾ ಕೇಂದ್ರಕ್ಕೆ ಶಾಸಕ ಎಸ್.ಮುನಿರಾಜು ಭೇಟಿ ನೀಡಿ ಪರಿಶೀಲಿಸಿದರು

'ಸಿದ್ದರಾಮಯ್ಯ ಎಲ್ಲ ಜಾತಿಗಳ ಬಡವರ ನಾಯಕ'

ಬೆಂಗಳೂರು: 'ಎಲ್ಲ ಜಾತಿಗೆ ಸೇರಿದ ಬಡವರು ಸಿದ್ದರಾಮಯ್ಯ ಅವರಲ್ಲಿ ತಮ್ಮ ನಾಯಕನನ್ನು ಕಾಣುತ್ತಿದ್ದರು. ಈ ಅಂಶವೇ ಅವರನ್ನು ಜನನಾಯಕರನ್ನಾಗಿ ಮಾಡಿತು' ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರೊ.ಎ.ನಾರಾಯಣ ಅಭಿಪ್ರಾಯಪಟ್ಟರು.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಗುರುವಾರ ಏರ್ಪಡಿಸಿದ್ದ 'ಕರ್ನಾಟಕದ ಕೊನೆಯ ಜನನಾಯಕ ಸಿದ್ದರಾಮಯ್ಯ: ಜೀವನ-ಸಾಧನೆ' ಕುರಿತ ಗೋಷ್ಠಿಯಲ್ಲಿ ಮಾತನಾಡಿ, 'ರಾಜ್ಯದಲ್ಲಿ ಹೆಚ್ಚುತ್ತಿರುವ ಮತೀಯವಾದಿ ರಾಜಕಾರಣವನ್ನು ಅವರು ವೈಯಕ್ತಿಕವಾಗಿ ವಿರೋಧಿಸಿದನ್ನು ಬಿಟ್ಟರೆ, ಇಡೀ ಸಮಾಜವನ್ನು ಮತೀಯ ರಾಜಕಾರಣದ ವಿರುದ್ಧ ರೂಪಿಸುವ ಅವಕಾಶವನ್ನು ಬಿಟ್ಟುಕೊಟ್ಟು ನಿರೀಕ್ಷೆ ಹುಸಿಗೊಳಿಸಿದರು' ಎಂದು ವಿಶ್ಲೇಷಿಸಿದರು.

'ಎಸ್.ಎಂ. ಕೃಷ್ಣ ಅವಧಿಯ ನಂತರ ಕರ್ನಾಟಕದಲ್ಲಿ ಕಾಂಗ್ರೆಸ್‌ನ ಬಡವರ್ಗದ ಮತದಾರರು ಪಕ್ಷದಿಂದ ದೂರವಾಗುತ್ತಿದ್ದರು. ಆ ಹಂತದಲ್ಲಿ ಕಾಂಗ್ರೆಸ್ ಸೇರಿದ ಸಿದ್ದರಾಮಯ್ಯ ಅವರ ಸಾಮಾಜಿಕ ನ್ಯಾಯ ಆಧಾರಿತ ರಾಜಕೀಯ ಮತ್ತು ನೀತಿಗಳಿಂದಾಗಿ ಪಕ್ಷವು ಮತದಾರರನ್ನು ಮರಳಿ ಗಳಿಸುವಂತಾಯಿತು' ಎಂದರು.

'ಸ್ವಂತ ಉದ್ದಿಮೆಗಳ ಹಿತಾಸಕ್ತಿಯನ್ನೇ ಮುಖ್ಯವಾಗಿಸಿಕೊಂಡ ಇಂದಿನ ರಾಜಕಾರಣಿಗಳಿಗಿಂತ ಸಂಪೂರ್ಣ ಭಿನ್ನವಾಗಿ ಸಿದ್ದರಾಮಯ್ಯ ಯಶಸ್ವಿಯಾಗಿ ರಾಜಕಾರಣ ಮಾಡಿದರು' ಎಂದು ಆಂಧ್ರಪ್ರದೇಶದ ಕ್ರಿಯಾ ವಿಶ್ವವಿದ್ಯಾಲಯದ ಪ್ರೊ.ಪೃಥ್ವಿ ಚಂದ್ರದತ್ತ ಶೋಭಿ ವಿಶ್ಲೇಷಿಸಿದರು.

ಪತ್ರಕರ್ತ ವಿಖರ್ ಸೈಯದ್ ಅಹ್ಮದ್ ಗೋಷ್ಠಿಯನ್ನು ನಿರ್ವಹಿಸಿದರು.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ-77605 04651
- ರಮಾಮಣಿ-ಸಿಒಒ-94481 97256
- ರಾಜೇಶ್-ಸಿಜಿಎಂ-948068 84046
- ರಾಘವೇಂದ್ರ ಪ್ರಸಾದ್-ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ನಿಮ್ಮ ಹೆಸರು ಹಾಗೂ ವಿಳಾಸವನ್ನು ಕಳಿಸಿ. ಅದನ್ನು ಪ್ರಕಟಿಸಲಾಗುತ್ತದೆ.



ಸುಬ್ರಹ್ಮಣ್ಯಪುರದ ಬಿಕಾಸಿಪುರ 1ನೇ ಮುಖ್ಯರಸ್ತೆಯ ನಿವೇಶನ 106ರಲ್ಲಿ ಸುರಿದಿರುವ ಕಸ




ಬನ್ನೇರುಘಟ್ಟ ರಸ್ತೆಯಲ್ಲಿ ಸುರಿದಿರುವ ಕಸ
– ಡಾ. ಎನ್. ರಮೇಶ್



ದೊಮ್ಮಲೂರು ಲೇಔಟ್ 1ನೇ ಮುಖ್ಯರಸ್ತೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮುಂಭಾಗ (ವಿಶ್ವೇಶ್ವರಯ್ಯ ಕೇಂದ್ರೀಯ ಭವನದ ಹಿಂದೆ) ಸುರಿದಿರುವ ತ್ಯಾಜ್ಯ
– ಜಾನ್



ಹೆಣ್ಣೂರು ಮುಖ್ಯರಸ್ತೆಯಲ್ಲಿ ಬಿಡಿಎ ಹೊಸದಾಗಿ ನಿರ್ಮಿಸಿರುವ ರಸ್ತೆಯಲ್ಲಿ ಮೂಟೆಗಟ್ಟಲೆ ತ್ಯಾಜ್ಯ ಸುರಿಯಲಾಗಿದೆ
–ಪ್ರೇಮ್‌ಕುಮಾರ್, ಬೆನ್‌ಸತ್ಯ ಎನ್‌ಕ್ಲೇವ್



ಟಿ.ಸಿ. ಪಾಳ್ಯದ ಜೆಂಕೆತಿಮ್ಮನಹಳ್ಳಿಯಲ್ಲಿರುವ ವಾರಾಣಸಿ ಕೆರೆಯ ಬಳಿ ತ್ಯಾಜ್ಯ ಹಾಗೂ ಕೊಳಕು ನೀರು ತುಂಬಿದೆ
– ಆರ್.ಎಸ್. ಹಬ್ಬು

'ಸಂಜೆ ವೇಳೆಯೂ ಕಸ ಸಂಗ್ರಹಿಸಿ'

ಈಜೀಪುರ ಮೇಲ್ಸೇತುವೆ ಕಾಮಗಾರಿ ತ್ವರಿತಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ಹೆಚ್ಚಿರುವ ಸ್ಥಳಗಳನ್ನು ಗುರುತಿಸಿ, ಸಂಜೆ ವೇಳೆಯಲ್ಲೂ ಆಟೊ ಟಿಪ್ಪರ್‌ಗಳನ್ನು ಕಳುಹಿಸಿ ಕಸ ಸಂಗ್ರಹ ಮಾಡುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯಲಚೇನಹಳ್ಳಿ ಪ್ರದೇಶದಲ್ಲಿ ಶುಕ್ರವಾರ ಪರಿಶೀಲನೆ ನಡೆಸಿದ ಅವರು, ಈಗಾಗಲೇ ಸಂಜೆ ವೇಳೆಯಲ್ಲೂ ಕಸ ಸಂಗ್ರಹಣೆಗೆ ಆಟೊಗಳನ್ನು ನಿಯೋಜಿಸಲಾಗಿದೆ. ಆದರೂ, ಕಸದ ಸಮಸ್ಯೆ ಹೆಚ್ಚಿರುವ ಪ್ರದೇಶಗಳನ್ನು ಗುರುತಿಸಿ, ಅಗತ್ಯವಿರುವ ಕಡೆ ಹೆಚ್ಚುವರಿ ಆಟೊ ಟಿಪ್ಪರ್‌ಗಳನ್ನು ನಿಯೋಜಿಸಬೇಕು. ರಸ್ತೆ ಬದಿಯಲ್ಲಿ ಕಸ ಬಿಸಾಡುವುದನ್ನು ಪರಿಣಾಮಕಾರಿಯಾಗಿ ತಡೆಯಬೇಕು ಎಂದರು.

ಇಲ್ಲಿನ ಕಸದ ಸಮಸ್ಯೆ ನಿವಾರಣೆಗೆ ಸೂಕ್ತ ಖಾಲಿ ಜಾಗ ಗುರುತಿಸಿ, ತ್ವರಿತವಾಗಿ ನಿರ್ಮಾಣ ಕಾಮಗಾರಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸೂಚನೆ: ಹೆಚ್ಚಿನ ಸಿಬ್ಬಂದಿ ನಿಯೋಜಿಸಿ ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ವೇಗ ನೀಡುವಂತೆ ಸೂಚಿಸಿದರು. ಶಾಸಕ ಎಂ. ಕೃಷ್ಣಪ್ಪ, ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್, ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ, ಸಿಒಒ ರಮಾಮಣಿ, ಮುಖ್ಯ ಎಂಜಿನಿಯರ್‌ಗಳಾದ ಬಸವರಾಜ್ ಕಬಾಡೆ, ರಾಜೇಶ್, ಡಾ. ರಾಘವೇಂದ್ರ ಪ್ರಸಾದ್ ಇದ್ದರು.



ಈಜಿಪುರ ಮೇಲ್ಸೇತುವೆಯ ಮಂದಗತಿ ಕಾಮಗಾರಿಗೆ ವೇಗ ನೀಡಬೇಕು ಎಂದು ಗುತ್ತಿಗೆದಾರರಿಗೆ ಮಹೇಶ್ವರ್ ರಾವ್ ಸೂಚಿಸಿದರು. ಕೆ.ಎನ್. ರಮೇಶ್ ಉಪಸ್ಥಿತರಿದ್ದರು

ಅಡೆತಡೆ ರಹಿತ ಪಾದಚಾರಿ ಮಾರ್ಗ

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು, ರಸ್ತೆ ಗುಂಡಿಗಳ ವೈಜ್ಞಾನಿಕ ದುರಸ್ತಿ ಹಾಗೂ ಪ್ರಮುಖ ಜಂಕ್ಷನ್‌ಗಳ ಸಮಗ್ರ ಸುಂದರೀಕರಣ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಆಯುಕ್ತ ಡಿ.ಎಸ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿ ನಿರ್ಮಿಸಿರುವ ಪೆಟ್ಟಿಗೆ ಅಂಗಡಿಗಳು, ತಾತ್ಕಾಲಿಕ ಶೆಡ್‌ಗಳು, ತಳ್ಳುವ ಗಾಡಿಗಳು, ಕ್ಯಾನೊಪಿ ಸೇರಿದಂತೆ ಎಲ್ಲಾ ರೀತಿಯ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಬೇಕು. ಜುಲೈ 1ರಿಂದ ನಗರ ಪಾಲಿಕೆ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಹಂತ ಹಂತವಾಗಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಿ, ಜುಲೈ 10 ರೊಳಗೆ ಮೊದಲ ಹಂತದ ಕಾರ್ಯಾಚರಣೆಯನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮೊದಲ ಹಂತದಲ್ಲಿ ಹಳೆ ಮದ್ರಾಸ್ ರಸ್ತೆ, ಐಟಿಪಿಎಲ್ ಮುಖ್ಯರಸ್ತೆ, ಸರ್ಜಾಪುರ ಮುಖ್ಯರಸ್ತೆ, ಹೂಡಿ–ಅಯ್ಯಪ್ಪ ನಗರ ಮುಖ್ಯರಸ್ತೆ, ಹೊರಮಾವು - ಕೆ. ನಾರಾಯಣಪುರ ರಸ್ತೆ, ಎಇಸಿಎಸ್ ಮುಖ್ಯರಸ್ತೆ, ಹೊರ ವರ್ತುಲ ರಸ್ತೆ, ವೈಟ್‌ಫೀಲ್ಡ್ ಮುಖ್ಯರಸ್ತೆ, ಇಪಿಐಪಿ ಪ್ರದೇಶಗಳ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುವುದು ಎಂದರು.

ನಗರದಲ್ಲಿ ಇಂದು


ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ಗಡಿರೇಖೆಯ ಜೋಡೆತ್ತು ಪಯಣದ ಮರುಸೃಷ್ಟಿ: ಉಪಸ್ಥಿತಿ: ಧರ್ಮೇಂದ್ರ ಕುಮಾರ್, ಉಪಸ್ಥಿತಿ: ಚಿಲುಮೆ ರವಿಕುಮಾರ್, ಆಯೋಜನೆ: ಚಿಲುಮೆ ರವಿಕುಮಾರ್ ಫೌಂಡೇಷನ್, ಸ್ಥಳ: ದೊಡ್ಡಪೇಟೆ ಸರ್ಕಲ್, ರಾಜಾ ಮಾರ್ಕೆಟ್, ಚಿಕ್ಕಪೇಟೆ, ಬೆಳಿಗ್ಗೆ 6

ನಾಗರದೇವರ ಪ್ರತಿಷ್ಠಾಪನಾ 48ನೇ ದಿನದ ಮಂಡಲ ಪೂಜೆ ಮಹೋತ್ಸವ: ಆಯೋಜನೆ ಹಾಗೂ ಸ್ಥಳ: ರಾಮಲಿಂಗೇಶ್ವರಸ್ವಾಮಿ, ಜಂಪದಮ್ಮ ದೇವಿ, ಚಾಮುಂಡೇಶ್ವರಿ ದೇವಸ್ಥಾನ ಟ್ರಸ್ಟ್, ಕುರುಬರಹಳ್ಳಿ, ತಾವರೆಕೆರೆ, ಮಾಗಡಿ ರಸ್ತೆ, ಬೆಳಿಗ್ಗೆ 6

ರೈತ ಸಂತೆ: ಹಣ್ಣು–ತರಕಾರಿ ಸೇರಿ ಸಾವಯವ ಉತ್ಪನ್ನಗಳ ಮಾರಾಟ, ಆಯೋಜನೆ ಹಾಗೂ ಸ್ಥಳ: ಜಿಕೆವಿಕೆ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಬೆಳಿಗ್ಗೆ 7ರಿಂದ ಸಂಜೆ 4

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ 10ಕೆ ಓಟ ಮತ್ತು 5ಕೆ ವಾಕಥಾನ್ ಹಾಗೂ 15 ಲಕ್ಷ ಗಿಡ ನೆಡುವ ಕಾರ್ಯಕ್ರಮ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಬಿಡಿಎ, ಸ್ಥಳ: ಎಸ್.ಎಂ.ಕೃಷ್ಣ ರಸ್ತೆ, ನಾಡಪ್ರಭು ಕೆಂಪೇಗೌಡ ಬಡಾವಣೆ, ಚಲ್ಲಘಟ್ಟ ಮೆಟ್ರೊ ನಿಲ್ದಾಣದ ಬಳಿ, ಬೆಳಿಗ್ಗೆ 7.15

ನಟ ಶಂಕರ್‌ನಾಗ್ ಸ್ಮರಣಾರ್ಥ 'ಶಂಕರ್‌ನಾಗ್' ಕ್ರಿಕೆಟ್ ಪಂದ್ಯಾವಳಿ: ಆಯೋಜನೆ: ಶಂಕರ್‌ನಾಗ್ ವಿನಾಯಕ ಗೆಳೆಯರ ಬಳಗ, ಸ್ಥಳ: ಗಣೇಶ ಆಟದ ಮೈದಾನ (ಕೆ.ಜಿ.ಗಾಂಧಿ ಕ್ರೀಡಾಂಗಣ), ಕೆಂಗೇರಿ, ಬೆಳಿಗ್ಗೆ 7.30ರಿಂದ ಸಂಜೆ 6




ಶಂಕರ್‌ನಾಗ್

'ಬಿಮ್ಯಾಕ್' ವಿವಾದ ಪರಿಹಾರ ಕೇಂದ್ರದ ಸಮಾವೇಶ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅಧ್ಯಕ್ಷತೆ: ಸಿರಿಯಾಕ್ ಜೋಸೆಫ್, ಅತಿಥಿಗಳು: ಸಂಜಯ್ ಕರೋಲ್, ಅರವಿಂದ್ ಕುಮಾರ್, ವಿ. ಗೋಪಾಲಗೌಡ, ಮಂಜುಳಾ ಚೆಲ್ಲೂರು, ಅನು ಶಿವರಾಮನ್, ಆಯೋಜನೆ: ಬೆಂಗಳೂರು ಇಂಟರ್‌ನ್ಯಾಷನಲ್ ಮಿಡಿಯೇಶನ್ ಆರ್ಬಿಟ್ರೇಷನ್ ಆ್ಯಂಡ್ ಕಾನ್ಸಿಲಿಯೇಷನ್ ಸೆಂಟರ್ (ಬಿಮ್ಯಾಕ್), ಸ್ಥಳ: ಸಿಎಂಎಸ್ ಬಿಸಿನೆಸ್ ಸ್ಕೂಲ್, ಜೈನ್ ವಿಶ್ವವಿದ್ಯಾಲಯ, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನ: ಬೆಳಿಗ್ಗೆ 10ರಿಂದ ಸಂಜೆ 6.15ರವರೆಗೆ ಐದು ಕಾವ್ಯ ಗೋಷ್ಠಿಗಳು, ಸಂಜೆ 6.30ಕ್ಕೆ 'ಮಂಟೇಸ್ವಾಮಿ ಕಥಾ ಪ್ರಸಂಗ' ನಾಟಕ ಪ್ರದರ್ಶನ, ರಚನೆ: ಎಚ್.ಎಸ್. ಶಿವಪ್ರಕಾಶ್, ತಂಡ: ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲೆಗಳ ವಿಭಾಗ, ಆಯೋಜನೆ: ಬಹುಮುಖಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ.

ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಶಿವರಾಜ ವಿ. ಪಾಟೀಲ, ಅತಿಥಿ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಶಸ್ತಿ ಪುರಸ್ಕೃತರು: ಎಂ.ಎಸ್. ಆಶಾದೇವಿ, ಕೆ.ಪಿ. ರಾವ್, ಅನಂತ ಕುಣಿಗಲ್, ಸಿ.ಆರ್. ಜನಾರ್ದನ್, ಎಚ್.ಕೆ. ಲಕ್ಷ್ಮೀನಾರಾಯಣ ಅಡಿಗ, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10.30



ಕೆ.ಪಿ. ರಾವ್

ಭರತನಾಟ್ಯ ರಂಗಪ್ರವೇಶ: ಶ್ರುತಿ ದೇಶಪಾಂಡೆ, ಅತಿಥಿಗಳು: ಶೀಲಾ ಚಂದ್ರಶೇಖರ್, ಎಸ್. ಶಂಕರ್ ನಾರಾಯಣ್, ಸಾಯಿ ವೆಂಕಟೇಶ್, ಅಮೋಲ್ ದತ್ತಾತ್ರೇಯ ಮಾಳಿ, ಆಯೋಜನೆ: ಶ್ರೀ ಭಾರತಿ ನೃತ್ಯಾಲಯ ಟ್ರಸ್ಟ್, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5.30



ಶ್ರುತಿ ದೇಶಪಾಂಡೆ

'ಜವಾಬ್ದಾರಿಯ ರಾಷ್ಟ್ರಗಳ ಸೂಚ್ಯಂಕ' ವರದಿ ಬಿಡುಗಡೆ: ಅಧ್ಯಕ್ಷತೆ: ಟಿ.ವಿ. ಮೋಹನದಾಸ ಪೈ, ತೇಜಸ್ವಿ ಸೂರ್ಯ, ಉಪಸ್ಥಿತಿ: ಶಾಂತಿಶ್ರೀ ಪಂಡಿತ್, ಮನೋಜ್ ಕುಮಾರ್ ತಿವಾರಿ, ಜಗದೀಶ್ ಮುಖಿ, ಅರುಣ್ ಕುಮಾರ್ ಮಿಶ್ರಾ, ಆಯೋಜನೆ: ದಿ ವರ್ಲ್ಡ್ ಇಂಟಲೆಕ್ಚುವಲ್ ಫೌಂಡೇಷನ್, ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ, ಬೆಳಿಗ್ಗೆ 10.30

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಬೀದಿ ನಾಟಕಗಳ ಪ್ರದರ್ಶನ ಹಾಗೂ ಚಿಂತನ ಮಂಥನ: ಸಿ.ಜಿ. ಕೃಷ್ಣಸ್ವಾಮಿ 75ನೇ ಜನ್ಮದಿನಾಚರಣೆ ಪ್ರಯುಕ್ತ, ಬೀದಿ ನಾಟಕಗಳು: ಹಶ್ಮಿ ಥಿಯೇಟರ್ ಫೋರಂನಿಂದ 'ಬೆಲ್ಚಿ', ಅಭಿನಯತರಂಗ ತಂಡದಿಂದ 'ಸೆನ್ಸ್', ರೇವಾ ವಿಶ್ವವಿದ್ಯಾಲಯದ ಕಲಾಪರ್ವ ತಂಡದಿಂದ 'ಆಪರೇಷನ್ ಸಿಂಧೂರ', ಸಮಾರಂಭ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಬಿ. ಸುರೇಶ, ಪಿಚ್ಚಳ್ಳಿ ಶ್ರೀನಿವಾಸ್, ಶಶಿಧರ್ ಭಾರಿಘಾಟ್, ಗೌರಿದತ್ತು, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ರಂಗ ಗೌರವ ಪ್ರದಾನ: ಪುರುಷೋತ್ತಮ ಬಿಳಿಮಲೆ, ರಂಗ ಗೌರವ ಪುರಸ್ಕೃತರು: ಜಯಲಕ್ಷ್ಮಿ ಸಿ.ಜಿ.ಕೆ., ನಾಗೇಶ್ ವಿ. ಬೆಟ್ಟಕೋಟೆ, ಜಿ.ಎನ್. ಮೋಹನ್, ಮುರುಡಯ್ಯ, ಶಿವಮೊಗ್ಗದ ರಂಗಾಯಣದಿಂದ 'ಸ್ವಾತಂತ್ರ್ಯದ ಓಟ' ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಮಧ್ಯಾಹ್ನ 3.30

ನಾಟಕಗಳ ಪ್ರದರ್ಶನ: ಮಧ್ಯಾಹ್ನ 3.30ಕ್ಕೆ 'ಆಲ್ಬಮ್' ನಾಟಕ ಪ್ರದರ್ಶನ, ಸಂಜೆ 7.30ಕ್ಕೆ 'ಸಂಕ್ರಮಣ್' ನಾಟಕ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ.

ನಾಡಪ್ರಭು ಕೆಂಪೇಗೌಡ ಜಯಂತಿ: ಉದ್ಘಾಟನೆ: ಸಿ.ಪಿ. ರಾಧಾಕೃಷ್ಣನ್, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಅತಿಥಿಗಳು: ಥಾವರಚಂದ್ ಗೆಹಲೋತ್, ಎಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಆರ್. ಅಶೋಕ್, ಸಿ.ಎನ್. ಅಶ್ವತ್ಥನಾರಾಯಣ, ಉಪಸ್ಥಿತಿ: ಎಂ. ಕೃಷ್ಣೇಗೌಡ, ಪ್ರಶಾಂತ್ ಪ್ರಕಾಶ್, ಆಯೋಜನೆ: ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಸಂಜೆ 4

ಹಾಸ್ಯ ನಾಟಕಗಳ ಪ್ರದರ್ಶನ: ಸಂಜೆ 4ಕ್ಕೆ ಭೀಷ್ಮ ರಾಮಯ್ಯ ಅವರ ನಿರ್ದೇಶನದಲ್ಲಿ 'ಬಾಯ್ಬಡ್ಕಿ' ನಾಟಕ ಪ್ರದರ್ಶನ, ಸಂಜೆ 7ಕ್ಕೆ ಬಾಷ್ ರಾಘವೇಂದ್ರ ಅವರ ನಿರ್ದೇಶನದಲ್ಲಿ 'ಮಿಸ್ಟರ್ ರಾವ್ & ಅಸೋಸಿಯೇಟ್' ನಾಟಕ ಪ್ರದರ್ಶನ, ತಂಡ: ಅಂತರಂಗ ಬಹಿರಂಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ.

ತಿಂಗಳ ಓದು: ನವೀನ್ ಸೂರಿಂಜೆ ಅವರ 'ಕರಾವಳಿಯ ಚರಿತ್ರೆಯಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್', ಭಾಷಣಕಾರರು: ಎಸ್.ಕೆ. ಆರುಣಿ, ಆಯೋಜನೆ ಹಾಗೂ ಸ್ಥಳ: ಹೊಸತು ಅಂಗಳ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಕುಮಾರಪಾರ್ಕ್ ಪೂರ್ವ, ಸಂಜೆ 5

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ಎಸ್.ಎಸ್. ಕೃಷ್ಣ ದಶಪಥ ರಸ್ತೆ ಲೋಕಾರ್ಪಣೆ ಹಾಗೂ ಕೆಂಪೇಗೌಡರ 7 ಪುರಜ್ಯೋತಿಗಳನ್ನು ಸ್ವೀಕರಿಸುವ ಕಾರ್ಯಕ್ರಮ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಜಿ. ಪರಮೇಶ್ವರ, ಕೃಷ್ಣ ಬೈರೇಗೌಡ, ಎನ್.ಎ. ಹ್ಯಾರಿಸ್, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಆಯೋಜನೆ: ಬಿಡಿಎ, ಸ್ಥಳ: ಎಸ್.ಎಂ.ಕೃಷ್ಣ ದಶಪಥ ರಸ್ತೆ, ನಾಡಪ್ರಭು ಕೆಂಪೇಗೌಡ ಬಡಾವಣೆ, ಚಲ್ಲಘಟ್ಟ, ಬೆಳಿಗ್ಗೆ 11

ಸಂಗೀತ ಸಂಭ್ರಮ: ಅತಿಥಿಗಳು: ಜಿ.ಎಸ್. ಹೆಗಡೆ, ನಾರಾಯಣ ಕುಲಕರ್ಣಿ, ಸಂಗೀತ ಕಛೇರಿ, ಸಿತಾರ್: ನಿಖಿಲ್ ಜೋಶಿ, ಬೆಂಗಾಲಿ ಗೀತೆಗಳ ಗಾಯನ: ಸಂಚಾರಿ ಗಂಗೂಲಿ, ಕೊಳಲು: ಪೃಥ್ವಿರಾಜ್ ನಾರಾಯಣ ಕುಲಕರ್ಣಿ, ತಬಲಾ: ಕಾರ್ತಿಕ್ ಭಟ್, ನಾಗರಾಜ್ ಹೆಗಡೆ, ಪುರುಜಿತ್ ಸುರೇಶ್, ಆಯೋಜನೆ: ಫೇ–ತಕ್ ಸಂಗೀತ ವಿದ್ಯಾಲಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಊಂಜಲ್ ಸಂಗೀತೋತ್ಸವ: ಗಾಯನ: ಅನ್ವಿತಾ ಸಾವಿತ್ರಿ ಭಟ್, ಅನುಷಾ ಸಾವಿತ್ರಿ ಭಟ್, ಪಿಟೀಲು: ಅಮೃತವರ್ಷಿಣಿ, ಮೃದಂಗ: ಲೋಕಪ್ರಿಯ ಗುರುಮೂರ್ತಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), ವೈಯಾಲಿಕಾವಲ್, ಸಂಜೆ 6

ಆಚಾರ್ಯತ್ರಯರು–ಕನ್ನಡ ಕವಿಗಳು ಕಂಡಂತೆ ವಿಶ್ವಗುರು ಶಂಕರ ಭಗವತ್ಪಾದರು: ಉಪಸ್ಥಿತಿ: ಎ.ಎಂ. ಚಂದ್ರಶೇಖರ, ಜಿ.ವೈ. ಪದ್ಮಾನಾಗರಾಜ್, ಸ್ತೋತ್ರ: ನವ್ಯ ಪಿ., ವಾಚನ: ಜಿ.ಎನ್. ನಾರಾಯಣ್, ಗೀತ ಗಾಯನ: ಗಾಯಿತ್ರಿ ಕೇಶವ್, ನುಡಿ ಗೌರವ: ಶ್ರೀಕಂಠ ಬಾಳಗಂಚಿ, ನಿರ್ವಹಣೆ: ಭ.ರಾ. ವಿಜಯಕುಮಾರ್, ಆಯೋಜನೆ ಹಾಗೂ ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ಅಪೂರ್ವ ಮ್ಯಾನ್ಷನ್, ದೊಡ್ಡಬೊಮ್ಮಸಂದ್ರ, ಸಂಜೆ 6

ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಅದಿತಿ ಪ್ರಹ್ಲಾದ್, ಪಿಟೀಲು: ಕೃತಿಕ್ ಕೌಶಿಕ್, ಮೃದಂಗ: ವಿಷ್ಣುವರ್ಧನ ಕೆ., ಖಂಜಿರ: ಸುಮುಖ್ ಕಾರಂತ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಮಲ್ಲೇಶ್ವರ, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: ಭರತನಾಟ್ಯ: ಅನಘ ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಮಾದಕವಸ್ತು ಸಾಗಣೆಗೆ ಡ್ರೋನ್

ಅನಾಮಧೇಯ ಖಾತೆ, ಕ್ರಿಪ್ಟೊ ಕರೆನ್ಸಿ, ಡಿಜಿಟಲ್ ವ್ಯಾಲೆಟ್‌ಗಳ ಮೂಲಕ ಪಾವತಿ

● ಶೆಮಿನ್ ಜಾಯ್



ನವದೆಹಲಿ (ಪಿಟಿಐ): 'ಪಾರ್ಸಲ್ ಮತ್ತು ಕೊರಿಯರ್ ಸೇವೆಗಳ ಬದಲು ಡ್ರೋನ್‌ಗಳನ್ನು ಬಳಸಿಕೊಂಡು 'ಮಾನವ ರಹಿತ' ವಿಧಾನದಲ್ಲಿ ಮಾದಕ ವಸ್ತುಗಳ ಸಾಗಣೆ ಮಾಡುವುದು ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚಿದ್ದು, ದೇಶದ ಭದ್ರತೆಗೆ ಗಂಭೀರ ಸವಾಲಾಗಿದೆ' ಎಂದು ಮಾದಕವಸ್ತು ನಿಗ್ರಹ ದಳ (ಎನ್‌ಸಿಬಿ) ಇತ್ತೀಚೆಗೆ ಬಿಡುಗಡೆ ಮಾಡಿದ 2025ನೇ ಸಾಲಿನ ಅಂಕಿ ಅಂಶ ಬಹಿರಂಗಪಡಿಸಿದೆ.

ಭಾರತ–ಪಾಕ್ ಗಡಿಯಲ್ಲಿ ಡ್ರೋನ್ ಮೂಲಕ ಮಾದಕ ವಸ್ತುಗಳ ಕಳ್ಳಸಾಗಣೆ ಪ್ರಕರಣಗಳು ಹೆಚ್ಚುತ್ತಿವೆ. 2025ರಲ್ಲಿ ಪಂಜಾಬ್‌ನಲ್ಲಿ 298, ಜಮ್ಮು ಮತ್ತು ಕಾಶ್ಮೀರದಲ್ಲಿ ನಾಲ್ಕು, ರಾಜಸ್ಥಾನದಲ್ಲಿ ಮೂರು ಸೇರಿ ಡ್ರೋನ್ ಮೂಲಕ ಮಾದಕವಸ್ತು ಸಾಗಣೆಗೆ ಸಂಬಂಧಿಸಿದ ಒಟ್ಟು 305 ಪ್ರಕರಣಗಳು ವರದಿಯಾಗಿವೆ. ಕಾನೂನು ಜಾರಿ

ಡ್ರೋನ್ ಮೂಲಕ ಮಾದಕವಸ್ತು ಸಾಗಣೆ

ವರ್ಷ	ಪ್ರಕರಣ	ಜಪ್ತಿ (ಕೆ.ಜಿಗಳಲ್ಲಿ)
2021	03	10
2022	35	148
2023	28	103
2024	179	236
2025	305	468

ಸಂಸ್ಥೆಗಳು ಇಂತಹ ಹಲವು ಪ್ರಯತ್ನಗಳನ್ನು ವಿಫಲಗೊಳಿಸಿದ್ದು, ಒಟ್ಟು 468 ಕೆ.ಜಿಯಷ್ಟು ಮಾದಕವಸ್ತು ವಶಪಡಿಸಿಕೊಳ್ಳಲಾಗಿದೆ.

'ಡ್ರೋನ್‌ಗಳ ಮೂಲಕ ಸಾಗಣೆ ಮಾಡಿದ ಮಾದಕ ವಸ್ತುಗಳಲ್ಲಿ ಹೆರಾಯಿನ್, ಮೆಥಾಂಫೆಟಮೈನ್, ಅಫೀಮು ಪ್ರಮಾಣವೇ ಹೆಚ್ಚಿದೆ. ಮಾದಕ ವಸ್ತು ಸಾಗಣೆದಾರರು ಕಾನೂನು ಜಾರಿ ಸಂಸ್ಥೆಗಳಿಂದ ತಪ್ಪಿಸಿಕೊಳ್ಳಲು ಪರ್ಯಾಯ ಸಾಗಾಣಿಕೆ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ. ಡೆಡ್ ಡ್ರಾಪ್ ವಿಧಾನ, ಡಾರ್ಕ್‌ನೆಟ್ ಮಾರ್ಕೆಟ್, ಕ್ರಿಪ್ಟೊಕರೆನ್ಸಿ, ಕಡಲ ಮಾರ್ಗಗಳ ಮೂಲಕ ನಿಷೇಧಿತ ವಸ್ತುಗಳ ಸಾಗಾಣಿಕೆ ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚಿದೆ' ಎಂದು ಎನ್‌ಸಿಬಿ ಹೇಳಿದೆ.

ಭದ್ರತೆಗೆ ಸವಾಲು

'ಮಾದಕವಸ್ತು ಕಳ್ಳಸಾಗಣೆಯ ವಿಧಾನಗಳು ದಿನದಿಂದ ದಿನಕ್ಕೆ ಬದಲಾಗುತ್ತಲೇ ಇವೆ. ಇದನ್ನು ತಡೆಯಲು ಅಂತರರಾಷ್ಟ್ರೀಯ ಸಹಕಾರ, ಸುಧಾರಿತ ಡಿಜಿಟಲ್ ಮತ್ತು ವಿಧಿವಿಜ್ಞಾನ ತಂತ್ರಜ್ಞಾನವನ್ನು ಬಲಪಡಿಸುವುದು ಅಗತ್ಯವಾಗಿದೆ' ಎಂದು ಎನ್‌ಸಿಬಿ ಹೇಳಿದೆ. ಮಾನವ ರಹಿತ ಸಾಗಣೆ, ಅನಾಮಧೇಯ ಖಾತೆ, ಕ್ರಿಪ್ಟೊಕರೆನ್ಸಿ ಮತ್ತು ಡಿಜಿಟಲ್ ವ್ಯಾಲೆಟ್‌ಗಳ ಮೂಲಕ ಪಾವತಿ ಮಾಡುವುದರಿಂದ ಇಂತಹ ಜಾಲವನ್ನು ಭೇದಿಸುವುದು ಅಷ್ಟೊಂದು ಸುಲಭವಲ್ಲ ಎನ್ನುತ್ತಾರೆ ಅಧಿಕಾರಿಗಳು.

2021ರಲ್ಲಿ ಕೊರಿಯರ್ ಮೂಲಕ ರವಾನೆ ಮಾಡಿದ್ದ ಒಟ್ಟು 1,557 ಕೆ.ಜಿಯಷ್ಟು ಮಾದಕವಸ್ತು ವಶಕ್ಕೆ ಪಡೆಯಲಾಗಿತ್ತು.

2022ರಲ್ಲಿ ಕೊರಿಯರ್ ಮೂಲಕ ಸಾಗಣೆ ಮಾಡಿದ ಮಾದಕವಸ್ತು ಪ್ರಮಾಣ 754 ಕೆ.ಜಿಗೆ ಮತ್ತು ಪ್ರಕರಣಗಳ ಸಂಖ್ಯೆ 240ಕ್ಕೆ ಇಳಿಕೆಯಾಯಿತು. ಆದರೆ, 2023ರಲ್ಲಿ ಇದು ಮತ್ತೆ 241 ಪ್ರಕರಣ, 1,098 ಕೆ.ಜಿಗೆ ಏರಿಕೆಯಾಯಿತು. 2024ರಲ್ಲಿ 173 ಪ್ರಕರಣಗಳು ವರದಿಯಾದರೆ, ಕಳೆದ ವರ್ಷ ಇದು 174 ಪ್ರಕರಣ ಮತ್ತು ವಶಪಡಿಸಿಕೊಂಡ ಮಾದಕವಸ್ತು 972 ಕೆ.ಜಿಗೆ ಇಳಿಕೆಯಾಗಿದೆ.

ಇದೇ ವೇಳೆ, ಡ್ರೋನ್ ಮೂಲಕ ಸಾಗಣೆ ಗಣನೀಯವಾಗಿ ಹೆಚ್ಚಿದೆ ಎಂದು ಎನ್‌ಸಿಬಿ ವರದಿ ಹೇಳಿದೆ.

ಕಾರ್ಮಿಕರಿಂದ ಶೌಚಗುಂಡಿ ಸ್ವಚ್ಛ: ಆಕ್ಷೇಪ

ಪ್ರಜಾವಾಣಿ ವಾರ್ತೆ



ಶೌಚಗುಂಡಿ ತ್ಯಾಜ್ಯವನ್ನು ಕಾರ್ಮಿಕರು ಬರಿಗೈಯಲ್ಲೇ ಟ್ರ್ಯಾಕ್ಟರ್‌ಗೆ ತುಂಬಿದರು

ತುಮಕೂರು: ಸುರಕ್ಷಿತ ಸಾಧನಗಳಿಲ್ಲದೇ ಕಾರ್ಮಿಕರು ಬರಿಗೈನಲ್ಲಿ ಶೌಚಗುಂಡಿ ತ್ಯಾಜ್ಯವನ್ನು ಟ್ರ್ಯಾಕ್ಟರ್‌ಗೆ ತುಂಬುತ್ತಿರುವ ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ.

ನಗರದ ಕೆಇಬಿ ಎಂಜಿನಿಯರ್ಸ್ ಸಂಘದ ಆವರಣದಲ್ಲಿ ಘಟನೆ ನಡೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

ಕೆಇಬಿ ನೌಕರರು ನಗರದಲ್ಲಿ ಸಮುದಾಯ ಭವನ ಮಾಡಿಕೊಂಡಿದ್ದಾರೆ. ಇಲ್ಲಿ ಮಣ್ಣು ತುಂಬುವ ಕೆಲಸ ಇದೆ ಎಂದು ಹೇಳಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ನಾಲ್ವರು ಕಾರ್ಮಿಕರನ್ನು ಕರೆತಂದಿದ್ದಾರೆ. ಬಳಿಕ ಅವರಿಂದ ಶೌಚಗುಂಡಿ ತ್ಯಾಜ್ಯವನ್ನು ತುಂಬಿ ಸಾಗಿಸುವಂತೆ ಹೇಳಿದ್ದಾರೆ ಎಂದು ವಿಡಿಯೊದಲ್ಲಿ ಆರೋಪಿಸಲಾಗಿದೆ.

'ಶೌಚಗುಂಡಿ ಸ್ವಚ್ಛತೆಗೆ ಮನುಷ್ಯರನ್ನು ಬಳಸದಂತೆ ಕಾನೂನು ಇದೆ. ಆದರೆ, ಕೆಇಬಿ ಸಂಘದ ಸಮುದಾಯ ಭವನ ನಿರ್ವಹಣೆ ಮಾಡುವವರು ಕಾನೂನು ಉಲ್ಲಂಘಿಸಿ ಮನುಷ್ಯರಿಂದಲೇ ಶೌಚಗುಂಡಿ ತ್ಯಾಜ್ಯ ಎತ್ತಿಸಿದ್ದಾರೆ. ಯಾವುದೇ ಸುರಕ್ಷಿತ ಸಾಧನಗಳಿಲ್ಲದೇ ಬರಿಗೈನಲ್ಲಿ ತ್ಯಾಜ್ಯ ಎತ್ತುತ್ತಿರುವುದನ್ನು ನೋಡಿ ಕಣ್ಣಲ್ಲಿ ನೀರು ಬಂತು' ಎಂದು ಸಾಮಾಜಿಕ ಕಾರ್ಯಕರ್ತ ಅಗ್ರಹಾರ ನಾಗರಾಜು ಆಕ್ರೋಶ ಹೊರಹಾಕಿದ್ದಾರೆ.


'ಉಪಮುಖ್ಯಮಂತ್ರಿ ಜಿ. ಪರಮೇಶ್ವರ ತವರು ಜಿಲ್ಲೆಯಲ್ಲೇ ಇಂತಹ ಅಮಾನವೀಯ ಘಟನೆ ನಡೆದಿದೆ. ಕಾರ್ಮಿಕರನ್ನು ಬಳಸಿ ಶೌಚಗುಂಡಿ ತ್ಯಾಜ್ಯ ತೆಗೆಸಿದ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ಮೂರು ದಿನದಿಂದ ಕೆಲಸ ಮಾಡುತ್ತಿದ್ದೇವೆ. ಮಣ್ಣು ತುಂಬಲೆಂದು ಕರೆತಂದರು. ಇಲ್ಲಿಗೆ ಬಂದು ನೋಡಿದಾಗ ಶೌಚಗುಂಡಿ ಎಂದು ತಿಳಿಯಿತು. ಹೊಟ್ಟೆಪಾಡಿಗೆ ಒಪ್ಪಿಕೊಂಡು ಈ ಕೆಲಸ ಮಾಡುತ್ತಿದ್ದೇವೆ. ಈ ಕೆಲಸ ಮಾಡಬಾರದು ಅಂತ ಗೊತ್ತಿರಲಿಲ್ಲ. ಇನ್ನುಮುಂದೆ ಇಂತಹ ಕೆಲಸಕ್ಕೆ ಕರೆದರೆ ಹೋಗುವುದಿಲ್ಲ' ಎಂದು ಕಾರ್ಮಿರು ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.

ಈ ಸಂಬಂಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅನರ್ಹರ ಖಾತೆಗೆ ಗೃಹಲಕ್ಷ್ಮಿ ಹಣ: ಶೀಘ್ರ ವಸೂಲಿ'

ಪ್ರಜಾವಾಣಿ ವಾರ್ತೆ



ರೇವಣ್ಣ

ರಾಯಚೂರು: 'ಗೃಹಲಕ್ಷ್ಮಿ ಯೋಜನೆಯಡಿ ಮೃತರೂ ಸೇರಿ ಅನರ್ಹ ಫಲಾನುಭವಿಗಳ ಖಾತೆಗೆ ₹116 ಕೋಟಿ ಜಮಾ ಆಗಿರುವುದು ನಿಜ. ಅನರ್ಹರನ್ನು ಗುರುತಿಸಿ ಈಗಾಗಲೇ ₹15 ಕೋಟಿ ವಸೂಲಿ ಮಾಡಲಾಗಿದೆ. ಉಳಿದ ₹101 ಕೋಟಿಯನ್ನು ವಸೂಲಿ ಮಾಡಲಾಗುವುದು' ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ತಿಳಿಸಿದರು.

'ಹಣ ದುರ್ಬಳಕೆಯಾಗಿಲ್ಲ. ಮೃತರ ಬ್ಯಾಂಕ್ ಖಾತೆಯಲ್ಲೇ ಠೇವಣಿ ರೂಪದಲ್ಲಿದೆ. ಅದನ್ನು ಮರಳಿ ಪಡೆಯುವ ದಿಸೆಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ' ಎಂದು ನಗರದಲ್ಲಿ ಶುಕ್ರವಾರ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

'ಮೃತರ ಖಾತೆಯಲ್ಲಿನ ಹಣವನ್ನು ಡೆಬಿಟ್ ಕಾರ್ಡ್ ಬಳಸಿ ಹಿಂಪಡೆದಿರಬಹುದು. ಅದರ ಪ್ರಮಾಣ ಶೇ 10ರಷ್ಟೂ ಇರಲಿಕ್ಕಿಲ್ಲ. ಗಡಿ ಜಿಲ್ಲೆಗಳಲ್ಲಿರುವ ಬ್ಯಾಂಕ್ ಆಫ್ ಮಹಾರಾಷ್ಟ್ರ ಹಾಗೂ ಕೇರಳಂ ರಾಜ್ಯದ ಬ್ಯಾಂಕ್‌ಗಳು ನೇರವಾಗಿ ಸರ್ಕಾರದ ಅಧೀನಕ್ಕೆ ಬರುವುದಿಲ್ಲ. ಹೀಗಾಗಿ ಈ ಬ್ಯಾಂಕ್‌ಗಳ ಅಧಿಕಾರಿಗಳೊಂದಿಗೂ ಮಾತುಕತೆ ನಡೆದಿದೆ' ಎಂದರು.

'ತಂತ್ರಜ್ಞಾನ ಬಳಸಿ ದೊಡ್ಡಮಟ್ಟದ ಯೋಜನೆಗಳನ್ನು ಅನುಷ್ಠಾನ ಗೊಳಿಸುವಾಗ ಕೆಲ ಲೋಪ ಗಳಾಗುವುದು ಸಹಜ. ಲೋಪ ಸರಿಪಡಿಸಲು ಸ್ವಲ್ಪ ಸಮಯ ಬೇಕಾಗಲಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಈಗಾಗಲೇ ಗ್ಯಾರಂಟಿ ಯೋಜನೆ ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳ ಕಾರ್ಯದರ್ಶಿಗಳು ಹಾಗೂ ಐವರು ಸಚಿವರ ಸಭೆ ಕರೆದು ಚರ್ಚಿಸಿದ್ದಾರೆ' ಎಂದರು.

'ಗೃಹಲಕ್ಷ್ಮಿ ಹಣವನ್ನು ಫಲಾನು ಭವಿಗಳ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮಾ ಮಾಡುವ ಪ್ರಕ್ರಿಯೆ ಮುಂದುವರಿಯಲಿದೆ. ಹಣ ಜಮಾ ಮಾಡುವುದನ್ನು ಕಾರಣಕ್ಕೂ ನಿಲ್ಲಿಸು ವುದಿಲ್ಲ. ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಗಳನ್ನು ಪತ್ತೆ ಹಚ್ಚುವ ಕಾರ್ಯವೂ ನಡೆಯಲಿದೆ' ಎಂದು ತಿಳಿಸಿದರು.

ಸರ್ಕಾರಿ ಶಾಲೆ ಮುಚ್ಚದಂತೆ ತಡೆಯಲು ಕ್ರಮ ● ಶಿಕ್ಷಕರೇ ಚಾಲಕರು

ಶಿಕ್ಷಕರಿಂದ ಮಕ್ಕಳಿಗಾಗಿ ಕಾರು ಖರೀದಿ

● ಜಾನೇಕೆರೆ ಆರ್. ಪರಮೇಶ್



ಸಕಲೇಶಪುರ ತಾಲ್ಲೂಕಿನ ಹಳೆಕೆರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಲೋಕೇಶ್ ಹಾಗೂ ತಮ್ಮಣ್ಣಶೆಟ್ಟಿ ಅವರು ವಿದ್ಯಾರ್ಥಿಗಳಿಗಾಗಿ ಖರೀದಿಸಿದ ಕಾರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಹಸಿರು ನಿಶಾನೆ ತೋರಿದರು

> ಶಿಕ್ಷಕರೇ ಸ್ವಂತ ಹಣದಿಂದ ಕಾರು ಖರೀದಿಸಿ, ಮಕ್ಕಳನ್ನು ಶಾಲೆಗೆ ಕರೆತರುವ ವ್ಯವಸ್ಥೆ ಮಾಡಿರುವುದು ರಾಜ್ಯದಲ್ಲಿಯೇ ಮೊದಲು
>
> **ಪುಷ್ಪಾ,** ಸಕಲೇಶಪುರ ಕ್ಷೇತ್ರಶಿಕ್ಷಣಾಧಿಕಾರಿ

ಸಕಲೇಶಪುರ (ಹಾಸನ): ಸಾರಿಗೆ ಸೌಲಭ್ಯವಿಲ್ಲದ ಗ್ರಾಮೀಣ ಪ್ರದೇಶದಿಂದ ಸರ್ಕಾರಿ ಶಾಲೆಗೆ ಮಕ್ಕಳನ್ನು ಕರೆತರಲು ಶಿಕ್ಷಕರಿಬ್ಬರು ತಮ್ಮ ಸ್ವಂತ ಹಣದಿಂದ ಕಾರು ಖರೀದಿಸಿದ್ದಾರೆ.

ತಾಲ್ಲೂಕು ಕೇಂದ್ರದಿಂದ 10 ಕಿ.ಮೀ. ದೂರದಲ್ಲಿರುವ ಹಳೆಕೆರೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಕೆಂಪೆನಾಲ್ ಗ್ರಾಮದಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ವ್ಯವಸ್ಥೆ ಇಲ್ಲ. ಮಕ್ಕಳು ಕಾಲ್ನಡಿಗೆಯಲ್ಲಿಯೇ ಶಾಲೆಗೆ ಹೋಗಬೇಕು. ಈ ಭಾಗದಲ್ಲಿ ಕಾಡಾನೆಗಳ ಸಮಸ್ಯೆ ಹೆಚ್ಚಾಗಿದ್ದು ಮಕ್ಕಳು ಶಾಲೆಗೆ ಬರಲು ಭಯ ಪಡುತ್ತಾರೆ. ಹಾಗಾಗಿ ಕೆಲವು ಪೋಷಕರು ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳಿಸುತ್ತಿಲ್ಲ.

ಈ ಶಾಲೆಯಲ್ಲಿ 16 ಮಕ್ಕಳಿದ್ದು, ಇಬ್ಬರು ಶಿಕ್ಷಕರಿದ್ದಾರೆ. ಕಾಡಾನೆ ಸಮಸ್ಯೆ ಹಾಗೂ ಸಾರಿಗೆ ವ್ಯವಸ್ಥೆ ಇಲ್ಲದೆ ಇರುವುದರಿಂದ ಶಿಕ್ಷಕ ಲೋಕೇಶ್ ಹಾಗೂ ವೈ.ಎಸ್. ತಮ್ಮಣ್ಣಶೆಟ್ಟಿ ಸೇರಿ ಕಾರೊಂದನ್ನು ಖರೀದಿ ಮಾಡಿದ್ದಾರೆ. ಕೆಂಪೆನಾಲ್ ಹಾಗೂ ಆ ಭಾಗದಿಂದ ಬರುವ ಮಕ್ಕಳನ್ನು ಆ ಕಾರಿನಲ್ಲಿ ಶಾಲೆಗೆ ಕರೆದುಕೊಂಡು ಬರುವ ವ್ಯವಸ್ಥೆ ಮಾಡಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾ, ಶಿಕ್ಷಣ ಇಲಾಖೆಯ ಅಧಿಕಾರಿ ಗಂಗಾಧರ್, ಕುಶವಂತ್, ನಿರಂಜನ್, ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮಸ್ಥರ ಸುಮ್ಮುಖದಲ್ಲಿ ಗುರುವಾರ ಮಕ್ಕಳನ್ನು ಕರೆ ತರುವ ಕಾರು ಸೇವೆಗೆ ಚಾಲನೆ ನೀಡಲಾಯಿತು.

'ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲು ಮಾಡುವುದೇ ಕಷ್ಟ. ಕಾಡಾನೆ ಸಮಸ್ಯೆ ಹಾಗೂ ಸಾರಿಗೆ ವ್ಯವಸ್ಥೆ ಇಲ್ಲದೇ ಇರುವುದರಿಂದ ಅದರಲ್ಲೂ ದಾಖಲಾಗಿರುವ ಮಕ್ಕಳೂ ಗೈರಾದರೆ ಶಾಲೆ ಮುಚ್ಚಬೇಕಾಗುತ್ತದೆ. ಸರ್ಕಾರಿ ಶಾಲೆ ಮುಚ್ಚದಂತೆ ಹಾಗೂ ಈ ಶಾಲೆಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗಬೇಕು ಎಂಬ ಉದ್ದೇಶದಿಂದ ಮಕ್ಕಳನ್ನು ಶಾಲೆಗೆ ಕರೆತರಲು ಸ್ವಂತ ಹಣದಿಂದ ಕಾರು ಖರೀದಿ ಮಾಡಿ ಶಾಲೆಗೆ ಬಿಟ್ಟಿದ್ದೇವೆ. ಈ ಕಾರಿಗೆ ನಾವೇ ಚಾಲಕರು. ಮನೆ ಮನೆಗೆ ಹೋಗಿ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರುತ್ತೇವೆ. ಶಾಲೆ ಮುಗಿದ ಬಳಿಕ ಮತ್ತೆ ಮನೆಗೆ ತಲುಪಿಸುತ್ತೇವೆ' ಎಂದು ಶಿಕ್ಷಕ ಲೋಕೇಶ್ ಹಾಗೂ ವೈ.ಎಸ್. ತಮ್ಮಣ್ಣಶೆಟ್ಟಿ ಹೇಳಿದರು.

ವ್ಹೀಲಿಂಗ್ ವಿರುದ್ಧ ಜಾಗೃತಿಗೆ ಆದೇಶ

ನರಗುಂದ (ಗದಗ): ಇಲ್ಲಿನ ಹುಬ್ಬಳ್ಳಿ–ವಿಜಯಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ವ್ಹೀಲಿಂಗ್ ಮಾಡಿದ ಯುವಕನಿಗೆ ಜೆಎಂಎಫ್ ನ್ಯಾಯಾಲಯವು ₹8,500 ದಂಡ ವಿಧಿಸಿದ್ದು, ಕಾಲೇಜುಗಳಿಗೆ ತೆರಳಿ ಜಾಗೃತಿ ಮೂಡಿಸುವಂತೆ ಆದೇಶಿಸಿದೆ.

ಪಟ್ಟಣದ ರಾಚಯ್ಯನಗರದ ನಿವಾಸಿ ಪ್ರತೀಕ್ಷ ವೀರಭದ್ರಪ್ಪ ತಳವಾರ ಅವರು ಬೈಕ್ ವ್ಹೀಲಿಂಗ್ ಮಾಡಿರುವುದಾಗಿ ಪೊಲೀಸರು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶ ಜಿನ್ನಪ್ಪ ಚೌಗಲಾ ಅವರು ಈ ಆದೇಶ ನೀಡಿದ್ದಾರೆ.

ತಾನು ಮಾಡಿದ ತಪ್ಪಿನ ಬಗ್ಗೆ ಮತ್ತು ಅದಕ್ಕೆ ಶಿಕ್ಷೆಯಾಗಿದ್ದ ಬಗ್ಗೆ ನರಗುಂದದ ಪದವಿಪೂರ್ವ ಕಾಲೇಜುಗಳು, ಬನಹಟ್ಟಿ, ಚಿಕ್ಕನರಗುಂದ ಹಾಗೂ ಕೊಣ್ಣೂರಿನ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ನ್ಯಾಯಾಧೀಶರು ಸೂಚಿಸಿದ್ದರು. ಅದರಂತೆ ಪ್ರತೀಕ್ಷ ಜಾಗೃತಿ ಮೂಡಿಸಿದರು.

ವೀರಲೋಕ ಪುಸ್ತಕ ಸಂತೆ ಉದ್ಘಾಟನೆ

'ಗ್ರಂಥಾಲಯ ಇಲಾಖೆ ನಿರ್ಲಕ್ಷ್ಯ'

ಪ್ರಜಾವಾಣಿ ವಾರ್ತೆ



ತುಮಕೂರಿನ ಗಾಜಿನ ಮನೆಯಲ್ಲಿ ಶುಕ್ರವಾರ ಆರಂಭಗೊಂಡ ವೀರಲೋಕ ಪುಸ್ತಕ ಸಂತೆಗೆ ಬಂದಿದ್ದ ಶಾಲಾ ವಿದ್ಯಾರ್ಥಿಗಳು ಪುಸ್ತಕಗಳನ್ನು ಕುತೂಹಲದಿಂದ ವೀಕ್ಷಿಸಿದರು

ತುಮಕೂರು: ಮೂರು ದಿನಗಳ ವೀರಲೋಕ ಪುಸ್ತಕ ಸಂತೆಗೆ ಹಿರಿಯ ಸಾಹಿತಿ ಹಂಪ ನಾಗರಾಜಯ್ಯ ನಗರದ ಅಮಾನಿಕೆರೆ ಗಾಜಿನ ಮನೆಯಲ್ಲಿ ಶುಕ್ರವಾರ ಚಾಲನೆ ನೀಡಿದರು.

'ಗ್ರಂಥಾಲಯ ಇಲಾಖೆ ಯಾವ ಸಚಿವರಿಗೂ ಬೇಕಿಲ್ಲ. ಯಾವುದೇ ಪಕ್ಷ ಆಡಳಿತದ ಚುಕ್ಕಾಣಿ ಹಿಡಿದರೂ ಅದು ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಕಾಳಜಿ ಇರುವ ಸಚಿವರು ಮನಸ್ಸು ಮಾಡಿದರೆ ಅದನ್ನು ಸತ್ವಯುತ ಇಲಾಖೆ ಮಾಡಲು ಸಾಧ್ಯವಿದೆ. ಪ್ರಕಾಶಕರನ್ನು ಉಳಿಸಲು, ಲೇಖಕರಿಗೆ ಜೀವ ತುಂಬಲು, ಪುಸ್ತಕ ಸಂಸ್ಕೃತಿ ಪ್ರಸಾರ ಮಾಡಲು ಗ್ರಂಥಾಲಯ ಇಲಾಖೆಗೆ ಚಿಕಿತ್ಸೆ ಕೊಡಬೇಕು' ಎಂದು ಸಾಹಿತಿಗಳು ಸರ್ಕಾರವನ್ನು ಆಗ್ರಹಿಸಿದರು.

'ಪುಸ್ತಕ ಸಂಸ್ಕೃತಿ ಉಳಿಯಬೇಕಾ ದರೆ ಪುಸ್ತಕಗಳನ್ನು ಕೊಂಡುಕೊಳ್ಳು ವುದಷ್ಟೇ ಅಲ್ಲ; ಅದನ್ನು ಕಂಡುಕೊಳ್ಳುವುದು ಮುಖ್ಯವಾಗುತ್ತದೆ' ಎಂಬ ಆಶಯ ವ್ಯಕ್ತಪಡಿಸಿದರು.

'ಪ್ರತಿ ವರ್ಷ ರಾಜ್ಯದಲ್ಲಿ ಏಳು ಸಾವಿರ ಪುಸ್ತಕಗಳು ಮುದ್ರಣವಾಗುತ್ತವೆ. ಅನೇಕ ಪ್ರಕಾಶಕರು ಗ್ರಂಥಾಲಯಗಳನ್ನೇ ನೆಚ್ಚಿಕೊಂಡಿರುತ್ತಾರೆ. ಆದರೆ, ಸರ್ಕಾರದ ಸಗಟು ಖರೀದಿ; ಸಗಟಾದ ಸಮಸ್ಯೆಗಳನ್ನೇ ಎದುರಿಸುತ್ತಿದೆ. 2022ರಿಂದ ಪುಸ್ತಕಗಳ ಖರೀದಿಯೇ ಆಗಿಲ್ಲ' ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಟೀಕಿಸಿದರು.

'ಗ್ರಂಥಾಲಯ ಇಲಾಖೆಗೆ ಜೀವ ತುಂಬುವ ಮೂಲಕ ಸರ್ಕಾರ ಪುಸ್ತಕ ಸಂಸ್ಕೃತಿ ಬೆಳೆಸುವ ಕೆಲಸ ಮಾಡಬೇಕಿದೆ. ಪುಸ್ತಕ ಖರೀದಿ ಜತೆಗೆ ಅದನ್ನು ಪ್ರಸಾರ ಮಾಡುವುದು ಹೇಗೆ? ಅಕ್ಷರ ಸತ್ವವನ್ನು ಓದುಗರಿಗೆ ತಿಳಿಸುವುದು ಹೇಗೆ? ಎಂಬ ಅನೇಕ ಯೋಜನೆಗಳನ್ನು ರೂಪಿಸಬೇಕಿದೆ' ಎಂದು ಆಗ್ರಹಿಸಿದರು.

'ಡಿಜಿಟಲ್ ಯುಗ, ಎಐ ಯುಗವೆಲ್ಲವೂ ಉದ್ಯಮಪತಿಗಳ ಸೃಷ್ಟಿ. ನಿಜವಾದ ಯುಗ ಗ್ರಾಮೀಣ ಪ್ರದೇಶದಲ್ಲಿ, ನಗರದ ಕೊಳೆಗೇರಿಗಳಲ್ಲಿ, ಜನಸಾಮಾನ್ಯರ ಬದುಕಿನಲ್ಲಿದೆ. ಆದರೆ, ಬಂಡವಾಳಶಾಹಿಗಳು ಉದ್ಯಮ ಸ್ನೇಹಿಯಾಗಿರುವ ಮಾಧ್ಯಮಗಳ ಮೂಲಕ ತಾವೇ ಒಂದು ಹುಸಿಯುಗ ಸೃಷ್ಟಿಸಿದ್ದಾರೆ' ಎಂದು ಕುಟುಕಿದರು.

'ಕೃತಕ ಬುದ್ಧಿಮತ್ತೆ ಬಂದ ನಂತರ ಸೃಜನಶೀಲ ಕ್ಷೇತ್ರಕ್ಕೆ ದೊಡ್ಡ ಸವಾಲು ಎದುರಾಗಿದೆ. ಸ್ವೋಪಜ್ಞತೆ ಎಂಬುದು ಸೃಜನಶೀಲತೆಯ ಕೆಲಸ. ಎ.ಐ ಎಲ್ಲವನ್ನೂ ಮಾಡಿಕೊಡಬಹುದು. ಆದರೆ, ಅದು ಕೃತಕವೇ ಹೊರತು; ಮೂಲ ಅಲ್ಲ' ಎಂದು ವಿಶ್ಲೇಷಿಸಿದರು.

ತುಮಕೂರು ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್, ಕಾಂಗ್ರೆಸ್ ಮುಖಂಡ ಮುರಳೀಧರ ಹಾಲಪ್ಪ, ಪುಸ್ತಕ ಸಂತೆ ರೂವಾರಿ ವೀರಕಪುತ್ರ ಶ್ರೀನಿವಾಸ್, ಸಂಯೋಜಕ ಆರ್.ಕೆ.ಶ್ರೀನಿವಾಸ್ ಉಪಸ್ಥಿತರಿದ್ದರು.

ನಿಧನ ವಾರ್ತೆ

ಚಂದ್ರಕಲಾ ಬಿದರಿ



ಕಲಬುರಗಿ: ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆ, ನಿವೃತ್ತ ಪ್ರಾಚಾರ್ಯೆ ಚಂದ್ರಕಲಾ ಬಿದರಿ (63) ಶುಕ್ರವಾರ ನಿಧನರಾದರು.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ವೈದ್ಯರ ಸಲಹೆ ಮೇರೆಗೆ ಅವರನ್ನು ಇತ್ತೀಚೆಗೆ ಕಲಬುರಗಿಗೆ ಕರೆತರಲಾಗಿತ್ತು.

ನಗರದ ಕೋಟನೂರ (ಡಿ) ಬಡಾವಣೆಯ ತಮ್ಮ ಮನೆಯಲ್ಲಿ ಅವರು ನಿಧನರಾದರು. ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಚಂದ್ರಕಲಾ ಅವರು 'ಮಹಿಳಾ ಬದುಕು' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ.

ಅವರಿಗೆ ಪತಿ, ಪಿಎಸ್‌ಐ ಚೇತನ್ ಸೇರಿ ಇಬ್ಬರು ಪುತ್ರರು ಇದ್ದಾರೆ. ಸ್ವಗ್ರಾಮ ಆಳಂದ ತಾಲ್ಲೂಕಿನ ಕೆರೂರ ಗ್ರಾಮದಲ್ಲಿ ಅಂತ್ಯಕ್ರಿಯೆ ಜರುಗಿತು.

ಬಂಡೀಪುರ, ನಾಗರಹೊಳೆ: ಪೂರ್ಣ ಸಫಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಜ್ಞರು ಹಾಗೂ ಅಧಿಕಾರಿಗಳ ತಾಂತ್ರಿಕ ಸಮಿತಿಯ ಶಿಫಾರಸಿನಂತೆ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಸಫಾರಿ (ಉದ್ಯಾನ ಪ್ರವಾಸ) ಪುನರಾರಂಭಿಸಲು ಸರ್ಕಾರ ಶುಕ್ರವಾರ ಸಮ್ಮತಿ ನೀಡಿದೆ.

'ತಾಂತ್ರಿಕ ಸಮಿತಿಯ ವರದಿಯನ್ನು ಅಂಗೀಕರಿಸಲಾಗಿದ್ದು, ವೈಜ್ಞಾನಿಕ ಮೌಲ್ಯಮಾಪನದ ನಂತರ ಪರಿಣಾಮಕಾರಿ ಸಾಗಣೆ ಸಾಮರ್ಥ್ಯದ ಆಧಾರದ ಮೇಲೆ ಸಫಾರಿಗೆ ಹಸಿರು ನಿಶಾನೆ ನೀಡಲಾಗಿದೆ. ಸಮಿತಿಯ ಶಿಫಾರಸಿನ ಪ್ರಕಾರ ನಿಯಂತ್ರಿತ ರೀತಿಯಲ್ಲಿ ಸಫಾರಿ ಆಯೋಜನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಅವಘಡಗಳಿಗೆ ಅವಕಾಶ ಇರದಂತೆ ಮುನ್ನೆಚ್ಚರಿಕೆ ವಹಿಸಬೇಕು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ. 'ಕರ್ನಾಟಕವು ಪರಿಸರ ಪ್ರವಾಸೋದ್ಯಮದಲ್ಲಿ ಅಪಾರ ಸಾಮರ್ಥ್ಯ ಹೊಂದಿದ್ದು, ಸದಾ ಸುಸ್ಥಿರ ಪ್ರವಾಸೋದ್ಯಮ ಮಾದರಿ ಪಾಲಿಸಿಕೊಂಡು ಬಂದಿದೆ. ಇದು ಸ್ಥಳೀಯ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳ ಸೃಷ್ಟಿಗೆ ಸಹಾಯ ಮಾಡುತ್ತದೆ. ಹಾಗೆಯೇ ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸಲು ನೆರವಾಗುತ್ತದೆ. ಪರಿಸರ ವ್ಯವಸ್ಥೆಯ ಸಮಗ್ರತೆ ರಕ್ಷಿಸುವ ಜತೆಗೆ, ವನ್ಯಜೀವಿ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ ಮತ್ತು ಪ್ರವಾಸಿಗರ ಉತ್ತಮ ಅನುಭವಕ್ಕೆ ಪೂರಕವಾದ ಪರಿಸರ ಪ್ರವಾಸೋದ್ಯಮಕ್ಕೆ ಸರ್ಕಾರ ಬದ್ಧವಾಗಿದೆ' ಎಂದು ಹೇಳಿದ್ದಾರೆ.

ಎನ್‌ಐಎಯಿಂದ ಶಂಕಿತ ಉಗ್ರನ ವಿಚಾರಣೆ

ಪ್ರಜಾವಾಣಿ ವಾರ್ತೆ

ಹರಿಹರ: ಪಾಕಿಸ್ತಾನದ ಜೊತೆಗೆ ನಂಟು ಹೊಂದಿದ್ದ ಆರೋಪದಡಿ ಬಂಧಿತನಾಗಿರುವ ಉತ್ತರಪ್ರದೇಶ ಮೂಲದ ಶಂಕಿತ ಉಗ್ರ ಸೊಹೇಲ್‌ನನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ಶುಕ್ರವಾರ ಇಲ್ಲಿ ವಿಚಾರಣೆಗೆ ಒಳಪಡಿಸಿದರು.

ಡಿವೈಎಸ್‌ಪಿ ದರ್ಜೆಯ ಇಬ್ಬರು ಅಧಿಕಾರಿಗಳು ಬೆಂಗಳೂರಿನಿಂದ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ಬಂದು ಬೆಳಿಗ್ಗೆ 11.30ರಿಂದ ಸಂಜೆ 5ರವರೆಗೆ ವಿಚಾರಣೆ ನಡೆಸಿ ಬೆಂಗಳೂರಿಗೆ ಮರಳಿದರು.

ಹರಿಹರ ಗ್ರಾಮೀಣ ಠಾಣೆಯ ಪೊಲೀಸರ ವಶದಲ್ಲಿರುವ ಆರೋಪಿ ನೀಡಿದ ಮಾಹಿತಿಯ ಆಧಾರದ ಮೇರೆಗೆ ಎನ್‌ಐಎ ಮಧ್ಯ ಪ್ರವೇಶಿಸಿದ್ದು, ಆರೋಪಿ ಕೆಲಸ ಮಾಡುತ್ತಿದ್ದ ಕಾರ್ಖಾನೆ ಹಾಗೂ ವಾಸ್ತವ್ಯ ಹೂಡಿದ್ದ ಬನ್ನಿಕೋಡು ಗ್ರಾಮದಲ್ಲಿನ ಮನೆಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿದರು.

ಪ್ರಕರಣದ ತನಿಖೆ ನಡೆಸುತ್ತಿರುವ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪರಮೇಶ್ವರ ಹೆಗಡೆ, ದಾವಣಗೆರೆ ಗ್ರಾಮಾಂತರ ಉಪವಿಭಾಗದ ಡಿವೈಎಸ್‌ಪಿ ಬಸವರಾಜ್ ಹಾಗೂ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸುರೇಶ್ ಸಗರಿ ಅವರೊಂದಿಗೂ ಎನ್‌ಐಎ ಅಧಿಕಾರಿಗಳು ಈ ಕುರಿತು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

'ಇ.ಡಿ ದಾಳಿಗೆ ಕಾರಣ ಗೊತ್ತಿಲ್ಲ'

ರಾಜಕೀಯ ಪ್ರೇರಿತ ಎಂದು ಈಗಲೇ ಹೇಳಲಾಗದು

ಪ್ರಜಾವಾಣಿ ವಾರ್ತೆ



ಸತೀಶ ಜಾರಕಿಹೊಳಿ

ಬೆಳಗಾವಿ: 'ಭ್ರಷ್ಟಾಚಾರ ಆರೋಪದ ಕಾರಣ ನನ್ನ ಬಾಮೈದ, ಅಬಕಾರಿ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ ಅವರ ಮನೆಯ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ನಡೆಸಿದ್ದಕ್ಕೆ ಕಾರಣ ಏನೆಂದು ಇನ್ನೂ ನನಗೆ ಅರ್ಥವಾಗುತ್ತಿಲ್ಲ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಮಂಜುನಾಥ ರಾಜ್ಯ ಸರ್ಕಾರಿ ಉದ್ಯೋಗಿ. ಭ್ರಷ್ಟಾಚಾರದ ಆರೋಪಗಳನ್ನು ಪರಿಶೀಲಿಸಲು ಲೋಕಾಯುಕ್ತವಿದೆ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮಂಜುನಾಥ ಮೇಲಿನ ಇ.ಡಿ ದಾಳಿಗೆ ಕಾರಣಗಳನ್ನು ಸ್ವತಃ ಅರ್ಥೈಸಿಕೊಳ್ಳಲು ಸಾಧ್ಯವಾಗಿಲ್ಲ. ಮಂಜುನಾಥ ತನಿಖೆಯ ಜೊತೆಗೆ ಆರೋಪಗಳನ್ನು ಕಾನೂನುಬದ್ಧವಾಗಿ ಎದುರಿಸಬೇಕು. ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧಿಸಿ ಲೋಕಾಯುಕ್ತರು ಈ ಹಿಂದೆ ಮಂಜುನಾಥ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಆದರೆ, ಕರ್ನಾಟಕ ಹೈಕೋರ್ಟ್ ಎಫ್‌ಐಆರ್ ರದ್ದುಗೊಳಿಸಿತ್ತು. ಮಂಜುನಾಥ ತಮ್ಮ ಮೇಲಿನ ಆರೋಪಗಳನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ ಎಂಬುದನ್ನು ನೋಡಬೇಕು' ಎಂದರು.

'ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರಿ ಉದ್ಯೋಗಿ ಮೇಲೆ ಇ.ಡಿ ಇಷ್ಟು ದೊಡ್ಡ ಮಟ್ಟದಲ್ಲಿ ದಾಳಿ ಮಾಡಿರುವುದು ಇದೇ ಮೊದಲು. ಇದು ರಾಜಕೀಯ ಪ್ರೇರಿತ ಎಂದು ಈಗಲೇ ಹೇಳಲಾಗದು. ಜಾರಕಿಹೊಳಿ ಕುಟುಂಬದ ಮೇಲೆ ದಾಳಿ ನಡೆಸಲಾಗಿದೆಯೇ ಅಥವಾ ಬೇರೆ ಕಾರಣಗಳಿವೆಯೇ ಎಂದು ಕೆಲವೇ ತಿಂಗಳಲ್ಲಿ ತಿಳಿಯುತ್ತದೆ. 2028ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ, ಇಂಥ ದಾಳಿಗಳು ಆರಂಭವಾಗುವುದು ಸಹಜ. ಹೆಚ್ಚಿನ ಕಾಂಗ್ರೆಸ್ ನಾಯಕರು ತಮ್ಮ ಮೇಲೆ ಮತ್ತು ಸಂಬಂಧಿಕರ ಮೇಲೆ ಇ.ಡಿ ದಾಳಿ ನಡೆಸುವ ಭಯದಲ್ಲಿದ್ದಾರೆ' ಎಂದು ಹೇಳಿದರು.

'ಮಂಜುನಾಥ ಅವರ ಕುಟುಂಬ ಕಳೆದ 30 ವರ್ಷಗಳಿಂದ ಮೈಸೂರಿನಲ್ಲಿ ಬಾರ್ ಮತ್ತು ಇತರೆ ವ್ಯವಹಾರಗಳನ್ನು ಹೊಂದಿದೆ. ಸರ್ಕಾರಿ ಅಧಿಕಾರಿಯಾಗಿ ಅವರು ತಮ್ಮ ಹೆಸರಿನಲ್ಲಿ ಮದ್ಯದ ಬಾರ್ ಪರವಾನಗಿ ಹೊಂದಲು ಸಾಧ್ಯವಿಲ್ಲ. ಅವು ಕುಟುಂಬ ಸದಸ್ಯರ ಹೆಸರಿನಲ್ಲಿ ಇರಬಹುದು' ಎಂದು ಅವರು ಹೇಳಿದರು. 'ತಪ್ಪು ಮಾಡಿದವರು ಶಿಕ್ಷೆ ಎದುರಿಸಬೇಕಾಗುತ್ತದೆ. ಮಂಜುನಾಥ ಅವರ ಮೇಲೆ ಇ.ಡಿ ದಾಳಿ ನಡೆದ ಕಾರಣಕ್ಕೆ, ಅವರ ಹೆಸರು ಮುನ್ನೆಲೆಗೆ ಬಂದಿದೆ' ಎಂದು ಹೇಳಿದರು.

ಅಗ್ನಿ ಪ್ರವೇಶಿಸಿ, ನಮಾಜ್ ಸಲ್ಲಿಕೆ

ಪ್ರಜಾವಾಣಿ ವಾರ್ತೆ



ಇಂಡಿ ತಾಲ್ಲೂಕಿನ ಗುಂದವಾನ ಗ್ರಾಮದಲ್ಲಿ ಮೊಹರಂ ಆಚರಣೆ ವೇಳೆ ಜುಬೇರ ಸಿಕಂದರ್ ಮುಲ್ಲಾ ಅಗ್ನಿ ಪ್ರವೇಶಿಸಿ, ನಮಾಜ್ ಮಾಡಿದರು

ಹೊರ್ತಿ (ವಿಜಯಪುರ ಜಿಲ್ಲೆ): ಸಮೀಪದ ಗುಂದವಾನ ಗ್ರಾಮದಲ್ಲಿ ಮೊಹರಂ ಆಚರಣೆ ವೇಳೆ ಜುಬೇರ ಸಿಕಂದರ್ ಮುಲ್ಲಾ ಎಂಬುವರು ಅಗ್ನಿ ಪ್ರವೇಶ ಮಾಡಿ, ನಮಾಜ್ ಮಾಡಿದರು. ಭಕ್ತರ ಹರಕೆ ತೀರಿಸುವ ದೇವರೆಂದರೆ ಹುಸೇನಬಾಷಾ ಮತ್ತು ಲಾಲಸಾಬ ಎಂಬುದು ಇಲ್ಲಿನ ಭಕ್ತರ ನಂಬಿಕೆ.

'ಜುಬೇರ್' ಅವರ ಅಜ್ಜಿ ದೇವರ ಹೇಳಿಕೆ ಹೇಳುತ್ತಿದ್ದರು. ಅಲ್ಲಿ ಹೋಗಿ ದೇವರಿಗೆ ಹರಕೆ ಮಾಡಿಕೊಂಡರೆ ಭಕ್ತರು ಬೇಡಿದ ವರ ನೀಡುತ್ತಾರೆ ಎಂಬ ನಂಬಿಕೆಯಿದೆ. ಜುಬೇರ್‌ಗೆ ಪೂರ್ವರ ಆಶೀರ್ವಾದ ಇದೆ ಎಂದು ಭಕ್ತರು ಹೇಳುತ್ತಾರೆ.

ಗ್ರಾಮಸ್ಥರಾದ ಖಾಶಿಂ ಭಾಷೆಸಾಬ, ಬಿರಾದಾರ, ವಿಠ್ಠಲ ಖಡೇಖಡೆ, ರಮೇಶ ಬೆಳುಂಡಗಿ, ಬುಡಾ ಮುಲ್ಲಾ, ಶಿವಪ್ಪ ವಾಲಿಕಾರ, ನಿಜಪ್ಪ ವಾಲಿಕಾರ, ಗೌಸಮದಿನ ಪಾಟೀಲ ಇದ್ದರು.

ಹಡಗು ಮೇಲೆ ಡ್ರೋನ್ ದಾಳಿ: ಟ್ರಂಪ್ ಟೀಕೆ



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): 'ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆ ಹಡಗೊಂದರ ಮೇಲೆ ಇರಾನ್ ಡ್ರೋನ್ ಬಳಸಿ ದಾಳಿ ನಡೆಸಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಆರೋಪಿಸಿದ್ದಾರೆ.

'ಇರಾನ್‌ನ ಈ ಕೃತ್ಯವು ಕದನ ವಿರಾಮ ಕುರಿತಂತೆ ಅಮೆರಿಕದೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ ಉಲ್ಲಂಘನೆ' ಎಂದೂ ಅವರು ಟೀಕಿಸಿದ್ದಾರೆ.

'ಹಡಗೊಂದರ ಮೇಲ್ಮೈ ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿದ್ದು, ಹಾನಿ ಸಂಭವಿಸಿದೆ. ಆದಾಗ್ಯೂ ಹಡಗು ಪ್ರಯಾಣ ಮುಂದುವರಿಸಿತ್ತು. ಇದಕ್ಕೆ ಪ್ರತಿಯಾಗಿ ಅಮೆರಿಕ ನಡೆಸಿದ ದಾಳಿಯಲ್ಲಿ ಮೂವರು ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಟ್ರಂಪ್ ಬರೆದುಕೊಂಡಿದ್ದಾರೆ.

ಕಾಡಾನೆ ಆರೋಗ್ಯದಲ್ಲಿ ಏರುಪೇರು; ಮರಳಿ ಕಾಡಿಗೆ ಬಿಟ್ಟ ಅರಣ್ಯ ಇಲಾಖೆ

ಸೆರೆಯಾದ ಪುಂಡಾನೆ ಮತ್ತೆ ಕಾಡಿಗೆ

ಪ್ರಜಾವಾಣಿ ವಾರ್ತೆ



ಚಿಕ್ಕಮಣ್ಣುಗುಡ್ಡೆ ಅರಣ್ಯದಲ್ಲಿ ಸೆರೆಯಾದ ಪುಂಡಾನೆಗೆ ಪಶು ವೈದ್ಯರ ತಂಡ ಚಿಕಿತ್ಸೆ ನೀಡಿ ಆರೈಕೆ ಮಾಡಿತು

ಚನ್ನಪಟ್ಟಣ (ರಾಮನಗರ): ತಾಲ್ಲೂಕಿನಲ್ಲಿ ಬೆಳೆ ಹಾನಿಮಾಡಿ, ಜನವಸತಿ ಪ್ರದೇಶದಲ್ಲಿ ಕಾಣಿಸಿಕೊಂಡು ಆತಂಕ ಸೃಷ್ಟಿಸಿದ್ದ ಎರಡು ಪುಂಡಾನೆಗಳ ಪೈಕಿ, ಒಂದನ್ನು ಸೆರೆ ಹಿಡಿಯುವಲ್ಲಿ ಶುಕ್ರವಾರ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಆದರೆ, ಆನೆ ಆರೋಗ್ಯದಲ್ಲಿ ವ್ಯತ್ಯಾಸವಾಗಿದ್ದರಿಂದ ಮರಳಿ ಕಾಡಿಗೆ ಬಿಡಲಾಯಿತು.

ಪುಂಡಾನೆ ಸೆರೆ ಕಾರ್ಯಾಚರಣೆಗಾಗಿ ಬಂದಿದ್ದ ಸಾಕಾನೆಗಳಿಗೆ ಕೆಂಗಲ್ ಬಳಿ ಇರುವ ಟ್ರೀ ಪಾರ್ಕ್‌ನಲ್ಲಿ ಚಾಲನೆ ನೀಡಲಾಯಿತು. ಆನೆ ಚಿಕ್ಕಮಣ್ಣುಗುಡ್ಡೆ ಪ್ರದೇಶದಲ್ಲಿರುವ ಕುರಿತು ಮಾಹಿತಿ ಮೇರೆಗೆ ಕಾರ್ಯಾಚರಣೆ ತಂಡ ಶೋಧ ಆರಂಭಿಸಿತ್ತು.

ಸುಮಾರು 35 ವರ್ಷದ ಪುಂಡಾನೆ ಚಿಕ್ಕಮಣ್ಣುಗುಡ್ಡೆ ಬಳಿ ಮಧ್ಯಾಹ್ನ ಗೋಚರಿಸಿತು. ಕೂಡಲೇ ಕಾರ್ಯ ಪ್ರವೃತ್ತರಾದ ಡಾ.ರಮೇಶ್, ಡಾ.ಕಿರಣ್, ಡಾ.ನಜೀರ್ ಅಹಮದ್ ಅವರನ್ನು ಒಳಗೊಂಡ ಅರಿವಳಿಕೆ ತಜ್ಞರ ತಂಡ ಆನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿದರು. ಕೆಲ ಹೊತ್ತಿನ ಬಳಿಕ ಪ್ರಜ್ಞೆ ತಪ್ಪಿದ ಕಾಡಾನೆ ಕಾಲುಗಳಿಗೆ ಹಗ್ಗ ಕಟ್ಟಿ, ಪ್ರಜ್ಞೆ ಬಂದಾಗ ಸಾಕಾನೆಗಳ ನೆರವಿನಿಂದ ಲಾರಿ ಇದ್ದ ಸ್ಥಳಕ್ಕೆ ಕರೆ ತರಲಾಯಿತು. ಬಂಡೀಪುರ ರಾಷ್ಟ್ರೀಯ ಉದ್ಯಾನಕ್ಕೆ ಸ್ಥಳಾಂತರಿಸಲು ಲಾರಿಗೆ ಹತ್ತಿಸುವಾಗ, ಅದರ ದೇಹದ ತಾಪಮಾನ ಹೆಚ್ಚಾಗಿ ಆರೋಗ್ಯದಲ್ಲಿ ಏರುಪೇರಾಯಿತು.

ಆನೆ ದಣಿದಿರುವುದರಿಂದ ಆರೋಗ್ಯದಲ್ಲಿ ವ್ಯತ್ಯಾಸ ಆಗಿರುವ ಸಾಧ್ಯತೆ ಇದೆ ಎಂದು ವೈದ್ಯರ ತಂಡ ತಿಳಿಸಿದೆ. ಆನೆಗೆ ನೀರು, ಗ್ಲುಕೋಸ್, ಚುಚ್ಚುಮದ್ದು ನೀಡಿ ಆರೈಕೆ ಮಾಡಲಾಯಿತು. ಸದ್ಯದ ಸ್ಥಿತಿಯಲ್ಲಿ ಆನೆಯನ್ನು ಸ್ಥಳಾಂತರಿಸದೆ ಅರಣ್ಯದಲ್ಲೇ ಬಿಡುವುದು ಒಳಿತೆಂದು ವೈದ್ಯರು ಸಲಹೆ ನೀಡಿದರು. ಅದರಂತೆ ಆನೆಯನ್ನು ಮರಳಿ ಕಾಡಿಗೆ ಬಿಡಲಾಯಿತು' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ರಾಮಕೃಷ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಸಾಕಾನೆ ಮಹೇಂದ್ರ ನೇತೃತ್ವದಲ್ಲಿ ಧನಂಜಯ, ಹರ್ಷ, ಈಶ್ವರ, ಸುಗ್ರೀವ ಹಾಗೂ ಏಕಲವ್ಯ ಹೆಸರಿನ ಹೆಸರಿನ 6 ಸಾಕಾನೆಗಳು ಸೆರೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದವು. ಜೊತೆಗೆ ಮಾವುತರು, ಕಾವಾಡಿಗರು, ಪಶು ವೈದ್ಯರು, ಶೂಟರ್‌ಗಳು, ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಸುಮಾರು 80 ಮಂದಿ ಕಾರ್ಯಾಚರಣೆಯಲ್ಲಿದ್ದರು.

5 ಆನೆ ಸೆರೆಗೆ ಪ್ರಸ್ತಾವ

'ತಾಲ್ಲೂಕಿನಲ್ಲಿ ಸದ್ಯ 18 ಕಾಡಾನೆಗಳು ಬೀಡು ಬಿಟ್ಟಿವೆ. ಆ ಪೈಕಿ ತೀವ್ರ ಉಪಟಳ ನೀಡುತ್ತಿರುವ 5 ಕಾಡಾನೆಗಳ ಸೆರೆಗೆ ಪ್ರಸ್ತಾವ ಸಲ್ಲಿಸಲಾಗಿತ್ತು. 2 ಆನೆ ಸೆರೆಗೆ ಅನುಮತಿ ಸಿಕ್ಕಿತ್ತು. ಇದೀಗ ಒಂದು ಆನೆಯನ್ನು ಹಿಡಿದು ಮತ್ತೆ ಕಾಡಿಗೆ ಬಿಡಲಾಗಿದೆ. ಹಾಗಾಗಿ, ಇತರ ಎರಡು ಪುಂಡಾನೆ ಸೆರೆಗೆ ಶನಿವಾರ ತೆಂಗಿನಕಲ್ಲುಗುಡ್ಡ ಅರಣ್ಯದಲ್ಲಿ ಕಾರ್ಯಾಚರಣೆ ನಡೆಸಲಾಗುವುದು' ಎಂದು ಡಿಎಫ್‌ಒ ರಾಮಕೃಷ್ಣಪ್ಪ ತಿಳಿಸಿದರು.

ಅಲಾಯಿ ದೇವರು ಹೊತ್ತಿದ್ದ ವ್ಯಕ್ತಿ ಕುಸಿದು ಬಿದ್ದು ಸಾವು



ಚಾಂದುಸಾಬ್ ಬಳ್ಳಾರಿ

ಅಳವಂಡಿ (ಕೊಪ್ಪಳ ಜಿಲ್ಲೆ): ಕೊಪ್ಪಳ ತಾಲ್ಲೂಕಿನ ಅಳವಂಡಿ ಹೋಬಳಿಯ ಕವಲೂರು ಗ್ರಾಮದಲ್ಲಿ ಮೊಹರಂ ಆಚರಣೆಯ ಅಂಗವಾಗಿ ಖಾಜಿ ಮಸೀದಿಯ ಅಲಾಯಿ ದೇವರನ್ನು ಹೊತ್ತಿದ್ದ ವ್ಯಕ್ತಿಯೊಬ್ಬರು ಶುಕ್ರವಾರ ಬೆಳಿಗ್ಗೆ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಕವಲೂರು ಗ್ರಾಮದ ಚಾಂದುಸಾಬ್ ಬಳ್ಳಾರಿ (88) ಮೃತರು. ಅವರಿಗೆ ನಾಲ್ವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ.

ಅವರು ಕಳೆದ ಹಲವು ವರ್ಷಗಳಿಂದ ಖಾಜಿ ಮಸೀದಿಯ ಅಲಾಯಿ ದೇವರನ್ನು ಹಿಡಿಯುತ್ತ ಬಂದಿದ್ದರು. ಖತಲ್ ರಾತ್ರಿ ಅಂಗವಾಗಿ ಶುಕ್ರವಾರ ಬೆಳಿಗ್ಗೆ ಸವಾರಿ ಮಾಡಲು ಬಂದಾಗ ದೇವರನ್ನು ಹಿಡಿದು ಬೆಂಕಿಯ ಹೊಂಡ ದಾಟಿದ್ದಾರೆ. ಬಳಿಕ ಭಕ್ತರಿಗೆ ಆಶೀರ್ವಾದ ಮಾಡುತ್ತಿದ್ದಾಗ ಕುಸಿದು ಬಿದ್ದು ಮೃತಪಟ್ಟಿದ್ದಾರೆ. 'ಗ್ರಾಮೀಣ ಭಾಗದಲ್ಲಿ ಮೊಹರಂ ಆಚರಣೆ ಕಳೆಗಟ್ಟಿತ್ತು. ಶ್ರದ್ಧೆ, ಭಕ್ತಿಯಲ್ಲಿ ಚಾಂದುಸಾಬ್ ಅವರು ಅಲಾಯಿ ದೇವರನ್ನು ಹೊತ್ತು ಕುಣಿದಿದ್ದರು. ಇದರಿಂದ ಸಾಕಷ್ಟು ದಣಿದಿದ್ದರು' ಎಂದು ಮೂಲಗಳು ಹೇಳಿವೆ.

ಚಾಂದುಸಾಬ್ ಅವರ ಅಂತ್ಯಕ್ರಿಯೆ ಸ್ವ-ಗ್ರಾಮದಲ್ಲಿ ಶುಕ್ರವಾರ ನಡೆಯಿತು.

ಬಿಜೆಪಿ ನೈತಿಕವಾಗಿ ಕುಗ್ಗಿದೆ: ಮಹೇಶ್

ಚಾಮರಾಜನಗರ: ವಿಧಾನ ಪರಿಷತ್ ಚುನಾವಣೆಯಲ್ಲಿಯ ಅಡ್ಡಮತ ಮತದಾನ ಬಿಜೆಪಿಯನ್ನು ನೈತಿಕವಾಗಿ ಕುಗ್ಗಿಸಿದೆ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ತಿಳಿಸಿದರು.

ಸಮಿತಿ ಮಧ್ಯಂತರ ವರದಿ ಸಿದ್ಧಪಡಿಸಿದೆ. ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮವಾಗಲಿದೆ ಎಂದರು.

‘ಕಡಿಮೆ ಶಿಕ್ಷೆ ಮುಂದುವರಿಕೆ: ಒತ್ತಾಯ ಸಲ್ಲ’

ಮಹತ್ವದ ತೀರ್ಪು ನೀಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಿಚಾರಣಾ ನ್ಯಾಯಾಲಯವು ತಪ್ಪಾಗಿ ನೀಡಿರುವ ಕಡಿಮೆ ಶಿಕ್ಷೆಯನ್ನೇ ಮುಂದುವರಿಸುವಂತೆ ಒತ್ತಾಯಿಸುವ ಅಧಿಕಾರ ಅಪರಾಧಿಗಳಿಗೆ ಇಲ್ಲ. ಸಿಆರ್‌ಪಿಸಿಯ ಸೆಕ್ಷನ್ 386 (ಬಿ), ಅಪರಾಧಿಗಳಿಗೆ ಅಂತಹ ಅಧಿಕಾರ ನೀಡುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಗಳ ಜೈಲು ಶಿಕ್ಷೆಯನ್ನು 12 ವರ್ಷಗಳಿಂದ 20 ವರ್ಷಗಳಿಗೆ ಹೆಚ್ಚಿಸುವ ಸಿಕ್ಕಿಂ ಹೈಕೋರ್ಟ್‌ನ ತೀರ್ಪನ್ನು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ವಲ್ ಭುಯಾನ್ ಅವರ ಪೀಠ ಎತ್ತಿ ಹಿಡಿಯುವಾಗ ಈ ತೀರ್ಪು ನೀಡಿದೆ.

ಅತ್ಯಾಚಾರ ಮತ್ತು ಸಾಮೂಹಿಕ ಅತ್ಯಾಚಾರ ಸೇರಿದಂತೆ ಗಂಭೀರ ಅಪರಾಧಗಳಿಗೆ ಕಾನೂನು ನಿಗದಿಪಡಿಸಿರುವ ಕನಿಷ್ಠ ಶಿಕ್ಷೆಗಿಂತಲೂ ಕಡಿಮೆ ಶಿಕ್ಷೆಯನ್ನು ವಿಚಾರಣಾ ನ್ಯಾಯಾಲಯಗಳು ತಪ್ಪಾಗಿ ನೀಡಿರುವ ಪ್ರಕರಣಗಳ ಮೇಲೆ ಸುಪ್ರೀಂ ಕೋರ್ಟ್‌ನ ಈ ತೀರ್ಪು ವ್ಯಾಪಕ ಪರಿಣಾಮಗಳನ್ನು ಬೀರಬಹುದು ಎಂದು ವಿಶ್ಲೇಷಿಸಲಾಗಿದೆ.



‘ಆರೋಪಿಯು ತನ್ನ ಅಪರಾಧ ನಿರ್ಣಯವನ್ನು ಪ್ರಶ್ನಿಸುವ ಹಕ್ಕನ್ನು ಹೊಂದಿದ್ದರೂ, ಶಾಸನಬದ್ಧ ಕನಿಷ್ಠ ಶಿಕ್ಷೆಗಿಂತಲೂ ಕಡಿಮೆ ಶಿಕ್ಷೆಯ ಮುಂದುವರಿಕೆಗೆ ಒತ್ತಾಯಿಸುವ ಯಾವುದೇ ಹಕ್ಕು ಹೊಂದಿರುವುದಿಲ್ಲ’ ಎಂದು ಪೀಠ ಒತ್ತಿ ಹೇಳಿತು.

2021ರಲ್ಲಿ ಸಿಕ್ಕಿಂನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಹತ್ವದ ತೀರ್ಪು ನೀಡಿದೆ. ಐಪಿಸಿಯ ಸೆಕ್ಷನ್ 376 (ಡಿ) (ಸಾಮೂಹಿಕ ಅತ್ಯಾಚಾರ) ಅಡಿಯಲ್ಲಿ ಅಪರಾಧ ಸಾಬೀತಾದ ಕಾರಣ ಕರಣ್ ಚೆಟ್ರಿ ಮತ್ತು ಇತರರಿಗೆ ವಿಚಾರಣಾ ನ್ಯಾಯಾಲಯ ದಂಡ ಹಾಗೂ 12 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿತ್ತು.

ಈ ಶಿಕ್ಷೆಯನ್ನು ಎತ್ತಿಹಿಡಿಯುವ ವೇಳೆ ಹೈಕೋರ್ಟ್, ವಿಚಾರಣಾ ನ್ಯಾಯಾಲಯವು ನೀಡಿರುವ ಶಿಕ್ಷೆಯು ಸೆಕ್ಷನ್ 376 (ಡಿ) ಅಡಿಯಲ್ಲಿ ಸೂಚಿಸಲಾದ ಶಾಸನಬದ್ಧ ಕನಿಷ್ಠ ಶಿಕ್ಷೆಗಿಂತಲೂ ಕಡಿಮೆ ಇದೆ ಎಂಬುದನ್ನು ಗಮನಿಸಿತ್ತು. ಮಾತ್ರವಲ್ಲ, ಜೈಲು ಶಿಕ್ಷೆಯನ್ನು 20 ವರ್ಷಗಳಿಗೆ ಹೆಚ್ಚಿಸಿತ್ತು.

ಇದನ್ನು ಪ್ರಶ್ನಿಸಿ ಅಪರಾಧಿಗಳು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿ ವಜಾಗೊಳಿಸಿದ ಪೀಠ, ‘ವಿಚಾರಣಾ ನ್ಯಾಯಾಲಯವು ವಿಧಿಸಿದ ಶಿಕ್ಷೆಯು ಶಾಸನಬದ್ಧ ಕನಿಷ್ಠ ಶಿಕ್ಷೆಗಿಂತಲೂ ಕಡಿಮೆಯಿರುವಾಗ, ಅದನ್ನು ಕಾನೂನಿಗೆ ಅನುಗುಣವಾಗಿ ತಿದ್ದುಪಡಿ ಮಾಡುವುದು ಸೆಕ್ಷನ್ 386 (ಬಿ) ಅಡಿಯಲ್ಲಿ ವಿಧಿಸಿರುವ ತಡೆಯನ್ನು ಉಲ್ಲಂಘಿಸಿದಂತೆ ಆಗುವುದಿಲ್ಲ’ ಎಂದು ಹೇಳಿತು.

ದೇಣಿಗೆಗೆ ‘ಕನ್ನ’: 8 ಬಂಧನ

ಒಂದನೇ ಪುಟದಿಂದ...

‘ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೆ, ರಾಮಶಂಕರ್ ಮಿಶ್ರಾ, ಶುಭಾಂಶು ಶ್ರೀವಾತ್ಸವ ಹಾಗೂ ರಾಮಶಂಕರ್ ಯಾದವ್ ಬಂಧಿತರು. ಆರೋಪಿಗಳೆಲ್ಲರೂ ದೇವಾಲಯಕ್ಕೆ ಬರುತ್ತಿದ್ದ ದೇಣಿಗೆಯನ್ನು ಲೆಕ್ಕ ಹಾಕುವ ಹಾಗೂ ಆಭರಣಗಳ ಮೇಲ್ವಿಚಾರಣೆಯ ಹೊಣೆ ಹೊತ್ತವರಾಗಿದ್ದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನಿಖಾಧಿಕಾರಿಗಳು ಆರೋಪಿಗಳಿಂದ ಇದುವರೆಗೆ ₹79.85 ಲಕ್ಷ ನಗದು ವಶಕ್ಕೆ ಪಡೆದಿದ್ದಾರೆ.

ಪ್ರಕರಣದ ಕುರಿತು ತನಿಖೆ ನಡೆಸಲು ಉತ್ತರ ಪ್ರದೇಶ ಸರ್ಕಾರವು ಲಖನೌದ ವಿಭಾಗೀಯ ಆಯುಕ್ತ ವಿಜಯ್ ವಿಶ್ವಾಸ್ ಪಂತ್ ಅವರ ನೇತೃತ್ವದಲ್ಲಿ ಮೂವರು ಸದಸ್ಯರ ಎಸ್‌ಐಟಿ ರಚಿಸಿತ್ತು.

ಅಯೋಧ್ಯೆಯನ್ನು ವಿಭಜನಕಾರಿ ರಾಜಕೀಯಕ್ಕೆ ಬಳಸಿಕೊಂಡ ನಂತರ, ಸಾಮಾನ್ಯ ಭಕ್ತರು ನೀಡಿದ ದೇಣಿಗೆಯನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಲೂಟಿ ಮಾಡಿದ್ದು, ಅವರ ನಂಬಿಕೆಯನ್ನೇ ಗಾಸಿಗೊಳಿಸಿದೆ

ಕೆ.ಸಿ.ವೇಣುಗೋಪಾಲ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ರಾಮಮಂದಿರ ದೇಣಿಗೆ ವಿಚಾರದಲ್ಲಿ ದೊಡ್ಡ ವ್ಯಕ್ತಿಗಳನ್ನು ರಕ್ಷಿಸಲು ಕೆಳಹಂತದ ನೌಕರರನ್ನು ಗುರಿಯಾಗಿಸಲಾಗುತ್ತಿದೆ. ಕಣ್ಣೊರೆಸುವ ತಂತ್ರವಾಗಿ ಕೆಳಹಂತದ 8 ಮಂದಿ ನೌಕರರನ್ನು ಬಂಧಿಸಲಾಗಿದೆ

ಅರವಿಂದ ಕೇಜ್ರಿವಾಲ್
ಎಎಪಿ ಸಂಚಾಲಕ

‘ಬಿಜೆಪಿಯದ್ದು ನಕಲಿ ಹಿಂದುತ್ವ’

ಒಂದನೇ ಪುಟದಿಂದ...

ಇಲ್ಲಿ ನಡೆದ ಗೋವು ಧರ್ಮ ಯಾತ್ರೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ರಾಮಮಂದಿರ ವಿಚಾರದಲ್ಲಿ ಆರಂಭದ ದಿನದಿಂದಲೂ ತಪ್ಪು ನಿರ್ಧಾರ ತೆಗೆದುಕೊಳ್ಳಲಾಯಿತು. ಧಾರ್ಮಿಕ ಮುಖಂಡರ ಸಲಹೆಗಳನ್ನು ಪರಿಗಣಿಸದೇ, ರಾಜಕಾರಣಿಗಳನ್ನು ಸೇರಿಸಿ ಟ್ರಸ್ಟ್ ರಚಿಸಲಾಯಿತು. ಸಂತರು, ಅರ್ಚಕರನ್ನು ಹೊರಗಿಡಲಾಯಿತು ಎಂದು ದೂರಿದ್ದಾರೆ.

ಈ ವಿಚಾರದಲ್ಲಿ ಬಿಜೆಪಿಯ ವಿರುದ್ಧ ವಾಗ್ದಾಳಿ ನಡೆಸಿರುವ ಅವರು, ‘ಬಿಜೆಪಿಯದ್ದು ನಕಲಿ ಹಿಂದುತ್ವ’ ಎಂದು ಆರೋಪಿಸಿದ್ದಾರೆ.

‘₹1 ಕೋಟಿ ದೇಣಿಗೆಗೆ ರಸೀದಿ ಸಿಕ್ಕಿಲ್ಲ’

ಒಂದನೇ ಪುಟದಿಂದ...

‘ರಾಮಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಟ್ರಸ್ಟ್ ರಚನೆಯಾದ ವೇಳೆ ನಾವು ₹1 ಕೋಟಿ ದೇಣಿಗೆ ನೀಡಿದ್ದೆವು. ಆದಾದ ಬಳಿಕ 25 ಕೆ.ಜಿ. ತೂಕದ ಬೆಳ್ಳಿ ಇಟ್ಟಿಗೆಯನ್ನು ನೀಡಿದ್ದೆವು. ಆದರೆ ಇದುವರೆಗೂ ರಸೀದಿ ಸಿಕ್ಕಿಲ್ಲ’ ಎಂದು ದೂರಿದ್ದಾರೆ.

‘ದೇವರ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಿಜೆಪಿ, ಅದನ್ನು ಶಾಸಕರು ಹಾಗೂ ಸಂಸದರ ಖರೀದಿಗೆ ಬಳಸಿಕೊಂಡಿದೆ’ ಎಂದು ಆರೋಪಿಸಿದ್ದಾರೆ.

ತಪ್ಪಿತಸ್ಥರಿಗೆ ಖಂಡಿತ ಶಿಕ್ಷೆ ಆಗಲಿ: ಪೇಜಾವರ ಶ್ರೀ

ಪ್ರಜಾವಾಣಿ ವಾರ್ತೆ

ಉಡುಪಿ: ‘ಅಯೋಧ್ಯೆಯ ರಾಮ ಮಂದಿರ ದೇಶ, ವಿದೇಶದ ಸಮಸ್ತ ಶ್ರದ್ಧಾಳುಗಳ ಕೇಂದ್ರವಾಗಿದೆ. ಅಂತಹ ಕೇಂದ್ರದಲ್ಲಿ ಘೋರ ಅಪಚಾರ ನಡೆಯಬಾರದಿತ್ತು. ತಪ್ಪು ನಡೆದದ್ದು ಹೌದಾದರೆ, ತಪ್ಪಿತಸ್ಥರಿಗೆ ಖಂಡಿತ ಶಿಕ್ಷೆ ಆಗಬೇಕು’ ಎಂದು ಇಲ್ಲಿನ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಅಯೋಧ್ಯೆ ಶ್ರೀರಾಮ ಮಂದಿರದ ದೇಣಿಗೆ ದುರುಪಯೋಗ ಪ್ರಕರಣದ ಕುರಿತು ಇಲ್ಲಿ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಿರುವುದು ಸ್ವಾಗತಾರ್ಹ. ಸತ್ಯಾಸತ್ಯತೆ ಶೀಘ್ರ ಹೊರಬರಬೇಕು’ ಎಂದರು.

‘ನಾನು ವಿಶ್ವಸ್ಥ ಮಂಡಳಿ ಸದಸ್ಯ. ನಾನು ಅಲ್ಲೇ ನಿಲ್ಲಲು ಸಾಧ್ಯವಿಲ್ಲ. ಅಲ್ಲಿಗೆ ಹೋದಾಗ ವಿಶ್ವಾಸ ಇಟ್ಟು ಸಲಹೆ ಕೊಡುತ್ತಿದ್ದೆ. ಸಂಬಂಧಪಟ್ಟವರು ವಿಶ್ವಾಸಾರ್ಹ ವ್ಯಕ್ತಿಗಳಾಗಿರಬೇಕಿತ್ತು’ ಎಂದರು.

‘ಜುಲೈ 11ರಂದು ಟ್ರಸ್ಟ್‌ನ ಸಭೆ ಇದೆ. ಅಲ್ಲಿ ಈ ವಿಚಾರ ಚರ್ಚೆಗೆ ಬರಲಿದೆ. ಆ ಸಭೆಯಲ್ಲಿ ಭಾಗಿಯಾಗುತ್ತೇನೆ. ನಂತರ ಪ್ರತಿಕ್ರಿಯಿಸುತ್ತೇನೆ’ ಎಂದರು. ‘ದೊಡ್ಡ ಮಟ್ಟದ ದೇಣಿಗೆ ನೀಡಿದವರು, ಅಲ್ಲಿಯೇ ರಶೀದಿ ತೆಗೆದು ಕೊಳ್ಳಬೇಕು. ದೇಣಿಗೆ ನೀಡಿದವರಿಗೆ, ಪಡೆದವರು ಇಬ್ಬರಿಗೂ ಜವಾಬ್ದಾರಿ ಇದೆ’ ಎಂದರು.

ನಕ್ಸಲರ ಅಡಗುತಾಣ ಪತ್ತೆ: ಶಸ್ತ್ರಾಸ್ತ್ರ ವಶ

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ನಕ್ಸಲರ ಅಡಗುತಾಣಗಳನ್ನು ಪತ್ತೆ ಮಾಡಿರುವ ಭದ್ರತಾ ಸಿಬ್ಬಂದಿ, ಅಲ್ಲಿದ್ದ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಹಾಗೂ ₹24 ಲಕ್ಷ ನಗದನ್ನು ವಶಪಡಿಸಿಕೊಂಡಿದ್ದಾರೆ.

ಬಂದೂಕುಗಳು ಮತ್ತು ಮದ್ದುಗುಂಡುಗಳು ಸೇರಿದಂತೆ ಇತರ ಶಸ್ತ್ರಾಸ್ತ್ರಗಳನ್ನು ಗುರುವಾರ ನಡೆಸಿದ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಳ್ಳಲಾಗಿದೆ. ಯಾವುದೇ ಅನುಮಾನಾಸ್ಪದ ಚಟುವಟಿಕೆಗಳು ಕಂಡುಬಂದಲ್ಲಿ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಎಂದು ಜಿಲ್ಲೆಯ ಜನರಿಗೆ ಪೊಲೀಸರು ತಿಳಿಸಿದ್ದಾರೆ.

ರಾಹುಲ್ ಗಾಂಧಿ ವಿರೋಧ ಪಕ್ಷದ ನಾಯಕನಾಗಿ 2 ವರ್ಷ ಪೂರ್ಣ

ನವದೆಹಲಿ (ಪಿಟಿಐ): ‘ಲೋಕಸಭೆಯ ವಿರೋಧ ಪಕ್ಷದ ನಾಯಕನಾಗಿ ದೇಶದ ಜನರಿಗಾಗಿ ಕೆಲಸ ಮಾಡುತ್ತೇನೆ ಮತ್ತು ಜನರ ಧ್ವನಿಯನ್ನು ಸರ್ಕಾರದವರೆಗೆ ಕೊಂಡೊಯ್ಯುತ್ತೇನೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.



ರಾಹುಲ್ ಗಾಂಧಿ

ವಿರೋಧ ಪಕ್ಷದ ನಾಯಕನಾಗಿ ಎರಡು ವರ್ಷ ಪೂರ್ಣಗೊಳಿಸಿದ ಅಂಗವಾಗಿ, ಸಂಸತ್ ಒಳಗೆ ಮತ್ತು ಹೊರಗೆ ಧ್ವನಿ ಎತ್ತಿದ ವಿಷಯಗಳನ್ನು ಒಳಗೊಂಡ ಕಿರು ವಿಡಿಯೊವನ್ನು ಅವರು ‘ಎಕ್ಸ್’ನಲ್ಲಿ ಶುಕ್ರವಾರ ಹಂಚಿಕೊಂಡಿದ್ದಾರೆ.

‘ಈ ಎರಡು ವರ್ಷಗಳಲ್ಲಿ ಪ್ರತಿ ದಿನವೂ ದೇಶದ ಅಧಿಕಾರದ ಕಾರಿಡಾರ್‌ಗೆ ಜನರ ಧ್ವನಿಯನ್ನು ತಲುಪಿಸುವ ಕೆಲಸ ಮಾಡಿದ್ದೇನೆ’ ಎಂದಿದ್ದಾರೆ.

ಪ್ರವಾಸದ ನಾಯಕ: ಬಿಜೆಪಿ ಆರೋಪ



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸದಾ ರಜೆಯಲ್ಲಿಯೇ ಇರುತ್ತಾರೆ. ಯಾವಾಗ ಸಂಸತ್ ಅಧಿವೇಶನ, ಚುನಾವಣೆ ಇರುತ್ತದೆಯೋ ಅಥವಾ ಪಕ್ಷಕ್ಕೆ ಅವರ ಅಗತ್ಯವಿರುತ್ತದೆಯೋ ಆಗೆಲ್ಲಾ ಅವರು ಗೈರಾಗಿರುತ್ತಾರೆ ಎಂದು ಬಿಜೆಪಿ ಶುಕ್ರವಾರ ಆರೋಪಿಸಿದೆ.

ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹನಾಜ್ ಪೂನಾವಾಲಾ ಅವರು, ‘ಎಲ್‌ಒಪಿ ಎಂದರೆ ಲೋಕಸಭೆಯ ವಿರೋಧ ಪಕ್ಷದ ನಾಯಕ ಎಂದಲ್ಲ, ಪ್ರವಾಸೋದ್ಯಮದ ನಾಯಕ ಎಂದು ಅವರು ಬದಲಾಯಿಸಿಕೊಳ್ಳಲಿ. ಏಕೆಂದರು ಸದಾ ಅವರು ಪ್ರವಾಸದಲ್ಲಿಯೇ ಇರುತ್ತಾರೆ’ ಎಂದು ವಿಡಿಯೊ ಹೇಳಿಕೆಯಲ್ಲಿ ಹೇಳಿದ್ದಾರೆ.

‘ಅವರಿಗೆ ದೇಶದ ಜನರು, ಸಂಸತ್ತು ಅಥವಾ ದೇಶ ಮುಖ್ಯವಲ್ಲ; ಪ್ರವಾಸವೇ ಮುಖ್ಯ. ಪಕ್ಷಕ್ಕೆ ಸಂಘಟನಾ ಶಕ್ತಿಯ ಅವಶ್ಯಕತೆ ಇದ್ದಾಗ ಅವರು ವಿದೇಶಕ್ಕೆ ಹೋಗುತ್ತಾರೆ, ಸಂಸತ್ ಅಧಿವೇಶನದ ಸಂದರ್ಭದಲ್ಲಿಯೂ ವಿದೇಶಕ್ಕೆ ಹಾರುತ್ತಾರೆ’ ಎಂದು ಟೀಕಿಸಿದ್ದಾರೆ.

‘ನೀಟ್ ಆಕಾಂಕ್ಷಿಗಳ ಪರವಾದ ಹೋರಾಟವಿರಬಹುದು ಅಥವಾ ಚುನಾವಣಾ ಅಕ್ರಮವನ್ನು ಬಯಲಿಗೆಳೆದಿದ್ದು ಇರಬಹುದು ಅಥವಾ ಸಂವಿಧಾನವನ್ನು ಸಮರ್ಥಿಸಿದ್ದು ಇರಬಹುದು– ಪ್ರತಿ ಬಾರಿಯೂ ನಿಮ್ಮ ಪರವಾಗಿ ನಿಂತಿದ್ದೇನೆ. ಇಂದು ಎಂದೆಂದಿಗೂ ನಿಮ್ಮ ಪರವಾಗಿರುತ್ತೇನೆ. ಪ್ರಯಾಣವು ಸುದೀರ್ಘವಾಗಿದೆ. ಆದರೆ ನಿಲುವು ಸ್ಪಷ್ಟವಾಗಿದೆ’ ಎಂದಿದ್ದಾರೆ.

Infosys
Navigate your next

Infosys Limited

Corporate Identification Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: +91 80 2852 0261, Fax: +91 80 2852 0362
investors@infosys.com, www.infosys.com

NOTICE
SPECIAL WINDOW FOR TRANSFER AND DEMATERIALIZATION (DEMAT) OF PHYSICAL SHARES

Please note that a special window for Transfer and Dematerialization (Demat) of Physical Shares will remain open till February 4, 2027 pursuant to SEBI circular No. Circular No. - HO/38/13/11(2)2026-MIRSD-POD/ I/3750/2026 dated January 30, 2026 (“SEBI CIRCULAR”).

This facility of a special window is for lodgement of physical securities transfer and dematerialization (“demat”) which were sold/purchased prior to April 01, 2019. Kindly refer to the below matrix with regards to the applicability of lodgement:

Execution Date of Transfer Deed	Lodged for transfer before April 01, 2019?	Original Security Certificate Available?	Eligible to lodge in the current window?
Before April 01, 2019	No (it is fresh lodgement)	Yes	Yes
Before April 01, 2019	Yes (it was rejected/ returned earlier)	Yes	Yes
Before April 01, 2019	Yes	No	No
Before April 01, 2019	No	No	No

Kindly note that the request(s) which are accompanied by original certificate(s) along with transfer deeds and relevant supporting documents will only be considered under this special window. The securities so transferred shall be mandatorily credited to the transferee only in demat mode and shall be under lock-in for a period of one year from the date of registration of transfer. Such securities shall not be transferred/lien-marked/ pledged during the said lock-in period.

For any queries on the above matter, shareholders are requested to contact the Company's Registrar and Share Transfer Agents, Mrs. Shobha Anand, Vice President at M/s. KFin Technologies Limited Unit: Infosys Limited, Selenium Building, Tower B, Plot Nos. 31-32, Financial District, Nanakramguda, Serilingampally, Hyderabad, Rangareddi, Telangana India -500032. Tel: +91-40-67162222 email ID: einward.ris@kfintech.com

For **Infosys Limited**
Sd/-
A.G.S. Manikantha
Company Secretary
Membership No. A21918

Bengaluru, India
June 26, 2026

3 ತಿಂಗಳಾದರೂ ಕಲಾವಿದರಿಗೆ ಸಿಗದ ಮಾಸಾಶನ

ಔಷಧ ಖರೀದಿ– ಪ್ರಯಾಣಕ್ಕೆ ಸಹಕಾರಿಯಾಗಿದ್ದ ಧನ

• ವರುಣ ಹೆಗಡೆ

ಬೆಂಗಳೂರು: ಸಂಕಷ್ಟದಲ್ಲಿರುವ ಹಿರಿಯ ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುತ್ತಿದ್ದ 'ಮಾಸಾಶನ' ಮೂರು ತಿಂಗಳಿಂದ ಬಿಡುಗಡೆಯಾಗಿಲ್ಲ. ಇದರಿಂದಾಗಿ ಇಲಾಖೆ ನೀಡುತ್ತಿದ್ದ ಅಲ್ಪ ಧನವನ್ನೇ ಅವಲಂಬಿಸಿದ್ದ ಕಲಾವಿದರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ರಾಜ್ಯದಲ್ಲಿ ಸುಮಾರು 12 ಸಾವಿರ ಮಂದಿ ಇಲಾಖೆಯಡಿ ಮಾಸಾಶನ ಪಡೆಯಲು ಅರ್ಹರಾಗಿದ್ದಾರೆ. ವಿವಿಧ ಕಲಾ ಪ್ರಕಾರದ ಕಲಾವಿದರ ಜತೆಗೆ ಸಂಕಷ್ಟದಲ್ಲಿರುವ ಹಿರಿಯ ಸಾಹಿತಿಗಳು ಸೇರಿದ್ದಾರೆ. 'ಮಾಸಾಶನ' ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಪ್ರತಿ ತಿಂಗಳು ತಲಾ ₹2,500 ಆರ್ಥಿಕ ನೆರವು ಒದಗಿಸಲಾಗುತ್ತಿತ್ತು. ಆದರೆ, ಮಾರ್ಚ್ ತಿಂಗಳಿನಿಂದ ಏಪ್ರಿಲ್‌ವರೆಗೆ ಮೂರು ತಿಂಗಳ ಮಾಸಾಶನ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗಿಲ್ಲ.

ಮುಖ್ಯಾಂಶಗಳು

- ಫಲಾನುಭವಿಗಳಿಗೆ ಪ್ರತಿ ತಿಂಗಳು ತಲಾ ₹2,500 ಆರ್ಥಿಕ ನೆರವು
- ಸರ್ಕಾರಿ ಕಚೇರಿ, ಬ್ಯಾಂಕ್‌ಗೆ ಕಲಾವಿದರ ಅಲೆದಾಟ
- ಆಪ್ತರ ಬಳಿ ಕೈಯೊಡ್ಡಬೇಕಾದ ಪರಿಸ್ಥಿತಿ

ಇದರಿಂದಾಗಿ ಕಲಾವಿದರು ಸರ್ಕಾರಿ ಕಚೇರಿಗಳು ಹಾಗೂ ಬ್ಯಾಂಕ್‌ಗಳಿಗೆ ಅಲೆದಾಡುವಂತಾಗಿದೆ.

ಸಂಗೀತ, ನೃತ್ಯ, ನಾಟಕ, ಜಾನಪದ, ಯಕ್ಷಗಾನ, ಬಯಲಾಟ, ಲಲಿತ ಕಲೆ ಸೇರಿ ವಿವಿಧ ಕಲಾ ಪ್ರಕಾರಗಳಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸಿ, ಕಷ್ಟದ ಸ್ಥಿತಿಯಲ್ಲಿರುವ ಕಲಾವಿದರು ಹಾಗೂ ಸಾಹಿತಿಗಳಿಗೆ ಇಲಾಖೆಯು ಹಲವು ವರ್ಷಗಳಿಂದ


ಕನ್ನಡ ಭವನ

ಮಾಸಾಶನ ನೀಡುತ್ತಿದೆ. ನಿಯಮದ ಪ್ರಕಾರ ಯೋಜನೆಯಡಿ ಫಲಾನುಭವಿಗಳಿಗೆ ಕನಿಷ್ಠ 58 ವರ್ಷವಾಗಿರಬೇಕು.

ಗೊಂದಲದಲ್ಲಿ ಕಲಾವಿದರು: ಇಲಾಖೆ ನೀಡುತ್ತಿದ್ದ ಅಲ್ಪ ಆರ್ಥಿಕ ನೆರವನ್ನು ಔಷಧ ಖರೀದಿ, ಪ್ರಯಾಣದಂತಹ ವೆಚ್ಚಕ್ಕೆ ಬಳಕೆ ಮಾಡುತ್ತಿದ್ದ ಕಲಾವಿದರು, ಈಗ ಮಾಸಾಶನ ಬರದ ಕಾರಣ ಸಮಸ್ಯೆ ಎದುರಿಸುತ್ತಿದ್ದಾರೆ. ವೃದ್ಧಾಪ್ಯ, ವಯೋಸಹಜ ಅನಾರೋಗ್ಯ ಸಮಸ್ಯೆ ಸೇರಿ ವಿವಿಧ ಕಾರಣಗಳಿಂದ ಕಾರ್ಯಕ್ರಮ ನೀಡಲು ಸಾಧ್ಯವಾಗದವರು, ತಮ್ಮ ಖರ್ಚು ವೆಚ್ಚವನ್ನು ಸರಿದೂಗಿಸಲು ಕುಟುಂಬದ ಸದಸ್ಯರು ಹಾಗೂ ಆಪ್ತರ ಬಳಿ ಹಣಕ್ಕೆ ಕೈಯೊಡ್ಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಜೂನ್ ತಿಂಗಳಲ್ಲಿ ಮೂರು ವಾರ ಕಳೆದರೂ ಬಾಕಿ ಹಣ ಪಾವತಿಯಾಗದಿರುವುದು ಕಲಾವಿದರು ಹಾಗೂ ಸಾಹಿತಿಗಳ ಆತಂಕಕ್ಕೆ ಕಾರಣವಾಗಿದೆ.

'ಮೂರು ತಿಂಗಳಿಂದ ಮಾಸಾಶನ ಬಂದಿಲ್ಲ. ಯಾವಾಗ ಬರುತ್ತದೆ ಎಂಬ ಖಚಿತತೆಯೂ ಇಲ್ಲವಾಗಿದೆ. ಇನ್ನೊಂದೆಡೆ ಯೋಜನೆಯನ್ನು ನಿಲ್ಲಿಸಲು ಈ ರೀತಿ ಮಾಡಲಾಗುತ್ತಿದೆಯೇ ಎನ್ನುವುದು ತಿಳಿಯದಾಗಿದೆ. ಯೋಜನೆಯಡಿ ಬರುತ್ತಿದ್ದ ಅಲ್ಪ ಹಣ ಔಷಧಗಳ ಖರೀದಿಗೆ ಸಹಕಾರಿಯಾಗಿತ್ತು. ಈಗ ಕಾರ್ಯಕ್ರಮಗಳನ್ನು ನೀಡುವ ಸ್ಥಿತಿಯಲ್ಲಿ ನಾವಿಲ್ಲ. ಸಂಕಷ್ಟಕ್ಕೆ ಸಿಲುಕಿದ್ದೇವೆ' ಎಂದು ಬೆಳಗಾವಿಯ ಡೊಳ್ಳಿನ ಪದಗಳ ಕಲಾವಿದರೊಬ್ಬರು ಬೇಸರ ವ್ಯಕ್ತಪಡಿಸಿದರು.

'ಕಲೆಯನ್ನೇ ನಂಬಿ ಇಷ್ಟು ವರ್ಷ ಜೀವನ ಸಾಗಿಸಿದೆವು. ಇತ್ತೀಚೆಗೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಡುತ್ತಿದ್ದು, ಚಿಕಿತ್ಸಾ ವೆಚ್ಚ ಭರಿಸುವುದು ಕಷ್ಟವಾಗಿದೆ. ಇಲಾಖೆ ನೀಡುತ್ತಿದ್ದ ಮಾಸಾಶನ ಒಂದಷ್ಟು ಖರ್ಚು– ವೆಚ್ಚಕ್ಕೆ ಸಹಕಾರಿಯಾಗಿತ್ತು. ಈಗ ಅದು ಕೂಡ ಬಂದಿಲ್ಲ. ಮಕ್ಕಳ ಬಳಿ ಕೇಳಲು ಅವರು ಹಣವಂತರಲ್ಲ' ಎಂದು ಬಳ್ಳಾರಿಯ ಜಾನಪದ ಕಲಾವಿದೆಯೊಬ್ಬರು ತಿಳಿಸಿದರು.

'ನೇರವಾಗಿ ಕಲಾವಿದರಿಗೆ ಪಾವತಿ'

'ಮಾಸಾಶನ ಪಾವತಿಗೆ ನೂತನ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇನ್ನು ಮುಂದೆ ನೇರವಾಗಿ ಕಲಾವಿದರ ಬ್ಯಾಂಕ್ ಖಾತೆಗೆ ಹಣ ಜಮಾ ಆಗಲಿದೆ. ಈ ಮೊದಲು ಖಜಾನೆ-2 ತಂತ್ರಾಂಶದ ಮೂಲಕ ಪಾವತಿಸಲಾಗುತ್ತಿತ್ತು. ಇದರಿಂದ ವಿಳಂಬವಾಗುತ್ತಿತ್ತು. ನೂತನ ವ್ಯವಸ್ಥೆಯಲ್ಲಿ ಸೇವಾಸಿಂಧು ಪೋರ್ಟಲ್ ಅಡಿ ಅರ್ಹ ಕಲಾವಿದರ ಪಟ್ಟಿ ಅಳವಡಿಸಲಾಗಿದೆ. ಮೃತ ಕಲಾವಿದರ ಹೆಸರನ್ನು ತೆಗೆಯಲಾಗಿದೆ. ಇದರಿಂದ ಪಾವತಿಯಲ್ಲಿ ವಿಳಂಬವಾಗಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ ತಿಳಿಸಿದರು.

'ಕ್ರಿಯಾ ಯೋಜನೆಯಲ್ಲಿ ಮಾಸಾಶನಕ್ಕೆ ಅಗತ್ಯ ಹಣವನ್ನು ಮೀಸಲಿಟ್ಟಿದ್ದು, ಮಾಸಾಶನ ಬರದಿರುವುದರ ಬಗ್ಗೆ ಯಾವುದೇ ಕಲಾವಿದರು ಗೊಂದಲ, ಆತಂಕಕ್ಕೆ ಒಳಗಾಗಬೇಕಿಲ್ಲ. ವಾರದಲ್ಲಿ ಫಲಾನುಭವಿಗಳಿಗೆ ಹಣ ಬಿಡುಗಡೆಯಾಗಲಿದೆ' ಎಂದರು.

ಮಾಸಾಶನ ಹೆಚ್ಚಳದ ಬೇಡಿಕೆ

ಕಲಾವಿದರಿಗೆ ನೀಡುತ್ತಿದ್ದ 'ಮಾಸಾಶನ'ವನ್ನು ಕಳೆದ ವರ್ಷ ₹ 500 ಹೆಚ್ಚಳ ಮಾಡಲಾಗಿದೆ. ಈ ಮೊದಲು ₹ 2 ಸಾವಿರ ನೀಡಲಾಗುತ್ತಿತ್ತು. ಈ ಮೊತ್ತವನ್ನು ₹ 5 ಸಾವಿರಕ್ಕೆ ಹೆಚ್ಚಳ ಮಾಡಬೇಕೆಂದು ಈ ಹಿಂದೆ ಕಲಾವಿದರ ನಿಯೋಗ ಇಲಾಖೆಗೆ ಮನವಿ ಸಲ್ಲಿಸಿ, ಆಗ್ರಹಿಸಿತ್ತು. ಇದಕ್ಕೆ ಮಣಿದ ಇಲಾಖೆ, ಮಾಸಾಶನವನ್ನು ₹ 3 ಸಾವಿರಕ್ಕೆ ಏರಿಸಲು ನಿರ್ಧರಿಸಿ, ಈ ಬಗ್ಗೆ ಪ್ರಸ್ತಾವವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದರೂ ಅನುಮೋದನೆ ದೊರೆತಿರಲಿಲ್ಲ. ಕಲಾವಿದರ ನಿರಂತರ ಆಗ್ರಹಕ್ಕೆ ಮಣಿದ ಸರ್ಕಾರ, 2025ರ ಮಾರ್ಚ್‌ನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ₹2,500ಕ್ಕೆ ಹೆಚ್ಚಿಸಿತ್ತು.

ಸುದ್ದಿ 2 ನಿಮಿಷ

'28ಕ್ಕೆ ನಶಾಮುಕ್ತ ಭಾರತ ಸಂಕಲ್ಪ'

ಬೆಂಗಳೂರು: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 31ನೇ ಸಂಸ್ಥಾಪನಾ ದಿನಾಚರಣೆ ಭಾಗವಾಗಿ ಇದೇ 28ರಂದು ಅಂತರಾಷ್ಟ್ರೀಯ ಮಾದಕವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆ ಹಮ್ಮಿಕೊಳ್ಳಲಾಗಿದೆ' ಎಂದು ಕುಲಪತಿ ಡಾ.ಬಿ.ಸಿ.ಭಗವಾನ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಶಾಮುಕ್ತ ಭಾರತ ಸಂಕಲ್ಪದೊಂದಿಗೆ ಕಂಠೀರವ ಕ್ರೀಡಾಂಗಣದಲ್ಲಿ ಕಾರ್ಯಕ್ರಮದ ಹಮ್ಮಿಕೊಳ್ಳಲಾಗಿದೆ. ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಈ ಕಾರ್ಯಕ್ರಮಕ್ಕೆ ಒಂದು ವರ್ಷದಿಂದ ಸಿದ್ಧತೆ ನಡೆಸಿದ್ದು, ವಿಶ್ವವಿದ್ಯಾಲಯದ ಅಧೀನದಲ್ಲಿ ಇರುವ ಕಾಲೇಜುಗಳಲ್ಲಿ ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ರಾಜ್ಯದ ವಿವಿಧೆಡೆ ನಡೆದ ಜಾಗೃತಿ ನಡಿಗೆಯಲ್ಲಿ 98,000 ವಿದ್ಯಾರ್ಥಿಗಳು ಮತ್ತು 10,000 ಸಿಬ್ಬಂದಿ ಭಾಗಿಯಾಗಿದ್ದರು. 15 ಜಿಲ್ಲೆಗಳ 550 ಸಂಯೋಜಿತ ಕಾಲೇಜುಗಳ ಸಹಯೋಗದಲ್ಲಿ ಅಭಿಯಾನ ನಡೆಸಲಾಗಿತ್ತು' ಎಂದು ಮಾಹಿತಿ ನೀಡಿದರು.

'ಭಾನುವಾರದ ಕಾರ್ಯಕ್ರಮದಲ್ಲಿ 25 ಸಾವಿರಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ಭಾಗಿಯಾಗಲಿದ್ದಾರೆ. ಅಭಿಯಾನದ ಸಮಾರೋಪವಾಗಿ ನಶಾಮುಕ್ತ ಸಂಕಲ್ಪ ಮಾಡಲಾಗುತ್ತದೆ' ಎಂದರು.

ನೂತನ ಕಾಲೇಜು, ಸಂಶೋಧನಾ ಕೇಂದ್ರ: 'ವಿಶ್ವವಿದ್ಯಾಲಯ ವತಿಯಿಂದ ಭೀಮನಕುಪ್ಪೆಯಲ್ಲಿ ₹200 ಕೋಟಿ ವೆಚ್ಚದಲ್ಲಿ ಸಂಶೋಧನಾ ಕೇಂದ್ರ ನಿರ್ಮಿಸಲಾಗುತ್ತಿದೆ. 50 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗುವ ಈ ಕೇಂದ್ರದಲ್ಲಿ ಅತ್ಯಾಧುನಿಕ ಸಂಶೋಧನೆ, ಕೃತಕ ಬುದ್ಧಿಮತ್ತೆ ಆಧರಿತ ರೋಗನಿರ್ಣಯ, ಡಿಜಿಟಲ್ ಪೆಥಾಲಜಿ ಮತ್ತು ರೇಡಿಯಾಲಜಿ ಸವಲತ್ತುಗಳು ಇರಲಿವೆ' ಎಂದು ಬಿ.ಸಿ.ಭಗವಾನ್ ಅವರು ಮಾಹಿತಿ ನೀಡಿದರು.



'ರಾಮನಗರದಲ್ಲಿ 216 ಎಕರೆ ವ್ಯಾಪ್ತಿಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಲಾಗುತ್ತಿದೆ. ಈ ಕ್ಯಾಂಪಸ್‌ನಲ್ಲಿ ವೈದ್ಯಕೀಯ ಕಾಲೇಜು, ಬೋಧನಾ ಆಸ್ಪತ್ರೆ, ಸಂಶೋಧನಾ ಕೇಂದ್ರ, ವಿದ್ಯಾರ್ಥಿ ನಿಲಯ, ಆಡಳಿತಾತ್ಮಕ ಕಟ್ಟಡವು ಇರಲಿವೆ' ಎಂದರು.

'ಕಳ್ಳರು ತಪ್ಪಿಸಿಕೊಂಡರೂ ನಿಷ್ಠಾವಂತರಿಗೆ ಶಿಕ್ಷೆ ಬೇಡ'

ಬಾಗಲಕೋಟೆ: 'ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆಗಿರುವುದು ಸ್ಪಷ್ಟ. ಗೋಪ್ಯ ಮತದಾನ ಆಗಿರುವುದರಿಂದ ಯಾರು ಎಂದು ಕಂಡು ಹಿಡಿಯುವುದು ಕಷ್ಟ. 200 ಮಂದಿ ಕಳ್ಳರು ತಪ್ಪಿಸಿಕೊಂಡರೂ ಒಬ್ಬ ನಿಷ್ಠಾವಂತನಿಗೆ ಶಿಕ್ಷೆ ಆಗಬಾರದು' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮುರುಗೇಶ ನಿರಾಣಿ ಹೇಳಿದರು.

'ಅಡ್ಡ ಮತ ಹಾಕಿದವರ ಬಗ್ಗೆ ಪುರಾವೆ ಸಿಕ್ಕರೆ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಹೈಕಮಾಂಡ್ ಸೂಚಿಸಲಿದೆ. ಮುಂದಿನ ದಿನಗಳಲ್ಲಿ ಇದು ಪುನರಾವರ್ತನೆಯಾದರೆ ಹೈಕಮಾಂಡ್ ಕಠಿಣ ಕ್ರಮ ಕೈಗೊಳ್ಳಲಿದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಧರ್ಮಸ್ಥಳದಲ್ಲಿ ಆಣೆ ಮಾಡುವಂತೆ ಭಾವನಾತ್ಮಕವಾಗಿ ಹೇಳಿದ್ದು ಸರಿಯಲ್ಲ. ಬೇಜಾರಾಗಿ ಹೇಳಿದ್ದು, ಮಾತನ್ನು ವಾಪಸ್ ಪಡೆಯುವುದಾಗಿ ವಿಜಯೇಂದ್ರ ಹೇಳಿದ್ದಾರೆ. ಈ ಬಗ್ಗೆ ಹೆಚ್ಚಿನ ಚರ್ಚೆ ಬೇಡ' ಎಂದರು.

ತಮ್ಮ ಮೇಲೂ 'ಇ.ಡಿ' ದಾಳಿ ಆಗಬಹುದು ಎಂಬ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಅಧಿಕಾರಿಗಳ ಮನೆ ಮೇಲೆ ದಾಳಿ ಆಗಿದೆ. ಕುಂಬಳಕಾಯಿ ಕಳ್ಳ ಅಂದರೆ ನೀವು ಯಾಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ. 'ಇ.ಡಿ' ಸ್ವತಂತ್ರ ಸಂಸ್ಥೆ. ಯಾರ ಕೈಗೊಂಬೆಯೂ ಅಲ್ಲ' ಎಂದರು.

'ಎಸ್‌ಐಆರ್: ಬೂತ್ ಮಟ್ಟದಲ್ಲಿ ಕಣ್ಗಾವಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಮತಬ್ಯಾಂಕ್ ರಕ್ಷಣೆಗೆ ಪ್ರತಿಯೊಬ್ಬರೂ ನಿಗಾವಹಿಸಬೇಕು. ಎಸ್‌ಐಆರ್‌ನಿಂದ ಅವಕಾಶ ವಂಚಿತರಾಗದಂತೆ ಬೂತ್ ಮಟ್ಟದಲ್ಲಿ ಕಣ್ಗಾವಲು ಇಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸೂಚಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ತರಬೇತಿ ಶಿಬಿರದಲ್ಲಿ ಅವರು ಮಾತನಾಡಿದರು.

'ಕಾಂಗ್ರೆಸ್ ನಡೆ ನಿಮ್ಮ ಮತರಕ್ಷಣೆ ಕಡೆ' ಘೋಷವಾಕ್ಯದಂತೆ ತಳ ಮಟ್ಟದಿಂದಲೇ ಎಸ್‌ಐಆರ್ ಕುರಿತು ಜಾಗೃತಿ ಮೂಡಿಸಬೇಕು. ಪಕ್ಷದ 500 ಮುಖಂಡರನ್ನು ಒಳಗೊಂಡ ಪಡೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ತರಬೇತಿ ನೀಡಲಿದ್ದು, ಪ್ರತಿ ಬೂತ್‌ಮಟ್ಟದಲ್ಲೂ ತಲಾ ಐವರು ಸ್ಥಳೀಯ ಮುಖಂಡರು, ಕಾರ್ಯಕರ್ತರು ಮತದಾರರಿಗೆ ಎಸ್‌ಐಆರ್ ಕಾರ್ಯದಲ್ಲಿ ನೆರವಾಗಲಿದ್ದಾರೆ. ಬಿಎಲ್‌ಒಗಳು ವಿತರಿಸುವ ಎನ್ಯುಮರೇಷನ್ (ಗಣತಿ ನಮೂನೆ) ಭರ್ತಿ ಮಾಡಲು, ಅಗತ್ಯ ದಾಖಲೆ ಪರಿಶೀಲಿಸಲು ಸಹಕಾರ ನೀಡುವರು' ಎಂದು ಮಾಹಿತಿ ನೀಡಿದರು.

'ಚುನಾವಣಾ ಆಯೋಗ ಜೂನ್ 30ರಿಂದ ಎಸ್‌ಐಆರ್ ಪ್ರಕ್ರಿಯೆ ಆರಂಭಿಸುತ್ತಿದ್ದು, ಜನ ಜಾಗೃತಿ ಮೂಡಿಸಲು ಕಾಂಗ್ರೆಸ್‌ನ ಎಲ್ಲ ಕಾರ್ಯಕರ್ತರಿಗೂ ತರಬೇತಿ ನೀಡಲಾಗುವುದು. ಈ ಬಾರಿ ಗಣತಿ ನಮೂನೆ ಭರ್ತಿ ಮಾಡಿ, ಸಹಿ ಮಾಡುವುದು ಕಡ್ಡಾಯ ಮಾಡಲಾಗಿದೆ. ಮತದಾರರ ಹಕ್ಕು ಕಸಿಯದಂತೆ ಸೂಕ್ತ ಮಾಹಿತಿ ನೀಡಲು ಪಕ್ಷ ಕ್ರಮ ಕೈಗೊಂಡಿದೆ. ಅರ್ಹ ಮತದಾರ ತನ್ನ ಸಂವಿಧಾನದತ್ತ ಹಕ್ಕಿನಿಂದ ವಂಚಿತರಾಗಬಾರದು ಎನ್ನುವುದೇ ಕಾಂಗ್ರೆಸ್ ಆಶಯ' ಎಂದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಜಿ.ಸಿ.ಚಂದ್ರಶೇಖರ್, ಮಂಜುನಾಥ್ ಭಂಡಾರಿ, ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ನಾರಾಯಣಸ್ವಾಮಿ, ಸಾಮಾಜಿಕ ಕಾರ್ಯಕರ್ತ ಎಚ್.ವಿ.ವಾಸು ಉಪಸ್ಥಿತರಿದ್ದರು.


ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರಿಗೆ ಶುಕ್ರವಾರ ಹಮ್ಮಿಕೊಂಡಿದ್ದ ಎಸ್‌ಐಆರ್ ತರಬೇತಿ ಶಿಬಿರದಲ್ಲಿ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಮಾತನಾಡಿದರು

'ಡಿಕೆಶಿ ಜೊತೆ ವ್ಯಾವಹಾರಿಕ ಸಂಬಂಧ ಇಲ್ಲ'

ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಗೆ ಪೂಜೆ ಸಲ್ಲಿಸಿದ ಬಿ.ವೈ. ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ನನ್ನ ನಡುವೆ ಯಾವುದೇ ಆತ್ಮೀಯತೆ, ವ್ಯಾವಹಾರಿಕ ಸಂಬಂಧ ಇಲ್ಲ. ಅಪಪ್ರಚಾರ ಮಾಡುವವರಿಗೆ ಭಗವಂತ ಒಳಿತು ಮಾಡಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಗೆ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಶುಕ್ರವಾರ ಮಾತನಾಡಿದರು.

'ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರ ಅಡ್ಡ ಮತದಾನದಿಂದಾಗಿ ಕಾರ್ಯಕರ್ತರಿಗೆ ನೋವಾಗಿದೆ. ಅಡ್ಡ ಮತದಾನ ಬೇರೆ ಬೇರೆ ಚರ್ಚೆಗಳನ್ನು ಹುಟ್ಟು ಹಾಕಿದ್ದರಿಂದ, ಧರ್ಮಸ್ಥಳದಲ್ಲಿ ಆಣೆ ಪ್ರಮಾಣ, ಶಾಸಕಾಂಗ ಪಕ್ಷದ ಸಭೆ ನಡೆಸುವುದಾಗಿ ಹೇಳಿದ್ದೆ, ಭಾವನಾತ್ಮಕ ವ್ಯಕ್ತಿಯಾದ ನಾನು ಮನಸ್ಸಿಗೆ ತೋಚಿದ್ದನ್ನು ಹೇಳಿದ್ದೆ. ಪಕ್ಷದ ಹಿರಿಯರು ಧರ್ಮಸ್ಥಳದ ತನಕ ಬೆಳೆಸುವುದು ಬೇಡ ಎಂದು ಸಲಹೆ ನೀಡಿದರು. ದೇವರ ಪರಮ ಭಕ್ತನಾಗಿ ಈ ಕ್ಷೇತ್ರಕ್ಕೆ ಬಂದಿದ್ದೇನೆ' ಎಂದರು.

'ನನ್ನ ಬಗ್ಗೆ ಸಾಕಷ್ಟು ಅಪಪ್ರಚಾರ ಹಿಂದೆಯೂ ಆಗಿದೆ, ಈಗಲೂ ನಡೆಯುತ್ತಿದೆ. ವಿಜಯೇಂದ್ರ ಮತ್ತು ಡಿಕೆಶಿ ನಡುವೆ ವ್ಯಾವಹಾರಿಕ ಸಂಬಂಧ, ಆತ್ಮೀಯತೆ ಇದೆ ಎಂದು ಆರೋಪ ಮಾಡಿದರು. ನಾನೇ ಅಡ್ಡ ಮತದಾನಕ್ಕೆ ಸಹಕಾರ ನೀಡಿದ್ದೇನೆ ಎಂಬಂತೆ ನಮ್ಮವರೇ ಮಾತನಾಡಿದರು. ಮುಖ್ಯಮಂತ್ರಿ ಸ್ಥಾನಕ್ಕೆ ನೀಡಬೇಕಾದ ಗೌರವ ಕೊಟ್ಟಿದ್ದೇನೆ ಅಷ್ಟೇ' ಎಂದರು.


ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಧರ್ಮಸ್ಥಳ ಮಂಜುನಾಥಸ್ವಾಮಿ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿದರು

'ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಆಶೀರ್ವಾದದಿಂದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿದ್ದೇನೆ. ರಾಜ್ಯಾಧ್ಯಕ್ಷನಾಗಿ ಇಂತಹ ಕೀಳುಮಟ್ಟದ ಯೋಚನೆ ಮಾಡುವುದಿಲ್ಲ. ನವದೆಹಲಿಯಲ್ಲಿ ಪಕ್ಷದ ಹಿರಿಯರನ್ನು ಭೇಟಿ ಮಾಡಿ ಗುರುವಾರ ರಾತ್ರಿ ಧರ್ಮಸ್ಥಳಕ್ಕೆ ಬಂದಿದ್ದೇನೆ. ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಭೀಕರ ಬರಗಾಲ ಪರಿಸ್ಥಿತಿ ದೂರವಾಗಲಿ ಎಂದು ಬೇಡಿಕೊಂಡಿದ್ದೇನೆ. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕು. ಹಿಂದೂಗಳ ರಕ್ಷಣೆ ಮಾಡುವ ಸರ್ಕಾರ ಬರಬೇಕು' ಎಂದು ವಿಜಯೇಂದ್ರ ಹೇಳಿದರು.

ಬಿಡದಿ ಟೌನ್‌ಶಿಪ್ ಕುರಿತು ಪ್ರತಿಕ್ರಿಯಿಸಿದ ಅವರು, 'ರೈತರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ. ನಾವೂ ಹೋರಾಟ ಆರಂಭಿಸುತ್ತೇವೆ. ಈ ಬಗ್ಗೆ ಬೆಂಗಳೂರಿನಲ್ಲಿ ನಾಳೆ ಘೋಷಣೆ ಮಾಡುತ್ತೇನೆ' ಎಂದರು.

'ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಯಲ್ಲಿ ಸಾಕಷ್ಟು ಅವ್ಯವಹಾರಗಳಾಗಿವೆ. ಗ್ಯಾರಂಟಿ ಸಮಿತಿ ಅಧ್ಯಕ್ಷರನ್ನು ಬರ್ಕಾಸ್ತುಗೊಳಿಸಿ ಅಧಿಕಾರಿಗಳನ್ನು ವಿಶ್ವಾಸಕ್ಕೆ ಪಡೆದು ಯೋಜನೆ ಮುಂದುವರಿಸಬೇಕು. ನೂರಾರು ಕೋಟಿ ರೂಪಾಯಿ ಅವ್ಯವಹಾರಕ್ಕೆ ಕಾಂಗ್ರೆಸ್ ಪಕ್ಷವೇ ಕಾರಣ' ಎಂದು ಆರೋಪಿಸಿದರು.

ಸಂಸದ ಕ್ಯಾ. ಬ್ರಿಜೇಶ್ ಚೌಟ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ, ಶಾಸಕರಾದ ಹರೀಶ್ ಪೂಂಜ, ವೇದವ್ಯಾಸ ಕಾಮತ್, ಡಾ.ವೈ. ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ, ಗುರುರಾಜ ಗಂಟಿಹೊಳೆ, ಯಶಪಾಲ್ ಸುವರ್ಣ, ರಾಜೇಶ್ ನಾಯ್ಕ್, ಸುರೇಶ್ ಶೆಟ್ಟಿ ಗುರ್ಮೆ, ಕಿರಣ್ ಕೊಡ್ಗಿ, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಜೊತೆಯಲ್ಲಿದ್ದರು.

ಚರ್ಚೆಗೆ ಬಂದರೆ ಸಂತೋಷ: ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ

ಸಿ.ಎಂಗಾಗಿ ಬೈರಮಂಗಲದಲ್ಲಿ ಕಾಯುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸೇರಿ ಯಾರೊಂದಿಗೂ ನಾನು ಪತ್ರ ಸಮರ ನಡೆಸುತ್ತಿಲ್ಲ. ರೈತರ ಹಿತಕ್ಕಾಗಿ ಬೈರಮಂಗಲಕ್ಕೆ ಬನ್ನಿ ಎಂದು ಕರೆದಿದ್ದೇನೆಯೇ ಹೊರತು, ಯಾರೊಂದಿಗೂ ಜಗಳವಾಡಲು ಅಲ್ಲ. ಸಂತ್ರಸ್ತ ರೈತರಿಗೆ ಪರಿಹಾರ ಒದಗಿಸುವುದಷ್ಟೇ ನನ್ನ ಉದ್ದೇಶ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.


ಎಚ್‌.ಡಿ. ಕುಮಾರಸ್ವಾಮಿ

ಶುಕ್ರವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು. 'ಚರ್ಚೆಗೆ ಬನ್ನಿ ಎಂದು ನಾನು ಬರೆದಿದ್ದ ಪತ್ರಕ್ಕೆ ಅವರಿನ್ನೂ ಉತ್ತರ ನೀಡಿಲ್ಲ. ಬಂದರೆ ಸಂತೋಷ' ಎಂದರು.

'ನಾನು ಶನಿವಾರ ಉದ್ದೇಶಿತ ಬಿಡದಿ ಟೌನ್‌ಶಿಪ್ ವ್ಯಾಪ್ತಿಯ ಬೈರಮಂಗಲಕ್ಕೆ ಹೋಗುತ್ತಿದ್ದೇನೆ. ಅಲ್ಲಿ ಮಧ್ಯಾಹ್ನದವರೆಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗಾಗಿ ಕಾಯುತ್ತೇನೆ. ಅವರು ಬಂದರೆ, ಇಬ್ಬರೂ ಸೇರಿ ರೈತರ ಜತೆ ಚರ್ಚೆ ನಡೆಸಬಹುದು. ರೈತರ ಸಂಕಷ್ಟಗಳೇನು ಎಂದು ಕೇಳಬಹುದು. ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಬಹುದು' ಎಂದರು.

'ನಾನು ಖಂಡಿತವಾಗಿಯೂ ಅಲ್ಲಿ ಗಲಾಟೆ ಮಾಡಿಸಲು ಹೋಗುತ್ತಿಲ್ಲ. ರೈತರು ಹೋರಾಟ ನಡೆಸುತ್ತಿದ್ದಾರೆ. ಅವರಿಗೆ ಬೆಂಬಲ ಕೊಡುತ್ತಿದ್ದೇವೆ ಅಷ್ಟೆ. ಪೊಲೀಸರು ಅಲ್ಲಿ ನಿಷೇಧಾಜ್ಞೆ ಹಾಕಲು ಹೊರಟಿದ್ದಾರೆ. ರೈತರ ಹೋರಾಟದಲ್ಲಿ ನಾನು ಕಾನೂನಾತ್ಮಕವಾಗಿಯೇ ಭಾಗಿಯಾಗಲಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನನ್ನ ಕೈಯಲ್ಲಿ ಎಚ್‌ಎಂಟಿ ವಾಚ್ ': 'ನನ್ನ ಬಳಿ ದುಬಾರಿ ವಾಚ್ ಇದೆ ಎಂದು ಕೆಲ ಶಾಸಕರು ಹೇಳಿದ್ದಾರೆ. ಅವರೊಮ್ಮೆ ನೋಡಲಿ, ನನ್ನ ಕೈಲಿರುವುದು ಅಂಬೇಡ್ಕರ್ ಅವರ ಭಾವಚಿತ್ರ ಇರುವ ಎಚ್‌ಎಂಟಿ ವಾಚ್' ಎಂದು ಕುಮಾರಸ್ವಾಮಿ ಹೇಳಿದರು.

'ನನ್ನ ಮನೆಯಲ್ಲಿ ದುಬಾರಿ ವಾಚ್‌ಗಳಿವೆ ಎಂದು ಅವರಿಗೆ ಅನುಮಾನವಿದ್ದರೆ, ಅದರ ತನಿಖೆಗೆ ಎಸ್‌ಐಟಿ ರಚಿಸಲಿ' ಎಂದು ಲೇವಡಿ ಮಾಡಿದರು.

'ರೈತರ ಒಪ್ಪಿಗೆ ಇದ್ದರೆ ನಮ್ಮ ಅಭ್ಯಂತರವಿಲ್ಲ'

'ಹೋರಾಟ ನಡೆಸುತ್ತಿದ್ದವರ ಪೈಕಿ ಕೆಲವು ರೈತರು ಭೂಮಿ ಕೊಡಲು ಮುಂದೆ ಬಂದಿದ್ದಾರೆ ಎಂಬ ಸುದ್ದಿ ಇದೆ. ಇದರ ಹಿಂದಿನ ರಾಜಕಾರಣ ನನಗೂ ಅರ್ಥವಾಗುತ್ತದೆ. ರೈತರು ಒಪ್ಪಿಗೆ ನೀಡಿದರೆ ನಮ್ಮ ಅಭ್ಯಂತರವೇನೂ ಇಲ್ಲ' ಎಂದು ಕುಮಾರಸ್ವಾಮಿ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನಾನು ಯೋಜನೆ ಪ್ರಕಟಿಸಿದಾಗ ರೈತರು ವಿರೋಧಿಸಿದ್ದರು. ಈಗಲೂ ವಿರೋಧಿಸುತ್ತಿದ್ದಾರೆ. ನಾವು ರೈತರನ್ನು ಬೆಂಬಲಿಸಿದ್ದೇವೆ. ರೈತರು ಸಂಪೂರ್ಣವಾಗಿ ಒಪ್ಪಿದರೆ ನಾವೇಕೆ ವಿರೋಧ ವ್ಯಕ್ತಪಡಿಸಬೇಕು. ಆದರೆ, ಬಹುಸಂಖ್ಯಾತ ರೈತರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅಂಥವರನ್ನು ಬೆದರಿಸಿ, ಬಲವಂತವಾಗಿ ಒಕ್ಕಲೆಬ್ಬಿಸುವ ಕೆಲಸ ಆಗಬಾರದು' ಎಂದರು.

'ಜನವಿರೋಧಿ ಸರ್ಕಾರ ದೂಳಿಪಟ'

ಮಂಡ್ಯ: 'ಪುಢಾರಿಗಳನ್ನು ಕರೆತಂದು ರೈತರಿಗೆ ದುಡ್ಡು ಕೊಡಲು ಕಾಂಗ್ರೆಸ್ ಹೊರಟಿದೆ. ಜನವಿರೋಧಿ ಸರ್ಕಾರಗಳು ದೂಳಿಪಟವಾಗುತ್ತವೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು

ಮಂಡ್ಯದ ಶಿವಾರ ಗ್ರಾಮದಲ್ಲಿ ಶುಕ್ರವಾರ ಮಾಧ್ಯಮದ ವರೊಂದಿಗೆ ಮಾತನಾಡಿ, 'ಹಾದಿಬೀದಿ ಚರ್ಚೆ ಬೇಡ, ವಿಧಾನಸೌಧಕ್ಕೆ ಬನ್ನಿ' ಎಂಬ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಸಿ.ಎಂ ಆಗಿದ್ದಾಗ ಯತೀಂದ್ರ ಎಲ್ಲಿ ನಿಂತು ಮಾತಾಡುತ್ತಿದ್ರು? ಅಪ್ಪಯ್ಯ, ಅಪ್ಪಯ್ಯ ಎಂದು ಮಾತನಾಡಿದ್ದು ನಾವು ನೋಡಿಲ್ವಾ? ಇವರಿಂದ ನಾನು ಕಲಿಯಬೇಕಾ? ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

'ಬಿಡದಿ: ಬೀದಿಯಲ್ಲಿ ಚರ್ಚೆ ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: ಬಿಡದಿ ಟೌನ್‌ಶಿಪ್ ಯೋಜನೆಯ ವಿಚಾರವಾಗಿ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಚರ್ಚೆ ನಡೆಸುವುದಾದರೆ ವಿಧಾನಸೌಧಕ್ಕೆ ಬರಲಿ. ಬೀದಿಯಲ್ಲಿ ಕುಳಿತು ಚರ್ಚಿಸಲು ಸಾಧ್ಯವಿಲ್ಲ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಆಹ್ವಾನಿಸಿದರು.


ಯತೀಂದ್ರ ಸಿದ್ದರಾಮಯ್ಯ

ಇಲ್ಲಿ ಶುಕ್ರವಾರ ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಬಿಡದಿಯಲ್ಲಿ ನಡೆದಿರುವ ಹೋರಾಟದಿಂದ ಸರ್ಕಾರದ ಮೇಲೆ ಯಾವ ಪರಿಣಾಮವೂ ಬೀರುವುದಿಲ್ಲ. ಬಿಡದಿ ಟೌನ್‌ಶಿಪ್ ಜನರ ಪರವಾಗಿದ್ದು, ಸರ್ಕಾರ ಟೌನ್‌ಶಿಪ್ ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು.

ಯೋಜನೆ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಎಚ್‌.ಡಿ. ಕುಮಾರಸ್ವಾಮಿ ಇಬ್ಬರೂ ಪತ್ರ ಬರೆದಿದ್ದಾರೆ. ಮಾತುಕತೆ ಆಗಬೇಕು ಎಂದಾದರೆ ವಿಧಾನಸೌಧಕ್ಕೆ ಬರಬೇಕು. ಸರ್ಕಾರ ನಡೆಯುವ ಜಾಗದಲ್ಲಿ ಚರ್ಚೆ ಆಗಬೇಕು ಎಂದರು.

ಮುಖ್ಯಮಂತ್ರಿಯವರು ಸರಿಯಾದ ಸ್ಥಳಕ್ಕೆ ಅವರನ್ನು ಕರೆದಿದ್ದಾರೆ. ನಿಜವಾಗಿಯೂ ಕುಮಾರಸ್ವಾಮಿ ಅವರ ವಾದದಲ್ಲಿ ಶಕ್ತಿ ಇದ್ದರೆ ಅಲ್ಲಿಗೆ ಬರಲಿ ಎಂದು ಸವಾಲು ಹಾಕಿದರು.

ಬಿಡದಿ ಟೌನ್‌ಶಿಪ್ ಯೋಜನೆಗೆ ಕೆಲ ರೈತರಷ್ಟೇ ವಿರೋಧ ಮಾಡುತ್ತಿದ್ದಾರೆ. ಅಲ್ಲಿನ ಹಲವು ರೈತರು ಟೌನ್‌ಶಿಪ್ ಪರವಿದ್ದಾರೆ. ಸರ್ಕಾರದಿಂದ ಪರಿಹಾರ ಸಿಗುತ್ತದೆ ಎಂಬ ಖುಷಿಯಲ್ಲಿದ್ದಾರೆ. ಹಿಂದೆ ಕುಮಾರಸ್ವಾಮಿಯವರೇ ಭೂಸ್ವಾಧೀನ ಮಾಡಿರುವುದು ಎಂದು ಹೇಳಿದರು.

ಮೈಕ್ರೊ ಫೈನಾನ್ಸ್ ಕಿರುಕುಳ: ರೈತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಹಲಗೂರು (ಮಳವಳ್ಳಿ): ಮೈಕ್ರೊ ಫೈನಾನ್ಸ್ ಸಿಬ್ಬಂದಿ ಕಿರುಕುಳ ತಾಳದೆ ತಗಡಯ್ಯನದೊಡ್ಡಿಯ ರೇಷ್ಮೆ ಕೃಷಿಕರೊಬ್ಬರು ಗುರುವಾರ ರಾತ್ರಿ ಜಮೀನಿನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ನಾಗರಾಜು

ಗ್ರಾಮದ ನಾಗರಾಜು ಮಂಚಿತಗಡಯ್ಯ (35) ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡವರು. ರೇಷ್ಮೆ ಸಾಕಾಣಿಕೆ ಮಾಡಲು ಅವರು ಮಳವಳ್ಳಿಯ ಮೈಕ್ರೊ ಫೈನಾನ್ಸ್‌ನಲ್ಲಿ ₹5 ಲಕ್ಷ ಸಾಲ ಪಡೆದಿದ್ದರು. ಎರಡು ವರ್ಷ ನಿಗದಿತವಾಗಿ ಸಾಲದ ಕಂತು ಮರು ಪಾವತಿಸಿದ್ದರು. ನಂತರ ರೇಷ್ಮೆ ಕೃಷಿಯಲ್ಲಿ ನಷ್ಟ ಉಂಟಾದ ಪರಿಣಾಮ ಸಾಲದ ಕಂತಿನ ಹಣ ಪಾವತಿಸಿರಲಿಲ್ಲ. ಇತ್ತೀಚೆಗೆ ಮೈಕ್ರೊ ಫೈನಾನ್ಸ್ ಸಿಬ್ಬಂದಿ ಸಾಲದ ಹಣ ಪಾವತಿಸಲು ಗಡುವು ನೀಡಿದ್ದರು.

ಇದರಿಂದ ಮನನೊಂದಿದ್ದ ನಾಗರಾಜು ಗುರುವಾರ ಮನೆಯಿಂದ ಹೊರ ಹೋದವರು ರಾತ್ರಿವರೆಗೂ ಹಿಂದಿರುಗಿರಲಿಲ್ಲ. ಜಮೀನಿನ ಬಳಿ ಹೋಗಿ ನೋಡಿದಾಗ ವಿಷ ಸೇವಿಸಿ ಮೃತಪಟ್ಟಿದ್ದರು.

'ನನ್ನ ಮಗನ ಸಾವಿಗೆ ಮಳವಳ್ಳಿಯ ಮೈಕ್ರೊ ಫೈನಾನ್ಸ್ ಸಿಬ್ಬಂದಿ ನೇರ ಕಾರಣ. ಅವರ ಸೂಕ್ತ ಕ್ರಮ ಜರುಗಿಸಬೇಕೆಂದು' ಮೃತನ ತಂದೆ ಮಂಚಿತಗಡಯ್ಯ ದೂರು ನೀಡಿದ್ದಾರೆ. ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜಿಎಸ್‌ಟಿ ವಂಚನೆ ತಡೆಗೆ ಹದ್ದಿನಕಣ್ಣು'

ಒಂದನೇ ಪುಟದಿಂದ...

ಅಲ್ಲದೇ 'ಜಿಎಸ್‌ಟಿ ಸಂಗ್ರಹದಲ್ಲಿ ನಿಗದಿತ ಗುರಿ ಮೀರಬೇಕು. ಸಮಯಕ್ಕೆ ಸರಿಯಾಗಿ ಜಿಎಸ್‌ಟಿ ರಿಟರ್ನ್ ಸಲ್ಲಿಸುವುದು ಹಾಗೂ ಸಲ್ಲಿಸದಿರುವುದನ್ನು ಗುರುತಿಸಿ, ನಿಗದಿತ ಅವಧಿಯ ಒಳಗೆ ಸಲ್ಲಿಸುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ, ಕಾನೂನು ಮೀರಿ ಯಾರನ್ನೂ ಶೋಷಣೆ ಮಾಡಬಾರದು. ದೂರುಗಳು ಬಾರದಂತೆ ಎಚ್ಚರಿಕೆ ವಹಿಸಬೇಕು' ಎಂದೂ ಆದೇಶಿಸಿದರು.

'ಜಿಎಸ್‌ಟಿ ಸಂಗ್ರಹದಲ್ಲಿ ಮೇ ವರೆಗೆ ತೆಲಂಗಾಣ ಶೇ 10, ಕರ್ನಾಟಕ ಶೇ 9, ಮಹಾರಾಷ್ಟ್ರ ಶೇ 5, ಗುಜರಾತ್ ಶೇ 5, ತಮಿಳುನಾಡು ಶೇ 7, ಉತ್ತರಪ್ರದೇಶ ಶೇ 8ರಷ್ಟು ಪ್ರಗತಿ ಸಾಧಿಸಿವೆ. ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಈ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಉತ್ತಮ ಸಾಧನೆಯಾಗಿದೆ. ಮೊದಲ ಸ್ಥಾನಕ್ಕೆ ತಲುಪಲು ಅಗತ್ಯ ಕ್ರಮಕೈಗೊಳ್ಳಬೇಕು. ಬಾಕಿ ಇರುವ ಮೇಲ್ಮನವಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು. ತೆರಿಗೆದಾರ ಸ್ನೇಹಿ ವ್ಯವಸ್ಥೆ ರೂಪಿಸಬೇಕು. ಮೈಸೂರು ವಿಭಾಗದಲ್ಲಿ ಕಾರ್ಯಕ್ಷಮತೆ ಕುಸಿತ ಆಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕಾರ್ಯಕ್ಷಮತೆ ಕುಸಿದಿರುವುದಕ್ಕೆ ನೆಪಗಳು, ಕಾರಣಗಳನ್ನು ಕೊಡುವುದು ಸರಿಯಲ್ಲ. ಫಲಿತಾಂಶ ಮುಖ್ಯ. ತಾಂತ್ರಿಕ ತೊಂದರೆಗಳಿದ್ದರೂ ಬಗೆಹರಿಸಿಕೊಂಡು ಉತ್ತಮ ಕಾರ್ಯಕ್ಷಮತೆಯನ್ನು ನಿಮ್ಮಿಂದ ನಿರೀಕ್ಷಿಸುತ್ತೇನೆ' ಎಂದರು.

ಜಿಎಸ್‌ಟಿ ಮೇಲೆ ಹೈದರಾಬಾದ್ ಐಐಟಿ ನಿಗಾ

'ಜಿಎಸ್‌ಟಿ ವಂಚನೆ ತಡೆಯಲು ಹೈದರಾಬಾದ್‌ನ ಐಐಟಿ ಸಹಯೋಗದಲ್ಲಿ ನಿಗಾ ಇಡಲಾಗಿದೆ. ಆ ಮೂಲಕ ಜಿಎಸ್‌ಟಿ ವಂಚನೆಯ ಹಲವು ಪ್ರಕರಣಗಳನ್ನು ಪತ್ತೆಮಾಡಲಾಗಿದೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

'ಐಐಟಿ ಸಹಯೋಗದಲ್ಲಿ ನಿಗಾ ವಹಿಸಲು ಆರಂಭಿಸಿದ ನಂತರ ಹಲವು ವಂಚನೆ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ನಕಲಿ ರಶೀದಿ ಮತ್ತು ನಕಲಿ ಐಟಿಸಿಗಳು ದೊಡ್ಡ ಸವಾಲಾಗಿದ್ದವು. ಸವಾಲನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದೇವೆ. ಬೋಗಸ್ ಕಂಪನಿಗಳನ್ನು ಪತ್ತೆ ಹಚ್ಚಿ ಈಗಾಗಲೇ ₹166 ಕೋಟಿ ಸಂಗ್ರಹಿಸಿದ್ದೇವೆ. ಅಂತಹ ಕಂಪನಿ ಸ್ಥಾಪಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಎಲ್ಲ ಆಯಾಮಗಳಲ್ಲೂ ನಿಗಾವಹಿಸಲಾಗಿದೆ' ಎಂದರು.

'ಇಲ್ಲಿಯವರೆಗೆ ವಂಚನೆ ಮಾಡುವವರನ್ನು ಬಂಧಿಸುವ ಪ್ರಮಾಣ ಕಡಿಮೆ ಇತ್ತು. ಈಗ ಬಂಧನ ಪ್ರಕರಣಗಳು ಹೆಚ್ಚಾಗುತ್ತಿವೆ. ಅಧಿಕಾರಿಗಳು, ಸಿಬ್ಬಂದಿ ಲೋಪಗಳ ವಿರುದ್ಧವೂ ಕಠಿಣ ಕ್ರಮಕೈಗೊಳ್ಳಲಾಗುತ್ತಿದೆ' ಎಂದು ಹೇಳಿದರು.

'ಸಿ.ಎಂ' ಪ್ರತ್ಯೇಕ ಪಡೆ

ಒಂದನೇ ಪುಟದಿಂದ...

'ಪ್ರತ್ಯೇಕ ವ್ಯವಸ್ಥೆ ಮೂಲಕ ರಾಜ್ಯದ ಎಲ್ಲ ವಲಯಗಳಿಂದಲೂ ನಿರಂತರ ಮಾಹಿತಿ ಪಡೆಯುತ್ತಿದ್ದೇನೆ. ನಾನು ಪಡೆಯುವ ಮಾಹಿತಿ ಹಾಗೂ ಅಧಿಕಾರಿಗಳ ಕಾರ್ಯಕ್ಷಮತೆಯ ವರದಿ ಹೊಂದಿಕೆಯಾಗಬೇಕು. ಎಲ್ಲ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ತೆರಿಗೆ ಪಾವತಿಸದೆ ಸಾಗಣೆ ಮಾಡುವವರ ಜತೆ ರಾಜಿ ಮಾಡಿಕೊಳ್ಳುವುದು ಅಥವಾ ನಿರ್ಲಕ್ಷ್ಯ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು' ಎಂದರು.

ಬೇನಾಮಿ ಹೆಸರಿನಲ್ಲಿ ಸನ್ನದು ಪತ್ತೆಗೆ ಕ್ರಮ: ಅಧಿಕಾರಿಗಳಿಗೆ ಎಚ್ಚರಿಕೆ

ಅಬಕಾರಿ ಅಕ್ರಮ: ಸಿ.ಎಂ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆ ಅಧಿಕಾರಿಗಳು ಪರ್ಯಾಯ ಅಕ್ರಮ ಕೂಟ ನಡೆಸುತ್ತಿದ್ದಾರೆ ಎಂಬ ಜಾರಿ ನಿರ್ದೇಶನಾಲಯದ (ಇ.ಡಿ) ವರದಿಯನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, 'ಸರ್ಕಾರಕ್ಕೆ ಕೆಟ್ಟ ಹೆಸರು ತಂದರೆ ಇಲಾಖೆಯ ಎಲ್ಲ ಅಧಿಕಾರಿಗಳನ್ನು ಸಾರಾಸಗಟಾಗಿ ವರ್ಗಾವಣೆ ಮಾಡುತ್ತೇನೆ' ಎಂದು ಎಚ್ಚರಿಕೆ ನೀಡಿದ್ದಾರೆ.

ಇಲಾಖೆ ಅಧಿಕಾರಿಗಳ ಜತೆಗೆ ಶುಕ್ರವಾರ ಸಭೆ ನಡೆಸಿದ ಅವರು ಇ.ಡಿ ಪ್ರಕರಣದ ಬಗ್ಗೆ ಮಾಹಿತಿ ಪಡೆದುಕೊಂಡು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು ಎಂದು ಗೊತ್ತಾಗಿದೆ.

'ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಯು ಖಾಸಗಿ ವ್ಯಕ್ತಿಗಳನ್ನು ನಿಯೋಜಿಸಿ ಲಂಚ ಸಂಗ್ರಹಿಸುತ್ತಿದ್ದಾರೆ. ಆ ಹಣವನ್ನು ವ್ಯವಸ್ಥಿತವಾಗಿ ಹಂಚಿಕೊಂಡು, ಹೂಡಿಕೆ ಮಾಡುತ್ತಿದ್ದಾರೆ. ಆ ಹೂಡಿಕೆಯನ್ನು ತಮ್ಮ ಕುಟುಂಬದವರ ಹೆಸರಿನಲ್ಲಿ ಮಾಡಿದ್ದು, ವರಮಾನಕ್ಕೆ ತೆರಿಗೆ ಕಟ್ಟುತ್ತಿದ್ದಾರೆ. ಈ ಮೂಲಕ ಲಂಚದ ಹಣವನ್ನು ಸಕ್ರಮಗೊಳಿಸಿಕೊಳ್ಳುತ್ತಿದ್ದಾರೆ. ಹೊರಗಿನವರನ್ನು ಸಂಬಳಕ್ಕೆ ಕೆಲಸಕ್ಕೆ ನಿಯೋಜಿಸಿಕೊಂಡು ಈ ಕೂಟ ನಡೆಸುತ್ತಿದ್ದಾರೆ ಎಂಬ ವರದಿಯನ್ನು ಮುಖ್ಯಮಂತ್ರಿ ಅವರು ತಮ್ಮ ಗೋಪ್ಯ ಮೂಲಗಳಿಂದ ತರಿಸಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

> ನೀವು ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿದ್ದರೆ, ನಾನು ಕೈಕಟ್ಟಿಕೊಂಡು ಕೂರುವುದಿಲ್ಲ. ನಿಮ್ಮನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಲಾಗದು ಎಂದುಕೊಂಡಿದ್ದರೆ ಉಪಯೋಗವಿಲ್ಲ. ಹೊಸ ಕಾನೂನು ತಂದು ವರ್ಗಾವಣೆ ಮಾಡುತ್ತೇವೆ
> **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

'ಶುಕ್ರವಾರದ ಸಭೆಯಲ್ಲಿ ಈ ವಿಷಯಗಳನ್ನು ಪ್ರಸ್ತಾಪಿಸಿದ ಅವರು, ಈ ಅಕ್ರಮ ಕೂಟ ನಿಲ್ಲಬೇಕು ಎಂದು ತಾಕೀತು ಮಾಡಿದ್ದಾರೆ. ಜತೆಗೆ ಯಾವೆಲ್ಲಾ ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ ಮದ್ಯ ಮಾರಾಟ ಸನ್ನದು ಹೊಂದಿದ್ದಾರೆ ಎಂಬುದನ್ನು ಪತ್ತೆ ಮಾಡಿ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ' ಎಂದು ಗೊತ್ತಾಗಿದೆ.

ಮುಖ್ಯಾಂಶಗಳು

- ಸನ್ನದು ಮಂಜೂರಾತಿ ನವೀಕರಣ ಕೆಲಸಗಳು ಸುಲಭವಾಗಿ ಆಗಬೇಕು
- 2 ಕಂತಿನಲ್ಲಿ ಶುಲ್ಕ ಕಟ್ಟಲು ಅವಕಾಶ ಕೊಡಿ

ಸಭೆಯಲ್ಲಿ ಶಿವಕುಮಾರ್ ಅವರು, 'ಅಧಿಕಾರಿಗಳು ಘನತೆಯಿಂದ ಕೆಲಸ ಮಾಡಿದರೆ, ಸರ್ಕಾರದ ಘನತೆಯೂ ಹೆಚ್ಚುತ್ತದೆ. ನೀವು ಘನತೆಗೆ ಚ್ಯುತಿ ತರುವ ಕೆಲಸ ಮಾಡಿದರೆ, ಎಲ್ಲರನ್ನೂ ವರ್ಗಾವಣೆ ಮಾಡುತ್ತೇವೆ. ಇಲಾಖೆಯನ್ನು ಮರುರೂಪಿಸುತ್ತೇವೆ. ಅಂತಹ ಕಠಿಣ ಕ್ರಮಕ್ಕೆ ಅವಕಾಶ ಮಾಡಿಕೊಡಬೇಡಿ. ಎಲ್ಲರೂ ಕಡು ಎಚ್ಚರಿಕೆಯಿಂದ ಕೆಲಸ ಮಾಡಿ' ಎಂದು ತಾಕೀತು ಮಾಡಿದ್ದಾರೆ.

'ನಮ್ಮ ಪಕ್ಕದ ರಾಜ್ಯಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ನೋಡಿ ಕಲಿಯಬೇಕು. ನೂತನ ಅಬಕಾರಿ ನೀತಿ ಜಾರಿಗೆ ತಂದ ಮೇಲೆ ನಮ್ಮಲ್ಲಿ ವರಮಾನ ಸಂಗ್ರಹ ಸುಧಾರಿಸಿದೆ. ಅಧಿಕಾರಿ ಮತ್ತು ಸಿಬ್ಬಂದಿಯು ಸರ್ಕಾರಕ್ಕೆ ನಿಷ್ಠರಾಗಿ ಕೆಲಸ ಮಾಡಿದರೆ, ಗುರಿಯನ್ನೂ ಮೀರಿ ವರಮಾನ ಸಂಗ್ರಹಿಸಬಹುದು. ಈ ಬಗ್ಗೆ ಗಮನ ನೀಡಿ' ಎಂದಿದ್ದಾರೆ.

'ಇಲಾಖೆಯೊಂದಿಗಿನ ವ್ಯವಹಾರ ಎಂದರೆ ಜನರು ಮೂಗುಮುರಿಯುವಂತಾಗಬಾರದು. ಸನ್ನದು ಮಂಜೂರಾತಿ ಮತ್ತು ನವೀಕರಣ ಕೆಲಸಗಳು ಸುಲಭವಾಗಿ ಆಗಬೇಕು. 574 ಸನ್ನದುಗಳನ್ನು ಇ–ಹರಾಜು ಹಾಕಲು ನಿರ್ಧರಿಸಿರುವುದು ಸ್ವಾಗತಾರ್ಹ. ಆದರೆ ಸನ್ನದು ಶುಲ್ಕವನ್ನು ಒಂದೇ ಬಾರಿಗೆ ಕಟ್ಟಬೇಕು ಎಂಬ ನಿಯಮ ಬದಲಿಸಿ. ಎರಡು ಕಂತಿನಲ್ಲಿ ಶುಲ್ಕ ಭರಿಸಲು ಅವಕಾಶ ಮಾಡಿಕೊಡಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ವಿದ್ಯುತ್ ಕ್ಷೇತ್ರದ ಖಾಸಗೀಕರಣ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸದೆ ಸರ್ಕಾರದ ಅಧೀನದಲ್ಲೇ ಮುಂದುವರಿಸಬೇಕು ಮತ್ತು ಖಾಸಗಿ ಕಂಪನಿಗಳಿಗೆ ವಿದ್ಯುತ್ ವಿತರಣೆಯ ಪರವಾನಗಿ ನೀಡಬಾರದು ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಅಧ್ಯಕ್ಷ ಕೆ.ಬಲರಾಮ್ ಒತ್ತಾಯಿಸಿದ್ದಾರೆ.

ಶುಕ್ರವಾರ ಇಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ 29ರಂದು ನಗರದ ಅರಮನೆ ಮೈದಾನದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದು, ಈ ಸಂದರ್ಭದಲ್ಲಿ ವಿದ್ಯುತ್ ಕ್ಷೇತ್ರದ ಅಭಿವೃದ್ಧಿ, ನೌಕರರ ಕಲ್ಯಾಣ ಹಾಗೂ ಸಾರ್ವಜನಿಕ ಸೇವೆಯ ಗುಣಮಟ್ಟ ಹೆಚ್ಚಿಸುವ ಕುರಿತು ಅವರೊಂದಿಗೆ ಚರ್ಚಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಇಂಧನ ಸಚಿವ ಕೆಜೆ ಜಾರ್ಜ್, ಎಸ್ಕಾಂಗಳ ಹಿರಿಯ ಅಧಿಕಾರಿಗಳು ಮತ್ತು ನೌಕರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸ್ವಲ್ಪ ಬಸ್ ನಿಲ್ಸಿ, ಪ್ಲೀಸ್...

ಪ್ರವಾಸ ಎಷ್ಟೋ ಬಾರಿ ಹೆಣ್ಣುಮಕ್ಕಳಿಗೆ ಪ್ರಯಾಸವೇ ಆಗಿರುತ್ತದೆ. ಜಲಬಾಧೆ ತೀರಿಸಿಕೊಳ್ಳುವ ಧಾವಂತದಲ್ಲಿ ಪ್ರಯಾಣದ ಖುಷಿ ಕಮರುತ್ತದೆ. ಪ್ರಯಾಣದ ವೇಳೆ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಸ್ವಚ್ಛ ಶೌಚಾಲಯ ವ್ಯವಸ್ಥೆ ಕಲ್ಪಿಸುವ ವಿಷಯದಲ್ಲಿ ಸರ್ಕಾರಗಳು ಇಷ್ಟೊಂದು ಅಸೂಕ್ಷ್ಮವಾದರೆ ಹೇಗೆ?

• ಶುಭಶ್ರೀ ಪ್ರಸಾದ್

ಪ್ರಯಾಣ ಹೊರಡುವ ಮುನ್ನ ಮನೆಯ ಗಂಡಸರು 'ಎಷ್ಟು ಬಟ್ಟೆ ಇಟ್ಟುಕೊಳ್ಳಬೇಕು?', 'ಎಲ್ಲಿ ತಿಂಡಿ ಮಾಡೋಣ?' ಎಂದೆಲ್ಲ ಉತ್ಸಾಹದಿಂದ ಕೇಳುತ್ತಿದ್ದರೆ, ನಾವು ಹೆಣ್ಣುಮಕ್ಕಳು ಮಾತ್ರ ಮನಸ್ಸಿನೊಳಗೆ ಬೇರೆಯದೇ ಲೆಕ್ಕ ಹಾಕುತ್ತಿರುತ್ತೇವೆ. ದಾರಿಯಲ್ಲಿ ವಾಷ್‌ರೂಂ ಸಿಗುತ್ತದೆಯೇ, ಸಿಕ್ಕರೂ ಸ್ವಚ್ಛವಾಗಿ, ಸುರಕ್ಷಿತವಾಗಿ ಇರುತ್ತದೆಯೇ, ಬೇಕೆಂದಾಗ ಬಸ್ ನಿಲ್ಲಿಸುತ್ತಾರೆಯೇ ಎಂಬ ಗುಂಗಿನಲ್ಲೇ ಇರುತ್ತೇವೆ. ಪ್ರವಾಸದ ನಕ್ಷೆಯಲ್ಲಿ ಕಾಣಿಸದ ಪ್ರಶ್ನೆಗಳು ಇವು.

ಹೊಸ ಸ್ಥಳ, ಹೊಸ ಅನುಭವ, ಮನಸ್ಸಿಗೆ ಉಲ್ಲಾಸ ನೀಡುವ ದೃಶ್ಯಗಳು... ಎಲ್ಲವೂ ಪ್ರವಾಸದ ಸೊಬಗು. ಆದರೆ ಹೆಣ್ಣುಮಕ್ಕಳಿಗೆ ಮಾತ್ರ ಈ ಸಂತೋಷದ ನಡುವೆ ಮೌನ ಯಾತನೆಯೊಂದು ಅಡಗಿರುತ್ತದೆ- ಅದೇ ಜಲಬಾಧೆ.

ಮನೆಯಿಂದ ಹೊರಡುವ ಮುನ್ನವೇ ಎಷ್ಟು ನೀರು ಕುಡಿಯಬೇಕು ಎಂಬ ಅವಳ ಲೆಕ್ಕಾಚಾರ ಶುರುವಾಗುತ್ತದೆ. ಜಲಪಾತದ ಮುಂದೆ ನಿಂತ ಎಲ್ಲರೂ ಅದರ ಸೌಂದರ್ಯ ಆಸ್ವಾದಿಸುವುದರಲ್ಲಿ ಮುಳುಗಿರುತ್ತಾರೆ. ನೀರಿನ ಹರಿವಿನ ಸಂಗೀತವನ್ನು ಆಲಿಸುತ್ತಿರುತ್ತಾರೆ. ಆದರೆ ಕೆಲ ಮಹಿಳೆಯರ ಮನಸ್ಸು ಮಾತ್ರ ಬೇರೆಯದೇ ಒಂದು ಪ್ರಶ್ನೆಗೆ ಉತ್ತರ ಹುಡುಕುತ್ತಿರುತ್ತದೆ– 'ಇಲ್ಲಿ ಶೌಚಾಲಯ ಇದೆಯೇ?' ಅನೇಕ ಪ್ರವಾಸಿ ತಾಣಗಳಲ್ಲಿ ಮೂಲಸೌಲಭ್ಯಗಳ ಕೊರತೆ ಇರುವುದು ಅವರ ಯಾತನೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಈ ಕಾರಣದಿಂದ ಕೆಲವೊಮ್ಮೆ ನೀರು ಕುಡಿಯುವುದನ್ನೇ ಕಡಿಮೆ ಮಾಡಿಬಿಡುವ ಅಭ್ಯಾಸ, ಆರೋಗ್ಯಕ್ಕೆ ಹಾನಿಕಾರಕವಾಗಿದ್ದರೂ ಪರಿಸ್ಥಿತಿಯ ಒತ್ತಾಯದಿಂದ ಹುಟ್ಟಿಕೊಳ್ಳುತ್ತದೆ.

ಮೊನ್ನೆ ನನ್ನ ಚಿಕ್ಕಮ್ಮ ಅಮೆರಿಕಕ್ಕೆ ಹೊರಡುವ ಮುನ್ನ ಫೋನ್‌ನಲ್ಲಿ ಪಿಸುಗುಟ್ಟಿದರು– 'ಶುಭಾ, 24 ಗಂಟೆಗಳ ಪ್ರಯಾಣ. ನನಗೆ ಈ ಜಲಬಾಧೆಯ ಭಯವೇ ಹೆಚ್ಚು'. ಅವರ ಧ್ವನಿಯಲ್ಲಿ ವಿದೇಶ ಪ್ರಯಾಣದ ಉತ್ಸಾಹಕ್ಕಿಂತ ಈ ಚಿಕ್ಕ ಆತಂಕವೇ ದೊಡ್ಡದಾಗಿ ಕೇಳಿಸಿತು. ನಾನು ಡೈಪರ್‌ಗಳ ಬಗ್ಗೆ, ವಿಶೇಷ ಪ್ಯಾಂಟಗಳ ಬಗ್ಗೆ ಹೇಳಿದಾಗ ಅವರಲ್ಲಿ ನೆಮ್ಮದಿ ಮೂಡಿತ್ತು.

ನೇಪಾಳ ಪ್ರವಾಸಕ್ಕೆ ಹೋಗಿದ್ದೆವು. ಬೆಟ್ಟಗಳ ನಾಡು, ಮೋಡಗಳ ನಡುವೆ ಸಾಗುವ ಬಸ್ಸು. ಕಿಟಕಿಯ ಹೊರಗೆ ಪ್ರಕೃತಿಯ ಮಹಾಕಾವ್ಯವೇ ತೆರೆದುಕೊಂಡಿತ್ತು. ಆದರೆ ಬಸ್ಸಿನ ಒಳಗೆ ಮತ್ತೊಂದು ಕಥೆ ನಡೆಯುತ್ತಿತ್ತು. ಮಹಿಳೆಯರು ಪರಸ್ಪರ ಸಂಜ್ಞೆ ಮಾಡಿಕೊಳ್ಳುತ್ತಿದ್ದರು. ಆ ಸಂಜ್ಞೆಯ ಹಿಂದೆ ಒಂದೇ ಪ್ರಶ್ನೆ– 'ಇನ್ನೆಷ್ಟು ದೂರ?' ಯಾರೂ ಬಾಯಿಬಿಟ್ಟು ಹೇಳುತ್ತಿರಲಿಲ್ಲ. ಆದರೆ ಎಲ್ಲ ಹೆಂಗಸರ ದೇಹವೂ ಒಂದೇ ಭಾಷೆಯಲ್ಲಿ ಮಾತನಾಡುತ್ತಿತ್ತು. ಕೊನೆಗೆ ನಮ್ಮ ಗುಂಪಿನ ಗೌರಮ್ಮ ಸಿಡಿದುಬಿಟ್ಟರು. 'ಇಲ್ಲಿ ಎಲ್ಲರೂ ವಯಸ್ಸಾದವರು. ಎರಡು ಮೂರು ಗಂಟೆಗೊಮ್ಮೆ ವಾಷ್‌ರೂಂ ಹತ್ತಿರ ನಿಲ್ಲಿಸಬೇಕು ಅನ್ನೋದೂ ಗೊತ್ತಿಲ್ಲವೇ?' ಆ ಕ್ಷಣದಲ್ಲಿ ಅವರು ನನಗೆ ಬರೀ ಗೌರಮ್ಮ ಆಗಿರಲಿಲ್ಲ, ಅನೇಕ ಹೆಣ್ಣುಮಕ್ಕಳ ಮೌನಕ್ಕೆ ಧ್ವನಿ ಕೊಟ್ಟ ಪ್ರತಿನಿಧಿಯಾಗಿದ್ದರು. ಬಸ್ಸು ನಿಂತಿತು. ಆ ದಿನ ನನಗೆ ಅರ್ಥವಾಯಿತು, ಕೆಲವೊಮ್ಮೆ ಸ್ವಾತಂತ್ರ್ಯ ಎನ್ನುವುದು ದೊಡ್ಡ ದೊಡ್ಡ ಭಾಷಣಗಳಲ್ಲಿ ಇರುವುದಿಲ್ಲ; ಸಮಯಕ್ಕೆ ಸರಿಯಾಗಿ ಸಿಗುವ ಒಂದು ವಾಷ್‌ರೂಂನಲ್ಲಿಯೂ ಇರುತ್ತದೆ!

***

ನಾನು ಬ್ಯಾಂಕ್ ಕೆಲಸಕ್ಕೆ ಸೇರಿದ ಆರಂಭದ ವರ್ಷಗಳವು. ಹಳೆಯ ಹೆಂಚಿನ ಮನೆಯೇ ಬ್ಯಾಂಕ್‌ನ ಕಚೇರಿಯಾಗಿತ್ತು. ವಾಷ್‌ರೂಂನಲ್ಲಿ ನಲ್ಲಿ ಇಲ್ಲ. ಪಕ್ಕದ ಬಚ್ಚಲು ಮನೆಯಿಂದ ಬಕೆಟ್‌ನಲ್ಲಿ ನೀರು ತುಂಬಿಕೊಂಡು ಹೋಗಬೇಕು. ನಾನು ಒಬ್ಬಳೇ ಹೆಣ್ಣುಸಿಬ್ಬಂದಿ, ಉಳಿದವರೆಲ್ಲ ಪುರುಷರು. ಅವರ ಕಣ್ಣೆದುರೇ ಬಕೆಟ್ ಹಿಡಿದು ಹೋಗುವ ಆ ಕೆಲವು ಹೆಜ್ಜೆಗಳು ನನಗೆ ಕೆಲವೊಮ್ಮೆ ಮೈಲುಗಳಷ್ಟು ಉದ್ದವಾಗಿ ಕಾಣುತ್ತಿದ್ದವು. ಇಷ್ಟರ ಮೇಲೆ ಅಲ್ಲೇ ನನ್ನ ಬಸುರಿತನ.

> ಸ್ವಚ್ಛ ಮತ್ತು ಸುರಕ್ಷಿತ ಶೌಚಾಲಯದ ಲಭ್ಯತೆ ಬರೀ ಸೌಲಭ್ಯವಲ್ಲ; ಅದು ಗೌರವ ಮತ್ತು ಆರೋಗ್ಯದ ಪ್ರಶ್ನೆಯೂ ಹೌದು.

ಹೊಟ್ಟೆಯೊಳಗೆ ಮಗು ತನ್ನ ಪುಟ್ಟ ಭಾರವನ್ನು ನನ್ನ ದೇಹದ ಮೇಲೆ ಇಡುತ್ತಿತ್ತು. ನಾನು ಹೆಚ್ಚು ನೀರು ಕುಡಿಯಬೇಕಾಗುತ್ತಿತ್ತು. ಆದರೆ ಕುಡಿದ ನೀರನ್ನು ಇಳಿಸಲು ಬೇಕಾದಷ್ಟು ಸ್ವಾತಂತ್ರ್ಯ ಇರಲಿಲ್ಲ. ಒಬ್ಬ ಹಿರಿಯ ಸಹೋದ್ಯೋಗಿ ತಮ್ಮ ಕುರ್ಚಿಯಿಂದ ಎದ್ದು ಹೋದರೆ ಸಾಕು ಎಂದು ಕಾಯುತ್ತಿದ್ದ ದಿನಗಳಿದ್ದವು. ಅವರು ಎದ್ದು ಹೋಗುತ್ತಿದ್ದಂತೆ ನಾನು ಅಥ್ಲೀಟ್ ತರಹ ಹಿಂದೆಯೇ ಓಡುತ್ತಿದ್ದೆ. ಬಾಧೆ ತಾಳಲಾಗದೆ ನನ್ನ ಕಣ್ಣಲ್ಲಿನ ನೀರು ಕೆನ್ನೆಗಳ ಮೇಲೆ ಇಳಿಯುತ್ತಿತ್ತು. ಆದರೆ ಹೊಟ್ಟೆಯ ಕೆಳಗಿನ ನೀರು ಇಳಿಸಲು ಕಷ್ಟವಾಗುತ್ತಿತ್ತು. ನಮ್ಮ ಜೊತೆಗಿನ ಆ ಪುರುಷರು ಅಷ್ಟು ಅಸೂಕ್ಷ್ಮವಾಗಿ ಇದ್ದಾರಲ್ಲಾ ಎಂದು ನೋವೂ ಆಗುತ್ತಿತ್ತು. ಇಂದು ಯೋಚಿಸಿದರೆ ನಗು ಬರುತ್ತದೆ. ಆದರೆ ಆಗ ಅದು ನಗು ಅಲ್ಲ, ಒಂದು ಮೌನ ಯುದ್ಧವಾಗಿತ್ತು. ನನ್ನ ದೇಹ ಮತ್ತು ನನ್ನ ಸಂಕೋಚದ ನಡುವಿನ ಯುದ್ಧ.

ದೇಹದ ಮೇಲೆ ವಯಸ್ಸು ನಿಧಾನವಾಗಿ ತನ್ನ ಸಹಿಯನ್ನು ಹಾಕುತ್ತದೆ. ಒಮ್ಮೆ ಗಂಟೆಗಟ್ಟಲೆ ಮರೆತುಹೋಗುತ್ತಿದ್ದ ಮೂತ್ರಕೋಶ, ಇಂದು ತನ್ನ ಹಕ್ಕನ್ನು ಜೋರಾಗಿ ಕೇಳುತ್ತದೆ. ಹೆರಿಗೆ, ವಯಸ್ಸು, ಕಾಯಿಲೆ... ಎಲ್ಲವೂ ಸೇರಿ ದೇಹವನ್ನು ಬದಲಾಯಿಸುತ್ತವೆ. ಆದರೆ ಅದಕ್ಕಿಂತ ಹೆಚ್ಚು ಬದಲಾಗುವುದು ನಮ್ಮ ಆತ್ಮವಿಶ್ವಾಸ. ಆ ಕಾರಣದಿಂದಲೇ, ನಾನು ಇಂದು ಬಸ್ಸಿನಲ್ಲಿ ಕುಳಿತರೆ ಮೊದಲು ಒಬ್ಬ ಹೆಣ್ಣುಮಗಳನ್ನು ಹುಡುಕುತ್ತೇನೆ. ಇಬ್ಬರಿಗೂ ಸಂಗಾತಿ ಸಿಕ್ಕಂತಾಗುತ್ತದೆ. ಒಬ್ಬಳು ಇನ್ನೊಬ್ಬಳಿಗೆ ಕೇಳುವ ಪ್ರಶ್ನೆ ಒಂದೇ– 'ಮುಂದೆ ಯಾವಾಗ ನಿಲ್ಲಿಸುತ್ತಾರಂತೆ?' ಪ್ರತಿ ನಿಲುಗಡೆಯೂ ನಮಗೆ ಚಿಕ್ಕ ಹಬ್ಬ. ಇದನ್ನು ಕೇಳಿದರೆ ಯುವಜನರಿಗೆ ನಗು ಬರಬಹುದು. ಆದರೆ ಬಾಯಾರಿದಾಗ ತಣ್ಣೀರು ಕುಡಿದರೆ ಆಗುವ ಸಂತೋಷ ಎಷ್ಟು ದೊಡ್ಡದೋ ಜಲಬಾಧೆ ತೀರಿಸಿಕೊಂಡ ನೆಮ್ಮದಿ ಅದಕ್ಕಿಂತ ಕಡಿಮೆಯಲ್ಲ. ಕೆಲವೊಮ್ಮೆ ಅದು ಸ್ವರ್ಗಸುಖವೇ!

ಆಸ್ಟ್ರೇಲಿಯಾಕ್ಕೆ ಮಗನ ಮನೆಗೆ ಹೋಗಿದ್ದಾಗ ಆದ ಅನುಭವವೇ ಬೇರೆ. ಸಿಡ್ನಿಯಿಂದ ಮೆಲ್ಬರ್ನ್‌ಗೆ ಕಾರಿನಲ್ಲಿ 10–12 ಗಂಟೆಗಳ ಪ್ರಯಾಣ. ಅಲ್ಲಲ್ಲಿ ರೆಸ್ಟ್ ಏರಿಯಾ, ಸ್ವಚ್ಛ ಶೌಚಾಲಯ, ಕುಡಿಯುವ ನೀರು, ಕುಳಿತುಕೊಳ್ಳಲು ಜಾಗ. ಪ್ರಯಾಣವೆಂದರೆ ಆಗ ಪ್ರಯಾಸವಾಗಿರಲಿಲ್ಲ.

ಒಂದು ದೇಶದ ನಾಗರಿಕತೆಯನ್ನು ಅದರ ಎತ್ತರದ ಕಟ್ಟಡಗಳಿಂದಷ್ಟೇ ಅಳೆಯುವುದಲ್ಲ; ಅದರ ವಾಷ್‌ರೂಂಗಳ ಸ್ವಚ್ಛತೆಯಿಂದಲೂ ಅಳೆಯಬಹುದು. ಏಕೆಂದರೆ ಅಲ್ಲಿ ಮನುಷ್ಯನ ಘನತೆ ಅಡಗಿದೆ, ವಿಶೇಷವಾಗಿ ಹೆಣ್ಣಿನ ಘನತೆ. ಮಹಿಳೆಯರ ಈ ಮೌನ ನೋವು ವರ್ಷಗಳಿಂದ ಹರಿಯುತ್ತಲೇ ಬಂದಿದೆ. ಆದರೆ ಅದನ್ನು ಕೇಳುವ ಕಿವಿಗಳು ಮತ್ತು ಪರಿಹರಿಸುವ ಮನಸ್ಸುಗಳು ಹೆಚ್ಚಾದಾಗ ಮಾತ್ರ ಈ ಯಾತನೆಗೆ ಅಂತ್ಯ ಸಿಗುತ್ತದೆ. ಆಗ ಪ್ರವಾಸವು ನಿಜವಾಗಿಯೂ ಎಲ್ಲರಿಗೂ ಸಮಾನ ಸಂತೋಷದ ಅನುಭವವಾಗುತ್ತದೆ.



ವಾಷ್‌ರೂಂನಿಂದ ವಾಷ್‌ರೂಂವರೆಗೆ!

ಸಮಾಜವು ಮಹಿಳೆಯರ ಶಿಕ್ಷಣ, ಉದ್ಯೋಗ ಮತ್ತು ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಈ ಕಾಲದಲ್ಲಿ, ಅವರ ಮೂಲಭೂತ ಅಗತ್ಯವಾದ ಶೌಚಾಲಯಗಳ ಕಡೆಗೂ ಅಷ್ಟೇ ಗಮನಹರಿಸಬೇಕಾಗಿದೆ. ಪುರುಷರಿಗೆ ರಸ್ತೆಬದಿಯಲ್ಲೇ ಇಂತಹ ಸ್ವಾತಂತ್ರ್ಯ ಸಿಕ್ಕರೆ, ನಮಗೆ ಮಾತ್ರ ಗೋಡೆಗಳು ಬೇಕು, ಬಾಗಿಲು ಬೇಕು, ಚಿಲಕ ಬೇಕು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಗೌರವ ಬೇಕು. ಆದ್ದರಿಂದಲೇ ನಮ್ಮ ಪ್ರಯಾಣಗಳು ಕೆಲವೊಮ್ಮೆ ಮೈಲಿಗಳ ಅಳತೆಯಲ್ಲಿ ನಡೆಯುವುದಿಲ್ಲ; ವಾಷ್‌ರೂಂನಿಂದ ವಾಷ್‌ರೂಂವರೆಗೆ ನಡೆಯುತ್ತವೆ!

ಸಾತೊಡ್ಡಿಯ ಗಟ್ಟಿಗಿತ್ತಿ



ತುಂಗಮ್ಮ ಪಟಗಾರ

• ಗೌರಮ್ಮ ಕಟ್ಟಿಮನಿ

ವೀಕೆಂಡ್ ಶಾಪಿಂಗ್ ಕರ್ಕೊಂಡ್ ಹೋಗಿಲ್ಲ, ಆಗಾಗ್ಗೆ ಟ್ರಿಪ್ ಮಾಡಿಸಲ್ಲ ಎಂದೆಲ್ಲ ಗಂಡನಿಗೆ ದೂರುಗಳ ಪಟ್ಟಿ ನೀಡುವ ಹೆಂಡತಿಯರ ನಡುವೆ, ಪತಿಗೆ ಇಷ್ಟವಾದ ಊರು ಎನ್ನುವ ಒಂದೇ ಕಾರಣಕ್ಕೆ ಸುಮಾರು 20ಕ್ಕೂ ಹೆಚ್ಚು ವರ್ಷಗಳಿಂದ, ಕನಿಷ್ಠ ಮೂಲಸೌಲಭ್ಯವೂ ಇಲ್ಲದ ಪ್ರದೇಶದಲ್ಲಿ ಕೆಲಸ ಮಾಡುತ್ತ ಜೀವನ ಸಾಗಿಸುತ್ತಿರುವ ಗಟ್ಟಿಗಿತ್ತಿ ತುಂಗಮ್ಮ ಪಟಗಾರ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕು ವ್ಯಾಪ್ತಿಯ ಸಾತೊಡ್ಡಿ ಜಲಪಾತ ವೀಕ್ಷಣೆಗೆ ಬರುವ ಪ್ರವಾಸಿಗರ ವಾಹನ ನಿಲುಗಡೆ ಶುಲ್ಕ ವಸೂಲಿ ಹಾಗೂ ಇಲ್ಲಿನ ಸ್ವಚ್ಛತಾ ಕೆಲಸ ನಿರ್ವಹಿಸುವ ತುಂಗಮ್ಮ ಅವರದ್ದು ಬಿಡುವಿಲ್ಲದ ಕೆಲಸ. ಇಲ್ಲಿ ವಿದ್ಯುತ್ ಸೌಲಭ್ಯವಿಲ್ಲ, ಮೊಬೈಲ್ ನೆಟ್‌ವರ್ಕ್ ಸಿಗದು, ಯಲ್ಲಾಪುರದಿಂದ ಸಾತೊಡ್ಡಿ ಫಾಲ್ಸ್‌ವರೆಗೆ ಬಸ್ ಸೌಲಭ್ಯವೂ ಇಲ್ಲ. ಆದರೂ ಪ್ರಕೃತಿಯ ಮಧ್ಯೆ ಕೆಲಸ ಮಾಡುವ ತುಂಗಮ್ಮ ಅವರ ಮುಖದಲ್ಲಿ ಮಂದಹಾಸ ಮಾತ್ರ ಮರೆಯಾಗುವುದಿಲ್ಲ.

ಮೊದಲು ಇದೇ ಕೆಲಸವನ್ನು ಅವರ ಪತಿ ಯಶವಂತ್ ಪಟಗಾರ ಮಾಡುತ್ತಿದ್ದರು. ದೇಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುವಾಗ ಆಕಸ್ಮಿಕವಾಗಿ ಬಿದ್ದು ಅವರು ಗಾಯಗೊಂಡರು. ಆದರೆ ಸಾತೊಡ್ಡಿ ಬಿಟ್ಟು ಹೋಗಲು ಮಾತ್ರ ಅವರು ಮನಸ್ಸು ಮಾಡಲಿಲ್ಲ. ಆದ್ದರಿಂದ ಪಂಚಾಯಿತಿಯವರು ಅದೇ ಕೆಲಸವನ್ನು ತುಂಗಮ್ಮ ಅವರಿಗೆ ನೀಡಿದರು. ಯಶವಂತ್ ಇಲ್ಲಿಯೇ ಚಿಕ್ಕ ಅಂಗಡಿ ಹಾಕಿಕೊಂಡಿದ್ದಾರೆ.

'ನನ್ನ ಗಂಡನಿಗೆ ಸಾತೊಡ್ಡಿ ಬಲು ಇಷ್ಟವಾದ ಜಾಗ. ಇಲ್ಲಿಯೇ ಅವರ ಮನೆ, ಅಡಿಕೆ ತೋಟವಿತ್ತು. ಆದರೆ ಕೊಡಸಳ್ಳಿ ಅಣೆಕಟ್ಟು ಕಟ್ಟುವಾಗ ಅದು 'ಮುಳುಗಡೆ ಪ್ರದೇಶ'ಕ್ಕೆ ಸೇರಿತು. ಆಗ ಇಲ್ಲಿನ ಜನರೆಲ್ಲ ರಾಮನಗುಳಿಗೆ ವಲಸೆ ಹೋದರು. ನನ್ನ ಗಂಡ ಮಾತ್ರ ಸಾತೊಡ್ಡಿ ಜಲಪಾತ ನಿರ್ವಹಿಸುತ್ತ ಇಲ್ಲಿಯೇ ಉಳಿದರು' ಎನ್ನುತ್ತಾರೆ ತುಂಗಮ್ಮ.

ಮಗಳು ವೇದಾ ಎರಡು ವರ್ಷದವಳಿರುವಾಗಲೇ ಯಲ್ಲಾಪುರದ ಅಜ್ಜಿಯ ಮನೆಯಲ್ಲಿ ನೆಲೆ ಕಂಡು, ಅಲ್ಲಿಯೇ ಶಿಕ್ಷಣ ಮುಂದುವರಿಸುತ್ತಿದ್ದಾಳೆ. ಸಮಯದ ಮಿತಿಯಿಲ್ಲದೆ ಪ್ರವಾಸಿಗರು ಬರುತ್ತಲೇ ಇದ್ದಿದ್ದರಿಂದ ದಂಪತಿಗೆ ಇದೇ ವಾಸಸ್ಥಳವಾಯಿತು. ಇಬ್ಬರಿಗೂ ವಾಹನ ಚಲಾಯಿಸಲು ಬರದು, ಅವರಿರುವ ಜಾಗಕ್ಕೆ ಬಸ್ ಬರದು. ಹಾಗಾಗಿ, ಈ ದಂಪತಿಗೆ ಬಂಧು–ಬಾಂಧವರ ಭೇಟಿಯೇ ಅಪರೂಪವಾಯಿತು.

ವಾರದ ರಜೆಯೂ ಇಲ್ಲದೆ ದುಡಿಯುವ ತುಂಗಮ್ಮ, ಮೂಲಸೌಲಭ್ಯಗಳಿಲ್ಲ ಎನ್ನುವ ಕಾರಣಕ್ಕೆ ಕಿರಿಕ್ ಮಾಡುವ ಪ್ರವಾಸಿಗರನ್ನು ಸಹಿಸಿಕೊಳ್ಳುತ್ತಾರೆ. ಮಳೆಯಿಂದಾಗಿ ಮರಗಳು ಉರುಳಿ ರಸ್ತೆ ಬಂದ್ ಆದಾಗ, ವಾಹನ ಕೆಟ್ಟು ಕಷ್ಟಕ್ಕೆ ಸಿಲುಕಿದಾಗ ಪ್ರವಾಸಿಗರ ಹಸಿವು ನೀಗಿಸಿ ಮಾನವೀಯತೆ ಮೆರೆದಿದ್ದಾರೆ. ಸುತ್ತಮುತ್ತಲಿನ ಪ್ರವಾಸಿ ತಾಣಗಳಿಗೆ ಹೋಗುವ ದಾರಿ ತಿಳಿಸುವ ಮಾರ್ಗದರ್ಶಕಿಯೂ ಆಗಿದ್ದಾರೆ. ಕಗ್ಗತ್ತಲು, ಕಾಡುವ ಮಳೆಯ ನಡುವೆ ಕಾಡುಪ್ರಾಣಿಗಳ ಭಯವೂ ಇರುವುದರಿಂದ, 'ಇಂತಲ್ಲಿ ಇದ್ದೇನು ಮಾಡ್ತೀಯ, ಸಿಟಿಗೆ ಬಾ, ಸೌಲಭ್ಯ, ಕೈತುಂಬಾ ಸಂಬಳ ಎಲ್ಲ ಸಿಗುತ್ತದೆ' ಎಂದು ಅನೇಕರು ಪುಸಲಾಯಿಸಿದ್ದುಂಟು.

ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಜಾಸ್ತಿಯಾಗಿದ್ದು, ಸಿನಿಮಾ ಶೂಟಿಂಗ್, ಪ್ರಿ ವೆಡಿಂಗ್ ಶೂಟ್ ಸಹ ಹೆಚ್ಚಾಗಿದೆ. ಹಾಗಾಗಿ, ಕೆಲಸ ಹಂಚಿಕೊಳ್ಳಲು ಇನ್ನೊಬ್ಬರನ್ನು ಪಂಚಾಯಿತಿಯಿಂದ ನೇಮಕ ಮಾಡಿದರೆ ಅನುಕೂಲ ಆಗುತ್ತದೆ. ಜೊತೆಗೆ ತಮಗೆ ಚಿಕ್ಕದೊಂದು ಸೂರು, ವಿದ್ಯುತ್ ಸೌಲಭ್ಯ ನೀಡಬೇಕು. ಪ್ರವಾಸಿಗರಿಗೆ ಕೂತು ಊಟ ಮಾಡುವ ವ್ಯವಸ್ಥೆಯನ್ನು ಪಂಚಾಯಿತಿ ಮಾಡಬೇಕು ಎನ್ನುವುದು ತುಂಗಮ್ಮ ಅವರ ಬೇಡಿಕೆ.

ಋಣಭಾರ ಇಳಿಸಿಕೊಳ್ಳಿ



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• ನನ್ನ ಅಪ್ಪ– ಅಮ್ಮನಿಗೆ ನಾವು ಮೂವರೂ ಹೆಣ್ಣುಮಕ್ಕಳೇ ಎನ್ನುವ ಕಾರಣಕ್ಕೆ, ಕುಟುಂಬದವರು, ಸಂಬಂಧಿಕರು ನಮಗೆ ತಾರತಮ್ಯ ಮಾಡುತ್ತಿದ್ದರು. ಅದರ ಜತೆಗೆ ಬಡತನವೂ ಇತ್ತು. ಹಾಗಾಗಿ, ಅವರಿವರ ಮನೆಯಲ್ಲಿ ಇದ್ದುಕೊಂಡು, ಓದಿ ಬದುಕು ಕಟ್ಟಿಕೊಳ್ಳಬೇಕಾಯಿತು. ಈಗ ಒಂದೊಳ್ಳೆ ಕೆಲಸದಲ್ಲಿದ್ದರೂ ಈಗಲೂ ಅವರ ಅನ್ನದ ಋಣದ ಹೊರೆಯು ಟೀಕೆಗಳ ರೂಪದಲ್ಲಿ ಕೇಳಿ ಬರುತ್ತಲೇ ಇರುತ್ತದೆ. ನಾವು ಮೂವರು ಏನೇ ಮಾಡಿದರೂ ಪೂರ್ವಗ್ರಹದಿಂದ ನೋಡುವ ಅವರನ್ನು ಸಹಿಸಿಕೊಳ್ಳಬೇಕೋ ದಂಗೆ ಏಳಬೇಕೋ ಗೊತ್ತಾಗುವುದಿಲ್ಲ. ಈ ಒತ್ತಡದಿಂದ ಹೊರಬರುವುದು ಹೇಗೆ?

–ರಮಾ, ಚಿಕ್ಕಮಗಳೂರು

ಜೀವನದಲ್ಲಿ ಬಡತನ ಅನ್ನುವುದು ನಮ್ಮನ್ನು ಅನೇಕ ರೀತಿಯಲ್ಲಿ ಕಾಡುತ್ತದೆ. ನಿಮ್ಮ ಹಾಗೆ ಪರಿಶ್ರಮ ಪಟ್ಟು ಬಡತನದ ಬೇಗೆಯಿಂದ ಹೊರಬಂದ ಮೇಲೂ ನಮ್ಮನ್ನು ಬಡತನದ ನೋವು ಅಷ್ಟು ಸುಲಭವಾಗಿ ಬಿಟ್ಟು ಹೋಗುವುದಿಲ್ಲ ಅಥವಾ ಇತರರು ನಿಮ್ಮಿಂದ ಅದು ಬಿಟ್ಟು ಹೋಗುವುದಕ್ಕೆ ಬಿಡುವುದಿಲ್ಲ.

ಮೊದಲನೆಯದಾಗಿ, ಕಷ್ಟಕಾಲದಲ್ಲಿ ನೆರವಾಗುವವರಿಗಿಂತ ನಮ್ಮನ್ನು ಇನ್ನಷ್ಟು ತಳ್ಳಲು ಪ್ರಯತ್ನಿಸುವವರೇ ಜಾಸ್ತಿ. ಅಂತಹದರಲ್ಲಿ ನಿಮಗೆ ಆ ಕಾಲದಲ್ಲಿ ನೆರವಾದವರಲ್ಲಿ ಒಂದಷ್ಟು ಒಳ್ಳೆಯತನ ಇದೆ ಎಂದಾಯಿತು. ಆದರೆ, ಈಗ ನೀವು ಏನಾಗಿದ್ದೀರೋ ಅದಕ್ಕೆ ತಾವೇ ಕಾರಣ ಎಂಬ ಭಾವನೆ ಅವರಲ್ಲಿ ಇರಬಹುದು. ಆದರೆ ಇಲ್ಲಿ ಗಮನಿಸಬೇಕಾದದ್ದು, ಯಾರು ಎಷ್ಟೇ ಆಧಾರ ಕೊಟ್ಟರೂ ನೀವು ಪ್ರಯತ್ನಪಡದೇ ಈ ಸ್ಥಾನಕ್ಕೆ ತಲುಪಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು. ಎಷ್ಟೋ ಮಂದಿಗೆ ಆಧಾರ ಸಿಕ್ಕಿದರೂ ಏನೂ ಮಾಡಲಾಗದೆ, ಲೋಕವನ್ನು ಬೈದುಕೊಂಡು, ತಮ್ಮ ಹಣೆಬರಹವನ್ನು ದೂಷಿಸಿಕೊಂಡು ಕುಳಿತಿರುತ್ತಾರೆ. ಆದರೆ ನೀವು ಮೂವರೂ ಹಾಗೆ ಮಾಡಲಿಲ್ಲ. ಆದ್ದರಿಂದ ನಿಮ್ಮ ಯಶಸ್ಸಿನಲ್ಲಿ, ನಿಮಗೆ ಸಿಕ್ಕ ಆಶ್ರಯ ಮತ್ತು ನಿಮ್ಮ ಪರಿಶ್ರಮ ಎರಡೂ ಅಡಗಿವೆ.

ಇದಕ್ಕೆ ನೀವೇನು ಮಾಡಬಹುದು? ನಿಮಗೆ ಸಹಾಯ ಮಾಡಿದವರಿಗೆ ಧನ್ಯವಾದ ಹೇಳುತ್ತಾ, ಅವರು ಕೊಂಕು ಮಾತನಾಡಿದಾಗ, ನಿಮ್ಮ ಪರಿಶ್ರಮದ ಕುರಿತು ಅವರಿಗೆ ಮನವರಿಕೆ ಮಾಡಿಕೊಡಿ. ನೀವು ಆ ಪರಿಸ್ಥಿತಿಯಲ್ಲಿ ಯಾವೆಲ್ಲಾ ರೀತಿಯ ನೋವನ್ನು ಅನುಭವಿಸಿದ್ದಿರಿ ಮತ್ತು ಅದನ್ನು ಹೇಗೆ ಮೆಟ್ಟಿ ನಿಂತಿರಿ ಎಂಬುದನ್ನು ವಿವರಿಸಿ. ನೀವು ಕೀಳರಿಮೆಯನ್ನು ಇಟ್ಟುಕೊಳ್ಳಬೇಕಾಗಿಲ್ಲ. ಯಾಕೆಂದರೆ, ಈಗ ಒಳ್ಳೆಯ ಸ್ಥಾನದಲ್ಲಿರುವ ವ್ಯಕ್ತಿಗೆ ಹಿಂದೆ ಯಾರೋ ಸಹಾಯ ಮಾಡಿರುತ್ತಾರೆ. ಈ ಸಮಾಜದಲ್ಲಿ ಯಾರೂ ಯಾರ ಸಹಾಯವೂ ಇಲ್ಲದೆ ಮೇಲೆ ಬರಲು ಸಾಧ್ಯವೇ ಇಲ್ಲ. ಹಾಗಾಗಿ, ನಿಮ್ಮನ್ನು ಕೀಳಾಗಿ ನೋಡುವ ಅಗತ್ಯವಿಲ್ಲ. ಇದು ಎರಡನೆಯ ಅಂಶ.

ಮೂರನೆಯದಾಗಿ, ಇಂತಹ ಸಂದರ್ಭದಲ್ಲಿ ದಂಗೆ ಏಳುವುದರಿಂದ ಜಗಳ, ಮನಸ್ತಾಪ ಅಥವಾ ನೀವು ಕೃತಘ್ನರು ಅನ್ನುವ ಆರೋಪಗಳು ಬರಬಹುದೇ ವಿನಾ ಪರಿಹಾರ ಸಿಗುವುದಿಲ್ಲ. ಅದರ ಬದಲಾಗಿ ನಾವು ಒಂದು ಹೊಸ ಸಂಸ್ಕೃತಿಯನ್ನು ಸೃಷ್ಟಿಸಬಹುದು. ಅದೇನೆಂದರೆ, ನೀವು ಅವರಿಂದ ಸಹಾಯ ಪಡೆದಂತೆಯೇ, ನಿಮ್ಮ ಹಾಗೆ ಕಷ್ಟದಲ್ಲಿರುವ, ಶಿಕ್ಷಣದಿಂದ ವಂಚಿತರಾಗುತ್ತಿರುವ ಇನ್ನೂ ಅನೇಕ ಮಕ್ಕಳು ನಮ್ಮ ಸಮಾಜದಲ್ಲಿ ಇದ್ದಾರೆ. ಅಂತಹ ಮಕ್ಕಳನ್ನು ಹುಡುಕಿ ಅವರಿಗೆ ನಿಮ್ಮಿಂದಾದ ಸಹಾಯ ಮಾಡಿ. ನಿಮ್ಮ ಔನ್ನತ್ಯಕ್ಕೆ ಬೇರೆಯವರು ಹೇಗೆ ಕಾರಣರಾದರೋ ಅದೇ ರೀತಿ ನೀವು ಇನ್ನೊಂದಷ್ಟು ಜನರಿಗೆ ಆಧಾರವಾಗಿ. ಮಾತೃ ಋಣ, ಅನ್ನದ ಋಣ... ಹೀಗೆ ನಮ್ಮ ಜೀವನದಲ್ಲಿ ಅನೇಕ ಋಣಗಳನ್ನು ತೀರಿಸುವುದಕ್ಕೆ ಸಾಧ್ಯವಿಲ್ಲ. ಬದಲಾಗಿ, ನಮ್ಮಿಂದಾದ ಸಹಾಯವನ್ನು ಮಾಡುವ ಮೂಲಕ ಅದರ ಭಾರವನ್ನು ಕಡಿಮೆ ಮಾಡಿಕೊಳ್ಳಬಹುದಷ್ಟೆ.

ಸ್ವಾದಿಷ್ಟ ರುಚಿಗೆ 'ಎಕ್ಸ್‌ಟ್ರಾ ಫ್ಲೇವರ್'

• ಸುಮಾ ಬಿ.

'ಕಬಾಬ್ ಮಸಾಲೆಗೆ ಅಕ್ಕಿಹಿಟ್ಟು ಬಳಸಿರೋದ್ರಿಂದ ಡಬಲ್ ಫ್ರೈ ಮಾಡುವ ಅಗತ್ಯವಿಲ್ಲ. ಕಾರ್ನ್‌ಫ್ಲೋರ್ ಮಸಾಲೆಯನ್ನು ಹಿಡಿದಿಡಲು ಸಹಕರಿಸುತ್ತದೆ...'

ಹೀಗೆ ಅಡುಗೆಗೆ ಬಳಸಿರುವ ಎಲ್ಲ ಪದಾರ್ಥಗಳ 'ಪಾತ್ರ ಪರಿಚಯ' ಮಾಡುತ್ತ, ಎಂತಹ ಕಷ್ಟದ ಅಡುಗೆಯನ್ನೂ ವೀಕ್ಷಕರು ಮಾಡಿ ನೋಡುವಂತೆ ಪ್ರೇರೇಪಿಸುತ್ತಾರೆ 'ಎಕ್ಸ್‌ಟ್ರಾ ಫ್ಲೇವರ್ಸ್' ಅಡುಗೆ ಯೂಟ್ಯೂಬ್ ಚಾನೆಲ್‌ನ ರೋಶನ್.

ಅಡುಗೆಯ ಸ್ವಾದದ ಆಳ– ಅಗಲ ಅರಿತಿರುವ ರೋಶನ್, ಅರಳು ಹುರಿದಂತೆ ಮಾತನಾಡುತ್ತಾ ರುಚಿಕಟ್ಟಾದ ಅಡುಗೆ ತಯಾರಿಯ ಪಾಠ ಹೇಳುತ್ತಾರೆ. ಅವರ ಮಾಂಸಾಹಾರದ ರೆಸಿಪಿಗಳನ್ನು ನೋಡಿದವರಂತೂ 'ನಾನ್‌ವೆಜ್ ಅಡುಗೆ ತಯಾರಿ ಇಷ್ಟು ಸುಲಭವಾ' ಎಂದು ಹುಬ್ಬೇರಿಸದೇ ಇರಲಾರರು. ಬಹುತೇಕ ರೆಸಿಪಿಗಳಲ್ಲಿ ವಿಶಿಷ್ಟ ಪದಾರ್ಥವೊಂದನ್ನು ಸೇರಿಸಿ 'ಎಕ್ಸ್‌ಟ್ರಾ ಫ್ಲೇವರ್' ಬರುವಂತೆ ಮಾಡುವುದು ರೋಶನ್ ಅವರ ವಿಶೇಷ.

ಪುಳಿಯೋಗರೆ, ರಸಂ, ವಾಂಗೀಬಾತ್, ಮಸಾಲೆ, ಸಾಂಬಾರ್, ಬಿಸಿಬೇಳೆಬಾತ್, ಕಬಾಬ್... ಹೀಗೆ ಬಗೆಬಗೆಯ ಖಾದ್ಯಗಳ ಪುಡಿಗಳನ್ನು ತಯಾರಿಸುವುದರಲ್ಲಿ ರೋಶನ್ ಹೆಸರುವಾಸಿ. ಮೂರು ವರ್ಷಗಳ ಹಿಂದೆ ಇವರು ತೋರಿಸಿದ ಪುಳಿಯೋಗರೆ ಪುಡಿಯ ವಿಡಿಯೊ 35 ಲಕ್ಷ ವ್ಯೂಸ್ ಪಡೆದಿದೆ. ಅಲ್ಲದೆ ರೋಶನ್ ಅವರು ಮಾರಾಟಕ್ಕೆಂದು ಸಿದ್ಧಪಡಿಸುವ ಪುಳಿಯೋಗರೆ ಪುಡಿಗೆ ವಿದೇಶದಲ್ಲೂ ಅಭಿಮಾನಿಗಳಿದ್ದಾರೆ. ಈ ಪುಡಿಯ ಜನಪ್ರಿಯತೆಯ ಹಿಂದೆ ಹಲವು ಪ್ರಯೋಗಗಳು ನಡೆದಿವೆ.

'ಸ್ವಾದಿಷ್ಟ ಪುಳಿಯೋಗರೆ ಪುಡಿಗಾಗಿ ನಾಲ್ಕೈದು ಬಾರಿ ಪ್ರಯೋಗ ಮಾಡಿ, ಐದನೇ ಬಾರಿ ಯಶಸ್ವಿಯಾದೆ. ಯಾವುದೇ ಹೊಸ ರೆಸಿಪಿ ಮೊದಲು ನನಗೆ ಇಷ್ಟ ಆಗಬೇಕು. ಆಗ ಪಾಕಪ್ರಿಯರಿಗೂ ಇಷ್ಟವಾಗುತ್ತದೆ' ಎನ್ನುತ್ತಾರೆ ಅವರು.

ಬಾಲ್ಯದಲ್ಲೇ ತಂದೆ– ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆಶ್ರಯದಲ್ಲಿ ಬೆಳೆದ ರೋಶನ್ ಅವರಿಗೆ ಅಜ್ಜಿ ತಯಾರಿಸುತ್ತಿದ್ದ ಅಡುಗೆಯ ಬಗ್ಗೆ ಎಲ್ಲಿಲ್ಲದ ಆಸಕ್ತಿ. ಹೈಸ್ಕೂಲ್‌ನಲ್ಲಿದ್ದಾಗ ಸ್ವತಃ ಅಡುಗೆ ತಯಾರಿಸಿ ಅಜ್ಜಿಯಿಂದ 'ಭೇಷ್' ಎನಿಸಿಕೊಂಡಿದ್ದಲ್ಲದೆ ಅವರಿಂದ ಬಹುತೇಕ ಖಾದ್ಯಗಳನ್ನು ಕಲಿತು ಕರಗತ ಮಾಡಿಕೊಂಡಿದ್ದಾರೆ.

ಚಿಕ್ಕಮಗಳೂರಿನವರಾದ ರೋಶನ್ ಈಗ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಮಾತೃಭಾಷೆ ಕೊಂಕಣಿಯಲ್ಲೂ ಅವರು ಚಾನೆಲ್ ನಡೆಸುತ್ತಾರೆ. ವಿವಿಧ ಖಾದ್ಯಗಳ ಪುಡಿ ತಯಾರಿಯ ಯೂನಿಟ್ ತೆರೆದಿರುವ ರೋಶನ್, ತಮ್ಮ ಬಿಡುವಿಲ್ಲದ ಕೆಲಸದ ನಡುವೆಯೂ ಆಗಾಗ ಬಿಡುವು ಮಾಡಿಕೊಂಡು ಚಾನೆಲ್‌ನಲ್ಲಿ ಖಾದ್ಯ ತಯಾರಿ ಮೂಲಕ ವೀಕ್ಷಕರ ಉದರ ತಣಿಸುತ್ತಿದ್ದಾರೆ.



ರೋಶನ್

ಎಣ್ಣೆಯಿಲ್ಲದ ಚಿಕನ್ ಕಬಾಬ್!



ಕಬಾಬ್ ಎಂದರೆ ಎಣ್ಣೆಯಲ್ಲಿ ಮುಳುಗೆದ್ದ ತುಂಡುಗಳು ಮನದಲ್ಲಿ ಸುಳಿದು ಬಾಯಲ್ಲಿ ನೀರೂರಿಸುತ್ತವೆ. ಆದರೆ ಆರೋಗ್ಯದ ದೃಷ್ಟಿಯಿಂದ ಹೆಚ್ಚು ಎಣ್ಣೆ ಬಳಸಲು ಇಷ್ಟಪಡದ ಕಬಾಬ್‌ಪ್ರಿಯರು ಎಣ್ಣೆಯಲ್ಲಿ ಕರಿಯದ ಹೀಗೊಂದು ಆರೋಗ್ಯಕರ ಕಬಾಬ್ ಮಾಡಿ ತಿನ್ನಬಹುದು ಎನ್ನುತ್ತಾರೆ ರೋಶನ್.

ಹೀಗೆ ಮಾಡಿ: 500 ಗ್ರಾಂ ಸ್ಕಿನ್‌ಔಟ್ ಚಿಕನ್ ಅನ್ನು ಚೆನ್ನಾಗಿ ತೊಳೆದು, ಮ್ಯಾರಿನೇಟ್ ಮಾಡಲು ಒಂದು ನಿಂಬೆಹಣ್ಣಿನ ರಸ ಹಿಂಡಿ, ಅರ್ಧ ಟೀ ಚಮಚ ಅರಸಿನ ಪುಡಿ, ಅರ್ಧ ಟೀ ಚಮಚ ಉಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು. ಇದನ್ನು 20ರಿಂದ 30 ನಿಮಿಷ ಹಾಗೇ ಬಿಡಬೇಕು.

ಇನ್ನೊಂದು ಬಟ್ಟಲಲ್ಲಿ ಒಂದೂವರೆ ಟೀ ಚಮಚ ಬ್ಯಾಡಗಿ ಮೆಣಸಿನಕಾಯಿಪುಡಿ, ಒಂದು ಚಮಚ ದನಿಯಾ ಪುಡಿ, ಅರ್ಧ ಚಮಚ ಜೀರಿಗೆ ಪುಡಿ, ಅರ್ಧ ಚಮಚ ಗರಂ ಮಸಾಲ, ಕಾಲು ಚಮಚ ಅರಸಿನ, ರುಚಿಗೆ ತಕ್ಕಷ್ಟು ಉಪ್ಪು, ಒಂದು ಚಮಚ ಶುಂಠಿ– ಬೆಳ್ಳುಳ್ಳಿ ಪೇಸ್ಟ್, ಮೂರು ಚಮಚ ಮೊಸರು ಹಾಕಬೇಕು. ಇನ್ನೊಂದು ಸಣ್ಣ ಪಾತ್ರೆಯಲ್ಲಿ ಎರಡು ಚಮಚ ಸಾಸಿವೆ ಎಣ್ಣೆ ಬಿಸಿ ಮಾಡಿಕೊಂಡು, ಎರಡು ಚಮಚ ಮೆಣಸಿನಕಾಯಿ ಪುಡಿ ಹಾಕಿ ಬಿಸಿ ಮಾಡಿಕೊಂಡು ಮಸಾಲೆ ಮಿಶ್ರಣಕ್ಕೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು (ಇದು ಕಬಾಬ್‌ನ ಕಲರ್ ಚೆನ್ನಾಗಿ ಕಾಣುವಂತೆ ಮಾಡುತ್ತದೆ). ಕೊನೆಯಲ್ಲಿ ಸ್ವಲ್ಪ ನಿಂಬೆರಸ ಹಾಗೂ ಅರ್ಧ ಚಮಚದಷ್ಟು ಕಸೂರಿ ಮೇಥಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಬೇಕು. ಮಿಶ್ರಣ ಸ್ವಲ್ಪ ಗಟ್ಟಿಯಾಗೇ ಇರಲಿ. ಬಳಿಕ ಅದಕ್ಕೆ ಚಿಕನ್ ತುಂಡುಗಳನ್ನು ಸೇರಿಸಿ ಮಸಾಲೆ ಮಿಶ್ರಣ ಎಲ್ಲದಕ್ಕೂ ಹತ್ತುವಂತೆ ಮಿಕ್ಸ್ ಮಾಡಿ 2 ಗಂಟೆ ಬಿಡಬೇಕು (ಕನಿಷ್ಠ 20 ನಿಮಿಷವಾದರೂ ಬಿಡಿ). ನಂತರ ಪ್ಯಾನ್ ಬಿಸಿ ಮಾಡಿಕೊಂಡು ಚಿಕನ್ ತುಂಡುಗಳನ್ನು ಹಾಕಿ, ಕಾಲು ಕಪ್ ನೀರು ಹಾಕಿ ಸಣ್ಣ ಉರಿಯಲ್ಲಿ ಬೇಯಿಸಿಕೊಳ್ಳಬೇಕು. ಆಗ ಚಿಕನ್ ನೀರು ಬಿಟ್ಟುಕೊಳ್ಳುತ್ತದೆ. ಬಳಿಕ ಮುಚ್ಚಳ ಮುಚ್ಚಿ 10 ನಿಮಿಷ ದೊಡ್ಡ ಉರಿಯಲ್ಲಿ ಬೇಯಿಸಬೇಕು. ಅದರ ನೀರು ಆವಿಯಾಗುವವರೆಗೆ ಮಧ್ಯಮ ಉರಿಯಲ್ಲಿ ಬೇಯಿಸಿದರೆ ಎಣ್ಣೆಯಿಲ್ಲದ ಕಬಾಬ್ ಸವಿಯಲು ಸಿದ್ಧ.

ವಯಸ್ಸು ವಯಸ್ಸೆಂದೇಕೆ...

ಭಾವಯಾನ

ಎದುರಿದ್ದ ಮಹಿಳೆಯನ್ನು ವೈದ್ಯಕೀಯ ಪರೀಕ್ಷೆಯ ಅಂಗವಾಗಿ, 'ವಯಸ್ಸೆಷ್ಟು?' ಎಂದು ಕೇಳಿದೆ. ಆಕೆ '30ರಿಂದ 35' ಎಂದಾಗ ಅಚ್ಚರಿಯಾಯಿತು. ಪಕ್ಕದಲ್ಲಿದ್ದ ಆಕೆಯ ಮಗನಿಗೇ 30-35 ಆಗಿರುವಂತಿತ್ತು. 'ಬೇರೆ ಬೇರೆ ವಯಸ್ಸಿನಲ್ಲಿ ಬೇರೆ ಬೇರೆ ಕಾಯಿಲೆಗಳು ಬರುತ್ತವೆ. ಹಾಗಾಗಿ, ವಯಸ್ಸನ್ನು ಸರಿಯಾಗಿ ತಿಳಿದುಕೊಳ್ಳುವುದು ಮುಖ್ಯ' ಎನ್ನುವುದನ್ನು ಸ್ಪಷ್ಟಪಡಿಸಿ, ಅವರ ಕಾರ್ಡ್ ತೆಗೆಸಿ ನೋಡಿದರೆ, ಆಕೆಯ ವಯಸ್ಸು 50ರ ಹತ್ತಿರ!

ಆಕೆಯೇನೂ ತನ್ನ ವಯಸ್ಸು ಮುಚ್ಚಿಡಬೇಕೆಂದು ಹಾಗೆ ಹೇಳಿದ್ದಲ್ಲ. ಆಕೆಯ ವಯಸ್ಸಿನ ಗ್ರಹಿಕೆಯೇ ಹಾಗೆ! 'ವಯಸ್ಸು ಎಂದರೆ ಒಂದು ಸಂಖ್ಯೆಯಷ್ಟೇ' ಎಂಬ ನಾಣ್ಣುಡಿಯನ್ನು ಕೇಳಿದರೆ ಮಹಿಳೆಯರಿಗಂತೂ ನಗುವೇ ಬಂದೀತು. ಏಕೆಂದರೆ, ಸೌಂದರ್ಯದ ಮಟ್ಟಿಗೆ ವಯಸ್ಸಾಗುವುದು ಖಂಡಿತ ಸಂಖ್ಯೆಯ ಮಾತಲ್ಲ ಎನ್ನುವ ನಮ್ಮ ಸಮಾಜ, ಕೆಲಸದ ವಿಷಯಕ್ಕೆ ಬಂದಾಗ 'ಎಷ್ಟೇ ವಯಸ್ಸಾದರೂ ಪರವಾಗಿಲ್ಲ, ಇಂತಿಷ್ಟು ಕೆಲಸ ಮಾಡಿಯೇ ತೀರಬೇಕು' ಎನ್ನುತ್ತದೆ.

ತನಗೆ ವಯಸ್ಸಾಗುತ್ತಿದೆ ಎಂದು ಹೆಣ್ಣುಮಕ್ಕಳು ಕೊರಗುವ ಬಗ್ಗೆ ಅದೆಷ್ಟು ನಗೆಹನಿಗಳು ಇವೆಯೋ ಹೇಳಲು ಬರುವಂತಿಲ್ಲ. 25 ತಲುಪಿತೆಂದರೆ ಅಥವಾ ಹದಿನೆಂಟಕ್ಕೇ ಮದುವೆ ಆಯಿತು ಎಂದರೆ ಆಕೆಯನ್ನು 'ಆಂಟಿ' ಎಂದೇ ಕರೆಯುವುದು ಸೂಕ್ತ ಎಂದು ಜಗತ್ತು ಭಾವಿಸಿಬಿಡುತ್ತದೆ. ಮಕ್ಕಳೇನಾದರೂ 'ಮೇಡಂ, ಮ್ಯಾಮ್, ಬ್ರೋ' ಎಂದೆಲ್ಲಾ ಕರೆದರೆ ಹಿರಿಯರು ತಕ್ಷಣವೇ 'ಆಂಟಿ ಅನ್ನು' ಎಂದು ತಿದ್ದುವುದುಂಟು.

ಉನ್ನತ ಹುದ್ದೆಯಲ್ಲಿದ್ದ ಮಹಿಳಾ ಅಧಿಕಾರಿಯೊಬ್ಬರು ಅಧೀನ ಸಿಬ್ಬಂದಿಗೆ ತಮ್ಮ ಮೇಲೆ ಗೌರವ ಬರಬೇಕೆಂದರೆ, ತಾವು ಹೆಚ್ಚು ವಯಸ್ಸಾದಂತೆ ಕಾಣುವ ಉಡುಗೆ– ತೊಡುಗೆ, ಮಾತನಾಡುವ ರೀತಿಯನ್ನು ಅನಿವಾರ್ಯವಾಗಿ ಹೇಗೆ ಬದಲಿಸಿಕೊಳ್ಳಬೇಕಾಯಿತು ಎಂಬುದನ್ನು ಒಮ್ಮೆ ವಿವರಿಸಿದ್ದರು. ಅಂದರೆ, ಒಬ್ಬ ಮಹಿಳೆ ಒಂದಿಷ್ಟು ಸಾಧನೆ ಮಾಡಿದ್ದಾರೆ ಎಂದರೆ, ಬಹು ಬಾರಿ ಸಮಾಜ ಭಾವಿಸುವುದು ಅವರಿಗೆ 'ವಯಸ್ಸಾಗಿದೆ' ಎಂದೇ!

ಎಷ್ಟೋ ಬಾರಿ ಪತಿ 'ಛೆ ಅವರು ತುಂಬಾ ಚಿಕ್ಕವರು' ಎನ್ನುವುದು, ಪತ್ನಿ 'ಏನಿಲ್ಲ, ನನಗಿಂತ ಎರಡೇ ವರ್ಷ ಚಿಕ್ಕವರು. ಅಂದಾಜು ನನ್ನಷ್ಟೇ ವಯಸ್ಸು' ಎನ್ನುವುದು ಸಾಮಾನ್ಯ! ಮಹಿಳೆಯರು ತಾವು ಇನ್ನೂ 'ಚಿಕ್ಕವರು' ಎಂದು ನಿರೂಪಿಸಲು ಮುಂದಾಗುವುದು, ಮತ್ತೊಬ್ಬರ ವಯಸ್ಸನ್ನು ಕಂಡುಹಿಡಿಯಲು ವಿವಿಧ ತಂತ್ರಗಳನ್ನು ಪ್ರಯೋಗಿಸುವುದು ಆಗಾಗ್ಗೆ ಕಂಡುಬರುವಂತಹ ಸಂಗತಿಯೇ.

'ವಯಸ್ಸಾಗುವುದು ದೇಹಕ್ಕೇ ಹೊರತು ಮನಸ್ಸಿಗಲ್ಲ' ಎಂದು ಹೇಳುತ್ತಾರಾದರೂ ವಾಸ್ತವದಲ್ಲಿ, ದೇಹ ಮತ್ತು ಮನಸ್ಸು ಎರಡನ್ನೂ ವಯಸ್ಸು ಪ್ರಭಾವಿಸುತ್ತದೆ. ಇತರರನ್ನು ಕ್ಷಮಿಸುವ, ಸಹಿಸಿಕೊಳ್ಳುವ, ಉದಾರ ಭಾವದ ಮನಃಸ್ಥಿತಿ ನಲವತ್ತರ ಮೇಲೆ ಸುಲಭಸಾಧ್ಯ ಎನಿಸಿದರೆ, ದುಡುಕುವ ನಾಲಗೆ, ಯಾವುದನ್ನಾದರೂ ಎದುರಿಸುವ ಬಿಸಿರಕ್ತದ ಬುದ್ಧಿ ತಗ್ಗುತ್ತಾ ಬರುತ್ತವೆ. ಪರಿಣಾಮದ ಬಗ್ಗೆ ಯೋಚಿಸಿ ಮುಂದುವರಿಯುವ ವಿವೇಚನೆಯು ಹೆಚ್ಚಾಗುತ್ತದೆ. ಪರಿಪೂರ್ಣತೆಗಾಗಿ ದುಡಿಯಬೇಕೆಂಬ ಮನೋಭಾವವು ಹೆಚ್ಚುವ ವಯಸ್ಸಿನೊಂದಿಗೆ ಕಡಿಮೆಯಾಗುತ್ತಾ, ಸ್ವಸಂತೋಷಕ್ಕಾಗಿ ಯಾವುದೇ ಕೆಲಸವನ್ನು ಮಾಡುವ ಪ್ರವೃತ್ತಿ ಏರುತ್ತದೆ ಎನ್ನುವುದೂ ಗಮನಾರ್ಹ.

ಮಹಿಳೆಯರ ವಯಸ್ಸಿನ ಬಗ್ಗೆ ಕುತೂಹಲ ತೋರಿಸುವ, ಕುಹಕವಾಡುವ, ಹೇಗಾದರೂ ಪತ್ತೆ ಮಾಡುವ ಛಲ ತೋರಿಸುವವರು (ಮಹಿಳೆಯರನ್ನೂ ಒಳಗೊಂಡಂತೆ) ಆತ್ಮಪರಿಶೀಲನೆ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಒಬ್ಬ ಮಹಿಳೆ ತನ್ನ ವಯಸ್ಸು ಹೇಳಲು ನಿರಾಕರಿಸಿದರೆ, ಅದರ ಹಿಂದೆ ಅಸುರಕ್ಷಿತ ಭಾವ, ಯಾವುದೋ ಕಾರಣಕ್ಕೆ ವಯಸ್ಸನ್ನು ಮುಚ್ಚಿಡುವ ಅನಿವಾರ್ಯ, ಖಾಸಗಿತನವನ್ನು ಕಾಯ್ದುಕೊಳ್ಳುವ ಹಕ್ಕಿನಂತಹ ಸಂಗತಿಗಳು ಇರಬಹುದು. ವಯಸ್ಸಾಗುವುದು ಪ್ರಕೃತಿ ಸಹಜವಾದ ಬದಲಾವಣೆ. ಅದನ್ನು ಒಪ್ಪಿಕೊಂಡು ಆಯಾ ವಯಸ್ಸಿಗೆ ತಕ್ಕಂತೆ ಜೀವನಶೈಲಿ, ಉತ್ತಮ ಆರೋಗ್ಯ ರೂಢಿಸಿಕೊಳ್ಳುವುದೇ ಆಧುನಿಕ ಮಹಿಳೆಯರಾದ ನಮ್ಮ ಮುಂದಿರುವ ಇಂದಿನ ಸವಾಲು.

ಡಾ. ಕೆ.ಎಸ್.ಪವಿತ್ರ





ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನನ್ನನ್ನು ಬೈದ, ನನ್ನನ್ನು ಹೊಡೆದ, ನನ್ನನ್ನು ಸೋಲಿಸಿದ, ನನ್ನದನ್ನು ಅಪಹರಿಸಿದ ಎನ್ನುವವನ ದ್ವೇಷ ಶಾಂತವಾಗದು.

–ಗೌತಮ ಬುದ್ಧ

ಸಂಪಾದಕೀಯ

ವಿದೇಶಿ ದೇಣಿಗೆ ನಿಯಮ ಜಟಿಲ ಕಾನೂನು ಹೆಸರಲ್ಲಿ ಸರ್ಕಾರಕ್ಕೆ ಬಲ

ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ವಿದೇಶಗಳಿಂದ ಪಡೆಯುವ ದೇಣಿಗೆಗೆ ಸಂಬಂಧಿಸಿದ ನಿಯಮಗಳನ್ನು ಕೇಂದ್ರ ಸರ್ಕಾರ ಮತ್ತಷ್ಟು ಕಠಿಣಗೊಳಿಸುವ ಮೂಲಕ, ಈ ಕಾನೂನಿನ ವ್ಯಾಪ್ತಿಗೆ ಬರುವ ಎನ್‌ಜಿಒಗಳು ಹಾಗೂ ಇತರೆ ಸಂಘಟನೆಗಳ ಚಟುವಟಿಕೆಗಳ ವ್ಯಾಪ್ತಿಯನ್ನು ಕಿರಿದುಗೊಳಿಸಿದೆ. 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ನಿಯಮಗಳು 2026' ಅನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ತಿದ್ದುಪಡಿಯೊಂದಿಗೆ, ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ನಿಯಮಗಳನ್ನು 2011ರಿಂದ ಇಲ್ಲಿಯವರೆಗೆ 10 ಬಾರಿ ತಿದ್ದುಪಡಿ ಮಾಡಿದಂತಾಗಿದೆ. ಒಂದು ಕಾನೂನಿಗೆ ಸಂಬಂಧಿಸಿದ ನಿಯಮಗಳನ್ನು ಹೀಗೆ ಪದೇ ಪದೇ ಬದಲಾಯಿಸುವ ಪ್ರಕ್ರಿಯೆ, ಕಾನೂನನ್ನು ಮೂಲದಲ್ಲಿ ಇರುವುದಕ್ಕಿಂತಲೂ ಸಾಕಷ್ಟು ಭಿನ್ನವಾಗಿ ಮಾಡುವುದು ಸರಿಯೇ ಎನ್ನುವ ಪ್ರಶ್ನೆಗೆ ಕಾರಣವಾಗಿದೆ. ಇತ್ತೀಚೆಗೆ ನಡೆದ ಕೆಲವು ರಾಜ್ಯಗಳಲ್ಲಿನ ವಿಧಾನಸಭಾ ಚುನಾವಣೆಗೂ ಮುನ್ನ 'ಎಫ್‌ಸಿಆರ್‌ಎ' ತಿದ್ದುಪಡಿ ಮಸೂದೆಯನ್ನು ಸರ್ಕಾರ ಸಂಸತ್‌ನಲ್ಲಿ ಮಂಡಿಸಿತ್ತು. ಆ ಮಸೂದೆಗೆ ಎದುರಾದ ಪ್ರತಿರೋಧದಿಂದಾಗಿ, ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯಗಳ ವಿರೋಧದಿಂದಾಗಿ ಅದನ್ನು ಕೈಬಿಡಲಾಯಿತು. ಆ ಮಸೂದೆಯಲ್ಲಿದ್ದ ಅಂಶಗಳನ್ನೇ ಹೊಸ ನಿಯಮಗಳ ಮೂಲಕ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ ಎನ್ನುವ ಟೀಕೆಗಳು ಈಗ ಕೇಳಿಬರುತ್ತಿವೆ. ಈ ನಡೆಯು ಶಾಸನವೊಂದನ್ನು ಜಾರಿಗೊಳಿಸುವ ಪ್ರಕ್ರಿಯೆಗೆ ಅನುಗುಣವಾಗಿದೆಯೇ ಎನ್ನುವ ಪ್ರಶ್ನೆಗೂ ಈಗಿನ ತಿದ್ದುಪಡಿ ಕಾರಣವಾಗಿದೆ.



'ಎಫ್‌ಸಿಆರ್‌ಎ' ನಿಯಮಗಳಿಗೆ ತಿದ್ದುಪಡಿ ಮೂಲಕ ವಿದೇಶಿ ದೇಣಿಗೆ ಪಡೆಯುವುದನ್ನು ಸಂಕೀರ್ಣಗೊಳಿಸಿರುವ ಕ್ರಮ, ಎನ್‌ಜಿಒಗಳ ಚಟುವಟಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪ ನಡೆಸುವ ಆತಂಕಕ್ಕೆ ಆಸ್ಪದ ಕಲ್ಪಿಸಿದೆ.

ವಿದೇಶಿ ದೇಣಿಗೆ ಪಡೆಯಲು ಬಯಸುವ ಸಂಸ್ಥೆಗಳು ತಾವು ಕಾರ್ಯನಿರ್ವಹಿಸುವ ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೋಂದಾಯಿಸಿಕೊಳ್ಳುವುದನ್ನು ಹೊಸ ನಿಯಮಗಳು ಕಡ್ಡಾಯಗೊಳಿಸುತ್ತವೆ. ಸಾಮಾಜಿಕ ಜಾಲತಾಣಗಳು, ವೆಬ್‌ಸೈಟ್‌ಗಳು ಹಾಗೂ ಪ್ರಕಟಣೆಗಳಂತಹ ಚಟುವಟಿಕೆಗಳ ಕುರಿತ ಮಾಹಿತಿಯನ್ನು ಬಹಿರಂಗಪಡಿಸುವುದೂ ಕಡ್ಡಾಯವಾಗಿದೆ. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿದೇಶಿ ದೇಣಿಗೆಯನ್ನು ಬಳಸಬಹುದಾಗಿದೆ; ಆದರೆ, ಅದರ ಉದ್ದೇಶವನ್ನು ಮತ್ತು ಯಾವ ಸ್ಥಳದಲ್ಲಿ ಬಳಸಲಾಗುವುದು ಎಂಬುದನ್ನು ಮುಂಚಿತವಾಗಿಯೇ ತಿಳಿಸಬೇಕಾಗಿದೆ. ನಿಯಮಗಳ ಉಲ್ಲಂಘನೆಗೆ ದಂಡ ವಿಧಿಸಬಹುದಾಗಿದೆ. ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಉದ್ದೇಶದ 105 ಚಟುವಟಿಕೆಗಳಿಗಷ್ಟೇ ವಿದೇಶಿ ಹಣದ ಬಳಕೆ ಸೀಮಿತವಾಗಿದ್ದು, ಅನೇಕ ಎನ್‌ಜಿಒಗಳು ಕಾರ್ಯನಿರ್ವಹಿಸುವ ಆರೋಗ್ಯ ಕ್ಷೇತ್ರವನ್ನು ಪ್ರತ್ಯೇಕವಾಗಿ ಹೆಸರಿಸಿಲ್ಲ. ಧಾರ್ಮಿಕ ಶಿಕ್ಷಣ, ಧಾರ್ಮಿಕ ಪರಂಪರೆಗಳ ದಾಖಲೀಕರಣ ಹಾಗೂ ಸ್ಥಳೀಯ ನಂಬಿಕೆಗಳ ಸಂರಕ್ಷಣೆಗೆ ಅವಕಾಶ ಕಲ್ಪಿಸಲಾಗಿದ್ದರೂ, ಮತಾಂತರ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ. ಈ ನಿರ್ಬಂಧದ ಮೂಲಕ, ಅಲ್ಪಸಂಖ್ಯಾತರ ಚಟುವಟಿಕೆಗಳನ್ನು ಮತಾಂತರದ ಪ್ರಯತ್ನಗಳೆಂದು ವ್ಯಾಖ್ಯಾನಿಸಬಹುದಾದ ಸಾಧ್ಯತೆಗಳ ಬಗ್ಗೆ ಕೆಲವು ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ. ಕಾರ್ಯಕ್ಷೇತ್ರದ ಮೇಲಿನ ನಿರ್ಬಂಧವು ಎನ್‌ಜಿಒಗಳ ಕಾರ್ಯವ್ಯಾಪ್ತಿಯನ್ನು ಸೀಮಿತಗೊಳಿಸಬಹುದು ಇಲ್ಲವೇ ಅವರು ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ನೋಂದಣಿ ಮಾಡಿಸಿಕೊಳ್ಳಬೇಕಾದ ಒತ್ತಡ ರೂಪುಗೊಳ್ಳಬಹುದು. ಅಂತಹ ನೋಂದಣಿಗಳಿಗೆ ಅವಕಾಶ ಸಿಗದಿರುವ ಸಾಧ್ಯತೆಯೂ ಇದೆ. ಪ್ರಕಟಣೆಗಳು ಹಾಗೂ ಮಾಹಿತಿ ಬಹಿರಂಗಪಡಿಸುವುದನ್ನು ಕಡ್ಡಾಯಗೊಳಿಸಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ನಿರ್ಬಂಧ ಎಂದು ಕೆಲವರು ವ್ಯಾಖ್ಯಾನಿಸುತ್ತಿದ್ದಾರೆ.

ವಿದೇಶಿ ದೇಣಿಗೆಗಳ ಮೇಲಿನ ನಿರ್ಬಂಧಗಳಿಂದಾಗಿ, ಎನ್‌ಜಿಒಗಳ ಕಾರ್ಯವ್ಯಾಪ್ತಿ ಕುಂಠಿತಗೊಳ್ಳಲಿದೆ; ನಿಯಮ ಉಲ್ಲಂಘನೆ ಎಂದು ಭಾವಿಸಬಹುದಾದ ಪ್ರಕರಣಗಳಲ್ಲಿ ಸಂಸ್ಥೆಗಳನ್ನು ಶಿಕ್ಷೆಗೆ ಗುರಿಪಡಿಸುವ ಸಾಧ್ಯತೆಯೂ ಇದೆ. ಸಂಸ್ಥೆಗಳ ಚಟುವಟಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವ ಹಾಗೂ ನಿಯಂತ್ರಿಸುವ ಅವಕಾಶವನ್ನು ಹೊಸ ನಿಯಮಗಳು ಕಲ್ಪಿಸಲಿವೆ ಎನ್ನುವ ಕಳವಳವೂ ವ್ಯಕ್ತವಾಗಿದೆ. ಈ ನಿಯಮಗಳನ್ನು ಅಲ್ಪಸಂಖ್ಯಾತರ ಸಂಸ್ಥೆಗಳ ಮೇಲೆ ಮಾತ್ರವಲ್ಲದೆ, ನಾಗರಿಕ ಹಕ್ಕುಗಳ ಸಂಘಟನೆಗಳು, ಪರಿಸರ ಸಂಘಟನೆಗಳು ಹಾಗೂ ಸಂಶೋಧನಾ ಸಂಸ್ಥೆಗಳ ವಿರುದ್ಧವೂ ಬಳಸಬಹುದಾದ ಆತಂಕವೂ ವ್ಯಕ್ತವಾಗಿದೆ. ಸರ್ಕಾರದೊಂದಿಗೆ ಭಿನ್ನಮತ ಹೊಂದಿರುವ ಅಥವಾ ಟೀಕಿಸುವ ಸಂಸ್ಥೆಗಳನ್ನು ಸರ್ಕಾರ ಗುರಿಯಾಗಿಸಿಕೊಳ್ಳಬಹುದು.

ಚುಟುಕು

ಕೊಟ್ಟ ಕುದುರೆ ಏರಲರಿಯದೆ...



ನಾಡಪ್ರಭು ಕೆಂಪೇಗೌಡರು ಕಟ್ಟಿದ ಕೆರೆಗಳನ್ನು ಇಂದಿನ ಆಡಳಿತಗಾರರು ನುಂಗಿ ನೀರು ಕುಡಿಯುತ್ತಿದ್ದಾರೆ. ಅದೂ ಸಾಲದೆಂಬಂತೆ ಜೀವನಾಡಿಗಳಾದ ಕೆರೆಗಳಿಗೆ ಮಹಾನಗರದ ತ್ಯಾಜ್ಯನೀರನ್ನು ಹರಿಸಿ ನಮ್ಮ ಕುಡಿಯುವ ನೀರಿನ ಮೂಲಗಳನ್ನು ಕಲುಷಿತಗೊಳಿಸುತ್ತಿದ್ದಾರೆ. ಇದರಿಂದ ನಮ್ಮ ಆಹಾರ ಸರಪಳಿಯನ್ನೂ ವಿಷಮಯಗೊಳಿಸುತ್ತಿದ್ದಾರೆ.

ಆಂಜನೇಯ ರೆಡ್ಡಿ, ಕೃಷಿಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ನೀಟ್ ಮತ್ತು ಸಿಬಿಎಸ್‌ಇ ಪರೀಕ್ಷಾ ಹಗರಣಗಳಿಂದ ಅಮಾಯಕ ವಿದ್ಯಾರ್ಥಿಗಳು ಸಾವಿಗೀಡಾದಾಗ ಒಂದು ಕಣ್ಣೀರಿನ ಹನಿಯನ್ನೂ ಸುರಿಸದ ಪ್ರಧಾನಿ, ಅದಕ್ಕೆ ಹೊಣೆಗಾರರಾಗಿರುವ ಸಚಿವರನ್ನು ಹೊಗಳುತ್ತಿದ್ದಾರೆ ಮತ್ತು ಅವರನ್ನು ರಕ್ಷಿಸುತ್ತಿದ್ದಾರೆ. ಈ ಪರೀಕ್ಷಾ ಹಗರಣಗಳು ಧರ್ಮೇಂದ್ರ ಪ್ರಧಾನ್ ಅವರ ಮಟ್ಟದಲ್ಲೇ ನಿಂತಿಲ್ಲ; ಅವು ನೇರವಾಗಿ ಪ್ರಧಾನಮಂತ್ರಿಯವರ ಕಚೇರಿವರೆಗೂ ವ್ಯಾಪಿಸಿವೆ.

ಸಾಕೇತ್ ಗೋಖಲೆ, ಟಿಎಂಸಿ ವಕ್ತಾರ

25 ವರ್ಷಗಳ ಹಿಂದೆ

ಬುಧವಾರ, 27-6-2001

• ರಾಜ್ಯದಲ್ಲಿ ಮುಂಗಾರು ದುರ್ಬಲ: ಬಿತ್ತನೆ ವಿಳಂಬ

ಬೆಂಗಳೂರು, ಜೂನ್ 26– ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂಗಾರು ಕ್ಷೀಣಿಸಿ ದಕ್ಷಿಣ ಒಳನಾಡಿನಲ್ಲಿ ಮಳೆ ಸಂಪೂರ್ಣ ವಿಫಲವಾದ ಹಿನ್ನೆಲೆಯಲ್ಲಿ ಕೆಲವೆಡೆ ಬಿತ್ತನೆ ವಿಳಂಬವಾಗುತ್ತಿದ್ದರೆ, ಈಗ ಮಾಡಿರುವ ಬಿತ್ತನೆ ಕೂಡ ಒಣಗುತ್ತಿರುವುದು ರೈತರನ್ನು ಆತಂಕಕ್ಕೀಡುಮಾಡಿದೆ.

ಮುಂಗಾರು ಆರಂಭದ ಮಳೆಯು ವಿಫಲವಾದ ಕಾರಣದಿಂದ ಈ ಸಮಯದಲ್ಲಿ ಆಗಿರಬೇಕಿದ್ದ ವಾರ್ಷಿಕ ಮುಂಗಾರು ಬಿತ್ತನೆಯಲ್ಲಿ ಶೇ 60ರಷ್ಟು ಪ್ರದೇಶಗಳಲ್ಲಿ ಬಿತ್ತನೆಯಾಗಿಲ್ಲ.

• ನ್ಯಾ. ಎನ್. ವೆಂಕಟಾಚಲ ರಾಜ್ಯ ಲೋಕಾಯುಕ್ತರಾಗಿ ನೇಮಕ

ಬೆಂಗಳೂರು, ಜೂನ್ 26– ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್. ವೆಂಕಟಾಚಲ ಅವರನ್ನು ರಾಜ್ಯ ಲೋಕಾಯುಕ್ತರನ್ನಾಗಿ ನೇಮಿಸಿ ರಾಜ್ಯಪಾಲರಾದ ವಿ.ಎಸ್. ರಮಾದೇವಿ ಇಂದು ಆದೇಶ ಹೊರಡಿಸಿದ್ದಾರೆ.

ಇತ್ತೀಚೆಗೆ ನಿವೃತ್ತರಾದ ಲೋಕಾಯುಕ್ತ ಹಕೀಂ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಅವರು ನೇಮಕಗೊಂಡಿದ್ದಾರೆ.

75 ವರ್ಷಗಳ ಹಿಂದೆ

ಬುಧವಾರ, 27-6-1951

• ಕೇಂದ್ರ–ಪ್ರಾಂತ್ಯಗಳಲ್ಲಿ ತೆರಿಗೆ ಹಂಚಿಕೆಗೆ ಸಮಿತಿ ರಚನೆ

ಮದ್ರಾಸ್, ಜೂನ್ 26– ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ತೆರಿಗೆಗಳ ಹಂಚಿಕೆಯನ್ನು ಪರಿಶೀಲಿಸುವ ಆರ್ಥಿಕ ಸಮಿತಿಯೊಂದನ್ನು ಆಗಸ್ಟಿನಲ್ಲಿ ಮುಂದಿನ ಪಾರ್ಲಿಮೆಂಟ್ ಅಧಿವೇಶನ ಸೇರುವ ಮುನ್ನ ನೇಮಿಸಲಾಗುವುದು ಎಂದು ಭಾರತ ಸರ್ಕಾರದ ಉಪ ಅರ್ಥ ಸಚಿವರಾದ ಮಹಾವೀರ ತ್ಯಾಗಿಯವರು ಇಂದು ತಿಳಿಸಿದರು.

ಈಚಿನ ಹಂಚಿಕೆಯ ಆಧಾರದ ಮೇಲೆ ಸಮಿತಿಯು ಹಲವಾರು ಬದಲಾವಣೆಗಳನ್ನು ಸೂಚಿಸುವುದು ಎಂದು ತ್ಯಾಗಿ ತಿಳಿಸಿದರು. ರಾಜ್ಯಾಂಗದ ವಿಧಿಗಳ ಆಯಕಟ್ಟಿನಲ್ಲಿ ಸಮಿತಿಯು ಕೆಲಸ ನಡೆಸುವುದೇ ಹೊರತು, ರಾಜ್ಯಾಂಗದ ವಿಧಿಗಳನ್ನು ಬದಲಾಯಿಸುವುದಿಲ್ಲ ಎಂದು ಅವರು ಹೇಳಿದರು.

ಗುರುತು ಹುಡುಕುತ್ತ, ಅಳಿಸುತ್ತ...



ಪಡಸಾಲೆ

ರಘುನಾಥ ಚ.ಹ.

> 'ನಾವು ಭಾರತೀಯರು' ಎನ್ನುವ ಗುರುತು ಮರೆಸಿ, 'ನಾವು ಮನುಷ್ಯರು' ಎನ್ನುವ ಗುರುತನ್ನು ಒರೆಸಲು 'ಗುರುತಿನ ರಾಜಕಾರಣ' ಯತ್ನಿಸುತ್ತಿದೆ. ದೀನದಲಿತರಿಗೂ ಒಂದು ಗುರುತು ದೊರಕಿಸುವ ಅಂಬೇಡ್ಕರ್ ವಿರಚಿತ ಸಂವಿಧಾನದ ಆಶಯವನ್ನು ಸರ್ಕಾರದ ಸನ್ನೆಗೆ ತಕ್ಕಂತೆ ಎಸ್‌ಐಆರ್ ಅಳಿಸುತ್ತಿದೆ.

'ಭಾಷೆ ಬೇರೆ ಭಾವ ಒಂದು ನಾವು ಭಾರತೀಯರು' ಎನ್ನುವ ಸಾಲು ಕೆ.ಎಸ್. ನರಸಿಂಹಸ್ವಾಮಿ ಅವರ ಕಾವ್ಯಪಡಸಾಲೆಯಲ್ಲಿನ ಒಂದು ಹಣತೆ. 'ನಾವು ಭಾರತೀಯರು' ಪದಯುಗಳಕ್ಕೆ ನಮ್ಮನ್ನು ರೋಮಾಂಚನಗೊಳಿಸುವ, ಭಾವಪರವಶಗೊಳಿಸುವ ಶಕ್ತಿಯಿದೆ. ಆದರೆ, ಈಗಿನ ಸಂದರ್ಭದಲ್ಲಿ 'ನಾವು ಭಾರತೀಯರು' ಎಂದು ಯಾರಾದರೂ ವಿಶ್ವಾಸದಿಂದ ಹೇಳಿಕೊಳ್ಳಬಹುದೆ? ಅದರಲ್ಲೂ, ಹಣ-ಜಾತಿ-ರಾಜಕಾರಣದ ಬೆಂಬಲ ಇಲ್ಲದವರು ಹೀಗೆ ಹೇಳಲು ಸಾಧ್ಯವಿದೆಯೆ?

ಈಗಿನ 'ಗುರುತಿನ ರಾಜಕೀಯ' ಕ್ರೌರ್ಯ, ಹಿಂಸೆಯನ್ನು ಮೈಗೂಡಿಸಿಕೊಂಡಂತಿದೆ. ಈ ರಾಜಕಾರಣ, 'ಹಿಂದೂಗಳೆಲ್ಲ ಒಂದು' ಎಂದು ವಾಚ್ಯವಾಗಿ ಹೇಳುತ್ತ, 'ಭಾರತೀಯರೆಂದರೆ ಹಿಂದೂಗಳು' ಎಂದು ಸೂಚ್ಯವಾಗಿ ಗುರುತಿಸುತ್ತದೆ. ಹೀಗೆ ಹೇಳುವ ಮೂಲಕ, ಉಳಿದವರನ್ನು 'ಅನ್ಯರು' ಎಂದು ಗುರುತಿಸಿ ದೂರವಿರಿಸುತ್ತದೆ. ನಮಗೆ ಬೇಕಾದುದು, 'ಭಾರತೀಯರೆಲ್ಲ ಒಂದು' ಎನ್ನುವ ಗುರುತಲ್ಲವೆ?

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಶುರುವಾದದ್ದೇ ತಡ, ನಮ್ಮೆಲ್ಲರ 'ಗುರುತು'ಗಳು ಗುರುತ್ವ ಕಳೆದುಕೊಳ್ಳುತ್ತಿವೆ. ವ್ಯಕ್ತಿಯೊಬ್ಬ ಭಾರತೀಯ ಎಂದು ಗುರುತಿಸಿಕೊಳ್ಳುವುದಕ್ಕೆ ಬೇಕಾದ ಸಾಕ್ಷ್ಯವಾದರೂ ಏನು? ಸರ್ಕಾರಿ ಗುರುತಿನ ಚೀಟಿಗಳಲ್ಲಿ ಠೀವಿಯಿಂದ ಗಮನಸೆಳೆಯುವ ಪಾಸ್‌ಪೋರ್ಟ್‌ಗೆ ಈಗ ಗರ್ವಭಂಗವಾಗಿದೆ. 'ಪಾಸ್‌ಪೋರ್ಟ್ ಪೌರತ್ವದ ಪುರಾವೆ ಅಲ್ಲ. ಅದೊಂದು ಪ್ರಯಾಣದ ದಾಖಲೆಯಷ್ಟೇ' ಎಂದು 'ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ' ಪ್ರಕಟಿಸಿದೆ. ಸರ್ಕಾರದ ಲಾಂಛನ ಇರುವ ಪಾಸ್‌ಪೋರ್ಟ್‌ನಲ್ಲಿ 'ಇಂಡಿಯನ್' ಎನ್ನುವ ನಮೂದು ಇದೆ. ಆ ಗುರುತನ್ನು ಸರ್ಕಾರವೇ ಅಲ್ಲಗಳೆದಿದೆ. ಪಡಿತರ ಚೀಟಿ, ಪ್ಯಾನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್ – ಸರ್ಕಾರವೇ ಕೊಟ್ಟಿರುವ ಯಾವ ಗುರುತಿನ ಚೀಟಿಯೂ ನಮ್ಮ ಭಾರತೀಯತೆಯನ್ನು ದೃಢೀಕರಿಸುತ್ತಿಲ್ಲ! 'ನಾನು ಭಾರತೀಯ' ಎನ್ನುವ ಕವಿಮಾತಿಗೆ ಅಥವಾ ಸ್ವಯಂ ದೃಢೀಕರಣಕ್ಕೆ ಈಗ ಯಾವ ಕಿಮ್ಮತ್ತೂ ಇಲ್ಲ. 'ಭಾರತೀಯತೆ' ಎನ್ನುವುದನ್ನು ಹುಟ್ಟಿನೊಂದಿಗೆ ಜೊತೆಗೂಡುವ ಅಸ್ಮಿತೆಯನ್ನಾಗಿಯೂ ಸರ್ಕಾರ ಉಳಿಸಿಲ್ಲ. 'ಆಧಾರ್' ಕಾರ್ಡ್ ವಾಸಸ್ಥಳದ ಪುರಾವೆಯಷ್ಟೇ ಎಂದು ಚುನಾವಣಾ ಆಯೋಗ ಹೇಳಿದೆ; ಅದನ್ನು ಸುಪ್ರೀಂ ಕೋರ್ಟ್ ಕೂಡ ಒಪ್ಪಿಕೊಂಡಿದೆ. ನಮ್ಮ ಕೈಗಳ ಗೆರೆ, ಕಣ್ಣುಗಳ ಹೊಳಪನ್ನು 'ಆಧಾರ'ವಾಗಿರಿಸಿ ಪಡೆದುಕೊಂಡಿದ್ದ ಗುರುತಿನ ಚೀಟಿ ವಿಳಾಸದ ಸ್ಥಾವರಕ್ಕಷ್ಟೇ ಸೀಮಿತ ಎನ್ನುವುದಾದರೆ ಜೈವಿಕ ಗುರುತುಗಳನ್ನು ಸರ್ಕಾರ ಪಡೆದದ್ದಾದರೂ ಏಕೆ?

ಒಂದು ವರ್ಷದ ಹಿಂದೆ (ಜೂನ್ 2025ರಲ್ಲಿ) ಬಿಹಾರದಲ್ಲಿ 'ಎಸ್‌ಐಆರ್'ನ ಹೊಸ ಆವೃತ್ತಿಗೆ ಚಾಲನೆ ದೊರೆತ ಕ್ಷಣದಲ್ಲಿ ಆರಂಭವಾದ ಜನಸಾಮಾನ್ಯರ ಗುರುತಿನ ಹುಡುಕಾಟ ಈಗ ದೇಶವ್ಯಾಪಿಯಾಗಿದೆ. ಬಹುಶಃ, ಇಡೀ ವಿಶ್ವದಲ್ಲಿ ಬೇರೆ ಯಾವ ದೇಶವೂ ತನ್ನ ನಾಗರಿಕರನ್ನು ಈ ರೀತಿ 'ಗುರುತಿನ ಅಗ್ನಿಪರೀಕ್ಷೆ'ಗೆ ಒಳಪಡಿಸಿರಲಾರದು. ದೇಶದ ಎಲ್ಲ ವಯಸ್ಕ ನಾಗರಿಕರನ್ನು ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸುವುದು ಪ್ರಜಾಪ್ರಭುತ್ವದ ಪ್ರಮುಖ ಉದ್ದೇಶ. ಮತದಾನದ ಹಕ್ಕಿನ ಮೂಲಕ ವಯಸ್ಕ ನಾಗರಿಕರಿಗೆಲ್ಲ 'ಭಾರತೀಯ' ಎನ್ನುವ ಗುರುತನ್ನು ಇಲ್ಲಿಯವರೆಗೂ ಅಧಿಕೃತಗೊಳಿಸುತ್ತಿದ್ದ ಚುನಾವಣಾ ಆಯೋಗ, ಈಗ ತಾನು ನೀಡಿದ ಗುರುತನ್ನು ಅಳಿಸುವ ಹಾಗೂ ಅದರ ಬಗ್ಗೆ ಅನುಮಾನ ಮೂಡಿಸುವ ಪ್ರಯತ್ನದಲ್ಲಿದೆ. ಆದಷ್ಟೂ ಹೆಚ್ಚಿನ ಸಂಖ್ಯೆಯಲ್ಲಿ 'ಆಯ್ದ' ನಾಗರಿಕರನ್ನು ಚುನಾವಣೆಗಳಿಂದ ದೂರವಿಡುವುದೇ ಈಗಿನ 'ಎಸ್‌ಐಆರ್' ಪ್ರಕ್ರಿಯೆಯ ಉದ್ದೇಶ ಇರುವಂತಿದೆ. ಚುನಾವಣೆಯಿಂದ ವಿಮುಖಗೊಳಿಸುವುದು ಎಂದರೆ, ಸರ್ಕಾರಿ ಸೌಲಭ್ಯಗಳಿಂದ ವಂಚಿತಗೊಳಿಸುವುದೇ ಆಗಿದೆ ಹಾಗೂ ಅಂಥ ವ್ಯಕ್ತಿಗಳನ್ನು ದೇಶದ ರಚನಾತ್ಮಕ ಆಗುಹೋಗುಗಳಿಂದ ದೂರವಿರಿಸಿ, ಸಮಸ್ಯೆಗಳಿಗಷ್ಟೇ ಉತ್ತರದಾಯಿಯಾಗಿಸುತ್ತ, ಅಳುಕು ಹಾಗೂ ಆತಂಕದಿಂದ ಅಜ್ಞಾತರಾಗಿ ಬದುಕುವಂತೆ ಮಾಡುವುದೇ ಆಗಿದೆ. 'ಗುರುತು ತೋರಿಸಿ' ಎನ್ನುವ 'ಎಸ್‌ಐಆರ್' ತಾಕೀತು ಗುರುತು ನಿರಾಕರಿಸುವ ಪ್ರಯತ್ನವೇ ಆಗಿದೆ. ಇಲ್ಲಿ ಗುರುತು ದೃಢೀಕರಿಸಬೇಕಾದವರು ಯಾರು? ಸರ್ಕಾರ ಮತ್ತು ನ್ಯಾಯಾಂಗ ಅಲ್ಲವೆ? ಅವರು ನಡುನೀರಲ್ಲಿ ಕೈಬಿಟ್ಟರೆ ಅಥವಾ ಗುರುತು ಕೇಳುವವರ ಜಾಗದಲ್ಲಿ ತಾವೇ ನಿಂತರೆ, 'ಧರೆ ಹೊತ್ತಿ ಉರಿದಡೆ' ಪರಿಸ್ಥಿತಿ ಸೃಷ್ಟಿಯಾಗದಿರುವುದೆ?

ಗುರುತು ಸಾಬೀತುಪಡಿಸಬೇಕಾದ ಸವಾಲಿನ ಬೇರನ್ನು ಹುಡುಕತೊಡಗಿದರೆ, ಆ ಸಮಸ್ಯೆ ನಮ್ಮ ದೇಶದ ಡಿಎನ್‌ಎಯಲ್ಲೇ ಇರುವಂತಿದೆ. ಈ ದೇಶದ ಹೆಸರಿಗೆ ಆಧಾರವಾಗಿರುವ ಭರತ ಚಕ್ರವರ್ತಿ ಕೂಸಾಗಿದ್ದಾಗಲೇ ಗುರುತಿನ ಚಕ್ರವ್ಯೂಹದಲ್ಲಿ ಸಿಲುಕಿ ಒದ್ದಾಡಿದವನು. ಮಗುವನ್ನು ಅವುಚಿಕೊಂಡು ಕಾಡಿನಿಂದ ನಾಡಿಗೆ ಬಂದ ಶಕುಂತಲೆಯನ್ನು ದುಷ್ಯಂತ 'ಗುರುತು' ಸಾಬೀತುಪಡಿಸುವ ಪರೀಕ್ಷೆಗೆ ಒಡ್ಡುವ ಪ್ರಸಂಗ ಮಹಾಭಾರತದಲ್ಲಿದೆ. ದುಷ್ಯಂತನ ಪತ್ನಿ ಎನ್ನುವುದಕ್ಕೆ ಯಾವ ಗುರುತನ್ನೂ ಒದಗಿಸಲಾಗದೆ, ಒಡ್ಡೋಲಗದಲ್ಲಿ ಅನುಮಾನದ ಕಣ್ಣುಗಳಿಗೆ ಗುರಿಯಾದ ಶಕುಂತಲೆಯ ನೆರವಿಗೆ ವಿಧಿ ಕೈಚಾಚಿತು, ಅಭಿಜ್ಞಾನವನ್ನು ಕರುಣಿಸಿತು. ಶಕುಂತಲೆಗೂ, ಭರತನಿಗೂ ಒಂದು ಗುರುತು ದೊರೆಯಿತು.

ಈ ದೇಶದ ಮೂಲಪುರುಷನನ್ನೇ ಗುರುತಿನ ಸಮಸ್ಯೆ ಕಾಡಿದೆ ಎಂದು ನಾವು ಸಮಾಧಾನಿಸಿಕೊಳ್ಳಬಹುದೆ? ವಿಷಯ ಅಷ್ಟು ಸರಳವಲ್ಲ. ಮಹಾಭಾರತದಲ್ಲಿನ ಗುರುತಿನ ಸಮಸ್ಯೆ ಚಕ್ರವರ್ತಿಗಳ ಕುಟುಂಬ ವ್ಯವಹಾರ. ಈಗ ಸಮಸ್ಯೆ ಎದುರಾಗಿರುವುದು ಜನಸಾಮಾನ್ಯರಿಗೆ. ಜಾತಿಯೋ ಧರ್ಮವೋ ಅಧಿಕಾರವೋ – ಯಾವುದಾದರೊಂದು ಬಗೆಯ 'ಬಲ'ವುಳ್ಳ ಉಳ್ಳವರು ಹೇಗಾದರೂ ಗುರುತು ತೋರಿಸಿಯಾರು. ಗುರುತುಗಳಿಲ್ಲದೆ ಬದುಕುವುದೂ ಅವರಿಗೆ ಸಾಧ್ಯ. ದೇಶದ ಬ್ಯಾಂಕುಗಳಿಗೆ ಸಾವಿರಾರು ಕೋಟಿ ವಂಚಿಸಿ ಬೇರೆ ದೇಶಗಳಲ್ಲಿ ನೆಲೆಸಿರುವವರಿಗೆ ಯಾವ ಗುರುತಿನ ಹಂಗು?

ದೇಶದ ಚರಿತ್ರೆ ಗಮನಿಸಿದರೆ, ಗುರುತುಗಳ ಹುಡುಕಾಟದ ಕೊಂಡ ಹಾಯುವ ಪರೀಕ್ಷೆಯನ್ನು ನಿರಂತರವಾಗಿ ಎದುರಿಸಿರುವುದು ಜನಸಾಮಾನ್ಯರು, ವಿಶೇಷವಾಗಿ ದಲಿತರು. ಮಹಾಭಾರತ ಕಥನದಲ್ಲೂ ಕರ್ಣ ಹಾಗೂ ಏಕಲವ್ಯ ಗುರುತುಗಳ ರಾಜಕಾರಣಕ್ಕೆ ಬಲಿಯಾದವರೇ ಆಗಿದ್ದಾರೆ. ತುಂಡುಭೂಮಿಯ ಗುರುತು ಕನಸಾಗಿಯೇ ಉಳಿಯುವ ಚೋಮನ ಸಂತತಿ ಈಗಲೂ ಇದೆ. ರೈತರ ತುಂಡುಭೂಮಿಗಳ ಗುರುತುಗಳನ್ನು ಕಿತ್ತುಕೊಳ್ಳಲು ಸರ್ಕಾರಗಳೇ ಚಕ್ರವ್ಯೂಹಗಳನ್ನು ರಚಿಸುತ್ತವೆ; ಮಣ್ಣಿನೊಂದಿಗೆ ರೈತ ಹೊಂದಿರುವ ಕಳ್ಳುಬಳ್ಳಿ ನಂಟಿನ ಗುರುತುಗಳನ್ನು ಗಾಸಿಗೊಳಿಸುತ್ತವೆ. ಸ್ವಾತಂತ್ರ್ಯ ಚಳವಳಿಯಲ್ಲಿ, ಸ್ವಾತಂತ್ರ್ಯ ಮತ್ತು ಸ್ವರಾಜ್ಯದ ಗುರುತಿಗಾಗಿ ಹಂಬಲಿಸಿ ಗಾಂಧಿಯ ಬೆನ್ನು ಕಾದ ಲಕ್ಷ ಲಕ್ಷ ಮಂದಿ ಜನಸಾಮಾನ್ಯರೇ ಆಗಿದ್ದಾರೆ. ಅವರಲ್ಲಿ ದಲಿತರೂ ಇದ್ದಾರೆ, ಮುಸ್ಲಿಮರೂ ಇದ್ದಾರೆ. ವಿಪರ್ಯಾಸವೆಂದರೆ, ಸ್ವಾತಂತ್ರ್ಯ ಚಳವಳಿಯ ತೊರೆಗೆ ಹನಿ ಕಾಣಿಕೆಯನ್ನೂ ಸಲ್ಲಿಸದವರು ಈಗ ಸ್ವಾತಂತ್ರ್ಯದ ಬಹುದೊಡ್ಡ ಫಲಾನುಭವಿಗಳಾಗಿರುವುದು. ಈಗಲೂ ಬಡವರ್ಗಗಳು, ದಲಿತರು ಹಾಗೂ ಅಲ್ಪಸಂಖ್ಯಾತರು ತಮ್ಮ ಗುರುತುಗಳಿಗಾಗಿ ನಡೆಸಬೇಕಾದ ಹೋರಾಟವನ್ನು ಪ್ರಜಾ'ಪ್ರಭುತ್ವ' ಜಾರಿಯಲ್ಲಿರಿಸಿದೆ.

ಈ ದೇಶದ ಕೋಟ್ಯಂತರ ಜನ 'ಎಸ್‌ಐಆರ್' ಅವಕೃಪೆಗೆ ಪಾತ್ರರಾಗಿ ತಮ್ಮ ಗುರುತು ಸಾಬೀತುಪಡಿಸುವ ಸವಾಲು ಎದುರಿಸುತ್ತಿರುವ ಸಂದರ್ಭದಲ್ಲಿಯೇ, ತನಗೆ ಕಾನೂನು ಮಾನ್ಯತೆಯ ಗುರುತಿನ ಅಗತ್ಯವಿಲ್ಲ ಎಂದು 'ರಾಷ್ಟ್ರೀಯ ಸ್ವಯಂಸೇವಕ ಸಂಘ' (ಆರ್‌ಎಸ್‌ಎಸ್) ವಾದಿಸುತ್ತಿರುವುದು ಏನನ್ನು ಸೂಚಿಸುತ್ತದೆ? ಆರ್‌ಎಸ್‌ಎಸ್ ನೋಂದಣಿಯ ಕುರಿತು ಎದ್ದಿರುವ ಪ್ರಶ್ನೆಗಳಿಗೆ, ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ನಾಯಕರು ನೀಡಿರುವ ಪ್ರತಿಕ್ರಿಯೆಗಳು ಈ ದೇಶದಲ್ಲಿ 'ಗುರುತು' ಎಲ್ಲರಿಗೂ ಒಂದೇ ಪ್ರಕಾರವಾಗಿರಬೇಕಿಲ್ಲ ಎನ್ನುವ ಸತ್ಯವನ್ನು ಪುನರುಚ್ಚರಿಸುವಂತಿವೆ. ನೋಂದಣಿ ಮಾಡಿಕೊಳ್ಳುವ ಮೂಲಕ ಕಾನೂನು ಮಾನ್ಯತೆಯ ಗುರುತನ್ನು ಹೊಂದಲಿ ಎನ್ನುವ ಅಭಿಪ್ರಾಯಗಳಿಗೆ ಆರ್‌ಎಸ್‌ಎಸ್ ಪ್ರತಿಕ್ರಿಯೆ ಗಮನಿಸಿದರೆ, ನೋಂದಣಿ ಆಗದಿರುವುದೇ ತನ್ನ ಗುರುತು ಎಂದದು ಭಾವಿಸಿರುವಂತಿದೆ. ಅಷ್ಟು ಮಾತ್ರವಲ್ಲ, ಆರ್‌ಎಸ್‌ಎಸ್ ಬೆಂಬಲಿಸಿ ಮಾತನಾಡುತ್ತಿರುವವರ ವಕೀಲಿಕೆಯಲ್ಲಿ, ಆರ್‌ಎಸ್‌ಎಸ್‌ನಂಥ ಸಂಸ್ಥೆಗೆ ನೋಂದಣಿಯ ಅನಿವಾರ್ಯತೆಯಿಲ್ಲ, 'ಇದು ತನ್ನ ಗುರುತು' ಎಂದು ಅದು ಏನನ್ನು ಹೇಳುತ್ತದೋ ಅದನ್ನು ಸಮಾಜ ಒಪ್ಪಿಕೊಳ್ಳಬೇಕು ಎನ್ನುವ ಧ್ವನಿಯಿದೆ.

ಚೋದ್ಯ ನೋಡಿ: ಹಣಕಾಸು ಅಕ್ರಮದ ಗುಮಾನಿಯ ಮೇಲೆ ನಡೆಸುವ ದಾಳಿಗಳ ಮೂಲಕ ನಿರಂತರವಾಗಿ ಸುದ್ದಿಯಲ್ಲಿರುವ ಆದಾಯ ತೆರಿಗೆ ಇಲಾಖೆ ಹಾಗೂ ಜಾರಿ ನಿರ್ದೇಶನಾಲಯಗಳಿಗೆ, 'ಅಂತರರಾಷ್ಟ್ರೀಯ ಸಂಘಟನೆ' ಎಂದು ಹೇಳಿಕೊಳ್ಳುವವರ ಆರ್ಥಿಕ ಚಟುವಟಿಕೆಗಳ ಬಗ್ಗೆ ಪೂರ್ಣ ವಿಶ್ವಾಸ ಇರುವಂತಿದೆ. ಕಾನೂನು ನೋಂದಣಿಗೆ ಒಳಗಾಗದಿದ್ದರೂ ತನ್ನ ಚಟುವಟಿಕೆಗಳಿಗೆ ಯಾವ ಭಂಗವೂ ಇಲ್ಲ ಎನ್ನುವ ವಿಶ್ವಾಸ ಆರ್‌ಎಸ್‌ಎಸ್‌ಗೂ ಇದೆ. ಭಯೋತ್ಪಾದಕ ಸಂಘಟನೆಗಳಷ್ಟೇ ಕಾನೂನು ನೋಂದಣಿ ಮಾಡಿಸಿಕೊಳ್ಳುವುದಿಲ್ಲ ಎನ್ನುವ ಮಾತಿನತಿವಿತಕ್ಕೂ ಆರ್‌ಎಸ್‌ಎಸ್ ಅಳುಕುತ್ತಿಲ್ಲ. ಪಾರದರ್ಶಕತೆ, ಕಾನೂನಿನ ಉತ್ತರದಾಯಿತ್ವ ಆರ್‌ಎಸ್‌ಎಸ್‌ಗೆ ಅಗತ್ಯವಿಲ್ಲವೆ? ಇಲ್ಲ ಎನ್ನುವಂತೆಯೇ ಅದು ನಡೆದುಕೊಳ್ಳುತ್ತಿದೆ, ಕೇಂದ್ರ ಸರ್ಕಾರವೂ ವರ್ತಿಸುತ್ತಿದೆ. ಈ ನಡವಳಿಕೆ ಸೂಚಿಸುತ್ತಿರುವುದೂ ಅದನ್ನೇ: ಪ್ರಬಲರಿಗೆ ಯಾವ ಗುರುತೂ ಅಗತ್ಯವಿಲ್ಲ; ಸ್ವತಃ ಅವರೇ ಒಂದು ಗುರುತು!

ಆರ್‌ಎಸ್‌ಎಸ್ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಹೇಳುವವರನ್ನು ಮೂರ್ಖರೆಂದು ಜರೆಯುವ, ಅವರ ದೇಶಪ್ರೇಮವನ್ನು ಶಂಕಿಸುವ ಬಿಜೆಪಿ ನಾಯಕರಿಗೆ, ಈ ದೇಶದ ಜನಸಾಮಾನ್ಯರ ಗುರುತಿಗೆ 'ಎಸ್‌ಐಆರ್' ಧಕ್ಕೆ ತರುತ್ತಿರುವುದರ ಬಗ್ಗೆ, ಈ ಮಣ್ಣಿನಲ್ಲಿಯೇ ಹುಟ್ಟಿದವರನ್ನು ಪೌರತ್ವದ ಶಿಲುಬೆಗೇರಿಸುತ್ತಿರುವ ಕುರಿತು ಕಿಂಚಿತ್ ಕಾಳಜಿಯೂ ಇಲ್ಲ. ಇದೆಂಥ ದ್ವಂದ್ವ, ಇದೆಂಥ ವಂಚನೆಯ ರಾಜಕಾರಣ ಎಂದು ಪ್ರಶ್ನಿಸಿದರೆ, 'ಜಿರಲೆ', 'ನಗರ ನಕ್ಸಲ್', 'ದೇಶದ್ರೋಹಿ' ಎನ್ನುವ ಗುರುತುಗಳಿಗೆ ಗುರಿಯಾಗುವುದು ತಪ್ಪಿದ್ದಲ್ಲ. ಈ ಗುರುತಿನ ರಾಜಕಾರಣ, 'ನಾವು ಭಾರತೀಯರು' ಎನ್ನುವ ಗುರುತನ್ನಷ್ಟೇ ಮರೆಸಿಲ್ಲ, 'ನಾವು ಮನುಷ್ಯರು' ಎನ್ನುವ ಗುರುತನ್ನೂ ಅಳಿಸಲು ಯತ್ನಿಸುತ್ತಿದೆ. ದೀನದಲಿತರಿಗೂ ಒಂದು ಗುರುತು ದೊರಕಿಸುವ ಆಶಯ ಅಂಬೇಡ್ಕರ್ ವಿರಚಿತ ಸಂವಿಧಾನದ್ದು. ಆ ಗುರುತನ್ನು ಸರ್ಕಾರದ ಸನ್ನೆಗೆ ತಕ್ಕಂತೆ ಅಳಿಸುವ ಪ್ರಕ್ರಿಯೆಯಲ್ಲಿ 'ಎಸ್‌ಐಆರ್' ರಬ್ಬರಿನಂತೆ ಬಳಕೆಯಾಗುತ್ತಿದೆ.



ವಾಚಕರ ವಾಣಿ

ಜಾಗೃತಿಗಾಗಿ ದುರಂತ ನಡೆಯಲೇಬೇಕೆ?

ಮೈಸೂರು ನಗರದ ದಟ್ಟಗಳ್ಳಿಯ ರೆಸ್ಟೋಬಾರ್ ಒಂದರಲ್ಲಿ ಇತ್ತೀಚೆಗೆ ಅಗ್ನಿ ಅವಘಡ ಸಂಭವಿಸಿ ಇಬ್ಬರು ಸ್ಥಳದಲ್ಲೇ ಸಜೀವ ದಹನಗೊಂಡರು. ಆ ದುರಂತದ ಹಿನ್ನೆಲೆಯಲ್ಲಿ, ನಗರ ಪಾಲಿಕೆಯ ಅಧಿಕಾರಿಗಳು ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳು ಮೈಸೂರಿನ ಎಲ್ಲ ರೆಸ್ಟೋರೆಂಟ್ ಮತ್ತು ಬಾರ್‌ಗಳ ಲೈಸೆನ್ಸ್, ಸುರಕ್ಷತಾ ಕ್ರಮಗಳ ಪರಿಶೀಲನೆ ನಡೆಸುತ್ತಿದ್ದಾರೆ. ಈ ಕೆಲಸವನ್ನು ಅಧಿಕಾರಿಗಳು ಈ ಮೊದಲೇ ಮಾಡಬೇಕಿತ್ತು, ಕ್ರಮ ತಪ್ಪಿದವರ ವಿರುದ್ಧ ಕ್ರಮ ಕೈಗೊಳ್ಳಬೇಕಿತ್ತು. ದುರಂತ ಸಂಭವಿಸಿರುವ ಬಾರ್, ನಗರ ಪಾಲಿಕೆ ಮತ್ತು ಅಬಕಾರಿ ಇಲಾಖೆಯಿಂದ ಅನುಮತಿ ಇಲ್ಲದೆಯೇ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದು ಈಗ ಬೆಳಕಿಗೆ ಬಂದಿದೆ. ಕರ್ತವ್ಯ ಲೋಪದ ಮೇರೆಗೆ ನಗರ ಪಾಲಿಕೆಯ ಇಬ್ಬರು ಅಧಿಕಾರಿಗಳು ಮತ್ತು ನಾಲ್ವರು ಅಧಿಕಾರಿಗಳನ್ನು ಸರ್ಕಾರ ಅಮಾನತುಗೊಳಿಸಿದೆ. ಆತಂಕಕಾರಿ ಸಂಗತಿಯೆಂದರೆ, ಮೈಸೂರಿನಲ್ಲಿರುವ ಹಲವಾರು ಬಾರ್ ಮತ್ತು ರೆಸ್ಟೋರೆಂಟ್‌ಗಳು ಅಧಿಕೃತ ಪರವಾನಗಿ ಇಲ್ಲದೆಯೇ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಲಾಗುತ್ತಿದೆ. ಹೀಗಾದರೆ ಹೇಗೆ? ವ್ಯವಸ್ಥೆ ಜಾಗೃತಗೊಳ್ಳಲು ದುರಂತಗಳು ನಡೆಯಲೇಬೇಕೆ?

ಬೂಕನಕೆರೆ ವಿಜೇಂದ್ರ, ಮೈಸೂರು

ಹುಂಡಿ ಕಳವು: ಜಾಣಕುರುಡು ಸಲ್ಲದು

ಅಯೋಧ್ಯೆಯ ರಾಮಮಂದಿರದಲ್ಲಿ ಕೋಟ್ಯಂತರ ರೂಪಾಯಿ ಹುಂಡಿ ಹಣ ಹಾಗೂ ಚಿನ್ನ–ಬೆಳ್ಳಿಯ ಕಳವು ನಡೆದಿರುವ ಆರೋಪದ ಬಗ್ಗೆ ನಿಷ್ಪಕ್ಷಪಾತ ತನಿಖೆಯಾಗಬೇಕಿದೆ. ಅತ್ಯಾಧುನಿಕ ತಂತ್ರಜ್ಞಾನ ಇದ್ದರೂ ವಂಚಕರು ಭಕ್ತರ ಹಣವನ್ನು ಸಲೀಸಾಗಿ ದೋಚಲು ಒಳಗಿನವರ ಸಹಾಯದಿಂದಲೇ ಸಾಧ್ಯ. ರಾಮಮಂದಿರ ಕಟ್ಟಲು ತೋರಿದ ಉತ್ಸಾಹವನ್ನು, ಮಂದಿರದ ಸ್ವತ್ತನ್ನು ಸುರಕ್ಷಿತವಾಗಿಡುವಲ್ಲಿ ಕೇಂದ್ರ ಸರ್ಕಾರ ಹಾಗೂ ಟ್ರಸ್ಟ್ ಏಕೆ ತೋರಲಿಲ್ಲ? ನಿತ್ಯವೂ ಲಕ್ಷಾಂತರ ರೂಪಾಯಿ ದೇಣಿಗೆ ಬರುವಾಗ ಅದಕ್ಕೆ ಸೂಕ್ತ ರಸೀದಿ ನೀಡಬೇಕೆಂಬ ಪ್ರಾಥಮಿಕ ಜ್ಞಾನ ಇರಲಿಲ್ಲವೆ? ಇದೆಲ್ಲವೂ ಕಾನೂನು ಪ್ರಾಧಿಕಾರಗಳ ಗಮನಕ್ಕೆ ಬಂದಿಲ್ಲವೇಕೆ? ಈ ವಿಷಯದಲ್ಲಿ ಜಾಣಕುರುಡು ತೋರಿಸುವ ಟ್ರಸ್ಟ್ ಹಾಗೂ ಸಂಬಂಧಪಟ್ಟವರ ನಡೆ ಅನುಮಾನಕ್ಕೆ ಕಾರಣವಾಗುವಂತಿದೆ. ಹುಂಡಿಹಣವನ್ನು ಗುರುಕಾಣಿಕೆಯ ರೂಪದಲ್ಲಿ ಬಳಸಲಾಗಿದೆಯೆ? ಮುಂದಿನ ಚುನಾವಣೆಗೆ ಫಂಡ್ ರೂಪದಲ್ಲಿ ಸಂಗ್ರಹಿಸಲಾಗಿದೆಯೆ? ಭಕ್ತರ ವಿಶ್ವಾಸವನ್ನು ದುರುಪಯೋಗ ಮಾಡಿಕೊಳ್ಳುವವರಿಂದ ಜನ ದೂರವಿರುವ ಸಂಕಲ್ಪ ಮಾಡಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಭದ್ರಾ ಮೇಲ್ದಂಡೆ ನಂಬಿದರೆ ಫಲವಿಲ್ಲ...

'ಭದ್ರಾ ಮೇಲ್ದಂಡೆ ಯೋಜನೆ'ಯ ಆಳ–ಅಗಲದ ಬರಹ (ಪ್ರ.ವಾ., ಜೂನ್ 26) ಮಾಹಿತಿಪೂರ್ಣವಾಗಿದೆ. ಕೇಂದ್ರ–ರಾಜ್ಯ ಸರ್ಕಾರಗಳು ನಿರ್ಲಕ್ಷ್ಯ ತೋರಿ ಅನುದಾನ ನೀಡದಿದ್ದರೆ 100 ವರ್ಷವಾದರೂ ಯೋಜನೆ ಪೂರ್ಣಗೊಳ್ಳುವುದಿಲ್ಲ. ಬರಪೀಡಿತ ಚಿತ್ರದುರ್ಗ, ತುಮಕೂರು ಜಿಲ್ಲೆಯ ರೈತರು 'ಮಳೆ ನೀರಿನ ಕೃಷಿ' ಅಳವಡಿಸಿಕೊಳ್ಳುವುದು ಉತ್ತಮ. ಈ ಜಿಲ್ಲೆಗಳಲ್ಲಿ 500 ಮಿ.ಮೀ.ನಷ್ಟು ಮಳೆ ಬೀಳುತ್ತದೆ. ಮಳೆ ನೀರನ್ನು ಕೃಷಿ ಹೊಂಡದಲ್ಲಿ ಸಂಗ್ರಹಿಸಿ ಹನಿ ನೀರಾವರಿ, ಕೃಷಿ ಹೊದಿಕೆ ಬಳಸಿದರೆ ಯಶಸ್ವಿಯಾಗಿ ಬೆಳೆ ಬೆಳೆಯಬಹುದು. ತೋಟಗಾರಿಕಾ ಸಂಶೋಧನಾ ಸಂಸ್ಥೆಯ 10 ವರ್ಷಗಳ ಸಂಶೋಧನೆಯು, ಕೃಷಿ ಹೊಂಡದಲ್ಲಿ ಮಳೆ ನೀರು ಸಂಗ್ರಹಿಸಿ ಯಶಸ್ವಿಯಾಗಿ ಬೆಳೆ ಬೆಳೆಯಬಹುದು ಎಂದು ತೋರಿಸಿದೆ. ಮಹಾರಾಷ್ಟ್ರದ ಬರ ಪೀಡಿತ ಜಿಲ್ಲೆಯ ರೈತರು ಕೃಷಿ ಹೊಂಡದಲ್ಲಿ ಮಳೆ ನೀರು ಸಂಗ್ರಹಿಸಿ ದಾಳಿಂಬೆ ಬೆಳೆದಿದ್ದಾರೆ.

ಹೆಚ್.ಆರ್. ಪ್ರಕಾಶ್, ಮಂಡ್ಯ

ಎನ್‌ಸಿಇಆರ್‌ಟಿ: ಕೃಷ್ಣಾ ಎನಬಾರದೆ?

ಎನ್‌ಸಿಇಆರ್‌ಟಿ ಬಿಡುಗಡೆ ಮಾಡಿರುವ ಸಿಬಿಎಸ್‌ಇ 6ನೇ ತರಗತಿಯ ಕನ್ನಡ ಪುಸ್ತಕಕ್ಕೆ 'ಕೃಷ್ಣ' ಎಂದು ಹೆಸರಿಟ್ಟಿರುವುದು ವಿವಾದಕ್ಕೆ ಕಾರಣವಾಗಿದೆ. ವಿವಾದದ ಕುರಿತು ಸ್ಪಷ್ಟೀಕರಣ ನೀಡಿರುವ ಎನ್‌ಸಿಇಆರ್‌ಟಿ, 'ಕೃಷ್ಣ' ಎನ್ನುವುದು ಕರ್ನಾಟಕದ ಪ್ರಮುಖ ನದಿಯ ಹೆಸರೇ ಹೊರತು ದೇವರ ಹೆಸರಲ್ಲ ಎಂದು ತಿಳಿಸಿದೆ. ಈ ಸ್ಪಷ್ಟನೆಗೆ, ಕೃಷ್ಣ ನಮ್ಮ ರಾಜ್ಯದ ಅಸ್ಮಿತೆಯಲ್ಲ, ಕಾವೇರಿ ಕರ್ನಾಟಕದ ಜೀವನಾಡಿ ಎನ್ನುವ ವಾದಗಳು ಕೇಳಿಬರುತ್ತಿವೆ. ಈ ತರ್ಕ ಸರಿಯಾಗಿದೆ. ಭಾರತದ ನದಿಗಳ ಹೆಸರುಗಳು ಸಾಮಾನ್ಯವಾಗಿ ಸ್ತ್ರೀವಾಚಕವಾಗಿವೆ. ಕೃಷ್ಣ ಸ್ತ್ರೀ ಸೂಚಕ ಪದವಾಗಿರದೆ, ಪುಲ್ಲಿಂಗ ಸೂಚಕವಾಗಿದೆ. 'ಕೃಷ್ಣಾ' ಅಥವಾ 'ಕೃಷ್ಣೆ' ಎನ್ನುವುದು ನದಿಯ ಹೆಸರಾಗುತ್ತದೆ. ಗ್ರಂಥಗಳಲ್ಲಿ 'ಕೃಷ್ಣಾ', 'ಕೃಷ್ಣೆ' ಎಂದೇ ಬರೆಯಲಾಗಿದೆ.

ಶಿವಕುಮಾರ ಬಂಡೋಳಿ, ಹುಣಸಗಿ


ಸಿನಿಮಾ: ರಾಜ್ಯಪ್ರಶಸ್ತಿ ಪ್ರದಾನ ಯಾವಾಗ?

'ಪ್ರಜಾವಾಣಿ' ಸಿನಿ ಸಮ್ಮಾನದ ನಾಲ್ಕನೇ ಆವೃತ್ತಿ ಅರ್ಥಪೂರ್ಣವಾಗಿ ನಡೆದಿದೆ. ಚಿತ್ರರಂಗದಲ್ಲಿನ ಹೊಸ ಪ್ರಯೋಗಗಳನ್ನು ಉತ್ತೇಜಿಸಲು, ಪ್ರತಿಭಾವಂತರಿಗೆ ಉತ್ತೇಜನ ನೀಡಲು ಇಂಥ ಪ್ರಯತ್ನಗಳು ಅಗತ್ಯ. ಕನ್ನಡ ಚಿತ್ರರಂಗ ಬಿಕ್ಕಟ್ಟಿನಲ್ಲಿರುವ ಸಂದರ್ಭದಲ್ಲಿ, ಚಿತ್ರರಂಗದ ಹೊಸ ಯೋಚನೆಗಳಿಗೆ ಪ್ರಶಸ್ತಿ–ಪುರಸ್ಕಾರಗಳಂತಹ ಉತ್ತೇಜನಗಳು ಪ್ರೇರಣೆ ಒದಗಿಸಬಹುದು.

'ಪ್ರಜಾವಾಣಿ' ಪತ್ರಿಕೆ ಸಿನಿ ಸಮ್ಮಾನ ಕಾರ್ಯಕ್ರಮದ ಮೂಲಕ ಕನ್ನಡ ಚಿತ್ರರಂಗವನ್ನು ಉತ್ತೇಜಿಸುವ ಪ್ರಯತ್ನದಲ್ಲಿದ್ದರೆ, ಇಂಥ ಪ್ರಯತ್ನಗಳನ್ನು ದಶಕಗಳಿಂದ ಮಾಡುತ್ತಾ ಬಂದಿರುವ ರಾಜ್ಯ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ತನ್ನ ಕರ್ತವ್ಯದಿಂದ ವಿಮುಖವಾಗಿದೆ. ಸರ್ಕಾರ ನೀಡುವ ಸಬ್ಸಿಡಿ ಹಾಗೂ ಪ್ರಶಸ್ತಿಗಳು ಚಿತ್ರೋದ್ಯಮದ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿವೆ. ಆದರೆ, 2020ರಿಂದ ಇಲ್ಲಿಯವರೆಗೆ ನೀಡಬೇಕಾದ ಸಿನಿಮಾ ಪ್ರಶಸ್ತಿಗಳನ್ನು ವಿತರಿಸುವ ಪ್ರಕ್ರಿಯೆ ನನೆಗುದಿಯಲ್ಲಿದೆ. 2020 ಮತ್ತು 2021ರ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭ ಕಳೆದ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯಲಿದೆ ಎಂದು ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಆ ಕಾರ್ಯಕ್ರಮ ಈವರೆಗೂ ನಡೆದಿಲ್ಲ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಆ ಕಾರ್ಯಕ್ರಮ ವಿಳಂಬವಿಲ್ಲದೆ ನಡೆಯುವಂತಾಗಲಿ.

ಚಂಪಕಮಾಲಾ, ಬೆಂಗಳೂರು

ಚುರುಮುರಿ



ಪ್ರಜಾ'ಶೇವ್'ಖಾತೆ!

• ತುರುವೇಕೆರೆ ಪ್ರಸಾದ್

'ಸೆಕೆಂಡ್ ರೌಂಡ್ನಾಗಾದ್ರೂ ವೊಸಬ್ರುಗೆ ಜಾಗ ಸಿಗ್ತದೋ ಎಂಗೋ?' ನಾಲ್ಕನೇ ರೌಂಡ್ ಒಳಗಿಳಿಸುತ್ತಾ ತೊದಲಿದ ಗುದ್ಲಿಂಗ.

'ಹಳುಬ್ರೇ ಕಾಲು ಆಕ್ಕಂಡು ಕುಂತವ್ರೆ, ಇನ್ನು ಹೊಸಬ್ರುಗೆ ಎಲ್ಲೈತ್ಲಾ ಜಾಗ?' ನಕ್ಕ ಮಾಲಿಂಗ.

'ಅಂಗಾರೆ ನಮ್ ಪಾಟೀಲಣ್ಣ, ಜಂತರಪ್ಪ ಇವರ ಕತೆ ಎಲ್ಲಾ ಎಂಗೆ?'

'ಎಲ್ಲಾ ಜಂತರ್ ಹೈ ಕಮಾಂಡ್ ಛೂ ಮಂತರ್! ಜಮೀರು, ಎಚ್ಚಿ ಕತೆನೇ ಹರ್ ಹರ್ ಮಹಾದೇವ್ ಆಗೈತೆ'.

'ಶಿಕ್ಷಣ, ಕೃಷಿ, ಸಂಸ್ಕೃತಿ ಇವೆಲ್ಲಾ ಯಾರೂ ಮುಟ್ಟದ ಏನೂ ಗಿಟ್ಟದ ಹಾಲ್ ಕರೀದ ಗೊಡ್ಡು ಹಸುಗಳಿದ್ದಂಗೆ! ಈಗ ಆ ಸಾಲಿಗೆ ಪ್ರಜಾಸೇವೆ ಅನ್ನೋ ಒಸ ಖಾತೆ ಬಂದದೆ. ಅದ್ಕೆ ಬೇಕಾರೆ ಒಸುಬ್ರು ಲಾಬಿ ಮಾಡ್ತೋದು. ಹಳಬ್ರಿಗೆ ಮೈಸೂರುಪಾಕು, ಬಾಸುಂದಿ, ಹೊಸುಬ್ರಿಗೆ ಜಾತ್ರೆ ಬತ್ತಾಸು, ಕಲ್ಯಾಣಸೇವೆ!' ಎಂದ ಕಲ್ಲೇಶಿ.

'ಈಗ ಎಲ್ರದೂ ಭಕ್ಷೀಸು, ಪ್ರಜಾ'ಶೇವ್'! ಇದು ತವುಡು ಕುಟ್ಟೋ ಬೂಸಾ ಇಲಾಖೆ. ಇದ್ಕಿಂತ ಬರ ಪರಿಹಾರ ಸಮಿತಿ ಚೇರ್ಮನ್ ಆಗದೇ ಲಾಯಕ್ಕು!'

'ವೂ ಲಂಚದ ಗೋಂದು ನಂಗೆ ಕುಂದು ನಿಂಗೆ, ದುಡ್ಡಿನ ಒರತೆ ನಂಗೆ, ಜನರ ಕೊರತೆ ನಿಂಗೆ ಅಂತ ಎಲ್ಲಾ ಇಲಾಖೆಯೋರೂ ಕಸನೆಲ್ಲಾ ಒತ್ತಾಕೋ ಗಾರ್ಬೇಜ್ ಇಲಾಖೆ ಆಯ್ತದೆ ಅಷ್ಟೇ'.

'ಮತ್ತೆ ಈಟೊಂದು ಜನಕ್ಕೆ ಖಾತೆಗಳನ್ನ ಎಂಗ್ಲಾ ಅಂಚೋದು?'

'ಈ ಪ್ರಜಾಶೇವ್ ಖಾತೆ ತರನೇಯ ಬೆಂಗಳೂರು ಬೃಹತ್ ಕಸ ವಿಲೇವಾರಿ, ಅಖಿಲ ಕರ್ನಾಟಕ ಸಕಲ ಕಾಮಗಾರಿ ಟೆಂಡರ್, ಆಲ್ ಇಲಾಖೆ ಟ್ರಾನ್ಸ್‌ಫರ್, ಇಂಗ್ ಎಲ್ಲಾ ಇಲಾಖೆನೂ ಒಡೆದು ಹಲಸಿನ್ ತೊಳೆ ತರ ಹಿಸಿದು ಇಟ್ರೆ 'ಒನ್ ವರ್ಕ್–ಒನ್ ಪೇಮೆಂಟ್' ಅಂತ ಜನಕ್ಕೆ ಉಪಕಾರ ಆಯ್ತದೆ. ಅಲ್ಲಿಷ್ಟು ಇಲ್ಲಿಷ್ಟು ಕೆರುಸ್ಕೊಳ್ಳೋ ಬದ್ಲು ಒಂದೇ ಕಡೆ ಗುಂಡು ಹೊಡುಸ್ಕೊಬಹುದು' ಎಂದ ಪರ್ಮೇಶಿ.

ಎಲ್ಲಾ ಬಕರಾಗಳ ತರ ತಲೆ ಸವರಿಕೊಂಡರು.

ಸಂಗತ

ಜನಪರ–ಜನಪ್ರಿಯ 'ಕೆಂಪೇಗೌಡ ಮಾದರಿ'

ಕೆಂಪೇಗೌಡರ ಹೆಸರನ್ನು ಮೆರೆಸುತ್ತ, ಅವರ ಆಡಳಿತ ಮಾದರಿ ನಿರ್ಲಕ್ಷಿಸಲಾಗಿದೆ. ಮಹಾನಗರದ ಇಂದಿನ ಸಮಸ್ಯೆಗಳಿಗೆ 'ಕೆಂಪೇಗೌಡರ ಮಾದರಿ'ಯಲ್ಲಿ ಉತ್ತರವಿದೆ.

• ಪ್ರೊ. ಷಾಕಿರಾ ಖಾನಂ

ಬೆಂಗಳೂರಿನ ನಿರ್ಮಾತೃ ರೂಪದಲ್ಲಿ ನಾಡಪ್ರಭು ಕೆಂಪೇಗೌಡರಿಗೆ ಚಾರಿತ್ರಿಕ ಮಹತ್ವವಿದೆ. ಅವರ ಮಹತ್ವ ನಗರ ನಿರ್ಮಾಣಕ್ಕೆ, ಆಡಳಿತಕ್ಕೆ ಮಾತ್ರ ಸೀಮಿತವಾದುದಲ್ಲ; ವ್ಯಕ್ತಿತ್ವ, ದೂರದೃಷ್ಟಿ, ಜನಪರ ಕಾಳಜಿ, ಸಾಮಾಜಿಕ ನ್ಯಾಯ ಮತ್ತು ಪರಿಸರ ಪ್ರೀತಿಯ ಕಾರಣಗಳಿಂದಲೂ ಅವರು ನಮಗೆ ಮಾದರಿ. ಜನಪ್ರಿಯತೆ ಹಾಗೂ ಜನಪರತೆಯ ಅತ್ಯುತ್ತಮ ಸಮೀಕರಣ ಕೆಂಪೇಗೌಡರು.

1510ರಲ್ಲಿ ಯಲಹಂಕದಲ್ಲಿ ಜನಿಸಿದ ಕೆಂಪೇಗೌಡರು, ವಿಜಯನಗರ ಆಸ್ಥಾನದಲ್ಲಿ ಪಳಗಿ, 1531ರಲ್ಲಿ ಆಡಳಿತ ವಹಿಸಿಕೊಂಡು ಹಂಪಿಯಂತಹ ನಾಡು ಕಟ್ಟಬೇಕೆಂದು ಕನಸು ಕಂಡವರು. ಆಗ ನಾಡು ಕಳ್ಳರ ಕಾಟ, ಪಾಳುಬಿದ್ದ ಹಳ್ಳಿಗಳಿಂದ ಬಳಲುತ್ತಿತ್ತು. ಆ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಿದ ಅವರು, ಅಧಿಕಾರವನ್ನು ಜನಸೇವೆಯ ಸಾಧನವಾಗಿಸಿಕೊಂಡರು. 1537ರಲ್ಲಿ ಬೆಂಗಳೂರು ನಿರ್ಮಾಣಕ್ಕೆ ಮುಂದಾದಾಗ ಅವರ ದೂರದೃಷ್ಟಿ ಎದ್ದು ಕಾಣುತ್ತದೆ. ಮಾಗಡಿ ರಸ್ತೆಯ ಗುಡ್ಡದಿಂದ ಬಯಲನ್ನು ನೋಡಿ ಹವಾಮಾನ, ನೀರು, ರಕ್ಷಣೆಯ ದೃಷ್ಟಿಯಿಂದ ಸ್ಥಳ ಆಯ್ಕೆ ಮಾಡಿ, ಗಡಿ ಗುರುತಿಸಿ, ನಾಲ್ಕು ಗೋಪುರ ಕಟ್ಟಿದರು. ಇಂದಿನ ಆ ಗೋಪುರಗಳು ಆ ಗಡಿಯ ಸಾಕ್ಷಿಗಳಾಗಿವೆ, ಇಂದಿನ ನಗರ ಯೋಜಕರಿಗೆ ಪಥ್ಯದಂತಿವೆ.

ಅವರ ಆಡಳಿತದ ಮೂಲಮಂತ್ರ ನ್ಯಾಯ ಮತ್ತು ಸಮಾನತೆ. 'ನ್ಯಾಯ ತಪ್ಪಿದರೆ ಜೀವ ಕೊಡುವೆ' ಎನ್ನುವುದು ಅವರ ಘೋಷಣೆ. 48 ಪಾಳೇಗಾರರಿಗೆ ಪ್ರಾತಿನಿಧ್ಯ ನೀಡಿ, ಜಾತಿಭೇದವಿಲ್ಲದೆ ಎಲ್ಲ ಸಮುದಾಯವನ್ನು ಆಡಳಿತದಲ್ಲಿ ತೊಡಗಿಸಿಕೊಂಡಿದ್ದ ಅವರು, ದೇವದಾಸಿ, ಬಾಲ್ಯವಿವಾಹ ಪದ್ಧತಿ ನಿಷೇಧಿಸಿದ್ದರು; ವಿಧವಾ ವಿವಾಹಕ್ಕೆ ಅವಕಾಶ ಕಲ್ಪಿಸಿದ್ದರು. ಶೈವ, ವೈಷ್ಣವ, ಜೈನ ಧರ್ಮಗಳಿಗೆ ಸಮಾನ ಗೌರವ ನೀಡಿ ಸರ್ವಧರ್ಮ ಸಮನ್ವಯ ಸಾಧಿಸಿದರು. ಬೆಂಗಳೂರು ಕರಗದಂತಹ ಹಬ್ಬಗಳ ಮೂಲಕ ಜನರಿಗೆ ಸೌಹಾರ್ದತೆಯ ಪಾಠವಾದರು.



ಕೆಂಪೇಗೌಡರ ಪರಿಸರ ಕಾಳಜಿ ಅನುಪಮ. 'ನೀರು, ಕೃಷಿ, ನಿಸರ್ಗ' ಎಂಬ ಧ್ಯೇಯದೊಂದಿಗೆ ಧರ್ಮಾಂಬುಧಿ, ಕೆಂಪಾಂಬುಧಿ, ಹಲಸೂರು ಸೇರಿ 1000ಕ್ಕೂ ಹೆಚ್ಚು ಕೆರೆಗಳನ್ನು ಕಟ್ಟಿಸಿದರು. ಕೆರೆ–ಕಾಲುವೆ ಜಾಲದಿಂದ ಬರಗಾಲದಲ್ಲೂ ನೀರಿನ ತೊಂದರೆ ಆಗದಂತೆ ನೋಡಿಕೊಂಡರು. 'ಕೆರೆ ಕಟ್ಟುವಾಗ ಮರ ಕಡಿಯಬೇಡಿ' ಎನ್ನುವುದು ಅವರ ತತ್ತ್ವವಾಗಿತ್ತು.

ಆರ್ಥಿಕತೆಯಲ್ಲಿ ಅವರು ವೃತ್ತಿ ಆಧಾರಿತ ಪೇಟೆಗಳನ್ನು ಸ್ಥಾಪಿಸಿದರು. ಚಿಕ್ಕಪೇಟೆ, ದೊಡ್ಡಪೇಟೆ, ಅರಳೇಪೇಟೆ, ರಾಗಿಪೇಟೆ, ಬಳೇಪೇಟೆ, ನಗರ್ತಪೇಟೆ ಮೂಲಕ ಪ್ರತಿಯೊಂದು ಕಸುಬಿಗೂ ಸ್ಥಳಾವಕಾಶ ಕಲ್ಪಿಸಿದರು. ರೈತರಿಗೆ ಕಡಿಮೆ ತೆರಿಗೆ, ಕಷ್ಟಕಾಲದಲ್ಲಿ ವಿನಾಯಿತಿ ನೀಡಿ 'ಭೂಮಿ ಇಲ್ಲದವರಿಗೆ ಭೂಮಿ' ಹಂಚಿದರು. ವ್ಯಾಪಾರಿಗಳಿಗೆ ಸುರಕ್ಷಿತ ಮಾರ್ಗ ಕಲ್ಪಿಸಿ, ಬೆಂಗಳೂರನ್ನು ದಕ್ಷಿಣ ಭಾರತದ ವ್ಯಾಪಾರ ಕೇಂದ್ರ ಮಾಡಿದರು.

ಮಾಗಡಿ, ಸಾವನದುರ್ಗ, ಹುತ್ರಿದುರ್ಗ, ಗಿರಿದುರ್ಗಗಳನ್ನು ಕಟ್ಟಿ ರಕ್ಷಣೆ ಬಲಪಡಿಸಿದರು. ಆದರೂ 'ಗೆಲುವು ಮುಖ್ಯವಲ್ಲ, ಗೆದ್ದ ನಂತರವೂ ಮನುಷ್ಯರಾಗಿ ಉಳಿಯುವುದು ಮುಖ್ಯ' ಎಂದು ಪ್ರತಿಪಾದಿಸಿದರು. ಮಾತುಕತೆ, ಸಂಧಾನಕ್ಕೆ ಮೊದಲ ಆದ್ಯತೆ ನೀಡಿದರು. ಅವರ ಜನಪ್ರಿಯತೆ ಸಹಿಸದ ಅಳಿಯ ರಾಮರಾಯ 1560ರಲ್ಲಿ ಐದು ವರ್ಷ ಸೆರೆಮನೆಯಲ್ಲಿಟ್ಟ. ಅವರು ಬಯಸಿದ್ದರೆ ಯುದ್ಧ ಮಾಡಬಹುದಿತ್ತು. ಸಂಪತ್ತು, ಅಧಿಕಾರಕ್ಕಿಂತ ಜನರ ಸಂಪತ್ತು ಮತ್ತು ಅವರ ಜೀವ ಅತ್ಯಮೂಲ್ಯ ಎನ್ನುವ ನಂಬಿಕೆಯಿಂದ ಶಿಕ್ಷೆ ಅನುಭವಿಸಿದರು. ಬಿಡುಗಡೆಗಾಗಿ ರಾಮರಾಯನ ಮುಂದೆ ಅಂಗಲಾಚಲಿಲ್ಲ. ರಾಮರಾಯನಿಗೆ ಅಪಾರವಾದ ಸಂಪತ್ತು ಕೊಡಬೇಕಾದಾಗ ಪ್ರಜೆಗಳ ಮೇಲೆ ತೆರಿಗೆಯ ಹೊರೆ ಹಾಕಬಾರದು ಎಂದು ಮಗನಿಗೆ ಕಟ್ಟಪ್ಪಣೆ ಮಾಡಿದರು. ಶಿಕ್ಷೆ ಅನುಭವಿಸಿ ರಾಜ್ಯಕ್ಕೆ ಮರಳಿದನಂತರ ರಾಜ್ಯಭಾರ ಮಗನಿಗೆ ಒಪ್ಪಿಸಿ ವಾನಪ್ರಸ್ಥಾಶ್ರಕ್ಕೆ ಹೋಗಿ 1569ರಲ್ಲಿ ಮೃತರಾದರು.


'ಅನ್ನಕ್ಕಿಂತ ಅಕ್ಷರ ಮುಖ್ಯ' ಎಂದು ಪಾಠಶಾಲೆ ಸ್ಥಾಪಿಸಿದರು. ಕನ್ನಡದಲ್ಲಿ ಆಡಳಿತ ನಡೆಸಿ ಭಾಷಾಭಿಮಾನ ಮೆರೆದರು. ಗವಿ ಗಂಗಾಧರೇಶ್ವರ ದೇವಾಲಯದಂತಹ ವೈಜ್ಞಾನಿಕ ವಾಸ್ತು ನಿರ್ಮಿಸಿ ಕಲೆಗೆ ಆಶ್ರಯ ನೀಡಿದರು. ಇಂದು ಬೆಂಗಳೂರು ಭಾರತದ ಸಿಲಿಕಾನ್ ವ್ಯಾಲಿ ಎನ್ನಿಸಿಕೊಂಡಿದ್ದರೂ ಅದರ ಆತ್ಮ ಕೆಂಪೇಗೌಡರ ತತ್ತ್ವಗಳದು. ಅವರ ಜಯಂತಿಯಂದು ಕೆರೆ ಉಳಿಸಿ, ಹಸಿರು ಬೆಳೆಸಿ, ಸಮಾನತೆ ತಂದರೆ ಅದೇ ನಿಜವಾದ ನಮನ.

ಕೆಂಪೇಗೌಡರು ಕಟ್ಟಿದ ಕೋಟೆ–ಕೊತ್ತಲಗಳು ಕಾಲದೊಂದಿಗೆ ಮರೆಯಾದರೂ, ಅವರು ಜೀವಿಸಿದ ಮೌಲ್ಯಗಳು ಅಮರ. ನೀರು–ಹಸಿರಿನ ಕಾಳಜಿ, ಎಲ್ಲರನ್ನೂ ಒಳಗೊಳ್ಳುವ ಆಡಳಿತ, ನ್ಯಾಯನಿಷ್ಠೆ, ಇವೆಲ್ಲವೂ ಇಂದಿನ ಬೆಂಗಳೂರು ಎದುರಿಸುತ್ತಿರುವ ಸವಾಲುಗಳಿಗೆ ಉತ್ತರ ನೀಡಬಲ್ಲವು. ಪ್ರತಿಮೆ, ಜಯಂತಿ ಆಚರಣೆ ಮಾತ್ರ ಸಾಲದು. ಕೆಂಪೇಗೌಡರ ತತ್ತ್ವಗಳನ್ನು ಆಡಳಿತದಲ್ಲಿ, ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ಅವರಿಗೆ ಸಲ್ಲುವ ನೈಜ ಗೌರವ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಸ್‌ಐಆರ್ ಉರುಳಿದ ವರ್ಷ, ಉಳಿದ ಪ್ರಶ್ನೆ

ಎಲ್ಲೆಲ್ಲಿ ಎಸ್‌ಐಆರ್?



ಆರು ಕೋಟಿ ಮತದಾರರಿಗೆ ಕೊಕ್

ಎರಡು ಹಂತಗಳಲ್ಲಿ 10 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಒಟ್ಟಾರೆಯಾಗಿ ಆರು ಕೋಟಿಯಷ್ಟು ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈ ಬಿಡಲಾಗಿದೆ. ಈ ಪೈಕಿ 5.18 ಕೋಟಿ ಅನರ್ಹ ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದ್ದು, ಮೃತಪಟ್ಟಿರುವ 66 ಲಕ್ಷ ಮಂದಿಯ ಹೆಸರುಗಳನ್ನು ಅಳಿಸಿಹಾಕಲಾಗಿದೆ.

- **ಮೊದಲ ಹಂತ:** 2025ರ ಜೂನ್ 24ಕ್ಕೆ ಆರಂಭ (ಬಿಹಾರದಲ್ಲಿ)
- **ಎರಡನೇ ಹಂತ:** 2025ರ ಅಕ್ಟೋಬರ್ 27ಕ್ಕೆ ಆರಂಭ (9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳು)
- **ಮೂರನೇ ಹಂತ:** 2026 ಮೇ 14ಕ್ಕೆ ಆರಂಭ (16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳು)

ಎಸ್‌ಐಆರ್ ಮುಗಿದಿರುವ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳು

ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸಗಢ, ಕೇರಳ, ಗುಜರಾತ್, ಮಧ್ಯಪ್ರದೇಶ, ಗೋವಾ ಪುದುಚೆರಿ, ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಲಕ್ಷದ್ವೀಪ

ಎಸ್‌ಐಆರ್ ಪ್ರಗತಿಯಲ್ಲಿರುವ ರಾಜ್ಯಗಳು

ಕರ್ನಾಟಕ, ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಹರಿಯಾಣ, ಜಾರ್ಖಂಡ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರಾ, ತೆಲಂಗಾಣ, ಉತ್ತರಾಖಂಡ, ನವದೆಹಲಿ, ಚಂಡೀಗಢ, ದಾದ್ರಾ ಮತ್ತು ನಗರ ಹವೇಲಿ ಹಾಗೂ ದಾಮನ್ ಮತ್ತು ದಿಯು

ಪ್ರಜಾವಾಣಿ ವಾರ್ತೆ

ಕೇಂದ್ರ ಚುನಾವಣಾ ಆಯೋಗದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಒಂದು ವರ್ಷ ಪೂರೈಸಿದೆ. ದೇಶದ ಚುನಾವಣಾ ಇತಿಹಾಸದಲ್ಲಿ ಅತ್ಯಂತ ವಿವಾದಾಸ್ಪದವಾಗಿದ್ದ ಎಸ್‌ಐಆರ್‌ನ ಎರಡು ಹಂತಗಳು ಮುಗಿದಿದ್ದು, ಮೂರನೇ ಹಂತ ನಡೆಯುತ್ತಿದೆ.

ಚುನಾವಣೆಗಳು ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿವೆ. ಚುನಾವಣೆಗಳು ನ್ಯಾಯಯುತವಾಗಿ ನಡೆಯಬೇಕು ಎಂದರೆ, ಮತದಾರರ ಪಟ್ಟಿ ಲೋಪರಹಿತವಾಗಿರಬೇಕು. ಈ ದಿಸೆಯಲ್ಲಿ ಎಸ್‌ಐಆರ್ ಅಗತ್ಯ ಎನ್ನುವುದು ಚುನಾವಣಾ ಆಯೋಗದ ಪ್ರತಿಪಾದನೆ. ಆದರೆ, ಪಟ್ಟಿಯನ್ನು ಲೋಪಮುಕ್ತಗೊಳಿಸುವ ನೆಪದಲ್ಲಿ ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರವು ಸಂವಿಧಾನದ ಮೂಲತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಿವೆ ಎನ್ನುವುದು ವಿರೋಧ ಪಕ್ಷಗಳು ಮತ್ತು ಸಾಮಾಜಿಕ ಕಾರ್ಯಕರ್ತರು, ಜನಪರ ಸಂಘಟನೆಗಳ ವಾದ.

ಮತದಾರರ ಪಟ್ಟಿಯಲ್ಲಿ ಕಾಲಾಂತರದಲ್ಲಿ ಅನೇಕ ರೀತಿಯ ಲೋಪಗಳು ನುಸುಳಿದ್ದು, ಅವುಗಳನ್ನು ಸರಿಪಡಿಸಲು ಎಸ್‌ಐಆರ್ ಅಗತ್ಯವಾಗಿದ್ದು, 2003ರಲ್ಲಿ ಇಂಥದ್ದೇ ಪರಿಷ್ಕರಣೆ ಮಾಡಲಾಗಿತ್ತು ಎನ್ನುವುದು ಚುನಾವಣಾ ಆಯೋಗದ ಸಮರ್ಥನೆ. ಆದರೆ, ಹಿಂದಿನ ಮತದಾರರ ಪರಿಷ್ಕರಣೆಗೂ ಪ್ರಸ್ತುತ ನಡೆಯುತ್ತಿರುವ ಪರಿಷ್ಕರಣೆಗೂ ಹಲವು ರೀತಿಯ ವ್ಯತ್ಯಾಸಗಳು ಇವೆ ಎನ್ನುವ ವಿಶ್ಲೇಷಣೆ ಇದೆ. ಹಿಂದೆ ನಡೆದ ಎಸ್‌ಐಆರ್ ಮತ್ತು ಈಗ ನಡೆಯುತ್ತಿರುವ ಎಸ್‌ಐಆರ್ ಎರಡರ ಸಂದರ್ಭ ಮತ್ತು ಪ್ರಕ್ರಿಯೆ ಭಿನ್ನ ಭಿನ್ನವಾಗಿವೆ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಚುನಾವಣಾ ಆಯೋಗದ ಮೂಲಕ ತನ್ನ ಹಿತಾಸಕ್ತಿ ರಕ್ಷಣೆ ಮಾಡಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳ ಮುಖಂಡರು ವಾದಿಸುತ್ತಿದ್ದಾರೆ. ಅದಕ್ಕೆ ಹಲವು ಕಾರಣಗಳನ್ನೂ ಅವರು ನೀಡುತ್ತಿದ್ದಾರೆ.

ದಾಖಲೆ ಸಲ್ಲಿಕೆ ವಿವಾದ: ಬಿಹಾರದಿಂದ ಆರಂಭವಾದ ಎಸ್‌ಐಆರ್ ನಂತರ ಪಶ್ಚಿಮ ಬಂಗಾಳ, ತಮಿಳುನಾಡು ಸೇರಿದಂತೆ ಒಟ್ಟು 10 ರಾಜ್ಯಗಳಲ್ಲಿ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆದಿದೆ. ವಿಶೇಷ ಎಂದರೆ, ವಿಧಾನಸಭಾ ಚುನಾವಣೆ ಸನಿಹದಲ್ಲಿದೆ ಎನ್ನುವಾಗ ಈ ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆದಿದೆ. ಆದರೆ, 2003ರಲ್ಲಿ ಆರು ತಿಂಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗಿತ್ತು. ಜತೆಗೆ, ಆಗ ಅಸ್ತಿತ್ವದಲ್ಲಿದ್ದ ಮತದಾರರ ಪಟ್ಟಿಯನ್ನು ಆಧಾರವಾಗಿಸಿಕೊಂಡು, ಮನೆ ಮನೆಗೆ ಭೇಟಿ ನೀಡಿ ಪಟ್ಟಿ ಪರಿಷ್ಕರಣೆ ಮಾಡಿದ್ದರು. ಮತದಾರರ ಗುರುತಿನ ಚೀಟಿಯನ್ನೂ ಆಗ ಒಂದು ದಾಖಲೆಯನ್ನಾಗಿ ಪರಿಗಣಿಸಲಾಗಿತ್ತು. 2026ರಲ್ಲಿ ರಾಜ್ಯಗಳ ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿ, ಆತುರಾತುರವಾಗಿ ಎಸ್‌ಐಆರ್ ಪ್ರಕ್ರಿಯೆ ಆರಂಭಿಸಲಾಗಿತ್ತು.

ಬಿಹಾರದಲ್ಲಿ ಎಸ್‌ಐಆರ್ ನಡೆಯುವಾಗ ಮತದಾರರು ಪಟ್ಟಿಯಲ್ಲಿ ತಮ್ಮ ಹೆಸರು ಉಳಿಸಿಕೊಳ್ಳಲು ದೃಢೀಕರಣಕ್ಕಾಗಿ ನೀಡಬೇಕಾಗಿದ್ದ 11 ದಾಖಲೆಗಳನ್ನು ಚುನಾವಣಾ ಆಯೋಗ ಹೆಸರಿಸಿತ್ತು. ಆದರೆ, ಮತದಾರರ ಪಟ್ಟಿ, ಪಡಿತರ ಚೀಟಿ, ವಾಹನ ಚಾಲನೆ ಪರವಾನಗಿ ಪತ್ರ ಮುಂತಾದ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಆಯೋಗ ಘೋಷಿಸಿತ್ತು. ಆಯೋಗವು ಪಟ್ಟಿ ಮಾಡಿದ್ದ ಪಾಸ್‌ಪೋರ್ಟ್ ಮುಂತಾದ 11 ದಾಖಲೆಗಳನ್ನು ಒದಗಿಸುವುದೇ ಅನೇಕ ಮತದಾರರಿಗೆ ಕಡುಕಷ್ಟದ ಕೆಲಸವಾಗಿತ್ತು. ಅದರಲ್ಲೂ ಗ್ರಾಮೀಣ ಪ್ರದೇಶದವರು, ಅಲ್ಪಸಂಖ್ಯಾತರು, ಹಿಂದುಳಿದವರು, ಹೊಟ್ಟೆಪಾಡಿಗಾಗಿ ನಗರಗಳಿಗೆ ವಲಸೆ ಹೋದವರು ತೀವ್ರ ಸಮಸ್ಯೆ ಎದುರಿಸಬೇಕಾಯಿತು. ಮಹಿಳಾ ಮತದಾರರೂ ಸೂಕ್ತ ದಾಖಲೆ ಸಲ್ಲಿಸಲು ಹೆಚ್ಚು ಶ್ರಮ ಪಡಬೇಕಾಯಿತು.

ನಂತರ ಕೆಲವು ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಈ ಬಗ್ಗೆ ಸುಪ್ರೀಂ ಕೋರ್ಟ್ ಮೊರೆಹೋದರು. ಪೌರತ್ವ ಸಾಬೀತುಪಡಿಸುವ ದಾಖಲೆಯ ಹೊರೆಯನ್ನು ಜನರ ಮೇಲೆ ಹೊರಿಸಲಾಗುತ್ತಿದೆ ಎನ್ನುವುದು ಅವರ ವಾದವಾಗಿತ್ತು. ಗುರುತಿನ ಪತ್ರಗಾಗಿ ವ್ಯಾಪಕವಾಗಿ ಬಳಸಲಾಗುತ್ತಿರುವ ದಾಖಲೆಗಳನ್ನು ಪರಿಗಣಿಸುವಂತೆ ಸೂಚಿಸಬೇಕು ಎಂದು ಅವರು ನ್ಯಾಯಾಲಯವನ್ನು ಕೋರಿದರು. ವಾದ ಆಲಿಸಿದ ನ್ಯಾಯಾಲಯವು, ಆಧಾರ್ ಅನ್ನು 12ನೆಯ ದಾಖಲೆಯಾಗಿ ಪರಿಗಣಿಸಬೇಕು ಎಂದು ಸೂಚಿಸಿತು.

ಅಲ್ಲಿಗೂ ಸಮಸ್ಯೆ ಇತ್ಯರ್ಥವಾಗಲಿಲ್ಲ. ಬಹುತೇಕ ಮತದಾರರ ಆಧಾರ್, ಶೈಕ್ಷಣಿಕ ಪ್ರಮಾಣ ಪತ್ರ ಮತ್ತಿತರ ದಾಖಲೆಗಳಲ್ಲಿ ಇರುವ ಹೆಸರಿಗೂ ಮತದಾರರ ಪಟ್ಟಿಯಲ್ಲಿ ಇರುವ ಹೆಸರಿಗೂ ಹೊಂದಾಣಿಕೆಯ ಸಮಸ್ಯೆ ತಲೆದೋರಿತು. ಈ ಕಾರಣಕ್ಕೆ ಅನೇಕರ ಹೆಸರುಗಳು ಪಟ್ಟಿಯಿಂದ ಕೈಬಿಡಲಾಯಿತು. ಪಶ್ಚಿಮ ಬಂಗಾಳದಲ್ಲಿ ಈ ಸಮಸ್ಯೆ ತೀವ್ರ ಸ್ವರೂಪ ಪಡೆಯಿತು. ಲಕ್ಷಾಂತರ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುವ ಅಥವಾ ಉಳಿಸಿಕೊಳ್ಳುವ ಬಗ್ಗೆ ತೀರ್ಮಾನಿಸಲು ಮೇಲ್ಮನವಿ ನ್ಯಾಯಮಂಡಳಿಗಳನ್ನು ಸ್ಥಾಪಿಸಲಾಯಿತು. ಬಾಧಿತರು ನ್ಯಾಯಮಂಡಳಿಗಳ ಮುಂದೆ ಸರತಿ ಸಾಲಿನಲ್ಲಿ ಗಂಟೆಗಟ್ಟಲೇ ನಿಲ್ಲಬೇಕಾಯಿತು. ಬಿಸಿಲು, ಗಾಳಿ, ಮಳೆಗೆ ಸಿಲುಕಿ ಹಲವರು ಸಾವಿಗೀಡಾದರು.

ಬಿಜೆಪಿಯೇತರ ಸರ್ಕಾರಗಳೇ ಗುರಿ?: ಬಿಹಾರದಲ್ಲಿ ನಡೆದ ಮೊದಲ ಹಂತದ ಎಸ್‌ಐಆರ್‌ಗೂ ಪಶ್ಚಿಮ ಬಂಗಾಳ, ತಮಿಳುನಾಡು ಮತ್ತಿತರ ರಾಜ್ಯಗಳಲ್ಲಿ ನಡೆದ ಎಸ್‌ಐಆರ್‌ಗೂ ಹಲವು ಪ್ರಕ್ರಿಯಾತ್ಮಕ ವ್ಯತ್ಯಾಸಗಳಿದ್ದವು. ಮತದಾರರು ಪೂರೈಸಬೇಕಾದ ದಾಖಲೆ, ಅದಕ್ಕೆ ನೀಡಿದ ಗಡುವು, ಚುನಾವಣಾ ಆಯೋಗದ ಕಾರ್ಯವೈಖರಿ ಹೀಗೆ ಹಲವು ರೀತಿಯ ವ್ಯತ್ಯಾಸಗಳು ಉಂಟಾದವು. ಬಿಹಾರ ಹೊರತುಪಡಿಸಿದರೆ ಪಶ್ಚಿಮ ಬಂಗಾಳ, ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ಬಿಜೆಪಿಯೇತರ ಸರ್ಕಾರಗಳು ಅಧಿಕಾರ ನಡೆಸುತ್ತಿದ್ದವು. ಈ ರಾಜ್ಯಗಳಲ್ಲಿ ಲಕ್ಷಾಂತರ ಮತದಾರರನ್ನು ಕೈಬಿಟ್ಟಿದ್ದರಿಂದ ಮತದಾರರ ಸಮೀಕರಣಗಳೇ ಬದಲಾದವು. ಎಸ್‌ಐಆರ್ ವೇಳೆ ಬಿಜೆಪಿಯೇತರ ಪಕ್ಷಗಳ ಮತ ಬ್ಯಾಂಕ್ ಅನ್ನೇ ಗುರಿಯಾಗಿಸಲಾಗಿದೆ ಎನ್ನುವ ಆರೋಪಗಳು ವ್ಯಕ್ತವಾದವು.

ಎಸ್‌ಐಆರ್ ಪ್ರಸ್ತುತ ಒಂದು ವರ್ಷ ಪೂರೈಸಿದೆ. ಆದರೆ, ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳು, ಅನುಮಾನಗಳು ಹಾಗೆಯೇ ಇವೆ. ಇದರ ನಡುವೆಯೇ ಮತ್ತಷ್ಟು ರಾಜ್ಯಗಳಲ್ಲಿ ಎಸ್‌ಐಆರ್ ನಡೆಸಲು ಚುನಾವಣಾ ಆಯೋಗ ಮುಂದಾಗಿದೆ. ಮತದಾರರ ಹಕ್ಕುಗಳನ್ನು ಕಾಪಾಡುವುದು, ಚುನಾವಣೆಗಳನ್ನು ಮುಕ್ತವಾಗಿ ನಡೆಸುವುದು, ಪ್ರಜಾಪ್ರಭುತ್ವದ ಪಾವಿತ್ರ್ಯವನ್ನು ಕಾಪಾಡುವುದು ಚುನಾವಣಾ ಆಯೋಗದ ಕರ್ತವ್ಯ. ಆದರೆ, ಅದಕ್ಕಾಗಿ ಸಂವಿಧಾನದ ಆಶಯಗಳನ್ನು ಬಲಿಕೊಡಬಾರದು ಎನ್ನುವುದು ಚುನಾವಣಾ ತಜ್ಞರ ಅಭಿಪ್ರಾಯ.

ಆಧಾರ: ಪಿಟಿಐ, ಪಿಐಬಿ, ಚುನಾವಣಾ ಆಯೋಗದ ವೆಬ್‌ಸೈಟ್, ಸಿಟಿಜನ್ಸ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್, ಸುಪ್ರೀಂ ಕೋರ್ಟ್ ಅಬ್ಸರ್ವರ್

ಚುನಾವಣಾ ಆಯೋಗ ಹೇಳಿರುವುದೇನು?

- ಮತದಾರರ ಪಟ್ಟಿಯನ್ನು ಲೋಪರಹಿತವಾಗಿ ಇರುವಂತೆ ನೋಡಿಕೊಳ್ಳುವುದು ಚುನಾವಣೆಯ ಮೂಲಭೂತ ಅಗತ್ಯ
- ಎಸ್‌ಐಆರ್ 2004ರವರೆಗೆ ಒಂದು ನಿಯಮಿತ ಪ್ರಕ್ರಿಯೆಯಾಗಿತ್ತು
- ಮತದಾರರ ಪಟ್ಟಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ನಗರೀಕರಣ, ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ವಲಸೆ ಇತ್ಯಾದಿಗಳಿಂದ ಹೆಸರುಗಳು ಪುನರಾವರ್ತನೆಯಾಗಿರುವ ಸಂಭವ ಇದೆ
- ಮತದಾರರ ಪಟ್ಟಿಗಳ ಸಾಚಾತನದ ಬಗ್ಗೆ ರಾಜಕೀಯ ಪಕ್ಷಗಳು ಅನೇಕ ಪ್ರಶ್ನೆಗಳನ್ನು ಎತ್ತುತ್ತಿವೆ
- ಮೃತರಾದವರು, ಹಲವು ಕಡೆ ಹೆಸರಿರುವವರು, ಅನರ್ಹ ಮತದಾರರನ್ನು ಮತದಾರ ಪಟ್ಟಿಯಿಂದ ತೆಗೆದುಹಾಕುವುದು



ಪ. ಬಂಗಾಳದಲ್ಲಿ ಭಿನ್ನ ವಿಧಾನ



ಎಸ್‌ಐಆರ್ ಪ್ರಕ್ರಿಯೆ ಅತಿ ಹೆಚ್ಚು ವಿವಾದಕ್ಕೆ ಈಡಾಗಿದ್ದು, ಪಶ್ಚಿಮ ಬಂಗಾಳದಲ್ಲಿ. ಉಳಿದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಚುನಾವಣಾ ಆಯೋಗ ಒಂದು ವಿಧಾನ ಅನುಸರಿಸಿದ್ದರೆ, ಪಶ್ಚಿಮ ಬಂಗಾಳದಲ್ಲಿ ಮತ್ತೊಂದು ವಿಧಾನವನ್ನು ಪಾಲಿಸಲಾಗಿತ್ತು. 'ತಾರ್ಕಿಕ ವ್ಯತ್ಯಾಸ' (logical discrepancy) ಎಂಬ ಮತ್ತೊಂದು ಕ್ರಮದಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗಿತ್ತು. ಮತದಾರರ ದಾಖಲೆಗಳಲ್ಲಿ ಹೆಸರು, ವಿಳಾಸ ಇನ್ನಿತರ ಮಾಹಿತಿಗಳು ಹೊಂದಾಣಿಕೆಯಾಗದ್ದನ್ನು ಮುಂದಿಟ್ಟುಕೊಂಡು ಅಂತಹ ಮತದಾರರ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳದೆ ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿತ್ತು. ಇಂತಹ ಮತದಾರರ ಸಂಖ್ಯೆ 27.06 ಲಕ್ಷ ಇತ್ತು.

ಈ ನಿಯಮವನ್ನು ಬೇರೆ ರಾಜ್ಯಗಳಿಗೆ ಅನ್ವಯಿಸಲಾಗಿರಲಿಲ್ಲ. ಈ ಪ್ರಕರಣವು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿತ್ತು. ಇವರ ಬಗ್ಗೆ ನಿರ್ಧಾರ ಕೈಗೊಳ್ಳುವುದಕ್ಕಾಗಿ ಸುಪ್ರೀಂ ಕೋರ್ಟ್ 19 ಮೇಲ್ಮನವಿ ನ್ಯಾಯ ಮಂಡಳಿಗಳನ್ನೂ ರಚಿಸಿತ್ತು. ಚುನಾವಣೆಗೂ ಮೊದಲು ನ್ಯಾಯಮಂಡಳಿಗಳ ಆದೇಶದ ಮೇರೆಗೆ ಚುನಾವಣಾ ಆಯೋಗವು 1,607 ಮತದಾರರ ಹೆಸರುಗಳನ್ನು ಪಟ್ಟಿಗೆ ಸೇರಿಸಿತ್ತು. ಹೆಸರುಗಳನ್ನು ಕೈಬಿಟ್ಟವರಲ್ಲಿ ಮುಸ್ಲಿಂ ಮತ್ತು ಮತುವಾ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಚುನಾವಣಾ ಆಯೋಗವು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪಾಲಿಸಲಾದ ಕ್ರಮಗಳನ್ನು ಬಲವಾಗಿ ಸಮರ್ಥಿಸಿಕೊಂಡರೆ, ಟಿಎಂಸಿ, ಕಾಂಗ್ರೆಸ್, ಎಡ ಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳು ತೀವ್ರವಾಗಿ ವಿರೋಧಿಸಿದ್ದವು. ಬಿಜೆಪಿಗೆ ಚುನಾವಣೆಯಲ್ಲಿ ಅನುಕೂಲ ಮಾಡಿಕೊಡಲು ಚುನಾವಣಾ ಆಯೋಗ ಈ ರೀತಿ ಮಾಡಿದೆ ಎಂದು ಆರೋಪಿಸಿದ್ದವು.

ಆಯೋಗಕ್ಕೆ ಬಲ ನೀಡಿದ ತೀರ್ಪು

ಬಿಹಾರದಲ್ಲಿ ನಡೆದಿದ್ದ ಎಸ್‌ಐಆರ್ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಅಲ್ಲದೇ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಹಲವು ಅರ್ಜಿಗಳನ್ನೂ ನ್ಯಾಯಾಲಯದಲ್ಲಿ ಸಲ್ಲಿಸಲಾಗಿತ್ತು. ಮೇ 27ರಂದು ಈ ಬಗ್ಗೆ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್ ಎಸ್‌ಐಆರ್ ನಡೆಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ ಎಂದು ಹೇಳಿತ್ತು.

'ಸಂವಿಧಾನದ 324ನೇ ವಿಧಿ ಹಾಗೂ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 21(3)ರಡಿ ಆಯೋಗಕ್ಕೆ ಅಧಿಕಾರ ಇದೆ' ಎಂದು ನ್ಯಾಯಪೀಠ ಪ್ರತಿಪಾದಿಸಿತ್ತು.

'ಚುನಾವಣೆಗಳು ನ್ಯಾಯಸಮ್ಮತವಾಗಿ ನಡೆಯಬೇಕು ಎಂಬುದು ಸಾಂವಿಧಾನಿಕ ಆದೇಶ. ಹೀಗಾಗಿ, ಆಯೋಗ ನಡೆಸುವ ಎಸ್‌ಐಆರ್ ಪ್ರಕ್ರಿಯೆಯು ಸಂವಿಧಾನದ ಈ ಆಶಯಕ್ಕೆ ಜೀವ ತುಂಬಲಿದೆ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠ ನೀಡಿದ್ದ ತೀರ್ಪು ಚುನಾವಣಾ ಆಯೋಗಕ್ಕೆ ಬಲ ನೀಡಿತ್ತು.

ಪಟ್ಟಿಯಿಂದ ಕೈಬಿಟ್ಟ ಮತದಾರರ ಸಂಖ್ಯೆ

(ಆವರಣದಲ್ಲಿರುವುದು ಎಸ್‌ಐಆರ್‌ಗೂ ಮುನ್ನ ಇದ್ದ ಮತದಾರರ ಸಂಖ್ಯೆ)

ಗೋವಾ	1.4 ಲಕ್ಷ (11.85 ಲಕ್ಷ)
ಕೇರಳ	24.62 ಲಕ್ಷ (2.79 ಕೋಟಿ)
ಛತ್ತೀಸಗಢ	28.44 ಲಕ್ಷ (2.12 ಕೋಟಿ)
ರಾಜಸ್ಥಾನ	44.28 ಲಕ್ಷ (5.47 ಕೋಟಿ)
ಮಧ್ಯಪ್ರದೇಶ	45.11 ಲಕ್ಷ (5.74 ಕೋಟಿ)
ಬಿಹಾರ	68.66 ಲಕ್ಷ (7.89 ಕೋಟಿ)
ಗುಜರಾತ್	77.69 ಲಕ್ಷ (5.08 ಕೋಟಿ)
ಪಶ್ಚಿಮ ಬಂಗಾಳ	91 ಲಕ್ಷ (7.66 ಕೋಟಿ)
ತಮಿಳುನಾಡು	1.02 ಕೋಟಿ (6.41 ಕೋಟಿ)
ಉತ್ತರ ಪ್ರದೇಶ	2.04 ಕೋಟಿ (15.44 ಕೋಟಿ)

ಕೇಂದ್ರಾಡಳಿತ ಪ್ರದೇಶಗಳು

ಪುದುಚೆರಿ	1.19 ಲಕ್ಷ (10.22 ಲಕ್ಷ)
ಅಂಡಮಾನ್ ಮತ್ತು ನಿಕೋಬಾರ್	69,283 (3.1 ಲಕ್ಷ)
ಲಕ್ಷದ್ವೀಪ	1,476 (57,813)

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಕೈಬಿಟ್ಟ ಮತದಾರರ (ನಿಧನರಾದವರನ್ನೂ ಸೇರಿಸಿ) ಅಂಕಿ ಅಂಶಗಳನ್ನು ಮಾತ್ರ ಇಲ್ಲಿ ನೀಡಲಾಗಿದೆ. ಮತದಾರರ ಹೆಸರು ತೆಗೆದ ನಂತರ, ದಾಖಲೆಗಳ ಸಹಿತ, ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ಅರ್ಜಿ ಸಲ್ಲಿಸಿದ ಅರ್ಹ ಮತದಾರರ ಹೆಸರುಗಳನ್ನು ಚುನಾವಣಾ ಆಯೋಗವು ಅಂತಿಮ ಮತದಾರರ ಪಟ್ಟಿಯಲ್ಲಿ ಸೇರಿಸಿತ್ತು. ಉದಾಹರಣೆಗೆ, ಎಸ್‌ಐಆರ್‌ಗೂ ಮುನ್ನ ಬಿಹಾರದಲ್ಲಿ 7.89 ಕೋಟಿ ಮತದಾರರು ಇದ್ದರು. ಎಸ್‌ಐಆರ್ ಆರಂಭಗೊಂಡ ನಂತರ, 2025ರ ಆಗಸ್ಟ್ 1ರಂದು ಪ್ರಕಟಿಸಿದ ಮೊದಲ ಕರಡು ಮತದಾರರ ಪಟ್ಟಿಯಲ್ಲಿ 65 ಲಕ್ಷ ಮಂದಿಯ ಹೆಸರನ್ನು ಕೈಬಿಡಲಾಗಿತ್ತು. ಆ ಬಳಿಕ ಮತ್ತೆ 3.66 ಲಕ್ಷ ಅನರ್ಹ ಮತದಾರರನ್ನು ಕೈಬಿಡಲಾಗಿತ್ತು. ನಂತರ ಅರ್ಜಿ ನಮೂನೆ 6ರ ಮೂಲಕ ಹೊಸದಾಗಿ 21.53 ಲಕ್ಷ ಮತದಾರರನ್ನು ಆಯೋಗ ಪಟ್ಟಿಗೆ ಸೇರ್ಪಡೆಗೊಳಿಸಿತ್ತು. ಬಿಹಾರದ ಅಂತಿಮ ಪಟ್ಟಿಯಲ್ಲಿ 7.42 ಕೋಟಿ ಮತದಾರರು ಇದ್ದರು

ಡ್ರಗ್ಸ್ ವಿರುದ್ಧ ಜಾಗೃತಿ : 6 ಕಿ.ಮೀ. ಮ್ಯಾರಥಾನ್‌ನಲ್ಲಿ ಓಡಿದ ವಿಜಯ್

ಚೆನ್ನೈ (ಪಿಟಿಐ) : ಅಂತರರಾಷ್ಟ್ರೀಯ ಮಾದಕ ವಸ್ತು ಮತ್ತು ಸಾಗಣೆ ವಿರೋಧಿ ದಿನದ ಪ್ರಯುಕ್ತ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಶುಕ್ರವಾರ ಮ್ಯಾರಥಾನ್‌ನಲ್ಲಿ 6 ಕಿ.ಮೀ ಓಡಿದರು.

ಚೆನ್ನೈನ ಮರೀನಾ ಬೀಚ್‌ನಲ್ಲಿ ನಡೆದ ಜಾಗೃತಿ ಮ್ಯಾರಥಾನ್‌ನಲ್ಲಿ ವಿಜಯ್ ವಿರಮಿಸದೆ ಅಷ್ಟೂ ದೂರ ಓಡಿದರು. ಸಾಮಾಜಿಕ ಉದ್ದೇಶಕ್ಕಾಗಿ ಸಾರ್ವಜನಿಕರೊಂದಿಗೆ ಅತಿ ಹೆಚ್ಚು ದೂರ ಓಡಿದ ತಮಿಳುನಾಡಿನ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಮಿಳುನಾಡು ಕ್ರೀಡಾ ಅಭಿವೃದ್ಧಿ ಪ್ರಾಧಿಕಾರ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮತ್ತು ಯುವಕರು ಭಾಗವಹಿಸಿದ್ದರು. ಮಾದಕವಸ್ತು ವಿರೋಧಿ ಓಟ ಮತ್ತು ಮ್ಯಾರಥಾನ್‌ಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಲಾಗಿತ್ತು.

ಮುಖ್ಯಮಂತ್ರಿಯ ಈ ನಡೆಗೆ ಮಾಜಿ ರಾಜ್ಯಪಾಲೆ ಹಾಗೂ ಬಿಜೆಪಿ ನಾಯಕಿ ಡಾ. ತಮಿಳಿಸೈ ಸೌಂದರರಾಜನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜುಲೈ 21ರಂದು ಟಿಎಂಸಿ ಬಲಪ್ರದರ್ಶನ



ಮಮತಾ

ಕೋಲ್ಕತ್ತ (ಪಿಟಿಐ): ಸಂಸದರು ಮತ್ತು ಶಾಸಕರ ಸಾಮೂಹಿಕ ಬಂಡಾಯದಿಂದ ನಲುಗುತ್ತಿರುವ ತೃಣಮೂಲ ಕಾಂಗ್ರೆಸ್‌ಗೆ ಜುಲೈ 21 ಅಸ್ತಿತ್ವ ಪರೀಕ್ಷೆಯ ದಿನವಾಗಿದೆ. 'ಹುತಾತ್ಮರ ದಿನ'ದ ವರ್ಷಾಚರಣೆ ಸಮಾವೇಶ ಮಮತಾ ಬ್ಯಾನರ್ಜಿ ಬಣದ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಗಲಿದೆ.

ಪಕ್ಷಕ್ಕೆ ಸಡ್ಡು ಹೊಡೆದಿರುವ ಬಂಡಾಯದ ಗುಂಪಿಗೆ 'ಪಕ್ಷ ನಿಷ್ಠೆ'ಯ ಸಂದೇಶ ರವಾನೆ ಮಾಡಲು ಮಮತಾ ಬೆಂಬಲಿಗರು 'ನಾವು ವಿಶ್ವಾಸಘಾತಕರಲ್ಲ' ಎಂಬ ಘೋಷಣೆಯೊಂದಿಗೆ ಸಜ್ಜಾಗಿದ್ದಾರೆ.

ಕಳೆದ ವರ್ಷ ಜುಲೈ 21ರಂದು ಮಮತ ಬ್ಯಾನರ್ಜಿ ಬೃಹತ್ ರ‍್ಯಾಲಿ ನಡೆಸಿದ್ದರು. ಲಕ್ಷಾಂತರ ಬೆಂಬಲಿಗರು, ಹಿರಿಯ ನಾಯಕರ ಸಮ್ಮುಖದಲ್ಲಿ ಅಧಿನಾಯಕಿ ಮಮತಾ ವಿಷ್ದ ಹೋರಾಟಗಳಿಗೆ ಕಾರ್ಯತಂತ್ರ ರೂಪಿಸಿದ್ದರು.

ಟಿಎಂಸಿ ಅಸ್ತಿತ್ವಕ್ಕೆ ಬಂದ 28 ವರ್ಷಗಳ ಇತಿಹಾಸದಲ್ಲೇ ಇದು ಅತ್ಯಂತ ಕ್ಲಿಷ್ಟ ಪರಿಸ್ಥಿತಿ. ವಿಧಾನಸಭೆ ಚುನಾವಣೆ ಸೋಲಿನ ನಂತರ ಬಣ ಬಂಡಾಯದಿಂದ ಪಕ್ಷ ಛಿದ್ರಗೊಂಡಿದೆ. ವಿಪಕ್ಷ ನಾಯಕ ರಿತಬ್ರತ ಬ್ಯಾನರ್ಜಿ ಅವರ ನೇತೃತ್ವದಲ್ಲಿ ಸಂಸದರು, ಶಾಸಕರು ಮತ್ತು ಹಿರಿಯ ಮುಖಂಡರು ಸಾಮೂಹಿಕವಾಗಿ ಪಕ್ಷ ತೊರೆಯುತ್ತಿದ್ದಾರೆ.

ಟಿಎಂಸಿಯ ಜುಲೈ 21ರ ಕಾರ್ಯಕ್ರಮ ಬೇರೆಯದೇ ಉದ್ದೇಶಕ್ಕೆ ಮಹತ್ವ ಪಡೆದುಕೊಂಡಿದೆ. ಅನಿರೀಕ್ಷಿತ ಬಂಡಾಯದ ನಂತರ ಪಕ್ಷದ ಸಂಘಟನೆ ಇನ್ನೂ ಸದೃಢವಾಗಿದೆಯೇ? ನಿಷ್ಠರ ಪಡೆ ಎಷ್ಟಿದೆ? ಎಂಬುದಕ್ಕೆ ಸಾಕ್ಷಿಯಾಗಲಿದೆ.

ಹೀಗಾಗಿ ಮಮತಾ ಮತ್ತು ಅಭಿಷೇಕ್ ಬ್ಯಾನರ್ಜಿ ನೇತೃತ್ವದ ಬಣವು 'ಹುತಾತ್ಮರ ದಿನ'ವೇ ಭಿನ್ನಮತೀಯರಿಗೆ ದೊಡ್ಡ ಸಂದೇಶ ರವಾನೆಗೆ ಸಜ್ಜಾಗಿದೆ.

ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ದೂರವಾಣಿ ಮೂಲಕ ಮಾತನಾಡಿದ್ದ ಮಮತಾ ಬ್ಯಾನರ್ಜಿ, 'ಪಕ್ಷ ನಿಷ್ಠರು ಒಗ್ಗಟ್ಟಾಗಿರಿ, ನಾವು ಹಣಕ್ಕಾಗಿ ಪಕ್ಷವನ್ನು ಮಾರಲು ಸಿದ್ಧರಿಲ್ಲ. ನಮ್ಮ ಜೊತೆ ಕೇವಲ ಐವರು ಕಾರ್ಯಕರ್ತರು ಉಳಿದರೂ ಜುಲೈ 21ರಂದು ಧರ್ಮತಾಲಾಕ್ಕೆ ತೆರಳುತ್ತೇವೆ' ಎಂದು ಗುಡುಗಿದ್ದರು.

ಕಚ್ಚತೀವು: ಕಾಂಗ್ರೆಸ್ ಆಡಳಿತದ ಕರಾಳ ಅಧ್ಯಾಯ– ಬಿಜೆಪಿ

ನವದೆಹಲಿ (ಪಿಟಿಐ): ಕಚ್ಚತೀವು ದ್ವೀಪವನ್ನು 1974ರಲ್ಲಿ ಶ್ರೀಲಂಕಾಗೆ ಹಸ್ತಾಂತರಿಸಿರುವುದು ಕಾಂಗ್ರೆಸ್ ಆಡಳಿತದ ಮತ್ತೊಂದು 'ಐತಿಹಾಸಿಕ ಕರಾಳ ಅಧ್ಯಾಯ' ಎಂದು ಬಿಜೆಪಿ ಶುಕ್ರವಾರ ಟೀಕಿಸಿದೆ.

'ಭಾರತದ ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ರಾಜಿ ಆಗುವ ಸುದೀರ್ಘ ಇತಿಹಾಸವನ್ನು ಕಾಂಗ್ರೆಸ್ ಹೊಂದಿದೆ' ಎಂದು ಅದು ಆರೋಪಿಸಿ ವಾಗ್ದಾಳಿ ನಡೆಸಿದೆ.

ಬಿಜೆಪಿ ರಾಷ್ಟ್ರೀಯ ವಕ್ತಾರ ಮತ್ತು ರಾಜ್ಯಸಭಾ ಸದಸ್ಯ ಸುಧಾಂಶು ತ್ರಿವೇದಿ ಅವರು, 'ಕಚ್ಚತೀವು ದ್ವೀಪವನ್ನು ಶ್ರೀಲಂಕಾಗೆ ಹಸ್ತಾಂತರ ಮಾಡಿದ ದಿನ, ಕಾಂಗ್ರೆಸ್ ಪಕ್ಷದ 'ಶರಣಾಗುವಿಕೆ ಕ್ಯಾಲೆಂಡರ್‌ನ ಮತ್ತೊಂದು ಕರಾಳ ದಿನ' ಎಂದು ಹೇಳಿದ್ದಾರೆ.

'1974ರ ಜೂನ್ 26ರಂದು ದ್ವೀಪವನ್ನು ಶ್ರೀಲಂಕಾಗೆ ಹಸ್ತಾಂತರಿಸಿತು. ಇದರ ಪರಿಣಾಮವಾಗಿ ತಮಿಳುನಾಡಿನ ಮೀನುಗಾರರು ಹಲವು ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಭಾರತದ ವಿಭಜನೆ ಮತ್ತು ಮುಸ್ಲಿಂ ಲೀಗ್‌ಗೆ ಶರಣಾಗುವ ಮೂಲಕ ಪಕ್ಷದ ಕ್ಯಾಲೆಂಡರ್‌ನಲ್ಲಿ ಶರಣಾಗುವಿಕೆ ದಿನಗಳು ಆರಂಭವಾದವು. ನಂತರ 1948ರಲ್ಲಿ ಪಾಕಿಸ್ತಾನಕ್ಕೆ ಶರಣಾಯಿತು. 1962ರಲ್ಲಿ ಚೀನಾಕ್ಕೆ ಶರಣಾಯಿತು' ಎಂದು ಹೇಳಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

27 ಜೂನ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ತ್ರಯೋದಶಿ ಗಂ. 2-44 ನಕ್ಷತ್ರ: ಅನುರಾಧ ಗಂ. 22-11 ಯೋಗ: ಸಾಧ್ಯ ಗಂ. 12-33 ಕರಣ ಕೌಲವ ಗಂ. 11-33, ಮಿಥುನ ಮಾಸದ 12 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-10 ಸೂರ್ಯಾಸ್ತ : 06-57, ಮುಸ್ಲಿಂ ದಿನಾಂಕ : 11 ಮೊಹರಂ, ಅದೃಷ್ಟ ಸಂಖ್ಯೆ : 8, 2

ಮೇಷ: ವಿದ್ಯಾಭ್ಯಾಸದಲ್ಲಿ ಉದಾಸೀನತೆ ತೋರಿದರೆ ಹಿನ್ನಡೆ ಎದುರಿಸಬೇಕಾಗುವುದು. ಕರ್ಮನಿಷ್ಠೆ ಮತ್ತು ಪ್ರಾಮಾಣಿಕತೆಗೆ ತಕ್ಕ ಫಲ ಪಡೆಯುತ್ತೀರಿ. ಕೌಟುಂಬಿಕ ಕಲಹಗಳು ಎದುರಾಗದಂತೆ ನೋಡಿಕೊಳ್ಳಿ.

ವೃಷಭ: ಜೀವನೋಪಾಯಕ್ಕೆ ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಖಾದಿ ಉದ್ಯಮದವರಿಗೆ ಬೇಡಿಕೆ ಪೂರೈಸಲು ಸಾಧ್ಯವಾಗದ ರೀತಿಯಲ್ಲಿ ವ್ಯವಹಾರ ನಡೆಯಲಿದೆ.

ಮಿಥುನ: ಪಕ್ಷನಿಷ್ಠೆ, ಸೇವಾ ಮನೋಭಾವದಿಂದ ಅಧಿಕಾರ ಪಡೆದುಕೊಳ್ಳುವಿರಿ. ಯಶಸ್ಸಿಗೆ ಪೂರಕವಾದ ವಾತಾವರಣ ಮೂಡಿಬರಲಿದೆ. ಮೂಳೆಗೆ ಸಂಬಂಧಿಸಿದ ವ್ಯಾಧಿಗಳಿಂದ ಎಚ್ಚರವಾಗಿರಿ.

ಕರ್ಕಾಟಕ: ವ್ಯವಹಾರಗಳಲ್ಲಿ ನವೀನ ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿ ನೋಡಬಹುದು. ಗುತ್ತಿಗೆದಾರರಿಂದ ಗೃಹ ನಿರ್ಮಾಣದ ವಿಚಾರದಲ್ಲಿ ಪಾಠ ಕಲಿಯುವಂತಾಗುವುದು.

ಸಿಂಹ: ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ದುಡಿದರೆ ಪ್ರಗತಿಯ ಹಾದಿಯನ್ನು ಕಾಣಬಹುದು. ಸಮಸ್ಯೆಯ ಸರಮಾಲೆ ಬಗೆಹರಿಸಲು ಜಾಣತನ ತೋರುವಿರಿ.

ಕನ್ಯಾ: ಪ್ರಯಾಣದಲ್ಲಿ ಜಾಗ್ರತೆವಹಿಸುವುದು ಅತ್ಯಗತ್ಯ. ವಿಲಾಸೀ ಜೀವನದ ಸುಖ ಅನುಭವಿಸಬಹುದು. ಸ್ನೇಹಿತರಲ್ಲಿ ವಿಶ್ವಾಸ ವೃದ್ಧಿ. ನೀಲಿ ಬಣ್ಣ ಶುಭ ತರಲಿದೆ.

ತುಲಾ: ಒಡಹುಟ್ಟಿದವರಲ್ಲಿ ಒಡೆದು ಹೋದ ಭಾವನಾತ್ಮಕ ಸಂಬಂಧಗಳನ್ನು ಮತ್ತೆ ಬೆಳೆಸಲು ಸೂಕ್ತ ಕಾಲ. ಸಹೋದ್ಯೋಗಿಗಳಲ್ಲಿ ಗೌರವಾನ್ವಿತವಾಗಿ ವರ್ತಿಸುವುದರಿಂದ ಕೆಲಸಗಳು ಸರಾಗವಾಗಿ ಸಾಗಲಿವೆ.

ವೃಶ್ಚಿಕ: ಕುಟುಂಬಸ್ಥರಲ್ಲಿ ಸಣ್ಣ ಪುಟ್ಟ ಕಾರಣಗಳಿಗಾಗಿ ಅಥವಾ ವಿನಾಕಾರಣ ದ್ವೇಷವನ್ನು ಬೆಳೆಸಿಕೊಳ್ಳಬೇಡಿ. ಇತರರು ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿವೆ.

ಧನು: ಶುಭಸಮಾರಂಭಗಳ ಸಂಭ್ರಮವು ಹಿರಿಯರ ಮನಸ್ಸಿಗೆ ಸಂತೋಷ ತರುತ್ತದೆ. ವೃತ್ತಿಗೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿಗಳು ಲಭಿಸಲಿವೆ. ವಾದ–ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ಮಕರ: ಸಾಮಾಜಿಕ ಕ್ಷೇತ್ರದಲ್ಲಿನ ಕಾರ್ಯನಿರ್ವಹಣೆ ಕೆಟ್ಟದೃಷ್ಟಿ ದೋಷಕ್ಕೆ ಕಾರಣವಾಗಲಿದೆ. ಸಲಹೆ ಸೂಚನೆಗಳನ್ನು ಮೇಲಧಿಕಾರಿಗಳು ಮಾನ್ಯ ಮಾಡಿದ್ದಕ್ಕೆ ಸಂತೋಷವಾಗಲಿದೆ.

ಕುಂಭ: ಸರ್ಕಾರಿ ಕಾಮಗಾರಿಯ ವ್ಯವಹಾರಕ್ಕೆ ಸಂಬಂಧಿಸಿದ ಬಗ್ಗೆ ವರಿಷ್ಠರೊಂದಿಗೆ ಮಾತುಕತೆಗಳು ನಡೆಯಲಿವೆ. ಗೃಹೋಪಕರಣ ವಸ್ತುಗಳ ಖರೀದಿಯಲ್ಲಿ ಎಡವಿದ ಅನುಭವ ನಿಮಗಾಗಬಹುದು.

ಮೀನ: ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸುವುದರಿಂದ ಆರೋಗ್ಯವನ್ನು ಹಿಡಿತದಲ್ಲಿ ಇರಿಸಿಕೊಳ್ಳಬಹುದು. ನಿಮ್ಮ ಆಲೋಚನೆಗಳಿಗೆ ಸರಿಯಾದ ವಾತಾವರಣ ದೊರಕಲಿವೆ.

ಪದಬಂಧ 6446


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಗಿದಾಗ ನೀರಿನ ಹಬೆ ಕಾಣಿಸಿತಲ್ಲಾ! (2)
3.ಅಮಲೇರಿಸುವಂಥದ್ದು ಇದು (3)
5.ಮಾವನ ಹತ್ತಿರ ಬೀಸುತ್ತಿರುವ ಗಾಳಿ (4)
6.ಗಡ ಗಡ ನಡುಗಿಸಿದ ಗಂಡು ಕೋತಿ (3)
7.ಇದು ಮಣ್ಣಿಗೆ ಸಂಬಂಧಿಸಿದ್ದು (3)
8.ಸಮಾಜದ ಸರ್ವರಿಗೂ ಸಂಬಂಧಿಸಿದ್ದು (5)
9.ಸಂಧಿಯಲ್ಲಿದ್ದು ನಿಧಾನವಾಗಿ ನಡೆಸಿರುವ ರಾಜಿ (3)
10.ಏನೊಂದೂ ಗಲಾಟೆಯಿಲ್ಲದೆ ಅತ್ಯಂತ ಶಾಂತವಾದುದು (3)
13.ಕರ ನಡುವಿಟ್ಟಿರುವ ಘಟನೆ (4)
14.ಪರ್ವತದ ಮೇಲಿನಿಂದ ಹರಿಯುವ ಝರಿ (3)
15.ಹರಕೆಗೆ ಬಲಿಕೊಡುವ ಪ್ರಾಣಿ (2)

ಮೇಲಿಂದ ಕೆಳಕ್ಕೆ

1.ಯೋಗವಿದ್ದರಷ್ಟೇ ಇದು ಪ್ರಯೋಜನ (4)
2.ಸತ್ತವರನ್ನು ಹೂಳುವ ಸ್ಥಳ (3)
4.ವರನಿಗೆ ಕೇಳಿಸಿರುವುದು ಮಧುರವಾದ ಧ್ವನಿ (4)
5.ಪರ್ಯಾಯವಾಗಿ ಬಂದಿರುವ ಅಂತ್ಯ (5)
7.ಈತ ಅಡುಗೆಯಲ್ಲಿ ಪರಿಣಿತ (5)
9.ಸತ್ತವರೆಂದು ಬದುಕಿಸುವುದೆಂದು ನಂಬಲಾಗಿರುವ ಮೂಲಿಕೆ (4)
11.ತರಿಯನ್ನು ಹಿಡಿದಿರುವವಳು ತೆಳ್ಳಗಿನ ಸೊಂಟದವಳು (4)
12.ಮನೆಯ ಎರಡು ತೊಲಗಳ ನಡುವಿರುವ ಪ್ರದೇಶ (3)



6445ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಡವಿ 3.ವಿಧೇಯಕ 5.ಬರಗು 6.ಹತ್ಯಾಕಾಂಡ 7.ವರಮಾನತೆರಿಗೆ 10.ಸಮಾಧಾನಿ 12. ಪ್ರಸೂತಿ 15.ಜತುಗೃಹ 16.ಕಡಾಣಿ

ಮೇಲಿಂದ ಕೆಳಕ್ಕೆ:

1.ಅಕ್ಕ 2.ವಿವರ 4.ಕರಂಡಕ 5.ಬಡವ 6.ಹಣತೆ 8.ಮಾನಿನಿ 9.ಗೆಳತಿ 10.ಅಸಹಜ 3.ಸೂತಕ 14.ಗುಣಿ

ಸುಡೊಕು 6829

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
						7		4
	8	4	1		9		3	

6828 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ವಿಮಾನಯಾನ ಸಂಸ್ಥೆಗಳಿಗೆ ನಷ್ಟ?

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ವಿಮಾನಯಾನ ಕಂಪನಿಗಳು ಒಟ್ಟು ₹36 ಸಾವಿರ ಕೋಟಿಯಿಂದ ₹38 ಸಾವಿರ ಕೋಟಿವರೆಗೆ ನಷ್ಟ ಕಾಣುವ ಸಾಧ್ಯತೆ ಇದೆ ಎಂದು ರೇಟಿಂಗ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ಈ ಮೊದಲು ₹12 ಸಾವಿರ ಕೋಟಿವರೆಗೆ ನಷ್ಟ ಆಗಬಹುದು ಎಂದು ಅಂದಾಜಿಸಿತ್ತು. ಆದರೆ, ಇದೀಗ ತನ್ನ ಅಂದಾಜನ್ನು ಪರಿಷ್ಕರಿಸಿದೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಡಾಲರ್ ಎದುರು ರೂಪಾಯಿ ಮೌಲ್ಯವು ಇಳಿಕೆ ಆಗಿರುವುದು, ಪ್ರಯಾಣಿಕರ ಸಂಖ್ಯೆಯು ತಗ್ಗಿರುವುದು, ಕಚ್ಚಾ ತೈಲ ದರ ಏರಿಕೆಯಿಂದ ವಿಮಾನ ಇಂಧನ ದರ ಹೆಚ್ಚಳವಾಗಿದೆ. ಇದು ನಷ್ಟ ಹೆಚ್ಚಳಕ್ಕೆ ಕಾರಣವಾಗಿದೆ ಎಂದಿದೆ.

ಸಂಘರ್ಷದಿಂದ ದೇಶದ ಮತ್ತು ಅಂತರರಾಷ್ಟ್ರೀಯ ಮಾರ್ಗದಲ್ಲಿ ಸಂಚರಿಸುವ ವಿಮಾನಗಳ ಸಂಖ್ಯೆಯು ಕಡಿಮೆ ಆಗಬಹುದು ಎಂದು ಹೇಳಿದೆ.

ಕಳೆದ ವರ್ಷದ ಜೂನ್‌ಗೆ ಹೋಲಿಸಿದರೆ ಪ್ರಸಕ್ತ ವರ್ಷದ ಜೂನ್ ವೇಳೆಗೆ ವಿಮಾನ ಇಂಧನ ದರದಲ್ಲಿ ಶೇ 26ಕ್ಕೂ ಹೆಚ್ಚು ಏರಿಕೆಯಾಗಿದೆ ಎಂದು ತಿಳಿಸಿದೆ.

ಭೂಕಂಪ: ಮೃತರ ಸಂಖ್ಯೆ 920ಕ್ಕೆ ಏರಿಕೆ

3,300 ಜನರಿಗೆ ಗಾಯ ● ಭೀತಿಯಲ್ಲಿ ವೆನೆಜುವೆಲಾ ಜನರು



ಲಾ ಗ್ವೈರಾ ರಾಜ್ಯದ ಕ್ಯಾರಬಲ್ಲೆಡಾ ನಗರದಲ್ಲಿ ಕಟ್ಟಡದ ಅವಶೇಷಗಳ ಬಳಿ ಸ್ವಯಂ ಸೇವಕರು ಶೋಧ ನಡೆಸಿದರು —ಎಎಫ್‌ಪಿ ಚಿತ್ರ

ಲಾ ಗ್ವೈರಾ (ವೆನೆಜುವೆಲಾ) (ಎಪಿ/ಎಎಫ್‌ಪಿ): ವೆನೆಜುವೆಲಾದಲ್ಲಿ ಬುಧವಾರ ಸಂಜೆ ಸಂಭವಿಸಿದ ಎರಡು ಪ್ರಬಲ ಭೂಕಂಪಗಳಲ್ಲಿ ಮೃತಪಟ್ಟವರ ಸಂಖ್ಯೆ ಶುಕ್ರವಾರ 920ಕ್ಕೆ ಏರಿಕೆಯಾಗಿದ್ದು, 3,300ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸುವ ಕಾರ್ಯಾಚರಣೆ ನಡೆಯುತ್ತಿದ್ದು, ಹಲವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಇನ್ನೂ ಸಾವಿರಾರು ಜನರು ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಮುಂದುವರಿದಿದೆ.

ವೆನೆಜುವೆಲಾದಲ್ಲಿ ಶತಮಾನದ ಅವಧಿಯಲ್ಲಿ ಸಂಭವಿಸಿದ ಅತ್ಯಂತ ಪ್ರಬಲ ಭೂಕಂಪ ಇದಾಗಿದ್ದು, ದೇಶದ ವಿವಿಧ ನಗರಗಳಲ್ಲಿ ಸಾವಿರಾರು ಕಟ್ಟಡಗಳು ನೆಲಕ್ಕುರುಳಿವೆ. ಇದರಿಂದ ಸಾವು ನೋವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ.

'ಜಗತ್ತಿನ ವಿವಿಧ ದೇಶಗಳಿಂದ ಬರುತ್ತಿರುವ ರಕ್ಷಣಾ ತಂಡಗಳನ್ನು ಸ್ವಾಗತಿಸುತ್ತೇನೆ. ಎಲ್ಲರೂ ಜತೆಗೂಡಿ, ಬದುಕುಳಿದಿರುವವರ ರಕ್ಷಣೆಗಾಗಿ ದಣಿವರಿಯದೆ, ತೀವ್ರಗತಿಯಲ್ಲಿ ಕೆಲಸ ಮಾಡೋಣ' ಎಂದು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ತಿಳಿಸಿದರು.

ಅವಳಿ ಭೂಕಂಪಗಳಿಂದ ಭಯಭೀತರಾದ ದೇಶದ ವಿವಿಧ ನಗರಗಳ ಜನರು ಕಟ್ಟಡಗಳ ಅವಶೇಷಗಳ ಬಳಿ ಕಾಣೆಯಾದವರಿಗಾಗಿ ಹುಡುಕಾಟ ನಡೆಸಿದರು. ಕೆಲವರು ತಮ್ಮ ಮಕ್ಕಳು, ಕುಟುಂಬದ ಸದಸ್ಯರ ಹೆಸರುಗಳನ್ನು ಕೂಗುತ್ತಾ ಅವಶೇಷಗಳಡಿ ತಡಕಾಡಿದರು. ಕೆಲವರು ಮಕ್ಕಳಿಗಾಗಿ ಹುಡುಕಿ ಕಣ್ಣೀರು ಹಾಕಿದ ದೃಶ್ಯಗಳು ಮನಕಲಕುವಂತಿತ್ತು.

ರಾಜಧಾನಿ ಕರಾಕಸ್‌ನಲ್ಲಿನ ಪ್ರಮುಖ ವಿಮಾನ ನಿಲ್ದಾಣವೂ ಹಾನಿ ಆಗಿದ್ದರಿಂದ ಮುಚ್ಚಲ್ಪಟ್ಟಿದೆ. ಇದು ನೆರವುಕಾರ್ಯಗಳನ್ನು ಜಟಿಲಗೊಳಿಸಿದೆ.

ರಕ್ಷಣಾ ಕಾರ್ಯ: ದೂಳಿನಿಂದ ಆವೃತವಾದ ಕಟ್ಟಡಗಳ ಅವಶೇಷಗಳಿಂದ ಕೆಲ ಗಾಯಾಳುಗಳನ್ನು ರಕ್ಷಣಾ ತಂಡವರು ಗುರುವಾರ, ಶುಕ್ರವಾರ ರಕ್ಷಿಸಿದರು. ಅವರಲ್ಲಿ ಕೆಲ ಮಕ್ಕಳೂ ಸೇರಿದ್ದರು. ಅಲ್ಲದೆ ಕೆಲ ಪ್ರಾಣಿಗಳನ್ನೂ ರಕ್ಷಿಸಲಾಗಿದೆ.

ಸಿಮೆಂಟ್ ಸ್ಲ್ಯಾಬ್ ಅಡಿಯಲ್ಲಿ ಸಿಲುಕಿದ್ದ ಮಹಿಳೆಯೊಬ್ಬರನ್ನು ರಕ್ಷಣಾ ತಂಡವರು ರಕ್ಷಿಸಿದರು. ಮೂರು ಮತ್ತು ಹತ್ತು ವರ್ಷದ ಮಕ್ಕಳ ಶವಗಳನ್ನು ಕಂಬಳಿಗಳಲ್ಲಿ ಸುತ್ತಿಕೊಂಡು ಹೋಗುತ್ತಿದ್ದಾಗ ದುಃಖತಪ್ತ ತಾಯಿಯೊಬ್ಬರು ಅಳುತ್ತ ಕುಸಿದು ಬಿದ್ದ ಘಟನೆಯೂ ನಡೆಯಿತು.

ನಿರ್ಬಂಧ ತೆರವು: ವೆನೆಜುವೆಲಾ ಮೇಲೆ ಹೇರಿದ್ದ ಕೆಲ ನಿರ್ಬಂಧಗಳನ್ನು ಅಮೆರಿಕ ಅಕ್ಟೋಬರ್ 23 ರವರೆಗೆ ತೆರವುಗೊಳಿಸಲು ಮುಂದಾಗಿದೆ. ಭೂಕಂಪದಿಂದ ತತ್ತರಿಸಿರುವ ದೇಶದಲ್ಲಿ ಸುಗಮವಾಗಿ ಪರಿಹಾರ ಕಾರ್ಯಗಳು ನಡೆಯಲಿ ಎಂಬ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಪರಿಹಾರ ಕಾರ್ಯಕ್ಕೆ ನೆರವು

ಭೂಕಂಪದಿಂದ ಹಾನಿಗೀಡಾಗಿರುವ ದೇಶದ ಆಸ್ಪತ್ರೆಗಳು ಮತ್ತು ಮನೆಗಳಿಗೆ ₹1,886 ಕೋಟಿ (200 ಮಿಲಿಯನ್ ಡಾಲರ್) ಪುನರ್ ನಿರ್ಮಾಣ ನಿಧಿ ರಚಿಸಲಾಗುವುದು ಎಂದು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ತಿಳಿಸಿದರು.

ಮೆಕ್ಸಿಕೊ, ಕತಾರ್, ಬ್ರೆಜಿಲ್, ಸ್ಪೇನ್, ಪೋರ್ಚುಗಲ್, ಕೆನಡಾ, ಭಾರತ ಸೇರಿದಂತೆ ಹಲವು ದೇಶಗಳು ನೆರವಿನ ಹಸ್ತಾ ಚಾಚಿವೆ. ಕೆಲ ದೇಶಗಳು ತುರ್ತು ಮತ್ತು ಸೇನಾ ಸಿಬ್ಬಂದಿ, ಶೋಧ ತಂಡ, ವೈದ್ಯಕೀಯ ಉಪಕರಣಗಳು, ಔಷಧಗಳು, ನೀರು ಶುದ್ಧೀಕರಣ ಯಂತ್ರಗಳು, ಡ್ರೋನ್‌ಗಳನ್ನು ರವಾನಿಸಿವೆ.

'ವೆನೆಜುವೆಲಾಗೆ ಅಮೆರಿಕ ಎಲ್ಲ ರೀತಿಯ ನೆರವು ನೀಡಲಿದೆ. ಅದು ದೊಡ್ಡ ಪ್ರಮಾಣದ ನೆರವಾಗಿರಲಿದ್ದು, ತ್ವರಿತಗತಿಯಲ್ಲಿ ಒದಗಿಸಲಾಗುತ್ತದೆ. ಅದು ಪರಿಣಾಮಕಾರಿಯೂ ಆಗಿರಲಿದೆ' ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಭಾರತದ ನೆರವು: ಭಾರತವು ವೈದ್ಯಕೀಯ ಸಲಕರಣೆಗಳು, ಔಷಧಗಳು, ಕ್ಷೇತ್ರ ಆಸ್ಪತ್ರೆ ಘಟಕಗಳು ಸೇರಿದಂತೆ ಇತರ ಪರಿಹಾರ ಸಾಮಗ್ರಿಗಳನ್ನು ಶುಕ್ರವಾರ ರವಾನಿಸಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹710
12 ಕ್ಕೆ	₹94
ಮೈಸೂರು: 100 ಕ್ಕೆ	₹725

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹264
ಆರ್‌ಎಸ್‌ಎಸ್-5	₹259
ಗುಡ್ ಲಾಟ್	₹225

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹490-597
ದ್ವಿತಳಿ (ಬಿ.ವಿ)	₹422-799

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1450 (1450)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1470 (1470)

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹23600
ಎಸಿ	₹14000
ಆರ್‌ಪಿ	₹18600
ಆರ್‌ಸಿ	₹10250

ಎಫ್‌ಎಂಸಿಜಿ: ಐಟಿಸಿ ₹37 ಸಾವಿರ ಕೋಟಿ ವಹಿವಾಟು

ನವದೆಹಲಿ (ಪಿಟಿಐ): ಐಟಿಸಿ ಕಂಪನಿಯ ಶೀಘ್ರ ವಿಲೇವಾರಿಯಾಗುವ ಗ್ರಾಹಕ ಸರಕುಗಳ (ಎಫ್‌ಎಂಸಿಜಿ) ಮಾರಾಟವು 2026ನೇ ಸಾಲಿನ ಆರ್ಥಿಕ ವರ್ಷದಲ್ಲಿ ಶೇ 8.8 ರಷ್ಟು ಹೆಚ್ಚಿದ್ದು, ₹37 ಸಾವಿರ ಕೋಟಿ ವಹಿವಾಟು ದಾಖಲಾಗಿದೆ ಎಂದು ಕಂಪನಿಯ ವಾರ್ಷಿಕ ವರದಿ ಹೇಳಿದೆ.

ಐಟಿಸಿಯ ಎಫ್‌ಎಂಸಿಜಿ ವಿಭಾಗವು ಆಶೀರ್ವಾದ್, ಬಿಂಗೊ, ಸನ್‌ಫೀಸ್ಟ್, ಕ್ಲಾಸ್‌ಮೇಟ್, ಯಿಪ್ಪಿ, ಮಂಗಳದೀಪ್, ಫಿಯಾಮ ಸೇರಿದಂತೆ 30 ಬಗೆಯ ವಿವಿಧಬ್ರ್ಯಾಂಡ್‌ಗಳನ್ನುಒಳಗೊಂಡಿದೆ.

'ಈಗಾಗಲೇ ಕಂಪನಿಯ ಉತ್ಪನ್ನಗಳು ದೇಶದ 28 ಕೋಟಿ ಕುಟುಂಬಗಳನ್ನು ತಲುಪಿದ್ದು, ದೇಶದ ನಂ.1 ಎಫ್‌ಎಂಸಿಜಿ ಕಂಪನಿಯಾಗುವ ಗುರಿಯೊಂದಿಗೆ ಮುನ್ನಡೆಯುತ್ತಿದ್ದೇವೆ' ಎಂದು ಐಟಿಸಿ ಪ್ರಕಟಣೆ ತಿಳಿಸಿದೆ.

ಕಂಪನಿಯು 2026ನೇ ಸಾಲಿನ ಹಣಕಾಸು ವರ್ಷದಲ್ಲಿ 100ಕ್ಕೂ ಹೆಚ್ಚು ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಆಶೀರ್ವಾದ್ ಗೋಧಿಹಿಟ್ಟು ಮತ್ತು ಬಿಂಗೊ ಬ್ರ್ಯಾಂಡ್‌ಗಳು ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿವೆ ಎಂದು ಹೇಳಿದೆ.

ಜಿಡಿಪಿ ಶೇ 6.8ರಷ್ಟು ಪ್ರಗತಿ ನಿರೀಕ್ಷೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಆರ್ಥಿಕತೆಯು (ಜಿಡಿಪಿ) ಶೇ 6.6ರಿಂದ ಶೇ 6.8ರವರೆಗೆ ಬೆಳವಣಿಗೆಯು ಆಗುವ ನಿರೀಕ್ಷೆ ಇದೆ ಎಂದು 'ಇ.ವೈ ಎಕಾನಮಿ ವಾಚ್' ವರದಿ ತಿಳಿಸಿದೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಇಳಿಕೆಯಿಂದ ಇಂಧನ ಮಾರುಕಟ್ಟೆಯಲ್ಲಿ ಪೂರೈಕೆ ಒತ್ತಡ ಕಡಿಮೆ ಆಗಲಿದ್ದು, ವೆಚ್ಚವು ಸುಧಾರಿಸಲಿದೆ. ಅಲ್ಲದೆ, ದೇಶದ ಬೆಳವಣಿಗೆ ನೆರವಾಗಲಿದೆ ಎಂದು ಹೇಳಿದೆ.

2026-27ರ ಆರ್ಥಿಕ ವರ್ಷದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ದರವು ಶೇ 4.5ರಷ್ಟಿರಲಿದೆ ಎಂದು ಹೇಳಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಇಳಿಕೆ ಮಟ್ಟದಲ್ಲಿದ್ದರೆ ಮತ್ತು ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಾಗಣೆ ಸಾಮಾನ್ಯವಾದರೆ ದೇಶದ ಬೆಳವಣಿಗೆಯು ಸಹಜ ಸ್ಥಿತಿಗೆ ಮರಳಬಹುದು ಎಂದು ತಿಳಿಸಿದೆ.

₹8.5 ಲಕ್ಷ ಕೋಟಿ ಹೂಡಿಕೆ

ಜಾಗತಿಕ ಅನಿಶ್ಚಿತತೆಯ ನಡುವೆಯೂ ಕಂಪನಿಗಳ ಘೋಷಣೆ



ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅನಿಶ್ಚಿತತೆ ನಡುವೆಯೂ ಈ ವರ್ಷದ ಆರಂಭದಿಂದ ಇದುವರೆಗೆ ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ₹8.5 ಲಕ್ಷ ಕೋಟಿ (90 ಬಿಲಿಯನ್ ಡಾಲರ್) ಹೂಡಿಕೆ ಮಾಡುವುದಾಗಿ ಘೋಷಿಸಿವೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ಕ್ಲೌಡ್ ಕಂಪ್ಯೂಟಿಂಗ್, ಡಿಜಿಟಲ್ ಮೂಲಸೌಕರ್ಯ, ತಯಾರಿಕೆ ಮತ್ತು ಕೈಗಾರಿಕಾ ತಂತ್ರಜ್ಞಾನ ಸೇರಿದಂತೆ ವಿವಿಧ ವಲಯಗಳಲ್ಲಿ ಹೂಡಿಕೆ ಮಾಡಲು ಜಾಗತಿಕ ಮಟ್ಟದಲ್ಲಿನ ಕಂಪನಿಗಳು ಯೋಜಿಸಿವೆ. ಇದು ಭಾರತವನ್ನು ಜಾಗತಿಕ ಬಂಡವಾಳಕ್ಕೆ ಪ್ರಮುಖ ತಾಣವಾಗಿ ಭಾರತದ ಸ್ಥಾನವನ್ನು ಬಲಪಡಿಸುತ್ತದೆ ಎಂದು ಮೂಲಗಳು ತಿಳಿಸಿವೆ.

ಇ-ಕಾಮರ್ಸ್ ಕ್ಷೇತ್ರದ ಅಮೆಜಾನ್ ಕಂಪನಿಯು 2030ರ ವೇಳೆಗೆ ದೇಶದಲ್ಲಿ ಅಂದಾಜು ₹4.5 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಘೋಷಿಸಿದೆ. ಈ ಹೂಡಿಕೆಯು, ಕ್ಲೌಡ್ ಮೂಲಸೌಕರ್ಯ, ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ಸೇವೆಗಳ ವಲಯದಲ್ಲಿನ ಬೆಳವಣಿಗೆಗೆ ಅನುಕೂಲ ಆಗಲಿದೆ ಎಂದು ಹೇಳಿದೆ.

ಈ ತಿಂಗಳ ಆರಂಭದಲ್ಲಿ ಆಸ್ಟ್ರೇಲಿಯಾದ ಏರ್‌ಟಂಕ್ ಕಂಪನಿ, 5 ಗಿಗಾವಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರ ಸ್ಥಾಪಿಸಲು ₹2.83 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಹೇಳಿತ್ತು. ಇದು ದೇಶದ ಡಿಜಿಟಲ್ ಮೂಲಸೌಕರ್ಯ ವಲಯದಲ್ಲಿನ ಅತಿದೊಡ್ಡ ಹೂಡಿಕೆ ಆಗಿದೆ.

ಸೇಂಟ್-ಗೋಬೈನ್, ₹10,854 ಕೋಟಿ, ಕೆನಡಾ ಪೆನ್ಶನ್ ಪ್ಲಾನ್ ಇನ್ವೆಸ್ಟ್‌ಮೆಂಟ್ ಬೋರ್ಡ್ (ಸಿಪಿಪಿಐಬಿ) ₹7 ಸಾವಿರ ಕೋಟಿ, ಕೈಗಾರಿಕಾ ತಂತ್ರಜ್ಞಾನ ಕಂಪನಿ ಎಬಿಬಿ ₹707 ಕೋಟಿ ಹೂಡಿಕೆ ಮತ್ತು ಗೂಗಲ್ ಕಂಪನಿಯು ₹1.41 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಹೇಳಿದೆ.

ಪಶ್ಚಿಮ ಏಷ್ಯಾದ ಸಂಘರ್ಷ ನಡುವೆಯೂ ಬಹುರಾಷ್ಟ್ರೀಯ ಕಂಪನಿಗಳು ಈ ಹೂಡಿಕೆಯ ಘೋಷಣೆ ಮಾಡಿವೆ. ವ್ಯಾಪಾರ ನಿಯಮಗಳಲ್ಲಿನ ಬದಲಾವಣೆ, ಅಭಿವೃದ್ಧಿ ಹೊಂದಿದ ಪ್ರಮುಖ ದೇಶಗಳಲ್ಲಿನ ನಿಧಾನಗತಿಯಲ್ಲಿನ ಆರ್ಥಿಕ ಬೆಳವಣಿಗೆಯು ಭಾರತವನ್ನು ತಯಾರಿಕಾ, ತಂತ್ರಜ್ಞಾನ, ಡಿಜಿಟಲ್ ಮೂಲಸೌಕರ್ಯದ ನಿರ್ಣಾಯಕ ಮಾರುಕಟ್ಟೆಯನ್ನಾಗಿ ಮಾಡಿದೆ.

ಭಾರತದ ಮಾರುಕಟ್ಟೆ, ಡಿಜಿಟಲ್ ಆರ್ಥಿಕತೆಯ ವಿಸ್ತರಣೆ, ಮೂಲಸೌಕರ್ಯದ ಸುಧಾರಣೆ ಮತ್ತು ಸರ್ಕಾರದ ನಿಯಮಗಳು ವಿದೇಶಿ ಹೂಡಿಕೆಯನ್ನು ಆಕರ್ಷಿಸುತ್ತಿವೆ ಎಂದು ತಿಳಿಸಿವೆ.

ಎ.ಐ ಸೇವೆಯಿಂದ ವರಮಾನ: ನಾಸ್ಕಾಂ

ದೇಶದಲ್ಲಿನ ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳು ಕೃತಕ ಬುದ್ಧಿಮತ್ತೆ ಸೇವೆಗಳಿಂದ ವಾರ್ಷಿಕ ಅಂದಾಜು ₹1 ಲಕ್ಷ ಕೋಟಿಗೂ ಅಧಿಕ ವರಮಾನವನ್ನು ಈಗಾಗಲೇ ಗಳಿಸುತ್ತಿವೆ ಎಂದು ನಾಸ್ಕಾಂ ತಿಳಿಸಿದೆ.

ವಲಯದ ಶೇ 25ರಷ್ಟು ಕಂಪನಿಗಳು ಯಶಸ್ವಿಯಾಗಿ ಎ.ಐ ಪ್ರಯೋಗವನ್ನು ಉತ್ಪಾದನಾ ಮಟ್ಟಕ್ಕೆ ವರ್ಗಾಯಿಸಿವೆ ಎಂದಿದೆ.

ಕೃತಕ ಬುದ್ಧಿಮತ್ತೆ ಹೆಚ್ಚಳದಿಂದ ಸಾಂಪ್ರದಾಯಿಕ ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ತಗ್ಗಿಸಬಹುದು ಎಂಬ ಆತಂಕವನ್ನು ನ್ಯೂಯಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಉದ್ಯಮದ ನಾಯಕರು ತಳ್ಳಿಹಾಕಿದ್ದಾರೆ. ಈ ವಲಯವು ಎ.ಐ ಯುಗದಲ್ಲಿ ಜಾಗತಿಕ ಉದ್ಯಮದ ಪರಿವರ್ತನೆಗೆ ಕೇಂದ್ರ ಬಿಂದುವಾಗಿದೆ ಎಂದಿದ್ದಾರೆ.

1 ಸಾವಿರ ದಾಸ್ತಾನು ಕೇಂದ್ರ ಹೊಂದಿದ ಫ್ಲಿಪ್ ಕಾರ್ಟ್ ಮಿನಿಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ವರಿತವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸುತ್ತಿರುವ ಫ್ಲಿಪ್ ಕಾರ್ಟ್ ಸಮೂಹದ ಫ್ಲಿಪ್ ಕಾರ್ಟ್ ಮಿನಿಟ್ಸ್, ಎರಡು ವರ್ಷದೊಳಗೆ ದೇಶದಾದ್ಯಂತ ಸಣ್ಣ ಪ್ರಮಾಣದ 1 ಸಾವಿರ ಸರಕು ದಾಸ್ತಾನು ಕೇಂದ್ರಗಳನ್ನು ಸ್ಥಾಪಿಸಿದೆ. 2024ರ ಆಗಸ್ಟ್‌ನಲ್ಲಿ ಫ್ಲಿಪ್ ಕಾರ್ಟ್ ಮಿನಿಟ್ಸ್, ಆರಂಭವಾಯಿತು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿನ ವಹಿವಾಟು ಶೇ 42ರಷ್ಟು ಹೆಚ್ಚಳವಾಗಿದ್ದು, ಕಾರ್ಯಾದೇಶವು 5 ಪಟ್ಟು ಏರಿಕೆಯಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಸ್ತುತ ಕಂಪನಿಯು 130ಕ್ಕೂ ಅಧಿಕ ನಗರಗಳಲ್ಲಿ ಸೇವೆ ನೀಡುತ್ತಿದೆ. ಒಟ್ಟು ಗ್ರಾಹಕರ ಪೈಕಿ ಜೆನ್ ಝೀ ತಲೆಮಾರಿನವರ ಪಾಲು ಶೇ 40ಕ್ಕಿಂತ ಹೆಚ್ಚಿದ್ದು, ವೇಗವಾಗಿ ಬೆಳೆಯುತ್ತಿರುವ ಗ್ರಾಹಕ ಸಮೂಹವಾಗಿದೆ ಎಂದು ತಿಳಿಸಿದೆ.

ಟೌನ್‌ಶಿಪ್ ವಿಚಾರವನ್ನು ಬೀದಿಯಲ್ಲಿ ಚರ್ಚಿಸಲಾಗದು, ಎಚ್‌ಡಿಕೆ ವಿಧಾನಸೌಧಕ್ಕೆ ಬರಲಿ ಎಂಬ ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಸಮರ್ಥನೀಯವೇ?

ಹೌದು / ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಆ್ಯಪಲ್ ಉತ್ಪನ್ನಗಳ ಬೆಲೆ ಭಾರಿ ಏರಿಕೆ

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯು ಐಫೋನ್ ಹೊರತುಪಡಿಸಿ ಬಹುತೇಕ ಉಳಿದೆಲ್ಲಾ ಉತ್ಪನ್ನಗಳ ಬೆಲೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದೆ.

ಮೆಮೊರಿ ಚಿಪ್‌ಗಳ ಬೆಲೆ ಏರಿಕೆಯಿಂದ ಈ ದರ ಹೆಚ್ಚಳ ಮಾಡಲಾಗಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯ ಮ್ಯಾಕ್‌ಬುಕ್ ಮತ್ತು ಐಪ್ಯಾಡ್ ಮಾದರಿಗಳ ಆರಂಭಿಕ ಬೆಲೆಯನ್ನು ಶೇ 20ರಿಂದ ಶೇ 42ರವರೆಗೆ ಹೆಚ್ಚಿಸಿದೆ. 14 ಇಂಚಿನ ಮ್ಯಾಕ್‌ಬುಕ್ ಪ್ರೊ ದರ ₹2,99,900ಕ್ಕೆ ಏರಿಕೆಯಾಗಿದೆ. ಈ ಮೊದಲು ಇದರ ಆರಂಭಿಕ ಬೆಲೆ ₹2,49,900 ಇತ್ತು. 13 ಇಂಚಿನ ಐಪ್ಯಾಡ್ ಏರ್ ಬೆಲೆಯು ಶೇ 41ರಷ್ಟು ಹೆಚ್ಚಳವಾಗಿದ್ದು, ₹84,900ರಿಂದ ₹1,19,900ಕ್ಕೆ ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

ಮ್ಯಾಕ್‌ಬುಕ್ ನಿಯೋ, ಮ್ಯಾಕ್‌ಬುಕ್ ಏರ್, ಮ್ಯಾಕ್‌ಬುಕ್ ಪ್ರೊ, ಆ್ಯಪಲ್ ಟಿ.ವಿ, ಐಪ್ಯಾಡ್ ಏರ್ ಮತ್ತು ಐಪ್ಯಾಡ್ ಪ್ರೊ ವೈ-ಫೈ ಬೆಲೆಯಲ್ಲಿ ಹೆಚ್ಚಳವಾಗಿದೆ. ಹೊಸ ದರವನ್ನು ಕಂಪನಿಯು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಕೃತಕ ಬುದ್ಧಿಮತ್ತೆ ದತ್ತಾಂಶ ಕೇಂದ್ರಗಳ ತ್ವರಿತ ವಿಸ್ತರಣೆಯು ಮೆಮೊರಿ ಚಿಪ್‌ಗಳಿಗೆ ಅಗಾಧ ಬೇಡಿಕೆ ಹೆಚ್ಚಿಸಿದೆ. ಇಷ್ಟೊಂದು ಬೆಲೆ ಏರಿಕೆ ನಾವು ಇದುವರೆಗೆ ನೋಡಿಲ್ಲ. ನಾವು ಇಲ್ಲಿಯವರೆಗೆ ನಮ್ಮ ಗ್ರಾಹಕರನ್ನು ಈ ಹೆಚ್ಚಳದಿಂದ ರಕ್ಷಿಸಿದ್ದೇವೆ. ಆದರೆ, ಈಗ ದರ ಹೆಚ್ಚಳದ ಅನಿವಾರ್ಯ ಹಂತಕ್ಕೆ ತಲುಪಿದ್ದೇವೆ ಎಂದು ತಿಳಿಸಿದೆ.

ಷೇರಿನ ಮೌಲ್ಯ ಇಳಿಕೆ: ಆ್ಯಪಲ್ ಕಂಪನಿಯು ತನ್ನ ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸಿದ್ದರಿಂದ ವಹಿವಾಟಿನ ವೇಳೆ ಷೇರಿನ ಮೌಲ್ಯ ಶೇ 6ರವರೆಗೆ ಇಳಿದಿತ್ತು.

ಉತ್ತರ ಪ್ರದೇಶ 'ಕೈ' ಉಸ್ತುವಾರಿ ಬದಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶದಲ್ಲಿ ಪಕ್ಷ ಸಂಘಟನೆಗೆ ಒತ್ತು ನೀಡಿರುವ ಕಾಂಗ್ರೆಸ್, ಪಕ್ಷದ ರಾಜ್ಯ ಉಸ್ತುವಾರಿಯನ್ನು ಶುಕ್ರವಾರ ಬದಲಿಸಿದೆ. ಅವಿನಾಶ್ ಪಾಂಡೆ ಜಾಗಕ್ಕೆ ದಲಿತ ನಾಯಕ ರಾಜೇಂದ್ರ ಪಾಲ್ ಗೌತಮ್ ಅವರನ್ನು ಉಸ್ತುವಾರಿಯನ್ನಾಗಿ ಪಕ್ಷ ನೇಮಿಸಿದೆ.

ಹರಿಯಾಣದ ಉಸ್ತುವಾರಿಯನ್ನಾಗಿ ಸಂಜಯ್ ದತ್ ಅವರನ್ನು ನೇಮಕ ಮಾಡಲಾಗಿದೆ. ಇಲ್ಲಿಯವರೆಗೆ ಉಸ್ತುವಾರಿಯಾಗಿದ್ದ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಇತ್ತೀಚೆಗೆ ನೇಮಕ ಮಾಡಲಾಗಿತ್ತು.

ಪಕ್ಷವು ಅಜಯ್ ಕುಮಾರ್ ಲಲ್ಲು ಅವರ ಬದಲಿಗೆ ಒಡಿಶಾದ ಉಸ್ತುವಾರಿಯಾಗಿ ಲಾಲ್ಜಿ ದೇಸಾಯಿ ಅವರನ್ನು ನೇಮಿಸಿದೆ.

ರಾಜೇಂದ್ರ ಪಾಲ್ ಅವರು ಈ ಹಿಂದೆ ಎಎಪಿಯಲ್ಲಿದ್ದರು. ಪ್ರಸ್ತುತ ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಗೌತಮ್ ಅವರು ಕೆಲವು ನಾಯಕರೊಂದಿಗೆ ಬಿಎಸ್‌ಪಿ ನಾಯಕಿ ಮಾಯಾವತಿ ನಿವಾಸಕ್ಕೆ ಇತ್ತೀಚೆಗೆ ಭೇಟಿ ನೀಡಿ ಸಮಾಲೋಚಿಸಿದ್ದರು. ಇದಕ್ಕೆ ಪಕ್ಷದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಅವರಿಗೆ ಪಕ್ಷವು ಷೋಕಾಸ್ ನೋಟಿಸ್ ನೀಡಿತ್ತು.

ಸೇವಾದಳಕ್ಕೆ ಶ್ರೀನಿವಾಸ್: ಎಐಸಿಸಿ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸ್ ಅವರನ್ನು ಕಾಂಗ್ರೆಸ್ ಸೇವಾದಳದ ಮುಖ್ಯ ಸಂಘಟಕರಾಗಿ ನೇಮಕ ಮಾಡಿದೆ. ಲಾಲ್ಜಿ ದೇಸಾಯಿ ಈ ವರೆಗೆ ಈ ಹುದ್ದೆಯಲ್ಲಿದ್ದರು.



ಬಿ.ವಿ. ಶ್ರೀನಿವಾಸ್

ಶ್ರೀನಿವಾಸ್ ಅವರು ಈ ಹಿಂದೆ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು. ಕಳೆದ ವರ್ಷ ಎಐಸಿಸಿ ಕಾರ್ಯದರ್ಶಿಯಾಗಿ ನೇಮಕ ಮಾಡಿ ಗುಜರಾತ್ ಉಸ್ತುವಾರಿ ನೀಡಲಾಗಿತ್ತು.

'ಪ್ರಧಾನ್ ಗೋ ಬ್ಯಾಕ್': ದೇಶವ್ಯಾಪಿ ಚಳವಳಿ

ನವದೆಹಲಿ (ಪಿಟಿಐ): ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ರಾಷ್ಟ್ರವ್ಯಾಪಿ 'ಪ್ರಧಾನ್ ಗೋ ಬ್ಯಾಕ್' ಚಳವಳಿ ಆರಂಭಿಸುವುದಾಗಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಶುಕ್ರವಾರ ಘೋಷಿಸಿದ್ದಾರೆ.

'ಜೂನ್ 28ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ಹೋರಾಟಗಾರ ಸೋನಮ್ ವಾಂಗ್ಚುಕ್ ಅನಿರ್ದಿಷ್ಟಾವಧಿ ಉಪವಾಸ ಆರಂಭಿಸಲಿದ್ದಾರೆ. ವಿದ್ಯಾರ್ಥಿಗಳು, ರೈತರು ಹಾಗೂ ನಾಗರಿಕರೂ ನಮ್ಮೊಂದಿಗೆ ಭಾಗಿಯಾಗಬೇಕು' ಎಂದು ದೀಪ್ಕೆ ಸುದ್ದಿಗೋಷ್ಠಿಯಲ್ಲಿ ಕೋರಿದ್ದಾರೆ.

'ನಾವು ಪ್ರತಿಭಟನೆ ಆರಂಭಿಸಿ ಒಂದು ವಾರ ಕಳೆದರೂ ಸಚಿವರು ಯಾವುದೇ ಹೊಣೆಗಾರಿಕೆ ಪ್ರದರ್ಶಿಸಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನ್ ಅವರ ರಾಜೀನಾಮೆ ಪಡೆಯಬೇಕು. ಇಲ್ಲದಿದ್ದರೆ ಅವರು ಅಸಮರ್ಥ ಪ್ರಧಾನಿ ಎನಿಸಿಕೊಳ್ಳುತ್ತಾರೆ ಹಾಗೂ ವಿದ್ಯಾರ್ಥಿಗಳ ಸಾವಿಗೆ ನೇರ ಹೊಣೆ ಆಗುತ್ತಾರೆ' ಎಂದು ಅವರು ಅಸಮಾಧಾನ ಹೊರಹಾಕಿದರು.

> **ಪ್ರಧಾನ್ ಕೈಗೆ ವಿದ್ಯಾರ್ಥಿಗಳ ರಕ್ತದ ಕಲೆ ಅಂಟಿದೆ. ಅವರು ನಮ್ಮನ್ನು ಭಯೋತ್ಪಾದಕರು ಎಂದು ಕರೆಯುತ್ತಾರೆ, ಆದರೆ ವಿದ್ಯಾರ್ಥಿಗಳ ಸಾವಿಗೆ ಕಾರಣರಾದ ಸಚಿವರೇ ನಿಜವಾದ ಭಯೋತ್ಪಾದಕ**
> **ಅಭಿಜೀತ್ ದೀಪ್ಕೆ,** ಸಿಜೆಪಿ ಸಂಸ್ಥಾಪಕ

ಸ್ವದೇಶಕ್ಕೆ ಭಾರತೀಯರ ಮೃತದೇಹ

ದೋಹಾ (ಪಿಟಿಐ): ಕತಾರ್‌ನ ಕೈಗಾರಿಕಾ ನಗರ ರಾಸ್ ಲಫನ್‌ನ ಕಾರ್ಖಾನೆಯೊಂದರಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟ 12 ಭಾರತೀಯರ ಪೈಕಿ, ನಾಲ್ವರ ಪಾರ್ಥಿವ ಶರೀರಗಳನ್ನು ಸ್ವದೇಶಕ್ಕೆ ಕಳುಹಿಸಲಾಗಿದೆ ಎಂದು ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಸಂಭವಿಸಿದ ಸ್ಫೋಟದಲ್ಲಿ 12 ಭಾರತೀಯರು ಸೇರಿ ಒಟ್ಟು 13 ಮಂದಿ ಮೃತಪಟ್ಟಿದ್ದರು.

'ಉಳಿದವರ ಪಾರ್ಥಿವ ಶರೀರಗಳನ್ನು ಶೀಘ್ರವೇ ಭಾರತಕ್ಕೆ ಕಳುಹಿಸಲಾಗುವುದು. ಈ ನಿಟ್ಟಿನಲ್ಲಿ ಸಹಕರಿಸಿದ ಕತಾರ್ ಅಧಿಕಾರಿಗಳು ಮತ್ತು ಭಾರತೀಯ ಸಮುದಾಯದ ಸಂಘಟನೆಗಳಿಗೆ ಧನ್ಯವಾದ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಅವಘಡದಲ್ಲಿ ಗಾಯಗೊಂಡ ಭಾರತೀಯರೊಂದಿಗೆ ರಾಯಭಾರ ಕಚೇರಿಯು ಸಂಪರ್ಕದಲ್ಲಿದೆ' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪ್ಯಾಕ್ಸ್ ಸಿಲಿಕಾ: ಅಮೆರಿಕದ ಉಪಕ್ರಮಕ್ಕೆ 35 ರಾಷ್ಟ್ರಗಳ ಸಹಿ



ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆದ ಪ್ಯಾಕ್ಸ್ ಸಿಲಿಕಾ ಶೃಂಗದಲ್ಲಿ ಭಾರತದ ಪರವಾಗಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಎಸ್. ಕೃಷ್ಣನ್ (ಬಲ) ಅವರು ಪಾಲ್ಗೊಂಡರು

ವಾಷಿಂಗ್ಟನ್ (ಪಿಟಿಐ): ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನಕ್ಕೆ ಶಕ್ತಿ ತುಂಬುವ ನಿಟ್ಟಿನಲ್ಲಿ ವಿಶ್ವಾಸಾರ್ಹ ಮತ್ತು ಸಮರ್ಥ ಪೂರೈಕೆ ಸರಪಳಿಯೊಂದನ್ನು ಸೃಷ್ಟಿಸುವ ಅಮೆರಿಕದ ಉಪಕ್ರಮಕ್ಕೆ ಭಾರತವೂ ಸೇರಿದಂತೆ 35 ರಾಷ್ಟ್ರಗಳು ಗುರುವಾರ ಸಹಿ ಹಾಕಿವೆ.

'ಎಐ ಯುಗದಲ್ಲಿ ಬೆಳವಣಿಗೆ-ನಾವೀನ್ಯ ಪರ ನಿಯಂತ್ರಣ ಕ್ರಮಗಳನ್ನು ಒಳಗೊಂಡ ಎಐ ಅವಕಾಶಗಳ ಕುರಿತ ಜಂಟಿ ಹೇಳಿಕೆಗೆ ಇಲ್ಲಿ ನಡೆದ ಎರಡನೇ ಪ್ಯಾಕ್ಸ್ ಸಿಲಿಕಾ ಶೃಂಗದಲ್ಲಿ 35 ದೇಶಗಳು ಸಹಿ ಹಾಕಿವೆ' ಎಂದು ಅಮೆರಿಕದ ಆರ್ಥಿಕ ವ್ಯವಹಾರಗಳ ಕುರಿತಾದ ರಾಜ್ಯ ಉಪ ಕಾರ್ಯದರ್ಶಿ ಜೇಕಬ್ ಹೆಲ್ಬರ್ಗ್ ತಿಳಿಸಿದ್ದಾರೆ.

'ಮೊದಲು ಯಾರು ನಿಯಂತ್ರಿಸುತ್ತಾರೆ ಎಂಬುದರ ಮೇಲೆ ಎಐನ ಭವಿಷ್ಯ ನಿರ್ಧಾರವಾಗುವುದಿಲ್ಲ. ಬದಲಾಗಿ, ಮೊದಲು ಯಾರು ನಿರ್ಮಾಣ ಮಾಡುತ್ತಾರೆ ಮತ್ತು ಯಾರು ಹೆಚ್ಚು ಸಾಮರ್ಥ್ಯದೊಂದಿಗೆ ತಯಾರಿಸುತ್ತಾರೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ' ಎಂದು ಅವರು ಹೇಳಿದರು.

'ನಾವೆಲ್ಲ ಒಟ್ಟಾಗಿ ನಾಗರಿಕರಿಗೆ ನೆರವಾಗುವ, ಆರ್ಥಿಕತೆಗೆ ಬಲ ತುಂಬುವ ಮತ್ತು ಉದ್ಯಮಶೀಲತೆ, ಸಂಶೋಧನೆ ಹಾಗೂ ಕಾನೂನು ನಿಯಮಗಳನ್ನು ಬಲಗೊಳಿಸುವ ಭವಿಷ್ಯತ್ತಿನ ಕೃತಕ ಬುದ್ಧಿಮತ್ತೆಯನ್ನು ರೂಪಿಸುವುದು ಆಶಯವಾಗಿದೆ' ಎಂದರು.

ಭಾರತದ ಪರವಾಗಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಎಸ್. ಕೃಷ್ಣನ್ ಮತ್ತು ವಿದೇಶಾಂಗ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ (ಅಮೆರಿಕ) ನಾಗರಾಜ್ ನಾಯ್ಡು ಹಾಗೂ ಉದ್ಯಮದ ಪ್ರತಿನಿಧಿಗಳು ಹಾಜರಿದ್ದರು.

ಯುದ್ಧ ಸ್ಮಾರಕದ ಮೇಲೆ 'ಆಪರೇಷನ್ ಸಿಂಧೂರ'ದಲ್ಲಿ ಹುತಾತ್ಮರಾದ ಯೋಧರ ಹೆಸರು

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ವೇಳೆ ಮೃತಪಟ್ಟ ಆರು ಯೋಧರ ಹೆಸರನ್ನು ಇದೇ ಮೊದಲ ಬಾರಿ ಬಿಡುಗಡೆ ಮಾಡಲಾಗಿದೆ.

ಈ ಯೋಧರ ಹೆಸರನ್ನು ನವದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದ ಗೋಡೆಯ ಮೇಲೆ ಕೆತ್ತನೆ ಮಾಡಲಾಗಿದೆ. ಇದರಲ್ಲಿ ಭೂಸೇನೆಯ ಐವರು ಮತ್ತು ವಾಯುಪಡೆಯ ಒಬ್ಬ ಯೋಧ ಇದ್ದಾರೆ.

2025ರ ಮೇನಲ್ಲಿ ಕಾರ್ಯಾಚರಣೆ ನಡೆದಿತ್ತು. ಅನಂತರ ಇದೇ ಮೊದಲ ಬಾರಿಗೆ ಕಾರ್ಯಾಚರಣೆಯಲ್ಲಿ ಮೃತಪಟ್ಟ ಆರು ಯೋಧರ ಹೆಸರನ್ನು ಭಾರತ ಸರ್ಕಾರ ಬಹಿರಂಗಪಡಿಸಿದೆ.

ರಾಷ್ಟ್ರೀಯ ಯುದ್ಧ ಸ್ಮಾರಕದ 'ತ್ಯಾಗಚಕ್ರ' ಗೋಡೆಯ '3-ಡಿ' ಭಾಗದಲ್ಲಿ ಸುಬೇದಾರ್ ಮೇಜರ್ ಪವನ್ ಕುಮಾರ್, ರೈಫಲ್‌ಮನ್ ಸುನಿಲ್‌ಕುಮಾರ್, ಲ್ಯಾನ್ಸ್ ನಾಯಕ್ ದಿನೇಶ್ ಕುಮಾರ್, ಅಗ್ನಿವೀರ್ ಮೂದ್ ಮುರಳಿನಾಯಕ್, ಹವಾಲ್ದಾರ್ ಸುನಿಲ್ ಕುಮಾರ್ ಸಿಂಗ್, ಐಎಎಫ್‌ನ ಸಾರ್ಜೆಂಟ್ ಸುರೇಂದ್ರ ಕುಮಾರ್ ಹೆಸರು ಕೆತ್ತನೆ ಮಾಡಲಾಗಿದೆ.

ಲಂಡನ್: ಕೇಂದ್ರ ಸಚಿವ ಗೋಯಲ್‌ಗೆ ಪ್ರಶಸ್ತಿ



ಪೀಯೂಷ್ ಗೋಯಲ್


ಲಂಡನ್ (ಪಿಟಿಐ): 'ಭಾರತ-ಬ್ರಿಟನ್ ನಡುವಣ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಕೊಡುಗೆ ಸಲ್ಲಿಸಿದ ಕಾರಣ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಲಂಡನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಕ್ತ ವ್ಯಾಪಾರ ಒಪ್ಪಂದದಲ್ಲಿ ಭಾಗಿಯಾಗಿದ್ದ ಉಭಯ ದೇಶಗಳ ತಂಡಗಳನ್ನು ಗೌರವಿಸಲಾಯಿತು.

ಇಂಡಿಯಾ ಗ್ಲೋಬಲ್ ಫೋರಮ್ ಆಯೋಜಿಸಿದ್ದ 10ನೇ ವಾರ್ಷಿಕ ಭಾರತ-ಬ್ರಿಟನ್ ಪ್ರಶಸ್ತಿಗಳು-2026ರ ಸಮಾರಂಭದಲ್ಲಿ ಈ ಗೌರವವನ್ನು ನೀಡಲಾಯಿತು.

ಬಳಿಕ ಮಾತನಾಡಿದ ಗೋಯಲ್ ಅವರು, 'ಇದೊಂದು ಯಶಸ್ಸು ಎನ್ನುವುದರಲ್ಲಿ ಯಾವುದೇ ಸಂದೇಹ ಇಲ್ಲ. ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದವು (ಸಿಇಟಿಎ) ಭವಿಷ್ಯದ ಹಲವು ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಮಾದರಿಯಾಗಲಿದೆ' ಎಂದರು.

ನಾವು ನೋಡಿದ ಸಿನಿಮಾ


ಮೋಕ್ಷ, ಶೀಲಂ, ಸಾತ್ವಿಕ

ಪ್ರೇಮಕಥೆಯಲ್ಲಿ ಮತ್ತೊಂದು ಪ್ರಯೋಗ

ಮೋಡ ಕವಿದ ವಾತಾವರಣ

- ನಿರ್ಮಾಣ: ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೆಳವಾಡಿ ಹಾಗೂ ಗೋವಾ ರಮೇಶ್
- ನಿರ್ದೇಶನ: ಸುನಿ
- ತಾರಾಗಣ: ಶೀಲಂ ಎಂ.ಸ್ವಾಮಿ, ಮೋಕ್ಷ ಕುಶಾಲ್, ಸಾತ್ವಿಕ, ರಿಷಿ, ರೇಖಾ ಎಸ್.ಪ್ರಸಾದ್ ಮತ್ತಿತರರು.

‘ಸ್ಪ್ಲಿಟ್ ಪರ್ಸನಾಲಿಟಿ ಡಿಸಾರ್ಡರ್’ ವಿಷಯಾಧರಿತ ಸಿನಿಮಾಗೆ ಹಾಲಿವುಡ್‌ನ ‘ಶಟರ್ ಐಲ್ಯಾಂಡ್’ ಪ್ರಮುಖ ಉದಾಹರಣೆ. ಭಾರತೀಯ ಸಿನಿಮಾದಲ್ಲೂ ಈ ವಿಷಯಾಧರಿತವಾಗಿ ಮಲಯಾಳದಲ್ಲಿ ‘ಮಣಿಚಿತ್ರತ್ತಾಳ್’ ಹಾಗೂ ತಮಿಳಿನಲ್ಲಿ ‘ಅನ್ನಿಯನ್’ ಸಿನಿಮಾಗಳು ಬಂದಿವೆ. ನಿರ್ದೇಶಕ ಸುನಿ ಇದೇ ಮಾನಸಿಕ ಸಮಸ್ಯೆಯನ್ನು ಪ್ರೇಮಕಥೆಗೆ ಜೋಡಿಸಿ ಹೊಸ ಪ್ರಯೋಗ ಮಾಡಿದ್ದಾರೆ. ಚಿತ್ರಮಂದಿರದ ಹೊರಗಡೆ ‘ಮೋಡ ಕವಿದ ವಾತಾವರಣ’ವಿರುವ ಸಂದರ್ಭದಲ್ಲೇ ಈ ಕಥೆ ಹೇಳಿದ್ದಾರೆ.

ಚೆರಿಷ್(ಶೀಲಂ) ಓರ್ವ ಮೀಮ್ ಮಾಡುವಾತ ಹಾಗೂ ಮನಃಶಾಸ್ತ್ರಜ್ಞ. ಈತನ ಪ್ರೇಯಸಿ ಸಾತ್ವಿಕ(ಸಾತ್ವಿಕ). ಇವರಿಬ್ಬರೂ ರೆಸಾರ್ಟ್ ಒಂದಕ್ಕೆ ಬಂದ ಸಂದರ್ಭದಲ್ಲಿ ಕಥೆ ತೆರೆದುಕೊಳ್ಳುತ್ತದೆ. ನಿಶ್ಚಿತಾರ್ಥವಾದ ಹುಡುಗನೊಂದಿಗೆ ಅದೇ ರೆಸಾರ್ಟ್‌ಗೆ ಬಂದ ‘ಸೌಪರ್ಣಿಕ’ಳ(ಮೋಕ್ಷ) ನಡವಳಿಕೆ ಕಥೆಗೆ ತಿರುವು ನೀಡುತ್ತದೆ.

ಪ್ರೇಮಕಥೆಗಳನ್ನು ನಾನಾ ಪ್ರಯೋಗಕ್ಕೆ ಒಡ್ಡುವುದು ಸುನಿ ಅವರ ವಿಶೇಷತೆ. ತಮ್ಮ ಹಿಂದಿನ ಸಿನಿಮಾ ‘ಗತವೈಭವ’ದಲ್ಲೂ ಇದೇ ಮಾದರಿಯ ಮಾನಸಿಕ ಸಮಸ್ಯೆಯ ಉಲ್ಲೇಖವನ್ನು ಪೌರಾಣಿಕ ಕಥೆಯೊಂದಕ್ಕೆ ಜೋಡಿಸಿ ಸುನಿ ಹೇಳಿದ್ದರು. ಇಲ್ಲಿಯೂ ಪೌರಾಣಿಕ ಕಥೆಯನ್ನೇ ಕ್ಯಾನ್ವಾಸ್ ಆಗಿಸಿಕೊಂಡು ಪ್ರೇಮಕಥೆ ಹೇಳಿದ್ದಾರೆ. ಕಲಾವಿದರು ಹೊಸಬರಾದರೂ ಬರವಣಿಗೆಯ ಮೂಲಕ ಆ ಪಾತ್ರಗಳಿಗೆ ಜೀವ ತುಂಬುವ ಶಕ್ತಿ ಸುನಿ ಅವರಿಗಿದೆ. ಇಲ್ಲಿಯೂ ‘ಚೆರಿಷ್’ ಪಾತ್ರಕ್ಕೆ ಮಾತಿನಬಾಣಗಳನ್ನೇ ಪ್ರಮುಖ ಅಸ್ತ್ರವನ್ನಾಗಿ ನೀಡಿದ್ದಾರೆ. ಇದು ಹಲವೆಡೆ ಕೆಲಸ ಮಾಡಿದೆ. ಕೆಲವೆಡೆ ಎಡವಿದೆ. ‘ಸಿಂಪಲ್ ಆಗಿ ಒಂದ್ ಲವ್‌ಸ್ಟೋರಿ’ ರೀತಿ ಒಂದೆರಡು ಸಾಲುಗಳ ಕವಿತೆಗಳೂ ಅಲ್ಲಲ್ಲಿ ಇಣುಕುತ್ತವೆ. ಚಿತ್ರಕಥೆಯಲ್ಲೂ ಅವರು ಪ್ರಯೋಗಗಳನ್ನು ಮಾಡಿದ್ದಾರೆ. ಆದರೂ ಕಥೆಯು ಕೊನೆಯಲ್ಲಿ ಅಪೂರ್ಣವೆನಿಸುತ್ತದೆ, ಹಲವು ಪ್ರಶ್ನೆಗಳನ್ನು ಉಳಿಸುತ್ತದೆ.

ನಟನೆಯಲ್ಲಿ ಶೀಲಂ ಭರವಸೆ ಮೂಡಿಸುತ್ತಾರೆ. ಕದಿಯುವ ರೋಗವಿರುವ ಪಾತ್ರಗಳು ಯಾಕೋ ಮೋಕ್ಷ ಅವರನ್ನು ಹುಡುಕಿಕೊಂಡು ಬರುವಂತಿದೆ! ಇಲ್ಲಿನ ‘ಸೌಪರ್ಣಿಕ’ ಪಾತ್ರದಲ್ಲಿ ಮೋಕ್ಷ ಜೀವಿಸಿದ್ದಾರೆ. ಭಾವನಾತ್ಮಕ ದೃಶ್ಯಗಳಲ್ಲಿ ಅಂಕ ಗಿಟ್ಟಿಸುತ್ತಾರೆ. ‘ಸಾತ್ವಿಕ’ ಪಾತ್ರದ ಬರವಣಿಗೆಯತ್ತ ಇನ್ನಷ್ಟು ಗಮನಹರಿಸಬಹುದಿತ್ತು. ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣ ಚೆನ್ನಾಗಿದೆ. ‘ಯಯಾತಿ..’ ಹಾಗೂ ‘ನನ್ನೆದೆಯ ಹಾಡೊಂದನು..’ ಹಾಡುಗಳು ಇಂಪಾಗಿವೆ.

ಅಭಿಲಾಷ್ ಪಿ.ಎಸ್.

ನೋಡಬಹುದಾದ ಚಿತ್ರ

ಬಲರಾಮನ ಆ ದಿನಗಳ ಮೆಲುಕು


ಪ್ರಿಯಾ, ವಿನೋದ್

‘ಆ ದಿನಗಳು’ ಚಿತ್ರದಿಂದಲೇ ಜನಪ್ರಿಯರಾದ ಕೆ.ಎಂ. ಚೈತನ್ಯ ಅವರ ನಿರ್ದೇಶನದಲ್ಲಿ ಬಂದಿರುವ ‘ಬಲರಾಮನ ದಿನಗಳು’ ಹಿಂದಿನ ಚಿತ್ರದ ಕಥಾ ಲೋಕವನ್ನು ಮುಂದುವರಿಸುವ ಪ್ರಯತ್ನವಾಗಿದೆ. ಆ ಚಿತ್ರದ ಕೆಲವು ಪಾತ್ರಗಳು ಇಲ್ಲಿಯೂ ಮುಂದುವರಿದಿದ್ದು, ಅದರದೇ ನಿರೂಪಣಾ ಶೈಲಿ ಈ ಚಿತ್ರದಲ್ಲೂ ಕಾಣಿಸುತ್ತದೆ. ಅಬ್ಬರವಿಲ್ಲದ, ನಿಧಾನಗತಿಯಲ್ಲಿಯೇ ಸಾಗುವ ಈ ಆ್ಯಕ್ಷನ್ ಕಥೆಯನ್ನು ನಿರ್ದೇಶಕರು ಸಾವಧಾನವಾಗಿ ಕಟ್ಟಿಕೊಟ್ಟಿದ್ದಾರೆ.

ಬಲರಾಮ ಎಂಬ ಸಾಮಾನ್ಯ ವ್ಯಕ್ತಿ ಅನಿವಾರ್ಯ ಪರಿಸ್ಥಿತಿಗಳಿಂದ ಭೂಗತ ಜಗತ್ತಿಗೆ ಕಾಲಿಡುತ್ತಾನೆ. ಅಲ್ಲಿಂದ ಅವನು ತನ್ನದೇ ಸಾಮ್ರಾಜ್ಯ ಕಟ್ಟಿಕೊಳ್ಳುವ ಹಾದಿಯೇ ಚಿತ್ರದ ಕೇಂದ್ರ ಕಥೆ. ಆರಂಭದ ಐದು ನಿಮಿಷಗಳಲ್ಲೇ ಮುಖ್ಯ ಕಥೆ ಹಿಡಿತಕ್ಕೆ ಬರುತ್ತದೆ. ಹಾಸನದಿಂದ ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬರುವ ಬಲರಾಮ, ಒಂದು ಘಟನೆ ಬಳಿಕ ರೌಡಿ ಜಗತ್ತಿಗೆ ಸಿಲುಕುತ್ತಾನೆ. ಬಳಿಕ ಆತ ಜಯರಾಮ್ ಗ್ಯಾಂಗ್ ಸೇರಿ, ಆ ಭೂಗತ ಜಗತ್ತಿನಲ್ಲಿ ಎದುರಾಗುವ ಸವಾಲುಗಳು, ಶತ್ರು ಗ್ಯಾಂಗ್‌ಗಳೊಂದಿಗೆ ಸಂಘರ್ಷಗಳು ಚಿತ್ರಕಥೆಯನ್ನು ಮುಂದುವರಿಸುತ್ತವೆ. ಕಥೆ ಕಾಲ್ಪನಿಕವಾಗಿದ್ದರೂ, 1980ರ ದಶಕದ ಬೆಂಗಳೂರು ಭೂಗತ ಜಗತ್ತಿನ ಹಿನ್ನೆಲೆಯನ್ನು ನೆನಪಿಸುವ ಅಂಶಗಳು ಸ್ಪಷ್ಟವಾಗಿ ಕಾಣಿಸುತ್ತವೆ.

ಇದರ ನಡುವೆಯೇ ಬಲರಾಮನ ಪ್ರೇಮಕಥೆಯೂ ತೆರೆದುಕೊಳ್ಳುತ್ತದೆ. ನಿವೃತ್ತ ಸೈನಿಕನ ಮಗಳೊಂದಿಗೆ ಅವನ ಸಂಬಂಧ, ಬದುಕಿನಲ್ಲಿ ಮತ್ತೊಂದು ಸಂಕಷ್ಟವನ್ನು ತಂದೊಡ್ಡುತ್ತದೆ. ಈ ಪ್ರೇಮಕಥೆಯ ಕೆಲವು ಸನ್ನಿವೇಶಗಳು ಮತ್ತು ಹಾಡುಗಳು ಮುಖ್ಯ ಕಥೆಯ ಗತಿಯನ್ನು ನಿಧಾನಗೊಳಿಸುತ್ತವೆ.

ನಟನೆಯ ದೃಷ್ಟಿಯಿಂದ ವಿನೋದ್ ಪ್ರಭಾಕರ್ ಬಲರಾಮನ ಪಾತ್ರದಲ್ಲಿ ತೊಡಗಿಸಿಕೊಂಡು ಅಭಿನಯಿಸಿದ್ದಾರೆ. ಪ್ರಿಯಾ ಆನಂದ್ ತಮ್ಮ ಪಾತ್ರದಲ್ಲಿ ಸಹಜವಾಗಿ ಮೂಡುತ್ತಾರೆ. ಜಯರಾಮ್ ಆಗಿ ಆಶಿಶ್ ವಿದ್ಯಾರ್ಥಿ ಗಮನ ಸೆಳೆಯುತ್ತಾರೆ. ಶಶಿಧರನಾಗಿ ಅತುಲ್ ಕುಲಕರ್ಣಿ ಮತ್ತು ಮೋನಪ್ಪ ರೈ ಪಾತ್ರದಲ್ಲಿ ರಮೇಶ್ ಇಂದಿರಾ ಚಿತ್ರಕ್ಕೆ ಬಲ ತುಂಬಿದ್ದಾರೆ. ಇಡೀ ನಟವರ್ಗವೇ ಚಿತ್ರದ ಪ್ರಮುಖ ಶಕ್ತಿಯಾಗಿದೆ. ಆದರೆ ಕೆಲ ಸಂದರ್ಭಗಳಲ್ಲಿ ಪಾತ್ರಗಳ ತುಳು, ತಮಿಳು ಭಾಷಾ ಬಳಕೆ ಅಸಹಜ ಅನಿಸುತ್ತದೆ.

ಎಚ್.ಸಿ. ವೇಣು ಅವರ ಛಾಯಾಚಿತ್ರಗ್ರಹಣ ಪರಿಣಾಮಕಾರಿಯಾಗಿದೆ. ಸಂತೋಷ್ ನಾರಾಯಣನ್ ಅವರ ಹಾಡುಗಳು ಹೆಚ್ಚಿನ ಪರಿಣಾಮ ಬೀರುವುದಿಲ್ಲವಾದರೂ ಹಿನ್ನೆಲೆ ಸಂಗೀತ ದೃಶ್ಯಗಳಿಗೆ ಪೂರಕವಾಗಿದೆ. ಆದಾಗ್ಯೂ, ಸರಳ ನಿರೂಪಣೆ, ಕಡಿಮೆ ತಿರುವುಗಳು ಮತ್ತು ಆ್ಯಕ್ಷನ್ ಹೊರತುಪಡಿಸಿ ಇತರ ಮನರಂಜನೀಯ ಅಂಶಗಳ ಕೊರತೆ ಚಿತ್ರದ ಗತಿಯನ್ನೇ ನಿಧಾನಗೊಳಿಸುತ್ತದೆ. ಕೆಲವೆಡೆ ಚಿತ್ರ ತಾಳ್ಮೆಯನ್ನು ಪರೀಕ್ಷಿಸುವಂತಾಗುತ್ತದೆ.

ಮೊದಲಾರ್ಧದ ಕೆಲವು ಸನ್ನಿವೇಶಗಳು, ಅನವಶ್ಯ ಹಾಡುಗಳು ಮತ್ತು ದೀರ್ಘ ಸಾಹಸ ದೃಶ್ಯಗಳನ್ನು ಕಡಿತಗೊಳಿಸಿದ್ದರೆ, ಒಟ್ಟಾರೆ ಅವಧಿಯನ್ನು ಇನ್ನಷ್ಟು ಸಮರ್ಪಕವಾಗಿ ನಿರ್ವಹಿಸಲು ಅವಕಾಶ ಇರುತ್ತಿತ್ತು. ಒಟ್ಟಿನಲ್ಲಿ ಚಿತ್ರ ಮಿಶ್ರ ಅನುಭವ ನೀಡುತ್ತದೆ.

ವಿನಾಯಕ ಕೆ.ಎಸ್.

ಬಲರಾಮನ ದಿನಗಳು

- ನಿರ್ಮಾಣ: ಪದ್ಮಾವತಿ ಫಿಲ್ಮ್ಸ್
- ನಿರ್ದೇಶನ: ಕೆ.ಎಂ.ಚೈತನ್ಯ
- ತಾರಾಗಣ: ವಿನೋದ್ ಪ್ರಭಾಕರ್, ಪ್ರಿಯಾ ಆನಂದ್, ಆಶಿಶ್ ವಿದ್ಯಾರ್ಥಿ, ಅತುಲ್ ಕುಲಕರ್ಣಿ ಮತ್ತಿತರರು

ನೋಡಬಹುದಾದ ಚಿತ್ರ

ಎನ್‌ಸಿಇಆರ್‌ಟಿ ಪಠ್ಯದಲ್ಲಿ ಮನುಸ್ಮೃತಿ ಶ್ಲೋಕ

‘ವೇದ ಕಾಲದಲ್ಲಿ ಮಹಿಳೆಯರಿಗೆ ಹೆಚ್ಚಿನ ಗೌರವ’ ಎಂಬ ವ್ಯಾಖ್ಯಾನ ಉಲ್ಲೇಖ

ನವದೆಹಲಿ (ಪಿಟಿಐ): ‘ವೇದ ಕಾಲದಲ್ಲಿ ಮಹಿಳೆಯರಿಗೆ ಗೌರವ ನೀಡಲಾಗುತ್ತಿತ್ತು. ಕಾಲಕ್ರಮೇಣ ಮಹಿಳೆಯರ ಬಗೆಗಿನ ಗೌರವ ಕಡಿಮೆಯಾಯಿತು’ ಎಂದು ಹೇಳುವ ಮನುಸ್ಮೃತಿಯ ಶ್ಲೋಕವೊಂದನ್ನು ರಾಷ್ಟ್ರೀಯ ಶಿಕ್ಷಣ ಸಂಶೋಧನೆ– ತರಬೇತಿ ಪರಿಷತ್ತಿನ (ಎನ್‌ಸಿಇಆರ್‌ಟಿ) ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಸೇರಿಸಲಾಗಿದೆ.

‘ಕ್ರಿ.ಶ. 1000ದವರೆಗಿನ ರಾಜ್ಯ ಮತ್ತು ಸಮಾಜ’ ಎಂಬ ಪಠ್ಯದಲ್ಲಿ ವೈದಿಕ ಯುಗವು ಮಹಿಳೆಯರಿಗೆ ಉನ್ನತ ಸ್ಥಾನಮಾನ ನೀಡಿದ ಯುಗವಾಗಿತ್ತು’ ಎಂದು ವಿವರಿಸಲಾಗಿದೆ.

‘ಮಹಿಳೆಯರು ವೇದೋಪನಿಷತ್ತುಗಳನ್ನು ಅಧ್ಯಯನ ಮಾಡಿದ್ದರು. ಪುರುಷರೊಂದಿಗೆ ಹಲವು ಆಚರಣೆಗಳಲ್ಲಿ ಭಾಗಿಯಾಗುತ್ತಿದ್ದರು. ಋಗ್ವೇದದ ಕೆಲವು ಶ್ಲೋಕಗಳನ್ನು ಸಾಧ್ವಿನಿಯರಾದ ಅಪಲಾ, ವಿಶ್ವವರ, ಘೋಶ ಮತ್ತು ಲೋಪಮುದ್ರ ಅವರು ರಚಿಸಿದ್ದರು. ಎಲ್ಲಿ ಮಹಿಳೆಯರನ್ನು ಗೌರವಿಸಲಾಗುತ್ತದೋ ಅಲ್ಲಿ ದೇವತೆಗಳು ಸಂತೋಷಪಡುತ್ತಾರೆ. ಎಲ್ಲಿ ಮಹಿಳೆಯರನ್ನು ಗೌರವಿಸಲಾಗುವುದಿಲ್ಲವೋ ಅಲ್ಲಿ ಎಲ್ಲ ವಿಧಿಗಳು ನಿಷ್ಪ್ರಯೋಜಕವಾಗುತ್ತವೆ’ ಎಂದು ಪಠ್ಯದಲ್ಲಿ ವಿವರಿಸಲಾಗಿದೆ.

ಮನುಸ್ಮೃತಿಯು ಹಿಂದೂ ಪದ್ಧತಿಯಲ್ಲಿ ನೀತಿಯುತ ಜೀವನಕ್ರಮ, ಸಾಮಾಜಿಕ ವರ್ಗಗಳು ಮತ್ತು ಆಡಳಿತವನ್ನು ವಿವರಿಸುವ ಸಂಸ್ಕೃತ ಪಠ್ಯ. ಜಾತಿ ಮತ್ತು ಲಿಂಗದ ಕುರಿತಾಗಿ ಅದರಲ್ಲಿರುವ ನಿಬಂಧನೆಗಳ ಕುರಿತು ದೀರ್ಘಕಾಲದಿಂದ ಚರ್ಚೆ ನಡೆಯುತ್ತಿದೆ.

ವರ್ಣ ಮತ್ತು ಜಾತಿಯ ವಿಚಾರಗಳನ್ನೂ ಪಠ್ಯದಲ್ಲಿ ತಿಳಿಸಲಾಗಿದೆ. ‘ವೇದ ಕಾಲದಲ್ಲಿ ಸಾಮಾಜಿಕ ಗುರುತನ್ನು ಹುಟ್ಟಿನಿಂದಲೇ ನಿರ್ಧರಿಸಲಾಗುತ್ತಿರಲಿಲ್ಲ. ಬದಲಾಗಿ, ಜನಾಂಗೀಯತೆ, ಉಪಗುಂಪು, ಪ್ರದೇಶ, ಗ್ರಾಮ, ಭಾಷೆ, ಉದ್ಯೋಗ ಮತ್ತು ಸಾಂಸ್ಕೃತಿಕ ಸಂಬಂಧ ಸೇರಿದಂತೆ ಸಂಕೀರ್ಣ ಅಂಶಗಳ ಮೂಲಕ ಸಾಮಾಜಿಕ ಸ್ಥಾನಮಾನ ರೂಪುಗೊಳ್ಳುತ್ತಿತ್ತು’ ಎಂದು ವಿವರಿಸಲಾಗಿದೆ.

9ನೇ ತರಗತಿ ಪಠ್ಯದಲ್ಲಿ ನ್ಯಾಯಾಂಗದ ಶ್ಲಾಘನೆ

ಎನ್‌ಸಿಇಆರ್‌ಟಿ 8ನೇ ತರಗತಿಯ ಪಠ್ಯಪುಸ್ತಕದಲ್ಲಿನ ನ್ಯಾಯಾಲಯದಲ್ಲಿನ ಭ್ರಷ್ಟಾಚಾರ ಎಂಬ ಪಾಠವು ಆಕ್ಷೇಪಕ್ಕೀಡಾಗಿತ್ತು. ಆ ಪಠ್ಯಕ್ಕೆ ವ್ಯತಿರಿಕ್ತವಾಗಿ 9ನೇ ತರಗತಿಯ ಪಠ್ಯಪುಸ್ತಕದಲ್ಲಿ ನ್ಯಾಯಾಲಯವು ನಾಗರಿಕರ ರಕ್ಷಣೆಗಾಗಿ ಇರುವ ನಿಷ್ಪಕ್ಷಪಾತ ಮತ್ತು ಸ್ವತಂತ್ರವಾದ ಸಂಸ್ಥೆ ಎಂದು ವಿವರಿಸಲಾಗಿದೆ.

8ನೇ ತರಗತಿಯ ಪಠ್ಯದ ಕುರಿತ ವಿವಾದಗಳು ಉಂಟಾಗುವ ಮೊದಲೇ 9ನೇ ತರಗತಿಯ ಪಠ್ಯಪುಸ್ತಕ ಮುದ್ರಣವಾಗಿತ್ತು.

9ನೇ ತರಗತಿಯ ಸಮಾಜ ವಿಜ್ಞಾನ ಹೊಸ ಪಠ್ಯಪುಸ್ತಕದಲ್ಲಿ, ನ್ಯಾಯಾಲಯದಲ್ಲಿನ ಕಾರ್ಯಗಳನ್ನು ವಿವರಿಸಲಾಗಿದೆ. ‘ಸಾಂವಿಧಾನಿಕ ಮೌಲ್ಯಗಳು ಮತ್ತು ಸಮಾಜದ ಎಲ್ಲ ವರ್ಗಗಳ ಜನರ ಹಕ್ಕುಗಳ ರಕ್ಷಣೆಯಲ್ಲಿ ನ್ಯಾಯಾಂಗ ಪ್ರಮುಖ ಪಾತ್ರ ವಹಿಸುತ್ತದೆ’ ಎಂದು ತಿಳಿಸಲಾಗಿದೆ.

8ನೇ ತರಗತಿಯ ಪಠ್ಯಪುಸ್ತಕದ ಕುರಿತ ವಿವಾದದಲ್ಲಿ ಮಧ್ಯಪ್ರವೇಶಿಸಿದ್ದ ಸುಪ್ರೀಂ ಕೋರ್ಟ್, ಪಠ್ಯಪುಸ್ತಕದ ಮುದ್ರಣ ಮತ್ತು ಹಂಚಿಕೆಯನ್ನು ನಿರ್ಬಂಧಿಸಿತ್ತು.

ಎರಡು ವಿದೇಶಿ ಭಾಷೆ ಕಲಿಕೆಗೆ ಅವಕಾಶ

ನವದೆಹಲಿ (ಪಿಟಿಐ): ‘ಪ್ರಸ್ತುತ 7ರಿಂದ 9ನೇ ತರಗತಿಯಲ್ಲಿ ಕಲಿಯುತ್ತಿರುವ ಮತ್ತು ತ್ರಿಭಾಷಾ ಸೂತ್ರದ ಅಡಿಯಲ್ಲಿ ಎರಡು ವಿದೇಶಿ ಭಾಷೆಗಳನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳು 10ನೇ ತರಗತಿವರೆಗೂ ಇದೇ ಭಾಷಾ ಸಂಯೋಜನೆಯನ್ನು ಮುಂದುವರಿಸಬಹುದು’ ಎಂದು ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.



ಸಿಬಿಎಸ್‌ಇ ನಿರ್ಧಾರದಿಂದ ಲಕ್ಷಾಂತರ ವಿದ್ಯಾರ್ಥಿಗಳು ನಿರಾಳರಾಗಿದ್ದಾರೆ. 9ನೇ ತರಗತಿ ವಿದ್ಯಾರ್ಥಿಗಳಿಗೆ ಜುಲೈ 1ರಿಂದ ತ್ರಿಭಾಷಾ ಅಧ್ಯಯನ ಕಡ್ಡಾಯಗೊಳಿಸಲಾಗಿದೆ ಎಂದು ಸಿಬಿಎಸ್‌ಸಿ ಘೋಷಿಸಿದ ಒಂದು ತಿಂಗಳ ಬಳಿಕ ಈ ಬೆಳವಣಿಗೆ ನಡೆದಿದೆ.

‘9ನೇ ತರಗತಿ ವಿದ್ಯಾರ್ಥಿಗಳಿಗೆ ಕನಿಷ್ಠ ಎರಡು ಭಾರತೀಯ ಭಾಷೆಗಳು ಸೇರಿ ಮೂರು ಭಾಷೆಗಳ ಕಲಿಕೆ ಕಡ್ಡಾಯಗೊಳಿಸಲಾಗಿದೆ’ ಎಂದು ಸಿಬಿಎಸ್‌ಇ ಮೇ 16ರಂದು ಪ್ರಕಟಿಸಿತ್ತು. ಸಿಬಿಎಸ್‌ಇ ಆದೇಶವನ್ನು ಪ್ರಶ್ನಿಸಿ ಹಲವು ವಿದ್ಯಾರ್ಥಿಗಳ ಪೋಷಕರು ನ್ಯಾಯಾಲಯದ ಮೊರೆಹೋಗಿದ್ದರು.

‘ಹೊಸ ಭಾಷಾ ನೀತಿಯ ಅಡಿಯಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳನ್ನು ಕಡ್ಡಾಯವಾಗಿ ಅಧ್ಯಯನ ಮಾಡುವುದನ್ನು 6ನೇ ತರಗತಿಯಿಂದ ಜಾರಿಗೆ ತರಲಾಗುವುದು. ಪ್ರಸ್ತುತ 7ರಿಂದ 9ನೇ ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಇದು ಅನ್ವಯಿಸುವುದಿಲ್ಲ’ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಎರಡು ಭಾರತೀಯ ಭಾಷೆ ಅಧ್ಯಯನ ಮಾಡಿದ ನಂತರವೇ ವಿದ್ಯಾರ್ಥಿಗಳಿಗೆ ಮೂರನೇ ಭಾಷೆಯಾಗಿ ಅಥವಾ ನಾಲ್ಕನೆಯ ಹೆಚ್ಚುವರಿ ಭಾಷೆಯಾಗಿ ವಿದೇಶಿ ಭಾಷೆಯ ಆಯ್ಕೆಗೆ ಅವಕಾಶ ಇದೆ. ರಾಷ್ಟ್ರೀಯ ಶಿಕ್ಷಣ ನೀತಿ –2020, ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು –2023’ ಯೋಜನೆಯ ಭಾಗವಾಗಿ ಈ ಪರಿಷ್ಕರಣೆ ಮಾಡಲಾಗಿದೆ’ ಎಂದು ಸಿಬಿಎಸ್‌ಇ ಮೇ ತಿಂಗಳಲ್ಲಿ ತಿಳಿಸಿತ್ತು.

‘2026–27ನೇ ಶೈಕ್ಷಣಿಕ ವರ್ಷಕ್ಕೆ 6ನೇ ತರಗತಿಯಿಂದ ಕಡ್ಡಾಯವಾಗಿ ತ್ರಿಭಾಷಾ ಸೂತ್ರವನ್ನು ಅಳವಡಿಸಲಾಗುತ್ತದೆ ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನ ವಿಷಯವನ್ನು ಎರಡು ಹಂತಗಳಲ್ಲಿ ಅಧ್ಯಯನ ನಡೆಸಬಹುದಾದ ಹೊಸ ಅವಕಾಶವನ್ನು ಒದಗಿಸಲಾಗುವುದು’ ಎಂದು ಸಿಬಿಎಸ್‌ಇ, ಏಪ್ರಿಲ್‌ನಲ್ಲಿ ಘೋಷಿಸಿತ್ತು.

‘ಸತ್ತ’ ವ್ಯಕ್ತಿ ಮನೆ ಮುಂದೆ ದಿಢೀರ್ ಪ್ರತ್ಯಕ್ಷ

ಗಾಜಿಯಾಬಾದ್ (ಪಿಟಿಐ): ಮೃತಪಟ್ಟಿದ್ದಾರೆ ಎಂದು ಭಾವಿಸಿ, ಮೃತದೇಹದ ಅಂತ್ಯಕ್ರಿಯೆ ನಡೆಸಿ ಅಂತಿಮ ವಿಧಿವಿಧಾನಗಳನ್ನೂ ಪೂರೈಸಿದ ಮರುದಿನ ಬೆಳಿಗ್ಗೆಯೇ ವ್ಯಕ್ತಿಯೊಬ್ಬರು ಮನೆಗೆ ಮರಳಿದ ಪ್ರಸಂಗ ಇಲ್ಲಿ ನಡೆದಿದೆ.

ಶಾಂತಿಭಂಗ ಮಾಡಿದ ಆರೋಪದಲ್ಲಿ ಗಿರಿಧರ್ ಸಿಂಗ್ ಬಿಷ್ಟ್ ಎಂಬವರನ್ನು ಪೊಲೀಸರು ಮೇ 16ರಂದು ಬಂಧಿಸಿದ್ದರು. ಮೇ 21ರಂದು ಅವರು ಬಿಡುಗಡೆ ಹೊಂದಿದರು. ಬಿಡುಗಡೆ ಬಳಿಕ ಅವರು ಮನೆಗೆ ಮರಳದ ಕಾರಣ ಕುಟುಂಬದವರು ಪೊಲೀಸರಿಗೆ ದೂರು ನೀಡಿದ್ದರು.

ತನಿಖೆ ಆರಂಭಿಸಿದ ಪೊಲೀಸರಿಗೆ ಗುರುತು ಸಿಕ್ಕದ ಮೃತದೇಹವೊಂದು ಪತ್ತೆಯಾಗಿತ್ತು. ಅದು ಬಿಷ್ಟ್ ಅವರದ್ದೇ ದೇಹ ಎಂದು ಕುಟುಂಬದವರೂ ಖಚಿತಪಡಿಸಿದರು. ಬಳಿಕ, ಇದೊಂದು ಕೊಲೆ ಎಂಬ ಶಂಕೆ ಆಧರಿಸಿ, ಆರು ಜನರ ಮೇಲೆ ಪೊಲೀಸರು ಪ್ರಕರಣವನ್ನೂ ದಾಖಲಿಸಿಕೊಂಡಿದ್ದಾರೆ.

ಕುಟುಂಬಸ್ಥರು ಜೂನ್ 24ರಂದು ಬಿಷ್ಟ್ ಅವರ ಅಂತ್ಯಸಂಸ್ಕಾರ, ಮೃತರಾದ ಬಳಿಕ 13ನೇ ದಿನ ನಡೆಸುವ ‘ತೇರಾವಿ’ ಕಾರ್ಯವನ್ನೂ ಪೂರ್ಣಗೊಳಿಸಿದ್ದಾರೆ. ಜೂನ್ 25ರಂದು ಬೆಳಿಗ್ಗೆ 5 ಗಂಟೆಗೆ ಬಿಷ್ಟ್ ಅವರು ಮನೆಗೆ ವಾಪಸಾಗಿ ಅಚ್ಚರಿ ಮೂಡಿಸಿದ್ದಾರೆ.

‘ಬಿಷ್ಟ್ ಅವರು ಮನೆಗೆ ವಾಪಸಾಗಿರುವುದರಿಂದ, ಈ ಹಿಂದೆ ಪತ್ತೆಯಾದ ಮೃತದೇಹ ಯಾರದ್ದು ಎಂಬ ಪ್ರಶ್ನೆ ಹಾಗೇ ಉಳಿದಿದೆ. ಈ ಸಂಬಂಧ ತನಿಖೆಯನ್ನು ಮರು ಆರಂಭಿಸಲಾಗಿದ್ದು, ಆರು ಜನರ ಮೇಲೆ ದಾಖಲಾದ ಪ್ರಕರಣವನ್ನೂ ಪರಿಶೀಲನೆ ಮಾಡಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿ ಅಭಿಷೇಕ್ ಶ್ರೀವಾಸ್ತವ ತಿಳಿಸಿದ್ದಾರೆ.

ಬಂಡುಕೋರರ ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ಮೂರು ಜಿಲ್ಲೆಗಳಲ್ಲಿ ನಾಲ್ವರು ಬಂಡುಕೋರರನ್ನು ಭದ್ರತಾ ಪಡೆಗಳು ಬಂಧಿಸಿವೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಬಂಧಿತರು ಸುಲಿಗೆ ಚಟುವಟಿಕೆಗಳು ಮತ್ತು ವಿವಿಧ ನಿಷೇಧಿತ ನಕ್ಸಲ್ ಸಂಘಟನೆಗಳ ನೇಮಕಾತಿಯಲ್ಲಿ ಭಾಗಿಯಾಗಿದ್ದರು. ಕಾರ್ಯಾಚರಣೆ ವೇಳೆ ಮೂರು ರೈಫಲ್, ಒಂದು ಪಿಸ್ತೂಲ್, ನಾಲ್ಕು ಮ್ಯಾಗಜೀನ್ ಮತ್ತು ಮದ್ದು-ಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಗೋದಾಮು ಕುಸಿತ: ಮೃತರ ಸಂಖ್ಯೆ 15ಕ್ಕೆ ಏರಿಕೆ

ಕೋಲ್ಕತ್ತ (ಪಿಟಿಐ): ಇಲ್ಲಿನ ತರಾತಲ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಮೂರು ಅಂತಸ್ತಿನ ಗೋದಾಮು ಕುಸಿತಗೊಂಡಿದ್ದರಿಂದ ಅವಶೇಷಗಳಡಿ ಸಿಲುಕಿ ಮೃತಪಟ್ಟವರ ಸಂಖ್ಯೆ 15ಕ್ಕೆ ಏರಿಕೆಯಾಗಿದೆ. 18 ಮಂದಿ ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ಎರಡು ಶವಗಳನ್ನು ಗುರುವಾರ ರಾತ್ರಿ ಹೊರತೆಗೆಯಲಾಯಿತು. ಘಟನೆಯಲ್ಲಿ ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರು ಕಾರ್ಮಿಕರು ಶುಕ್ರವಾರ ಮುಂಜಾನೆ ಸಾವಿಗೀಡಾಗಿ, ಒಟ್ಟು ಮೃತರ ಸಂಖ್ಯೆ 15ಕ್ಕೆ ಏರಿದೆ ಎಂದು ಅಧಿಕಾರಿಗಳು ತಿಳಿಸಿದರು.

ಕೋಲ್ಕತ್ತ ಪೊಲೀಸರು, ಸೇನೆ, ರಾಜ್ಯ ವಿಪತ್ತು ನಿರ್ವಹಣಾ ಪಡೆ ಸೇರಿದಂತೆ ಹಲವು ಸಂಸ್ಥೆಗಳ ರಕ್ಷಣಾ ತಂಡಗಳು ಶೋಧ ಕಾರ್ಯಾಚರಣೆಯನ್ನು ಮುಂದುವರಿಸಿವೆ ಎಂದು ತಿಳಿಸಿದರು.

ಗೋದಾಮಿನ ಚಾವಣಿ ಕುಸಿದು ಬುಧವಾರ ಮಧ್ಯಾಹ್ನ ಅವಘಡ ಸಂಭವಿಸಿತು. ಈ ವೇಳೆ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದ ಹಲವಾರು ಕಾರ್ಮಿಕರು ಅವಶೇಷಗಳಡಿಯಲ್ಲಿ ಸಿಲುಕಿದರು.

ಘಟನೆ ಬಗ್ಗೆ ತನಿಖೆ ನಡೆಸಲು ಪೊಲೀಸರು ವಿಶೇಷ ತನಿಖಾ ತಂಡವನ್ನು ರಚಿಸಿದ್ದಾರೆ.


ಪ್ರಕರಣದ ಕುರಿತು ಎಫ್‌ಐಆರ್ ದಾಖಲಾಗಿದ್ದು, ಐವರನ್ನು ಆರೋಪಿಗಳು ಎಂದು ಗುರುತಿಸಲಾಗಿದೆ. ಈ ಪೈಕಿ ಪ್ರಮುಖ ಗುತ್ತಿಗೆದಾರನೂ ಆಗಿರುವ ಆರೋಪಿಯೊಬ್ಬ ಘಟನೆಯಲ್ಲಿ ಮೃತಪಟ್ಟಿದ್ದಾನೆ.

ಘಟನೆಗೆ ಸಂಬಂಧಿಸಿದಂತೆ ಕಾಲಿಚರಣ್ ಬಂಡೋಪಾಧ್ಯಾಯ ಅವರನ್ನು ಪೊಲೀಸರು ಗುರುವಾರ ಬಂಧಿಸಿದರು. ಇವರು ಕೋಲ್ಕತ್ತದ ಮಾಜಿ ಮೇಯರ್ ಫಿರ್ಹಾದ್ ಹಕೀಂ ಅವರ ಮಾಜಿ ವಿಶೇಷ ಕರ್ತವ್ಯ ಅಧಿಕಾರಿಯಾಗಿದ್ದರು.

ಪಕ್ಷ ತೊರೆದವರು ಬಂಡಾಯಗಾರರಲ್ಲ, ಮಾರಿಕೊಂಡವರು: ರಾವುತ್

ಆದಿತ್ಯಗೆ ಶಿವಸೇನಾ (ಯುಬಿಟಿ) ಸಾರಥ್ಯ

ಮುಂಬೈ (ಪಿಟಿಐ): ‘ಶಿವಸೇನಾ ಯುಬಿಟಿ ಬಣವನ್ನು ಇನ್ನು ಮುಂದೆ ಯುವ ಮುಖಂಡ, ಶಾಸಕ ಆದಿತ್ಯ ಠಾಕ್ರೆ ಮುನ್ನಡೆಸಲಿದ್ದಾರೆ. ಅವರಿಗೆ ಆ ಸಾಮರ್ಥ್ಯವಿದೆ’ ಎಂದು ಸಂಸದ ಸಂಜಯ್ ರಾವುತ್ ಹೇಳಿದ್ದಾರೆ.


ಆದಿತ್ಯ ಠಾಕ್ರೆ

‘ಶಿವಸೇನಾ (ಯುಬಿಟಿ) ತೊರೆದ ಸಂಸದರು ಪ್ರತಿನಿಧಿಸುತ್ತಿದ್ದ ನಾಲ್ಕು ಲೋಕಸಭಾ ಕ್ಷೇತ್ರಗಳಿಗೆ ಮುಖಂಡ ಉದ್ಧವ್ ಠಾಕ್ರೆ ಪ್ರವಾಸ ಹಮ್ಮಿಕೊಂಡಿದ್ದು, ಇದರ ಬಗ್ಗೆ ಸಂಜಯ್ ರಾವುತ್ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದರು.

‘ಆರು ಮಂದಿ ಭಿನ್ನಮತೀಯರು ಪಕ್ಷ ತೊರೆದರೂ, ಪಕ್ಷವು ಬಲಿಷ್ಠವಾಗಿಯೇ ಉಳಿದಿದೆ. ತಳಮಟ್ಟದ ಕಾರ್ಯಕರ್ತರು, ಬೆಂಬಲಿಗರು ಪಕ್ಷದ ಜತೆಗೇ ಇದ್ದಾರೆ. ಪಕ್ಷ ತೊರೆದವರು ತಮ್ಮನ್ನು ತಾವು ಕೋಟ್ಯಂತರ ರೂಪಾಯಿಗೆ ಮಾರಿಕೊಂಡಿದ್ದಾರೆ. ಇಂಥವರಿಗೆ ‘ಬಂಡಾಯಗಾರರು’ ಎಂಬ ಪದ ಬಳಕೆ ಸೂಕ್ತವಲ್ಲ. ಭಗತ್‌ಸಿಂಗ್, ಸುಖದೇವ್ ಅವರಂಥ ಸ್ವಾತಂತ್ರ್ಯ ಹೋರಾಟಗಾರರಿಗಾಗಿ ಈ ಪದವನ್ನು ಮೀಸಲಿಡಬೇಕೇ ಹೊರತು, ಹಣ, ಅಧಿಕಾರಕ್ಕಾಗಿ ಪಕ್ಷಾಂತರ ಮಾಡಿದ ರಾಜಕಾರಣಿಗಳಿಗೆ ಈ ಪದವನ್ನು ಬಳಸಬಾರದು’ ಎಂದರು.

ಆದಿತ್ಯ ಠಾಕ್ರೆ ಪಕ್ಷವನ್ನು ಮುನ್ನಡೆಸಲು ಸಮರ್ಥರಿದ್ದಾರೆಯೇ ಎಂಬ ಪ್ರಶ್ನೆಗೆ, ‘ಯುವ ಮುಖಂಡರು ಪಕ್ಷದ ನಾಯಕತ್ವದ ಜವಾಬ್ದಾರಿ ವಹಿಸಿಕೊಳ್ಳಬೇಕು. ನಾವು ಈಗಾಗಲೇ ನಾಲ್ಕು ದಶಕಗಳಿಂದ ಕೆಲಸ ಮಾಡುತ್ತಿದ್ದೇವೆ. ಇದು ಇನ್ನೆಷ್ಟು ದಿನ ಸಾಧ್ಯ? ಆದಿತ್ಯ ಅವರಿಗೆ ಈ ಸಾಮರ್ಥ್ಯವಿದೆ. ಅವರು ಅಧಿಕೃತವಾಗಿ ಪಕ್ಷದ ನಾಯಕತ್ವ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ’ ಎಂದರು.

‘ಶಿಂದೆ ಬಣಕ್ಕೆ ಸೇರ್ಪಡೆಗೊಂಡಿರುವ ಆರು ಸಂಸದರು ಹಣ, ಅಧಿಕಾರ ಮತ್ತು ರಕ್ಷಣೆಗಾಗಿ ತಮ್ಮ ನಿಷ್ಠೆ ಬದಲಿಸಿಕೊಂಡಿದ್ದಾರೆ’ ಎಂದ ರಾವುತ್, ‘ಪಕ್ಷದ ಕಾರ್ಯಕರ್ತರು, ಮತದಾರರಿಗೆ ಪಕ್ಷದಲ್ಲಿ ನಡೆದ ಇತ್ತೀಚಿನ ಬೆಳವಣಿಗೆಗಳ ಕುರಿತು ಸ್ಪಷ್ಟ ಮಾಹಿತಿ ನೀಡಲು ಉದ್ಧವ್ ಠಾಕ್ರೆ ಲೋಕಸಭಾ ಕ್ಷೇತ್ರಗಳಿಗೆ ಪ್ರವಾಸ ಹಮ್ಮಿಕೊಂಡಿದ್ದಾರೆ’ ಎಂದರು.

‘ಆಪರೇಷನ್ ಟೈಗರ್ 3.0 ಆರಂಭ’

ಮುಂಬೈ: ಮಹಾವಿಕಾಸ್ ಆಘಾಡಿ (ಎಂವಿಎ) ಬಣದಿಂದ ಶಾಸಕರನ್ನು ಸೆಳೆಯುವ ಭಾಗವಾಗಿ ಏಕನಾಥ ಶಿಂದೆ ಅವರು ಆಪರೇಷನ್ ಟೈಗರ್ 3.0 ಕಾರ್ಯಾಚರಣೆ ಆರಂಭಿಸಿದ್ದಾರೆ.

ಇತ್ತೀಚೆಗೆ ನಡೆದ ನಿರ್ಣಾಯಕ ಸಭೆಗೆ 23 ಶಾಸಕರು ಗೈರು ಹಾಜರಾದಾಗಲೇ, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ) ಮತ್ತು ಕಾಂಗ್ರೆಸ್ ಒಳಗೊಂಡ ಎಂವಿಎ ಮೈತ್ರಿಕೂಟದಲ್ಲಿನ ಬಿರುಕು ಬಹಿರಂಗಗೊಂಡಿತ್ತು.

‘ಆಪರೇಷನ್ 3.0 ಆರಂಭಗೊಂಡಿದೆ. ಕಾದು ನೋಡಿ, ಶೀಘ್ರದಲ್ಲೇ 14ಕ್ಕೂ ಹೆಚ್ಚು ಶಾಸಕರು ಶಿಂದೆ ಬಣಕ್ಕೆ ಸೇರ್ಪಡೆಗೊಳ್ಳಲಿದ್ದಾರೆ’ ಎಂದು ಶಿವಸೇನಾ (ಶಿಂದೆ ಬಣ) ಮುಖಂಡ ಗುಲಾಬ್‌ರಾವ್ ಪಾಟೀಲ್ ಹೇಳಿದ್ದಾರೆ.

288 ಸದಸ್ಯ ಬಲದ ವಿಧಾನಸಭೆಯಲ್ಲಿ ಶಿವಸೇನಾ (ಯುಬಿಟಿ) 20, ಕಾಂಗ್ರೆಸ್ 10, ಎನ್‌ಸಿಪಿ (ಎಸ್‌ಪಿ) 10 ಸದಸ್ಯ ಬಲ ಹೊಂದಿದೆ. ವಿಧಾನ ಪರಿಷತ್‌ನಲ್ಲಿ ಶಿವಸೇನಾ 6, ಕಾಂಗ್ರೆಸ್ ಮತ್ತು ಎನ್‌ಸಿಪಿ ತಲಾ ಎರಡು ಸದಸ್ಯ ಬಲ ಹೊಂದಿದೆ.

‘ಬಾಳಾಸಾಹೇಬ್ ಠಾಕ್ರೆ ಸಿದ್ಧಾಂತಕ್ಕೆ ಬದ್ಧ’: ‘ಉದ್ಧವ್ ಠಾಕ್ರೆ ಅವರ ನಾಲ್ಕು ಲೋಕಸಭಾ ಕ್ಷೇತ್ರಗಳ ಪ್ರವಾಸ ಮುಗಿದ ಬಳಿಕ, ಶಿಂದೆ ಬಣಕ್ಕೆ ಸೇರ್ಪಡೆಗೊಂಡ ಸಂಸದರು ಸಾರ್ವಜನಿಕವಾಗಿ ಕಾಣಿಸಿಕೊಳ್ಳಬೇಕಾದರೆ ಅವರಿಗೆ ಜೆಡ್ ಪ್ಲಸ್ ಭದ್ರತೆ ಬೇಕಾಗುತ್ತದೆ. ಅವರ ವಿರುದ್ಧ ಜನಾಕ್ರೋಶ ಆ ಮಟ್ಟಿಗೆ ಇದೆ’ ಎಂದು ರಾವುತ್ ಹೇಳಿದರು.

ಪಕ್ಷ ತೊರೆದವರು ನಿಮ್ಮ ನಿರ್ಧಾರವನ್ನು ಟೀಕಿಸುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ರಾವುತ್, ‘ನಾನು ಯಾವಾಗಲೂ ಪಕ್ಷ ಮತ್ತು ಬಾಳಾಸಾಹೇಬ್ ಠಾಕ್ರೆ ಅವರ ಸಿದ್ಧಾಂತಕ್ಕೆ ಬದ್ಧನಾಗಿದ್ದೇನೆ. ಅವರು ಇದನ್ನು ಮುರಿಯಲು ಸಾಕಷ್ಟು ಬಾರಿ ಪ್ರಯತ್ನಿಸಿದರು. ನಾನು ಅದನ್ನು ತಡೆಯಲು ಪ್ರಯತ್ನಿಸಿದೆ’ ಎಂದರು.

ಗೊಂಝಾಲೊ ಅಮೋಘ ಆಟ

ನಾಕೌಟ್‌ಗೆ ಲಗ್ಗೆ ಇಟ್ಟ ಈಕ್ವೆಡಾರ್ ತಂಡ • ಬಲಿಷ್ಠ ಜರ್ಮನಿಗೆ ಸೋಲಿನ ಕಹಿ

ಈಸ್ಟ್ ರುದರ್‌ಫೋರ್ಡ್, ಅಮೆರಿಕ (ಎಪಿ): ಗೊಂಝಾಲೊ ಪ್ಲಾಟಾ ತಮ್ಮ ಕಾಲಿನ ಹೆಬ್ಬೆರಳಿನಿಂದ ಫ್ಲಿಕ್ ಮಾಡಿದ ಚೆಂಡು ಗೋಲು ಬಲೆಯೊಳಗೆ ನುಗ್ಗಿತು. ಅದರೊಂದಿಗೆ ಈಕ್ವೆಡಾರ್ ತಂಡವು ಬಲಿಷ್ಠ ಜರ್ಮನಿಯ ಎದುರು ಐತಿಹಾಸಿಕ ಜಯ ಸಾಧಿಸಿತು. ಫಿಫಾ ವಿಶ್ವಕಪ್ ಟೂರ್ನಿಯ ನಾಕೌಟ್ ಹಂತಕ್ಕೆ ಪ್ರವೇಶಿಸಿತು.

ಗುರುವಾರ ನಡೆದ ಪಂದ್ಯದ 77ನೇ ನಿಮಿಷದಲ್ಲಿ ಜರ್ಮನಿಯ ಗೋಲ್‌ಕೀಪರ್ ಮ್ಯಾನುವೆಲ್ ನ್ಯೂರ್ ಅವರ ಕಣ್ತಪ್ಪಿಸಿ ಗೋಲು ದಾಖಲಿಸಿದ ಪ್ಲಾಟಾ, ಈಕ್ವೆಡಾರ್ ವಿಜಯದ ರೂವಾರಿಯಾದರು. ತಂಡವು 2–1ರಿಂದ ಜರ್ಮನಿಯನ್ನು ಸೋಲಿಸಿತು. 2006ರ ನಂತರ ಮೊದಲ ಬಾರಿಗೆ ವಿಶ್ವಕಪ್ ಟೂರ್ನಿಯ ನಾಕೌಟ್ ಪ್ರವೇಶಿಸಿತು.

'ಮೊದಲ ಎರಡು ಪಂದ್ಯಗಳಲ್ಲಿ ನಾವು ಬಹಳಷ್ಟು ತೊಂದರೆ ಅನುಭವಿಸಿದ್ದೇವೆ. ನಾವು ಬಹಳ ಮುಂಚೆಯೇ ಅರ್ಹತೆಯನ್ನು ಪಡೆಯಲು ಬಯಸಿದ್ದೆವು. ಆದರೆ ಈಗ ನಮ್ಮ ಹಸಿವು ಮತ್ತು ಕಠಿಣ ಪರಿಶ್ರಮಕ್ಕೆ ತಕ್ಕ ಜಯ ಸಿಕ್ಕಿದೆ'' ಎಂದು ತನ್ನ ಒಂಬತ್ತನೇ ಅಂತರ ರಾಷ್ಟ್ರೀಯ ಗೋಲನ್ನು ಗಳಿಸಿದ 25 ವರ್ಷದ ವಿಂಗರ್ ಪ್ಲಾಟಾ ಹೇಳಿದರು.

ಈಕ್ವೆಡಾರ್ ತಂಡವು ಕಳೆದ 22 ಪಂದ್ಯಗಳಲ್ಲಿ ಒಂದರಲ್ಲಿ ಮಾತ್ರ ಸೋತಿದೆ. ಟೂರ್ನಿಯ 'ಇ' ಗುಂಪಿನಲ್ಲಿ ನಾಲ್ಕು ಅಂಕಗಳೊಂದಿಗೆ ಮೂರನೇ ಸ್ಥಾನ ಗಳಿಸಿತು ಮತ್ತು ಎರಡನೇ ಬಾರಿಗೆ ಗುಂಪು ಹಂತವನ್ನು ದಾಟಿತು.

ನಾಲ್ಕು ಬಾರಿ ಚಾಂಪಿಯನ್ ಆಗಿರುವ ಜರ್ಮನಿ ಇಲ್ಲಿ ತನ್ನ ಮೊದಲ ಎರಡು ಪಂದ್ಯಗಳನ್ನು ಗೆದ್ದಿತ್ತು. ಸೋಮವಾರ ಮೆಸಾಚ್ಯುಸೆಟ್ಸ್‌ನಲ್ಲಿ ನಡೆಯಲಿರುವ 32 ರ ಘಟ್ಟದ ಪಂದ್ಯದಲ್ಲಿ ಆಡಲಿದೆ. ಆದರೆ ಜರ್ಮನಿ ತಂಡದ ಸತತ 11 ಪಂದ್ಯ ಜಯಿಸುವ ಕನಸಿಗೆ ಈಕ್ವೆಡಾರ್ ಅಡ್ಡಗಾಲು ಹಾಕಿತು.

ಕ್ರೀಡಾಂಗಣದಲ್ಲಿ 80,663 ಜನ ಸೇರಿದ್ದರು. ಅದರಲ್ಲಿ ಬಹುತೇಕರು ಈಕ್ವೆಡಾರ್ಸ್ ತಂಡದ ಹಳದಿ ಜರ್ಸಿ ಧರಿಸಿದ್ದರು. ಆದರೆ ಪಂದ್ಯದ ಎರಡನೇ ನಿಮಿಷದಲ್ಲಿಯೇ ಜರ್ಮನಿಯ ಲೆರಾಯ್ ಸಾನೆ ಗೋಲು ಹೊಡೆದರು. ಜರ್ಮನಿಯ ಅಭಿಮಾನಿಗಳು ಸಂಭ್ರಮಿಸಿದರು. ಇದಾಗಿ ಏಳು ನಿಮಿಷಗಳ ನಂತರ ಈಕ್ವೆಡಾರ್‌ನ ನಿಲ್ಸನ್ ಆ್ಯಂಗುಲೊ ಗೋಲು ಗಳಿಸುವ ಮೂಲಕ 1–1ರ ಸಮಬಲ ಸಾಧಿಸಿದರು.

ನಂತರದ ಆಟದಲ್ಲಿ ಉಭಯ ತಂಡಗಳು ತುರುಸಿನ ಪೈಪೋಟಿ ನಡೆಸಿದವು. ಪಂದ್ಯದ ಬಹುಪಾಲು ಅವಧಿಯಲ್ಲಿ ಜರ್ಮನಿಯ ಆಟಗಾರರೇ ಚೆಂಡಿನ ಮೇಲೆ ಹೆಚ್ಚು ನಿಯಂತ್ರಣ ಸಾಧಿಸಿದ್ದರು. ಪಾಸ್ ಮಾಡುವಲ್ಲಿಯೂ ಜರ್ಮನಿಯು ಈಕ್ವೆಡಾರ್‌ಗಿಂತ ತುಸು ಹೆಚ್ಚು ನಿಖರತೆ ಸಾಧಿಸಿತ್ತು. ಪಂದ್ಯದ ನಿಗದಿಯ ಅವಧಿ ಮುಗಿಯಲು ಇನ್ನೂ ಹದಿಮೂರು ನಿಮಿಷ ಬಾಕಿಯಿದ್ದಾಗ ಪ್ಲಾಟ್ ಮಿಂಚಿದರು.

ಪಂದ್ಯಗಳು

ನ್ಯೂಜಿಲೆಂಡ್–ಬೆಲ್ಜಿಯಂ ಶನಿವಾರ ಬೆಳಿಗ್ಗೆ 8.30
ಈಜಿಪ್ಟ್–ಇರಾನ್ ಶನಿವಾರ ಬೆಳಿಗ್ಗೆ 8.30
ಪನಾಮಾ–ಇಂಗ್ಲೆಂಡ್ ಭಾನುವಾರ ನಸುಕಿನ ಜಾವ 2.30
ಕ್ರೊಯೇಷಿಯಾ–ಘಾನಾ ಭಾನುವಾರ ನಸುಕಿನ ಜಾವ 2.30
ಕೊಲಂಬಿಯಾ–ಪೋರ್ಚುಗಲ್ ಭಾನುವಾರ ಬೆಳಿಗ್ಗೆ 5
ಕಾಂಗೊ ರಿಪಬ್ಲಿಕ್–ಉಜ್ಬೇಕಿಸ್ತಾನ ಭಾನುವಾರ ಬೆಳಿಗ್ಗೆ 5

(ಸಮಯ: ಭಾರತೀಯ ಕಾಲಮಾನ)

ಲೈವ್: ಯುನೈಟ್8 ನೆಟ್‌ವರ್ಕ್, ಜೀ5 ಆ್ಯಪ್

ಈಕ್ವೆಡಾರ್	ಜರ್ಮನಿ
2	1



ಗೆಲುವಿನ ಗೋಲು ಹೊಡೆಯುವ ಪ್ರಯತ್ನದಲ್ಲಿರುವ ಈಕ್ವೆಡಾರ್ ದೇಶದ ಗೊಂಝಾಲೊ ಪ್ಲಾಟಾ (ಮಧ್ಯ) ಅವರನ್ನು ತಡೆಯಲೆತ್ನಿಸಿದ ಎದುರಾಳಿ ಆಟಗಾರರು ಎಎಫ್‌ಪಿ ಚಿತ್ರ

ನಿಕೋಲಸ್ ಪೆಪೆ 'ಡಬಲ್': ಐವರಿ ಕೋಸ್ಟ್ ಜಯಭೇರಿ

ನಿಕೋಲಸ್ ಪೆಪೆ ಹೊಡೆದ ಎರಡು ಗೋಲುಗಳ ನೆರವಿನಿಂದ ಐವರಿ ಕೋಸ್ಟ್ ತಂಡವು ಇ ಗುಂಪಿನ ಪಂದ್ಯದಲ್ಲಿ ಕುರಸಾವೊ ವಿರುದ್ಧ ಗೆದ್ದಿತು.

ಒಂದೂವರೆ ಲಕ್ಷದಷ್ಟು ಜನಸಂಖ್ಯೆ ಹೊಂದಿರುವ ಕ್ಯುರಸಾವೊ ತಂಡವು ಇದೇ ಮೊದಲ ಬಾರಿಗೆ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿದೆ.

ಗುರುವಾರ ನಡೆದ ಪಂದ್ಯದಲ್ಲಿ ಐವರಿ ತಂಡವು 2–0 ಗೋಲುಗಳಿಂದ ಕ್ಯುರಸಾವೊ ಎದುರು ಜಯಿಸಿತು.

ಪೆಪೆ ಅವರು 7 ಮತ್ತು 66ನೇ ನಿಮಿಷದಲ್ಲಿ ಗೋಲುಗಳನ್ನು ಹೊಡೆದರು. ಐವರಿ ತಂಡವು ಆರು ಅಂಕಗಳೊಂದಿಗೆ 32ರ ಘಟ್ಟ ಪ್ರವೇಶಿಸಿದೆ. ಕುರಸಾವೊ ಆಟಗಾರರ ಅನುಭವದ ಕೊರತೆಯು ಎದ್ದುಕಂಡಿತು. ಟೂರ್ನಿಯಲ್ಲಿ ಮೂರು ಪಂದ್ಯಗಳನ್ನು ಆಡಿರುವ ತಂಡವು 1ರಲ್ಲಿ ಡ್ರಾ ಸಾಧಿಸಿತ್ತು. ಉಳಿದೆರಡರಲ್ಲಿ ಸೋತಿತ್ತು.

ಐವರಿ ಕೋಸ್ಟ್	ಕ್ಯುರಸಾವೊ
2	0

32ರ ಘಟ್ಟಕ್ಕೆ ಡಚ್ ಬಳಗ ಲಗ್ಗೆ

ಕನ್ಸಾಸ್ ಸಿಟಿ (ಎಎಫ್‌ಪಿ): ನೆದರ್ಲೆಂಡ್ಸ್ ತಂಡವು ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ 'ಎಫ್' ಗುಂಪಿನಿಂದ 32ರ ಘಟ್ಟಕ್ಕೆ ಪ್ರವೇಶಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಡಚ್ ಪಡೆಯು 3–1ರಿಂದ ಟ್ಯುನಿಷಿಯಾ ಎದುರು ಗೆಲುವು ಸಾಧಿಸಿತು. ಆ್ಯರೊಹೆಡ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 3ನೇ ನಿಮಿಷದಲ್ಲಿ ಟ್ಯುನಿಷಿಯಾದ ಎಲಿಸ್ ಸಿಕ್ರಿ ಅವರು 'ಉಡುಗೊರೆ' ಗೋಲು ನೀಡುವುದರೊಂದಿಗೆ ನೆದರ್ಲೆಂಡ್ಸ್ 1–0 ಮುನ್ನಡೆ ಪಡೆಯಿತು.

ನಾಲ್ಕು ನಿಮಿಷ ಕಳೆಯುವಷ್ಟರಲ್ಲಿ ಬ್ರಿಯಾನ್ ಬ್ರಾಬಿ ಮಿಂಚಿದರು. ಅವರು ಗಳಿಸಿದ ಗೋಲಿನಿಂದಾಗಿ ಡಚ್ ಬಳಗವು 2–0 ಮುನ್ನಡೆ ಗಳಿಸಿತು.

ದ್ವಿತೀಯಾರ್ಧದಲ್ಲಿ ಒಂದಿಷ್ಟು ಪ್ರತಿರೋಧ ತೋರಿದ ಟ್ಯುನಿಷಿಯಾದ ಹಝೇಮ್ ಮಸ್ತೋರಿ 54ನೇ ನಿಮಿಷದಲ್ಲಿ ಗೋಲು ಗಳಿಸಿದರು. ತಂಡದಲ್ಲಿ ಮತ್ತೆ ಗೆಲುವಿನ ಕನಸು ಚಿಗುರೊಡೆಯಿತು. ಉಭಯ ತಂಡಗಳು ಜಿದ್ದಾಜಿದ್ದಿಯಿಂದ ಹೋರಾಡಿದವು.

ಆದರೆ 62ನೇ ನಿಮಿಷದಲ್ಲಿ ಜೇನ್ ಪಾಲ್ ವ್ಯಾನ್ ಹೆಕಿ ಗೋಲು ದಾಖಲಿಸಿದರು. ಅದರೊಂದಿಗೆ ನೆದರ್ಲೆಂಡ್ಸ್ ತಂಡಕ್ಕೆ ಜಯದ ಹಾದಿ ತೆರೆಯಿತು.

ನೆದರ್ಲೆಂಡ್ಸ್	ಟ್ಯುನಿಷಿಯಾ
3	1

ನಾಕೌಟ್‌ನಲ್ಲಿ ಜಪಾನ್–ಬ್ರೆಜಿಲ್ ಹಣಾಹಣಿ

ಅರ್ಲಿಂಗ್ಟನ್, ಅಮೆರಿಕ (ಎಎಫ್‌ಪಿ): ಜಪಾನ್ ತಂಡವು ಫಿಫಾ ವಿಶ್ವಕಪ್ ಟೂರ್ನಿಯ 32ರ ಘಟ್ಟದಲ್ಲಿ ಬ್ರೆಜಿಲ್ ತಂಡವನ್ನು ಎದುರಿಸಲಿದೆ.

ಗುರುವಾರ ನಡೆದ 'ಎಫ್' ಗುಂಪಿನ ಪಂದ್ಯದಲ್ಲಿ ಜಪಾನ್ ಹಾಗೂ ಸ್ವೀಡನ್ ಪಂದ್ಯವು 1–1ರಿಂದ ಡ್ರಾ ಆಯಿತು. ಇದರೊಂದಿಗೆ ಜಪಾನ್ ಒಟ್ಟು ಐದು ಅಂಕ ಗಳಿಸಿತು. ಗುಂಪಿನಲ್ಲಿ ಎರಡನೇ ಸ್ಥಾನಕ್ಕೇರಿತು.

ಪಂದ್ಯದ ಆರಂಭದಿಂದಲೂ ಉಭಯ ತಂಡಗಳು ತುರುಸಿನ ಪೈಪೋಟಿ ನಡೆಸಿದವು. 56ನೇ ನಿಮಿಷದಲ್ಲಿ ಜಪಾನ್ ತಂಡದ ಡೈಜನ್ ಮೇಯ್ಡಾ ಅವರು ಗೋಲು ಹೊಡೆದರು. ಇದಾಗಿ ಆರು ನಿಮಿಷಗಳ ನಂತರ ಅಂತೋಣಿ ಇಲಾಂಗ್ ಗೋಲು ಹೊಡೆದು ಸಮಬಲ ಸಾಧಿಸಿದರು. ನಂತರದ ಆಟದಲ್ಲಿ ಎರಡೂ ತಂಡಗಳ ಗೋಲು ಗಳಿಸುವ ಪ್ರಯತ್ನಗಳು ಕೈಗೂಡಲಿಲ್ಲ.

ಸೋಮವಾರ ಹ್ಯೂಸ್ಟನ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಜಪಾನ್ ಮತ್ತು ಬ್ರೆಜಿಲ್ ಮುಖಾಮುಖಿಯಾಗಲಿವೆ. ಕಳೆದ ಅಕ್ಟೋಬರ್‌ನಲ್ಲಿ ನಡೆದಿದ್ದ ಸ್ನೇಹಪರ ಪಂದ್ಯದಲ್ಲಿ ಜಪಾನ್ ತಂಡವು 3–2ರಿಂದ ಬ್ರೆಜಿಲ್ ವಿರುದ್ಧ ಜಯಿಸಿತ್ತು.

ಕೊನೆ ಕ್ಷಣದಲ್ಲಿ ಕಾನ್ ಗೋಲು: ಟರ್ಕಿ ಜಯಭೇರಿ

ಇಂಗ್ಲೆವುಡ್, ಕ್ಯಾಲಿಫೋರ್ನಿಯಾ(ಎಪಿ): ಕಾನ್ ಐಯಿಹಾನ್ ಅವರು ಪಂದ್ಯದ ಕೊನೆಯ ಹಂತದಲ್ಲಿ ಗಳಿಸಿದ ಗೋಲು ಟರ್ಕಿಯ ಪಾಳೆಯದಲ್ಲಿ ಸಂಭ್ರಮದ ಹೊನಲು ಹರಿಸಿತು. ಆತಿಥೇಯ ಅಮೆರಿಕ ಸೋಲಿನ ನಿರಾಸೆ ಅನುಭವಿಸಿತು.

ಗುರುವಾರ ತಡರಾತ್ರಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಟರ್ಕಿ ತಂಡವು 3–2ರಿಂದ ಅಮೆರಿಕ ಎದುರು ಜಯಭೇರಿ ಬಾರಿಸಿತು. ಈಗಾಗಲೇ ಆರು ಅಂಕ ಗಳಿಸಿ ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿರುವ ಅಮೆರಿಕದ ನಾಕೌಟ್ ಪ್ರವೇಶಿಸಿದೆ.

ಗುಂಪಿನಲ್ಲಿ ಟರ್ಕಿ ತಂಡವು ತನ್ನ ಮೊದಲೆರಡೂ ಪಂದ್ಯಗಳಲ್ಲಿ ಸೋತಿತ್ತು. ಆದರೆ ಅಮೆರಿಕ ಎದುರು ವೀರಾವೇಶದಿಂದ ಆಡಿದ ತಂಡದ ಆಟಗಾರರು ಗೆಲುವಿನ ಕಾಣಿಕೆ ನೀಡಿದರು.

ಪಂದ್ಯದ ಮೂರನೇ ನಿಮಿಷದಲ್ಲಿಯೇ ಅಮೆರಿಕದ ಆಸ್ಟನ್ ಟ್ರಸ್ಟಿ ಗೋಲು ಖಾತೆ ತೆರೆದರು. 1–0 ಮುನ್ನಡೆ ತಂದುಕೊಟ್ಟರು. ಆದರೆ, ಹತ್ತನೇ ನಿಮಿಷದಲ್ಲಿ ಬನ್ಸ್ ಅಲಫೆರ್ ಯಿಲ್‌ಮಾಝ್ ಗೋಲು ಹೊಡೆದು ಸಮಬಲ ಸಾಧಿಸಿದರು. ಇದಕ್ಕೆ ತಿರುಗೇಟು ನೀಡುವಲ್ಲಿ ಅಮೆರಿಕದ ಸೆಬಾಸ್ಟಿಯನ್ ಬೆರ್ಲ್ಹಾಟರ್ 49ನೇ ನಿಮಿಷದಲ್ಲಿ ಯಶಸ್ವಿಯಾದರು. ಇದರಿಂದಾಗಿ 2–2ರ ಸಮಬಲವಾಯಿತು. ಇದರಿಂದಾಗಿ ಅಮೆರಿಕವು ಸೋಲಿನಿಂದ ಪಾರಾಗುವ ನಿರೀಕ್ಷೆ ಮೂಡಿತ್ತು. ಇದೇ ಪ್ರಯತ್ನದಲ್ಲಿ ನಿಗದಿಯ 90 ನಿಮಿಷಗಳ ಅವಧಿಯೂ ಮುಗಿಯಿತು. ಆದರೆ ಇಂಜುರಿ ಸಮಯದ 8ನೇ ನಿಮಿಷದಲ್ಲಿ ಕಾನ್ ಕಾಲ್ಚಳಕ ತೋರಿಸಿದರು. ಟರ್ಕಿ ತಂಡವು ಜಯಿಸಿತು.

ಟರ್ಕಿ	ಅಮೆರಿಕ
3	2

ಶ್ರೇಯಸ್ ನಾಯಕತ್ವದ ಮೊದಲ ಪಂದ್ಯದಲ್ಲಿ ನಿರಾಸೆ: ಅಭಿಷೇಕ್ ಅರ್ಧಶತಕ

ಭಾರತ ತಂಡಕ್ಕೆ ಐರ್ಲೆಂಡ್ ಆಘಾತ

ಬೆಲ್‌ಫಾಸ್ಟ್ (ಪಿಟಿಐ): ಐರ್ಲೆಂಡ್ ತಂಡವು ಮೊದಲ ಬಾರಿಗೆ ಭಾರತದ ವಿರುದ್ಧದ ಪಂದ್ಯ ಗೆದ್ದು ಚಾರಿತ್ರಿಕ ಸಾಧನೆ ಮಾಡಿತು.

ಶುಕ್ರವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ 183 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಭಾರತ ತಂಡವು ಅಭಿಷೇಕ್ ಶರ್ಮಾ (50; 20ಎ, 4X7, 6X2) ಅವರ ಅಬ್ಬರದ ಅರ್ಧಶತಕದ ಹೊರತಾಗಿಯೂ ಸೋತಿತು.

ಪ್ರಮುಖ ಬ್ಯಾಟರ್‌ಗಳಾದ ಸಂಜು ಸ್ಯಾಮ್ಸನ್ (5 ರನ್), ಇಶಾನ್ ಕಿಶನ್ (1 ರನ್), ನಾಯಕನಾಗಿ ಮೊದಲ ಪಂದ್ಯವಾಡಿದ ಶ್ರೇಯಸ್ ಅಯ್ಯರ್ (3 ರನ್) ಹಾಗೂ ವಾಷಿಂಗ್ಟನ್ ಸುಂದರ್ (9 ರನ್) ಅವರ ವೈಫಲ್ಯವು ತಂಡವನ್ನು ಕಾಡಿತು. ಆತಿಥೇಯ ತಂಡದ ಮ್ಯಾಥ್ಯೂ ಹಂಪ್ರಿಸ್ (38ಕ್ಕೆ3) ಮತ್ತು ಮ್ಯಾಥ್ಯೂ ಹೊಲಾರ್ಡ್ (28ಕ್ಕೆ3) ಅವರ ಅಮೋಘ ಬೌಲಿಂಗ್ ಮುಂದೆ 'ಟಿ20 ವಿಶ್ವಕಪ್ ಚಾಂಪಿಯನ್' ಭಾರತ ತಂಡವು ಮಣಿಯಿತು. 18.5 ಓವರ್‌ಗಳಲ್ಲಿ 148 ರನ್ ಗಳಿಸಿ ಆಲೌಟ್ ಆಯಿತು.

34 ರನ್‌ಗಳಿಂದ ಗೆದ್ದ ಐರ್ಲೆಂಡ್ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು. ಎರಡನೇ ಹಾಗೂ ಕೊನೆಯ ಪಂದ್ಯವು 28ರಂದು ನಡೆಯುವುದು. ಭಾರತಕ್ಕೆ ಸರಣಿ ಸಮ ಮಾಡಿಕೊಳ್ಳಲು ಅದೊಂದು ಅವಕಾಶ ಉಳಿದಿದೆ.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹರ್ಷಿತ್ ರಾಣಾ (24ಕ್ಕೆ3), ಅರ್ಷದೀಪ್ ಸಿಂಗ್ (28ಕ್ಕೆ2) ಮತ್ತು ಅಕ್ಷರ್ ಪಟೇಲ್ (33ಕ್ಕೆ2) ಅವರು ಪರಿಣಾಮಕಾರಿ ದಾಳಿ ಮಾಡಿದರು. ಇದರಿಂದಾಗಿ 51 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿದ್ದ ಐರ್ಲೆಂಡ್ ಸಂಕಷ್ಟ ಎದುರಿಸಿತ್ತು. ಈ ಹಂತದಲ್ಲಿ ನಾಯಕ ಲಾರ್ಕನ್ ಟಕರ್ (50; 36ಎ) ಮತ್ತು ಗರೆತ್ ಡೆಲ್ನಿ (49; 32ಎ) ಅವರು ಚೆಂದದ ಬ್ಯಾಟಿಂಗ್ ಮಾಡಿದರು. ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 182 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಕಲೆಹಾಕಿತು.

ನಿರೀಕ್ಷೆಯಂತೆ ಅಭಿಷೇಕ್ ಶರ್ಮಾ ಅವರು ಅಬ್ಬರದ ಆಟದೊಂದಿಗೆ ಇನಿಂಗ್ಸ್ ಆರಂಭಿಸಿದರು. ಆದರೆ ಇನ್ನೊಂದು ಕಡೆ ವಿಕೆಟ್ ಪತನವಾದವು. ಪವರ್‌ಪ್ಲೇ ಮುಗಿಯುವಷ್ಟರಲ್ಲಿ ಭಾರತ ತಂಡವು 60ಕ್ಕೆ3 ವಿಕೆಟ್ ಕಳೆದುಕೊಂಡಿತ್ತು. ತಿಲಕ್ ವರ್ಮಾ (19; 21ಎ), ಶಿವಂ ದುಬೆ (25; 14ಎ, 4X1, 6X2) ಹಾಗೂ ಅಕ್ಷರ್ ಪಟೇಲ್ (15; 16ಎ) ಅವರ ಪ್ರಯತ್ನ ಸಾಕಾಗಲಿಲ್ಲ.

ಐರ್ಲೆಂಡ್ ತಂಡದ ಬೌಲರ್‌ಗಳು ಯೋಜನಾಬದ್ಧ ದಾಳಿ ನಡೆಸಿದರು. ಮುಖ್ಯವಾಗಿ ಫೀಲ್ಡರ್‌ಗಳು ಚುರುಕುತನ ತೋರಿದರು. ಕ್ಯಾಚ್‌ಗಳನ್ನು ಪಡೆಯುವಲ್ಲಿ ಯಾವುದೇ ತಪ್ಪು ಮಾಡಲಿಲ್ಲ.

ವೈಭವ್‌ಗೆ ಇಲ್ಲ ಅವಕಾಶ: ಭಾರತ ತಂಡದಲ್ಲಿರುವ 15 ವರ್ಷದ ವೈಭವ್ ಸೂರ್ಯವಂಶಿ ಅವರಿಗೆ ಶುಕ್ರವಾರದ ಪಂದ್ಯದಲ್ಲಿ ಪದಾರ್ಪಣೆಯ ಅವಕಾಶ ಲಭಿಸಲಿಲ್ಲ. ಈಚೆಗೆ ನಡೆದಿದ್ದ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಅವರು ಭಾರತ ಎ ತಂಡದ ಗೆಲುವಿನ ರೂವಾರಿಯಾಗಿದ್ದರು. ಐಪಿಎಲ್‌ನಲ್ಲಿಯೂ 'ಆರೆಂಜ್ ಕ್ಯಾಪ್' ಗೌರವ ಪಡೆದಿದ್ದರು.

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 182 (ಟಿಮ್ ಟೆಕರ್ 17, ರಾಸ್ ಅಡೇರ್ 12, ಲಾರ್ಕನ್ ಟಕರ್ 50, ಬೆಂಜಮಿನ್ ಕಾಲಿಟ್ಜ್ 15, ಗರೆತ್ ಡೆಲನಿ 49, ಜಾರ್ಜ್ ಡಾಕ್ರೆಲ್ 19, ಅರ್ಷದೀಪ್ ಸಿಂಗ್ 28ಕ್ಕೆ2, ಹರ್ಷಿತ್ ರಾಣಾ 24ಕ್ಕೆ3, ಅಕ್ಷರ್ ಪಟೇಲ್ 33ಕ್ಕೆ2) ಭಾರತ: 18.5 ಓವರ್‌ಗಳಲ್ಲಿ 148 (ಅಭಿಷೇಕ್ ಶರ್ಮಾ 50, ತಿಲಕ್ ವರ್ಮಾ 19,ಶಿವಂ ದುಬೆ 25, ಅಕ್ಷರ್ ಪಟೇಲ್ 15, ಮ್ಯಾಥ್ಯೂ ಹಂಪ್ರಿಸ್ 38ಕ್ಕೆ3, ಜೈ ಮುಂದ್ರಾ 26ಕ್ಕೆ2, ಮ್ಯಾಥ್ಯೂ ಹೊಲಾರ್ಡ್ 28ಕ್ಕೆ3) ಫಲಿತಾಂಶ: ಐರ್ಲೆಂಡ್‌ಗೆ 34 ರನ್ ಜಯ ಮತ್ತು ಸರಣಿಯಲ್ಲಿ 1–0 ಮುನ್ನಡೆ.



ಅರ್ಧಶತಕ ದಾಖಲಿಸಿದ ಲಾರ್ಕನ್ ಟಕರ್ ಪಿಟಿಐ ಚಿತ್ರ

ತಾಝ್ಮಿನ್ ಬ್ರಿಟ್ಸ್ ಮಿಂಚಿನ ಶತಕ

ಬ್ರಿಸ್ಟಲ್ (ಇಂಗ್ಲೆಂಡ್): ತಾಝ್ಮಿನ್ ಬ್ರಿಟ್ಸ್ (114*, 69 ಎಸೆತ) ಅವರ ಅಜೇಯ ಶತಕ ಮತ್ತು ಮಧ್ಯಮ ವೇಗಿ ಅಯಬೊಂಗಾ ಖಾಕಾ (19ಕ್ಕೆ3) ಅವರ ಬೌಲಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ, ಐಸಿಸಿ ಟಿ20 ಮಹಿಳೆಯರ ವಿಶ್ವಕಪ್ ಒಂದನೇ ಗುಂಪಿನ ಪಂದ್ಯದಲ್ಲಿ ಗುರುವಾರ ನೆದರ್ಲೆಂಡ್ಸ್ ತಂಡವನ್ನು 88 ರನ್ ಗಳಿಂದ ನಿರಾಯಾಸವಾಗಿ ಸೋಲಿಸಿತು.

ಒಂದನೇ ಗುಂಪಿನಲ್ಲಿ ಆಸ್ಟ್ರೇಲಿಯಾ ಆಡಿದ ಎಲ್ಲಾ ನಾಲ್ಕೂ ಪಂದ್ಯಗಳನ್ನು ಜಯಿಸಿ ಸೆಮಿಫೈನಲ್ ಖಚಿತ ಪಡಿಸಿಕೊಂಡಿದೆ. ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ತಲಾ 3 ಪಂದ್ಯ ಗೆದ್ದು ಆರು ಪಾಯಿಂಟ್ಸ್ ಹೊಂದಿವೆ. ನೆಟ್ ರನ್ ರೇಟ್ ಆಧಾರದಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ.

ಭಾನುವಾರ ನಡೆಯಲಿರುವ ಗುಂಪಿನ ಕೊನೆಯ ಸುತ್ತಿನ ಪಂದ್ಯಗಳಲ್ಲಿ ಭಾರತ ತಂಡವು, ಆಸ್ಟ್ರೇಲಿಯಾ ವಿರುದ್ಧ, ದಕ್ಷಿಣ ಆಫ್ರಿಕಾ ತಂಡವು, ಬಾಂಗ್ಲಾದೇಶ ವಿರುದ್ಧ ಆಡಲಿವೆ.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 1 ವಿಕೆಟ್‌ಗೆ 208 (ಲಾರಾ ವೋಲ್ವಾರ್ಟ್ 45, ತಾಝ್ಮಿನ್ ಬ್ರಿಟ್ಸ್ ಔಟಾಗದೇ 114); ನೆದರ್ಲೆಂಡ್ಸ್: 20 ಓವರುಗಳಲ್ಲಿ 8 ವಿಕೆಟ್‌ಗೆ 120 (ಫಿಬೆ ಮೊಕೆನ್‌ಬೋರ್ 41, ಸ್ಟೆರೆ ಕಾಲಿಸ್ 26; ಅಯಬೊಂಗಾ ಖಾಕಾ 19ಕ್ಕೆ3, ಕ್ಲೊ ಟ್ರಯನ್ 16ಕ್ಕೆ2). ಪಂದ್ಯದ ಆಟಗಾರ್ತಿ: ತಾಜ್ಮಿನ್ ಬ್ರಿಟ್ಸ್

ರಾಜನಗರದಲ್ಲಿ ಮಹಾರಾಜ ಟ್ರೋಫಿ ಕ್ರಿಕೆಟ್

• ಸತೀಶ ಬಿ.

ಹುಬ್ಬಳ್ಳಿ: ಕೆಲ ತಿಂಗಳ ಹಿಂದೆ ರಣಜಿ ಟ್ರೋಫಿ ಫೈನಲ್ ಪಂದ್ಯಕ್ಕೆ ಆತಿಥ್ಯ ವಹಿಸಿದ್ದ ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಚುಟುಕು ಕ್ರಿಕೆಟ್ ಹಬ್ಬದ ಸಂಭ್ರಮ ಮನೆ ಮಾಡಿದೆ. 'ಮಹಾರಾಜ ಟ್ರೋಫಿ' ಟಿ-20 ಕ್ರಿಕೆಟ್ ಟೂರ್ನಿಯ ಎರಡನೇ ಹಂತದ ಪಂದ್ಯಗಳು ಜೂನ್ 27ರಂದು ಇಲ್ಲಿ ಆರಂಭವಾಗಲಿದ್ದು, ಸಿದ್ಧತೆಗಳು ಪೂರ್ಣಗೊಂಡಿವೆ.

ಕರ್ನಾಟಕ ಪ್ರೀಮಿಯರ್ ಲೀಗ್‌ನ (ಕೆಪಿಎಲ್) ಪಂದ್ಯಗಳು 2019ರಲ್ಲಿ ಇಲ್ಲಿ ನಡೆದಿದ್ದವು. ನಂತರ ಮಹಾರಾಜ ಟ್ರೋಫಿಯ ಯಾವುದೇ ಪಂದ್ಯಗಳು ಇಲ್ಲಿ ಆಯೋಜನೆ ಆಗಿರಲಿಲ್ಲ. ಈ ಬಾರಿ 12 ಪಂದ್ಯಗಳು ಇಲ್ಲಿ ನಡೆಯಲಿವೆ.

ಹುಬ್ಬಳ್ಳಿ ಆವೃತ್ತಿಯ ಮೊದಲ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್–ಬೆಂಗಳೂರು ಬ್ಲಾಸ್ಟರ್ಸ್, ಮತ್ತೊಂದು ಪಂದ್ಯದಲ್ಲಿ ಮೈಸೂರು ವಾರಿಯರ್ಸ್–ಗುಲ್ಬರ್ಗ ಮಿಸ್ಟಿಕ್ಸ್ ಪೈಪೋಟಿ ನಡೆಸಲಿವೆ.

ಚೊಚ್ಚಲ ಟ್ರೋಫಿ ಮೇಲೆ ಕಣ್ಣಿಟ್ಟಿರುವ ಶುಭಾಂಗ್ ಹೆಗ್ಡೆ ನಾಯಕತ್ವದ ಬ್ಲಾಸ್ಟರ್ಸ್, ಆಡಿರುವ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಜಯಗಳಿಸಿದೆ. ಅದರ ಖಾತೆಯಲ್ಲಿ 6 ಅಂಕಗಳಿದ್ದು, ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ. ಕರುಣ್ ನಾಯರ್ ಸಾರಥ್ಯದ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವು 5 ಅಂಕ ಸಂಪಾದಿಸಿ, ಎರಡನೇ ಸ್ಥಾನದಲ್ಲಿದೆ. ಹುಬ್ಬಳ್ಳಿ ಟೈಗರ್ಸ್ ತಂಡ ಮೂರು ಅಂಕಗಳೊಂದಿಗೆ ಐದನೇ ಸ್ಥಾನ ಗಳಿಸಿದೆ.

ನಗರದಲ್ಲಿ ಮಳೆ ಬರುವ ಸಾಧ್ಯತೆ ಇದ್ದು, ಪಂದ್ಯಕ್ಕೆ ತೊಂದರೆಯಾಗದಂತೆ ಮೈದಾನವನ್ನು ಟಾರ್ಪಲ್‌ಗಳಿಂದ ಮುಚ್ಚಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಹೆಚ್ಚುವರಿ ಸೂಪರ್ ಸಾಪರ್ ಯಂತ್ರಗಳನ್ನು ತರಿಸಿಕೊಳ್ಳಲಾಗಿದೆ.

ಇಂದಿನ ಪಂದ್ಯಗಳು

ಶಿವಮೊಗ್ಗ ಯೋಧಾಸ್–ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 2)

ಮೈಸೂರು ವಾರಿಯರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ರಾತ್ರಿ 7)



ಶಿವಮೊಗ್ಗ ಯೋಧಾಸ್ ತಂಡದ ಆಟಗಾರರು ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶುಕ್ರವಾರ ಅಭ್ಯಾಸ ಮಾಡಿದರು. ಚಿತ್ರ:ಗೋವಿಂದರಾಜ ಜವಳಿ

ಧ್ರುವ್ ಜುರೇಲ್ ಅಜೇಯ 141

ಗಾಲೆ (ಪಿಟಿಐ): ನಾಯಕ ಧ್ರುವ್ ಜುರೇಲ್ ಅವರ ಅಜೇಯ 141 ರನ್‌ಗಳ ನೆರವಿನಿಂದ ಭಾರತ ಎ ತಂಡ, ಮೊದಲ 'ಟೆಸ್ಟ್' ಪಂದ್ಯದ ಎರಡನೇ ದಿನವಾದ ಶುಕ್ರವಾರ ಶ್ರೀಲಂಕಾ ಎ ತಂಡದ ವಿರುದ್ಧ 6 ವಿಕೆಟ್‌ಗೆ 452 ರನ್‌ಗಳ ದೊಡ್ಡ ಮೊತ್ತ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ಇದಕ್ಕೆ ಉತ್ತರವಾಗಿ ಆತಿಥೇಯ ತಂಡ ಆರಂಭದಲ್ಲೇ ಕುಸಿದರೂ, ನುವನಿದು ಫೆರ್ನಾಂಡೊ (65*, 103ಎ, 4x7) ಅವರ ಅಜೇಯ ಅರ್ಧ ಶತಕದ ನೆರವಿನಿಂದ ಚೇತರಿಸಿಕೊಂಡು 2 ವಿಕೆಟ್‌ಗೆ 113 ರನ್‌ಗಳೊಡನೆ ದಿನದಾಟ ಮುಗಿಸಿತು. ಶ್ರೀಲಂಕಾ ಎ ಇನ್ನೂ 339 ರನ್‌ಗಳಿಂದ ಹಿಂದಿದೆ.

ವೇಗದ ಬೌಲರ್ ಅನ್ಶುಲ್ ಕಂಬೋಜ್ (22ಕ್ಕೆ1) ಅವರು ಆರಂಭ ಆಟಗಾರ– ವಿಕೆಟ್ ಕೀಪರ್ ನಿರೋಶನ್ ಡಿಕ್ವೆಲ್ಲಾ (10) ವಿಕೆಟ್ ಗಳಿಸಿದರು. ನಂತರ ಯಶ್ ಠಾಕೂರ್ (20ಕ್ಕೆ1) ಅವರು ಪವಂತ ವೀರಸಿಂಘೆ (11) ಅವರನ್ನು ಬೌಲ್ಡ್ ಮಾಡಿದರು. ನುವನಿದು ಮತ್ತು ಅಶೆನ್ ಬಂಡಾರ (ಔಟಾಗದೇ 18) ಅವರು ಮುರಿಯದ ಮೂರನೇ ವಿಕೆಟ್‌ಗೆ 75 ರನ್ ಸೇರಿಸಿದ್ದಾರೆ.

ಇದಕ್ಕೆ ಮೊದಲು 4 ವಿಕೆಟ್‌ಗೆ 333 ರನ್‌ಗಳೊಡನೆ ದಿನದಾಟ ಮುಂದುವರಿಸಿದ ಭಾರತ ಎ ತಂಡ, ಶೇಖ್ ರಶೀದ್ (63, 113ಎ) ಅವರನ್ನು ಬೇಗ ಕಳೆದುಕೊಂಡಿತು. ಜುರೇಲ್ ಮತ್ತು ರಶೀದ್ ನಡುವಣ ಐದನೇ ವಿಕೆಟ್‌ಗೆ 136 ರನ್‌ಗಳು ಹರಿದುಬಂದವು. ಜುರೇಲ್ ನಂತರ ಯಶ್ ಠಾಕೂರ್ (30, 51ಎ) ಜೊತೆ ಆರನೇ ವಿಕೆಟ್‌ಗೆ 86 ರನ್ ಜೊತೆಯಾಟವಾಡಿದರು. 215 ಎಸೆತ ಎದುರಿಸಿದ ಜುರೇಲ್ ಆಟದಲ್ಲಿ ಒಂದು ಸಿಕ್ಸರ್, 13 ಬೌಂಡರಿಗಳಿದ್ದವು.



ಧ್ರುವ್ ಜುರೇಲ್

ಕರ್ನಾಟಕ ಮಹಿಳಾ ರಿಲೇ ತಂಡಕ್ಕೆ ಚಿನ್ನದ ಪದಕ

ತೇಜಸ್, ಪ್ರವೀಣ್‌ಗೆ ಏಷ್ಯನ್ ಗೇಮ್ಸ್ ಟಿಕೆಟ್

ಭುವನೇಶ್ವರ (ಪಿಟಿಐ): ರಾಷ್ಟ್ರೀಯ ದಾಖಲೆ ಹೊಂದಿರುವ ತೇಜಸ್ ಶಿರ್ಸೆ, 65ನೇ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಕೂಟದ ಮೂರನೇ ದಿನವಾದ ಶುಕ್ರವಾರ 110 ಮೀ. ಹರ್ಡಲ್ಸ್ ಓಟವನ್ನು ಸಲೀಸಾಗಿ ಗೆದ್ದರು. ಮಾತ್ರವಲ್ಲ, ಏಷ್ಯನ್ ಗೇಮ್ಸ್‌ಗೆ ಟಿಕೆಟ್ ಕಾದಿರಿಸಿದರು.

ಮಹಿಳೆಯರ 4x100 ಮೀ. ರಿಲೇ ಓಟದಲ್ಲಿ ಕರ್ನಾಟಕ ತಂಡ (ಪ್ರಕೃತಿ ರಾವ್, ಸುದೀಕ್ಷಾ, ದಾನೇಶ್ವರಿ, ಉನ್ನತಿ) 44.75 ಸೆ.ಗಳಲ್ಲಿ ದೂರ ಕ್ರಮಿಸಿ ಚಿನ್ನ ಗೆದ್ದಿತು. ತಮಿಳುನಾಡು (45.067) ಎರಡನೇ ಸ್ಥಾನ ಪಡೆಯಿತು.

ಮಹಾರಾಷ್ಟ್ರವನ್ನು ಪ್ರತಿನಿಧಿಸುತ್ತಿರುವ 24 ವರ್ಷ ವಯಸ್ಸಿನ ತೇಜಸ್ 13.61 ಸೆ.ಗಳಲ್ಲಿ ಗುರಿಮುಟ್ಟಿದರು. ಎಎಫ್‌ಐ ನಿಗದಿಪಡಿಸಿರುವ ಏಷ್ಯನ್ ಗೇಮ್ಸ್ ಅರ್ಹತೆಯ (13.63) ಅಗತ್ಯವನ್ನು ಪೂರೈಸಿದರು. ರಾಷ್ಟ್ರೀಯ ದಾಖಲೆ (13.27 ಸೆ.) ಅವರ ಹೆಸರಿನಲ್ಲೇ ಇದೆ. ತಮಿಳುನಾಡಿನ ಮಾನವ್ ಆರ್. (13.66 ಸೆ.) ಮತ್ತು ಕರ್ನಾಟಕದ ಕೃಷಿಕ್ ಎಂ. (13.69 ಸೆ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಯುರೋಪ್‌ನ ಒಂದು ರೇಸ್‌ನಲ್ಲಿ– ಲುಸಾನ್‌ನಲ್ಲಿ ಜುಲೈ 16 ಅಥವಾ ಬುಡಾಪೆಸ್ಟ್‌ನಲ್ಲಿ ಜುಲೈ 18ರಂದು ಸ್ಪರ್ಧಿಸಲು ಬಯಸಿರುವುದಾಗಿ ತೇಜಸ್ ಶಿರ್ಸೆ ಹೇಳಿದರು.

ಹ್ಯಾಮರ್ ಥ್ರೊ ಸ್ಪರ್ಧೆಯಲ್ಲಿ ದಮನೀತ್ ಸಿಂಗ್ (ಪಂಜಾಬ್) ಮತ್ತು ಪ್ರವೀಣ್ ಕುಮಾರ್ (ರಾಜಸ್ಥಾನ) ಅವರೂ ಏಷ್ಯನ್ ಗೇಮ್ಸ್‌ಗೆ ಅರ್ಹತೆ (69.12 ಮೀ.) ಸಂಪಾದಿಸಿದರು. ದಮನೀತ್ 69.72 ಮೀ. ದೂರ ಎಸೆದರೆ, ಪ್ರವೀಣ್ 69.58 ಮೀ. ದೂರ ಎಸೆದರು.

ಟ್ರಿಪಲ್ ಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆವೀರ ಪ್ರವೀಣ್ ಚಿತ್ರವೇಲ್ 16.92 ಮೀ. ಜಿಗಿತದೊಡನೆ ಏಷ್ಯನ್ ಗೇಮ್ಸ್‌ಗೆ ಅರ್ಹತೆ (ನಿಗದಿಗೊಳಿಸಿದ ದೂರ: 16.28 ಮೀ.) ಪಡೆದರು. ವಿಶೇಷ ಎಂದರೆ ಮೊದಲ ಆರು ಸ್ಥಾನ ಪಡೆದವರೂ ಅರ್ಹತೆ ಗಳಿಸಿದ್ದರು.



ಮಹಿಳೆಯರ 4x100 ಮೀ. ರಿಲೇ ಓಟದಲ್ಲಿ ಚಿನ್ನ ಗೆದ್ದ ಪ್ರಕೃತಿ ರಾವ್, ದಾನೇಶ್ವರಿ, ಸುದೀಕ್ಷಾ, ಉನ್ನತಿ

ಸೆರೆನಾಗೆ ಮೊದಲ ಸುತ್ತಿನಲ್ಲಿ ಮಾಯಾ ಎದುರಾಳಿ

ಲಂಡನ್ (ಎಎಫ್‌ಪಿ): ನಾಲ್ಕು ವರ್ಷಗಳ ನಂತರ ಪುನರಾಗಮನ ಮಾಡುತ್ತಿರುವ ದಿಗ್ಗಜ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಆಸ್ಟ್ರೇಲಿಯಾದ ಯುವ ಆಟಗಾರ್ತಿ ಮಾಯಾ ಜಾಯ್ಂಟ್ ಅವರನ್ನು ಎದುರಿಸಲಿದ್ದಾರೆ. ಸೋಮವಾರ ಆರಂಭವಾಗುವ ಈ ಚಾಂಪಿಯನ್‌ಷಿಪ್‌ನ 'ಡ್ರಾ' ಸಮಾರಂಭ ಶುಕ್ರವಾರ ನಡೆಯಿತು.

23 ಗ್ರ್ಯಾಂಡ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿಗಳ ಒಡತಿಯಾಗಿರುವ ಅಮೆರಿಕದ ಸೆರೆನಾ 2022ರಲ್ಲಿ ನಿವೃತ್ತರಾಗಿದ್ದರು. ಆದರೆ ಈ ತಿಂಗಳ ಆರಂಭದಲ್ಲಿ ಕ್ವೀನ್ಸ್ ಕ್ಲಬ್ ಮತ್ತು ಬರ್ಲಿನ್ ಓಪನ್ ಟೂರ್ನಿಯ ಡಬಲ್ಸ್‌ನಲ್ಲಿ ಆಡುವ ಮೂಲಕ ಸಕ್ರಿಯ ಟೆನಿಸ್‌ಗೆ ಮರಳಿದ್ದು, ವಾರದಿಂದ ಇಲ್ಲಿ ಅಭ್ಯಾಸದಲ್ಲಿ ತೊಡಗಿದ್ದಾರೆ.

ವಿಂಬಲ್ಡನ್‌ನಲ್ಲಿ ಸೆರೆನಾ ಏಳು ಬಾರಿ ಚಾಂಪಿಯನ್ ಆಗಿದ್ದಾರೆ. 44 ವರ್ಷ ವಯಸ್ಸಿನ ಆಟಗಾರ್ತಿಗೆ ಈ ಬಾರಿ ವೈಲ್ಡ್ ಕಾರ್ಡ್ ನೀಡಲಾಗಿದೆ. ಇಲ್ಲಿ ಅವರು ಅಕ್ಕ ವೀನಸ್ ವಿಲಿಯಮ್ಸ್ ಜೊತೆಗೂಡಿ ಡಬಲ್ಸ್‌ನಲ್ಲೂ ಕಣಕ್ಕಿಳಿಯಲಿದ್ದಾರೆ. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಈ ಸೋದರಿಯರ ಜೋಡಿ ಆರು ಬಾರಿ ಚಾಂಪಿಯನ್ ಆಗಿದೆ.

ಪುರುಷರ ಸಿಂಗಲ್ಸ್: ವಿಶ್ವದ ಅಗ್ರಮಾನ್ಯ ಆಟಗಾರ ಹಾಗೂ ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಅವರು ಸೋಮವಾರ ಮೊದಲ ಸುತ್ತಿನಲ್ಲಿ ಸರ್ಬಿಯಾದ ಮಿಯೊಮಿರ್ ಕೆಕ್ಮಾನೊವಿಕ್ ಅವರನ್ನು ಎದುರಿಸಲಿದ್ದಾರೆ.

ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಏಳನೇ ಶ್ರೇಯಾಂಕ ಪಡೆದಿದ್ದು, ಚೀನಾದ ವು ಯಿಬಿಂಗ್ ಅವರನ್ನು ಎದುರಿಸುವ ಮೂಲಕ ಅಭಿಯಾನ ಆರಂಭಿಸುವರು.



ಸೆರೆನಾ ವಿಲಿಯಮ್ಸ್

ಪ್ರೊ ಲೀಗ್: ಭಾರತಕ್ಕೆ ಮಣಿದ ಪಾಕ್

ಲಂಡನ್ (ಪಿಟಿಐ): ಅಮೋಘ ಆಟವಾಡಿದ ಭಾರತ ತಂಡವು ಶುಕ್ರವಾರ ರಾತ್ರಿ ನಡೆದ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ 7–1 ಗೋಲುಗಳಿಂದ ಪಾಕಿಸ್ತಾನ ತಂಡವನ್ನು ಸುಲಭವಾಗಿ ಮಣಿಸಿತು.

ಹರ್ಮನ್‌ಪ್ರೀತ್ ಕೌರ್ ಪಡೆಗೆ ಲಂಡನ್ ಚರಣದಲ್ಲಿ ಪಾಕ್ ವಿರುದ್ಧ ಸತತ ಎರಡನೇ ಗೆಲುವು ಇದಾಗಿದೆ. ಭಾರತಕ್ಕೆ ಒಟ್ಟಾರೆ ನಾಲ್ಕನೇ ಗೆಲುವಾಗಿದೆ. ಪಾಕ್ ತಂಡದ ಸೋಲಿನ ಸರಪಣಿ 15ನೇ ಪಂದ್ಯಕ್ಕೂ ವಿಸ್ತರಣೆಯಾಯಿತು.

ಭಾರತದ ಪರ ಸುಖಜಿತ್ ಸಿಂಗ್ (20ನೇ), ಹರ್ಮನ್‌ಪ್ರೀತ್ (26ನೇ), ಹಾರ್ದಿಕ್ ಸಿಂಗ್ (34ನೇ), ಜುಗರಾಜ್ ಸಿಂಗ್ (35ನೇ), ಅಭಿಷೇಕ್ (41ನೇ), ಪಾಲ್ ರಾಜ್‌ಕುಮಾರ್ (44ನೇ) ಮತ್ತು ದಿಲ್‌ಪ್ರೀತ್ ಸಿಂಗ್ (54ನೇ) ಗೋಲು ಗಳಿಸಿದರು. ಪಾಕ್ ಪರ ಏಕೈಕ ಗೋಲನ್ನು ಮೊಹಮ್ಮದ್ ಅಬು (13ನೇ) ದಾಖಲಿಸಿದರು.

ಭಾರತ ತಂಡವು ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 1–4ರಿಂದ ಆತಿಥೇಯ ಇಂಗ್ಲೆಂಡ್ ತಂಡಕ್ಕೆ ಸೋತಿತ್ತು. ನಿಗದಿ ಅವಧಿಯ ಆಟ ಮುಗಿದಾಗ ಸ್ಕೋರ್ 2–2 ರಲ್ಲಿ ಸಮನಾಗಿತ್ತು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

WANTED BDA SITES ANJANAPURA BANASHANKARI 6TH STAGE COMMERCIAL & RESIDENTIAL ANY MEASUREMENT CONTACT: 9845298419

SITE FOR SALE Anjanapura 5th Block, 80 feet parallel, South-East Corner- 3700 Sqft (Owner meeting) Contact: 8050009909

Banashankari

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

50×80 [WEST] BANASHANKARI 6TH Stage, 2nd Block BDA site Clear Documents 17000per sqft Ph: 9972442398

BANASHANKARI 6TH Phase BDA Corner Auction Site 775 Sq.ft., FOR SALE 1.05Cr. Non-negotiable. Brokers Excuse, Only Genuine Buyers. Call 9986789426

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

BANASHANKARI 6TH Stage 11th Block, 40x60 Site Sale, Close to 80 Feet Road, 9972338060/ 9880448478.

Bannerghatta Road

KHB Sites
Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Hosur Road

"ATTIBELE NRI LAYOUT 40x60 South facing Site for sale near TVS Factory Excellent location. 9845500019/ 7019314962"

HSR Layout

HSR LAYOUT Sector-1
SITE FOR SALE
43x30
North Facing
40 Feet Road
Prime Location, with BBMP Plan Approval Borewell, Opposite 27th Main, Price 6Cr.
Call: 9945184508 / 7349773989

Jakkur

JAKKUR, BDA Corner Auction Site 749 Sq.ft., FOR SALE 1.25Cr. Non-negotiable. Brokers Excuse, Only Genuine Buyers. Call 9986789426

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Vishweshwariah Layout

VISHWESHWARAIAH LAYOUT BDA 6th Block 20x30 West Facing 30 Feet Road Direct Owner Meeting: 6360050356

BDA SITE FOR SALE. 40*60 South face, 40 feet road Near 100 feet road VISHVESHWARAIAH LAYOUT, PRICE Rs13500/sqft. Contact :9743322555

VISHWESHWARAIAH LAYOUT 50x80 West Facing 40ft Road BDA 8TH Block, 40x60 North 60ft Road: 9980409820

Nelamangala

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

VCNR VISTA NEAR NELAMANGALA & HESARGHATTA 30X40 & 30X50 BOOK A SITE VISIT CONTACT:9986896859

House

Banashankari

SALE: RESIDENTIAL SITE, HOUSE, FLATS/ Commercial Buildings BANASHANKARI 2nd/ 3rd Stage Jayanagar, J.P.Nagar,BTM, Basavanagudi, Hanumanthanagar 7760019494.

"BANASHANKARI 2ND-STAGE 30x50, 35x55, 40x60, Banashankari 3rd Stage 40x60, Kanakapura Road 30x40. Call: 9845286505"

Jayanagar

JAYANAGARA 4TH T' Block,30x40,Old House Near SSMRV College Price 4.60CR Contact; 9845704509

Malleshwaram

MALLESWARAM 25X37 West facing Price. 39000/- slightly Negotiable Beautiful location Agreement holder meeting. Contact: 9663983846

Vijayanagar

BDA 20X25 House EF, RPC Layout, Near Post Office, By2 Coffee Hotel, Vijayanagar 1.25Cr 9739957911

Agricultural Land

Multiple Locations

DISTRESS SALE Inner Ring Road Facing 2 Acres, Kumbalagudu 4 Acres, Banashankari 45000 Sft. Contact: 9844314606.

Out-Station

AGRICULTURE LAND For Sale near Hiriyur, Chitrdurga Dist. 35 acres near River with road and elctricity. Contact: No. 9448704078.

Commercial Land

Out-Station

FOR SALE: Coffee Plantation on National Highway with commercial conversion. Between Sakleshpura to Dharmasthala Road. Contact: 99456-03806

NA COMMERCIAL LAND FOR SALE
14 Acre Land
Clear Title at Near to Gabbur Circle, P.B. Road, HUBLI Entrance. Available for Sale. Contact :
9845105497
9845142695
Mail Id : hublicigarette.12@gmail.com

Flat

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT. 80507-27159/ 96065-03064

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Industrial & Factory

Magadi Road

FOR SALE: Land for Sale in Magadi Road near to Nice Road. Suitable for Industries/ ware house/ Commercial Use. Contact: 99456-03806

Commerical

Vishweshwariah Layout

26X80 VISHWESHWARAIAH Layout Commercial BDA Site, 3rd Block North, 80ft Ullal Main Road 21,000/- Psqft Negotiable: 9845793121

Residential/ Commercial

Devanahalli

RENT
Brand New "A" grade OFFICE / WAREHOUSE Building 20,000 Sqft
DEVENAHALLI
LOCATED BEHIND AEROSPACE SEZ, NEAR AIRPORT, FACING HIGHWAY.
with Parking For Light & Commercial Vehicles, 100% Power Backup.
Call Owners 9845035196
sterlingestatesindia.com

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

Sites

Vishweshwariah Layout

BUYING/ SELLING 20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA-LAYOUT.Contact: 9844533371/ 9341733480

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact : 9902038118, 9449060605

Industrial And Factory

BUILD TO SUIT INDUSTRIAL-SHED IN HAROHALLI 3rd Phase KIADB Industrial-Area Kanakapura Road 26500sqft on-1Acre Land Facing North Call:9845045941

Commercial

FOR RENT: Office Space Ground Floor 1000Sq.ft. at Mahalakshmipuram. Ideal for Office. Contact: 9448491761

GRADE A Commercial space of 9000 sq.ft with 11 car parkings for lease in 2nd floor of Vaswani Augusta with OC, adjacent to Embassy Golf Business park, Challaghatta. Contact. No. 8618069323.

PROPERTY CORNER

FULLY FURNISHED OFFICE SPACE FOR RENT @MILLERS ROAD

FULLY FURNISHED AIR CONDITIONED OFFICE SPACE FOR RENT AT MILLERS RD NR. CUNNINGHAM RD JUNCTION 4620 Sft WITH 43 WORKSTATIONS, 5 CABINS, RECEPTION, CONFERENCE ROOM WITH PROJECTOR, PANTRY, RESTROOMS 3 CAR PARKS, TWO WHEELER PARKING, PLUS DG POWER BACKUP
Rs 110 PER SQ Feet & Rs 6.00 Maintenance
Email: bangalore@powericaltd.com
Call: 9980497693 (Btwn: 9-6pm)

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Commercial Land

General

SEEKING 0.5ACRE lease in Bangalore for Swimming Academy. Attractive returns & Equity while retaining land ownership. 8075266621

RENTAL PROPERTIES

Accommodation Available

Flats

MALLESWARAM 2BHK Flat 2nd Floor, Lift, Carparking Rent 30000/- Plus Maintenance Mail: durga824@gmail.com

BUSINESS

Business Offers

Business For Sale

A MEDICAL Device Manufacturing Unit, with a ready to market USFDA cleared product, Neuromuscular Transmission Monitoring during surgery, based out of Panjim, GOA, available for sale or takeover. DM at 9561092576 for more details.

PERSONAL

Change of Name

CHANGE OF NAME
I, FARIHA NAUREEN IMTIAZ AHMED, residing at No. #111, Hafeeza Chambers, 4th Floor, K.H. Road, Bengaluru-560027, have changed my name to FARIHA NAUREEN vide affidavit dated 25-06-2026 before notary Meer Hassn, Bengaluru.
Henceforth I shall be called FARIHA NAUREEN only

SOCIAL SERVICES

Old Age Home

SUKHSHANTHI LUXURY Retirement Home, near Sarjapura Bangalore Rs. 22,575/- monthly Rs. 1,500 per day furnished accommodation. 3 Meals, 24X7 Nurse, Ambulance. Call: 9341289357

EDUCATION

To Place your Classified Ads Contact: 9845114560

ಮನದ ಪ್ರತಿಫಲನವಾಗಲಿ ಮನೆಯಂಗಳ

ಹಸಿರು ಗಿಡ, ಪುಸ್ತಕ ಕಪಾಟು, ಫೋಟೋ ಫ್ರೇಮ್‌ಗಳು ಮನೆಯ ಅಂದವನ್ನು ಹೆಚ್ಚಿಸುತ್ತವೆ. ಮನೆಯ ಖಾಲಿ ಗೋಡೆಗಳ ಮೇಲೆ ಕಲಾವಿದರ ಕಲಾಕೃತಿಗಳ ಕಲ್ಪನೆಗಿರಲಿ ಜಾಗ.

• **ನಾಗರಾಜು ಅಶ್ವತ್ಥ್**, ಬೆಂಗಳೂರು



ನೆಮ್ಮದಿಗಾಗಿ ಜಗವನ್ನೆಲ್ಲಾ ಹುಡುಕುವ ನಾವು ಪೂರ್ವದ ಸೂರ್ಯ ಮುಳುಗುವ ವೇಳೆಗೆ ಮನೆಯ ಮಡಿಲಿಗೆ ವಾಪಸ್ಸಾಗುತ್ತೇವೆ. ಈ ಮನೆಯೆಂಬ ಪುಟ್ಟ ಪ್ರಪಂಚದಲ್ಲಿ ನಾವಿಟ್ಟ ವಸ್ತುಗಳು ನಮ್ಮ ಮನಸ್ಸಿನ ಮೇಲೆ ಪರಿಣಾಮ ಬೀರಬಲ್ಲವೇನು ಎನ್ನುವ ಪ್ರಶ್ನೆಗೆ 'ಹೌದು' ಎಂಬ ಉತ್ತರ ಸಿಗುತ್ತದೆ. ಮನೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಬಟ್ಟೆಗಳು, ಗೋಡೆಯಲ್ಲಿ ಸದ್ದೇ ಮಾಡದೇ ನಿರ್ಜೀವಗೊಂಡ ಗಡಿಯಾರ, ಬಣ್ಣವೇ ಕಳೆಗುಂದಿ ಬಿರುಕು ಬಿಟ್ಟ ಗೋಡೆ, ಹೀಗೆ ಪ್ರತಿಯೊಂದು ವಿಷಯವೂ ಸಹ ಮನೆಯ ಮೇಲಷ್ಟೇ ಅಲ್ಲ, ಮನಸ್ಸಿನ ಮೇಲೂ ನೇರ ಪರಿಣಾಮ ಬೀರುತ್ತವೆ. ಹೀಗಾಗಿ, ನಮ್ಮ ಮನೆಯಂಗಳವನ್ನು ನಮ್ಮ ಮನದಾಳದ ನೆಮ್ಮದಿಯನ್ನು ನೀಡುವ ಜಾಗವಾಗಿ ನಾವೇ ಬದಲಾಯಿಸಿಕೊಳ್ಳಬೇಕು.

ನೆಮ್ಮದಿಗಾಗಿ ಜಗದಗಲ ಹುಡುಕಿದ ಕಣ್ಣಿಗೆ ಮನೆಯಂಗಳದಲ್ಲೇ ಅದು ಸಿಗಬೇಕೆಂದರೆ 'ಸೆಲ್ಫ್ ಇಂಟೀರಿಯರ್ ಡಿಸೈನ್'ಗೆ ಹೆಚ್ಚಿನ ನಿಗಾ ಕೊಡಬೇಕು. ಇಂಟೀರಿಯರ್ ಡಿಸೈನ್ ಎಂದರೆ ಕೇವಲ ಐಶಾರಾಮಿ ಸೋಫಾ, ಬೆಲೆಬಾಳುವ ಲೈಟುಗಳು ಮಾತ್ರವಲ್ಲ. ಮನಸ್ಸಿಗೆ ಮುದ ನೀಡುವ ಸಸಿಯುಳ್ಳ ಪಾಟ್, ಮಿದುಳಿಗೆ ನೆಮ್ಮದಿಯನ್ನು ಉಣಬಡಿಸುವ ಪುಸ್ತಕ ಕಪಾಟು ಮಾತ್ರವಲ್ಲದೇ ಮನೆಯಲ್ಲಿ ಯಾವ ವಸ್ತು ಹೇಗಿರಬೇಕೆನ್ನುವ ಚಿಕ್ಕದೊಂದು ಕ್ರಿಯಾಯೋಜನೆ ಸಹ ಇಂಟೀರಿಯರ್ ಡಿಸೈನ್. ಅಂಗೈ ಅಗಲದ ಜಾಗದಲ್ಲಿ ಯಾರೇ ಬಂದು ನೋಡಿದರೂ ಅಚ್ಚರಿ ಪಡುವಂತೆ ವಸ್ತುಗಳನ್ನು ಅಚ್ಚುಕಟ್ಟಾಗಿ ಜೋಡಿಸುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಮನೆಗಿಂತ ಹೊರಗೆಲ್ಲೋ ಹೋಟೆಲ್ ಇಷ್ಟ ಎಂಬಂತಾಗುತ್ತದೆ. ಸ್ವಂತ ಮನೆಯೇ ಬೋರಾಗಿಬಿಡುತ್ತದೆ. ನಮ್ಮ ಮನೆ ನಮಗೇ ಬೋರಾದರೆ, ಬರುವ ಬೇರೆಯವರಿಗೆ ಹೇಗೆ ತಾನೆ ಇಷ್ಟವಾದೀತು? ಹೀಗಾಗಿ, ಪ್ರತಿಯೊಂದು ಮನೆಯ ಅಂಗಳದಲ್ಲೊಂದಿಷ್ಟು ಬದಲಾವಣೆಗೆ ಮಹತ್ವ ನೀಡಬೇಕು. ಮನೆಯ ಒಳಾಂಗಣದಲ್ಲಿ ಆಕರ್ಷಕ ಸಸ್ಯದ ಗಿಡಗಳು, ಗೋಡೆಗೆ ಫೋಟೋಗಳು, ಕಲಾಕೃತಿಗಳು, ಪ್ರಮುಖವಾಗಿ ಪುಸ್ತಕಗಳು ನಿಜಕ್ಕೂ ಎಲ್ಲರ ಗಮನ ಸೆಳೆಯುತ್ತವೆ. ಪ್ರಸ್ತುತ ಅನೇಕ ಮನೆಗಳ ಇಂಟೀರಿಯರ್‌ನಲ್ಲಿ ಈ ವಸ್ತುಗಳಿಗೆ ಜಾಗ ಇದ್ದೇ ಇದೆ. ಅದು ಸ್ವಂತ ಮನೆಯೇ ಸರಿ, ಬಾಡಿಗೆ ಮನೆಯೇ ಸರಿ. ಇಂಟೀರಿಯರ್ ವಿಚಾರದಲ್ಲಿ ಈ ಅಂಶಗಳಿಗೆ ಹೆಚ್ಚಿನ ಜಾಗ ನೀಡಲೇಬೇಕು. ಕುರ್ಚಿ, ಟೇಬಲ್ ಸೇರಿದಂತೆ ಐಶಾರಾಮಿ ವಸ್ತುಗಳು ನೀಡುವ ಆಕರ್ಷಣೆಗೆ ಪುಸ್ತಕ, ಸಸಿ, ಕಲಾಕೃತಿ ಹೊಸ ಮೆರುಗನ್ನು ಜೋಡಿಸುತ್ತದೆ. ಆ ಮೂಲಕ ಜಗತ್ತಿನಲ್ಲಿ ಸಿಗದ ನೆಮ್ಮದಿಯ ಹಿಡಿಯೊಂದನ್ನು ಮನೆಯಲ್ಲೇ ಪಡೆಯಲು ಸಾಧ್ಯವಾಗುತ್ತದೆ.

ಕಲಾಕೃತಿಗಳಿಗೆ ಜಾಗ: ಮನೆಯ ಗೋಡೆಗಳನ್ನು ಖಾಲಿ ಬಿಡುವುದಕ್ಕಿಂತ ಆಯಾ ಬಣ್ಣಕ್ಕೆ ತಕ್ಕಂತೆ ಕಲಾಕೃತಿಗಳ ಫೋಟೋ ಫ್ರೇಂ ಹಾಕಿದರೆ ಹೆಚ್ಚಿನ ಆಕರ್ಷಣೆ ಎದ್ದು ತೋರುತ್ತದೆ. ಬಾಗಿಲು ತೆಗೆದು ಒಳಬರುವ ಅತಿಥಿಗಳಿಗೆ ಮೊದಲಿಗೆ ಸ್ವಾಗತಿಸುವುದೇ ಈ ಕಲಾಕೃತಿಗಳ ಫೋಟೋಗಳೆಂಬಂತೆ ತೋರುತ್ತದೆ. ಪ್ರಸ್ತುತ, ಆನ್‌ಲೈನ್ ಪ್ರಪಂಚದಲ್ಲಿ ನವೀನತೆಯ ನಾನಾ ಕಲಾಕೃತಿಗಳ ಫೋಟೋಗಳು ಲಭಿಸುತ್ತವೆ. ಕಡಿಮೆ ಖರ್ಚಿನಲ್ಲಿ ಕೆಲ ಆಕರ್ಷಕ ಕಲಾಕೃತಿಗಳ ಫೋಟೋಗಳನ್ನು ತಂದು ಗೋಡೆಗೆ ಹಾಕಿದರೆ ಮನೆಗೆ ಹೊಸದೊಂದು ಸ್ವರೂಪ ಸಿಕ್ಕಂತಾಗುತ್ತದೆ. ಖರ್ಚಾದರೂ ಪರವಾಗಿಲ್ಲವೆಂದರೆ ಚಿತ್ರಕಲಾ ಪರಿಷತ್ತಿನ ಚಿತ್ರಸಂತೆಗೆ ಭೇಟಿ ನೀಡುವುದು ಅಥವಾ ಕೆಲ ಕಲಾವಿದರ ಕುಂಚದಿಂದ ಅರಳಿದ ಅದ್ಭುತ ಕಲಾಕೃತಿಗಳು ಖರೀದಿಗೆ ಸಿಗುತ್ತವೆ. ಈ ಫೋಟೋ ಫ್ರೇಂಗಳು ಮನೆಗೆ ಅಂದ ನೀಡುತ್ತವೆ.

ಆನ್‌ಲೈನ್‌ನಲ್ಲೇ ಈ ಪ್ರಪಂಚ

- ಮನೆಗೆ ಹೊಸದಾಗಿ ವಸ್ತು ಖರೀದಿಸುವವರು ಇಂಟೀರಿಯರ್‌ಗೆ ಆನ್‌ಲೈನ್ ಮೊರೆ ಹೋಗುತ್ತಾರೆ. ಇದೇ ವೇಳೆ ಆನ್‌ಲೈನ್‌ನಲ್ಲಿ ಇಂಟೀರಿಯರ್ ಅಂತಿಮಗೊಳಿಸುವ ವೇಳೆ ಮಾಡುವ ವೇಳೆ ಪುಸ್ತಕ, ಪ್ಲಾಂಟ್ಸ್, ವಾಲ್ ಪೇಂಟಿಂಗ್ಸ್ ಎಂದೆಲ್ಲಾ ಪರಿಶೀಲಿಸಿದರೆ ಅತ್ಯುತ್ತಮ ಡೀಸೈನಿಂಗ್ ಐಡಿಯಾಗಳು ಸಿಗುತ್ತವೆ.
- ವಿಶೇಷವಾಗಿ, ಈಗ ತಂತ್ರಜ್ಞಾನದ ಕೊಡುಗೆಯಾಗಿ ಎಐ ಇದೆ. ಮನೆಯ ಒಳಾಂಗಣಕ್ಕೆ ತಕ್ಕಂತೆ ಆಕರ್ಷಕ ಸ್ವರೂಪಕ್ಕೊಂದು ಟಿಪ್ ಕೊಡು ಎಂದು ಕೇಳಿದರೆ ಅದ್ಭುತ ಸಲಹೆಗಳನ್ನು ನೀಡುತ್ತದೆ.
- ನೆನಪಿರಲಿ, ಎಐ ವಾಸ್ತು ಸಹಿತ ಇಂಟೀರಿಯರ್ ಮಾರ್ಗೋಪಾಯಗಳನ್ನು ನೀಡುತ್ತದೆ.



ಗೋಡೆ ಮೇಲೊಂದು ನೆನಪಿನ ಅಂಗಳ: ಮನೆಯ ಪ್ರತಿಯೊಂದು ಗೋಡೆಯನ್ನು ಖಾಲಿ ಬಣ್ಣದಿಂದ ತುಂಬುವ ಬದಲಿಗೆ ಆ ಗೋಡೆಯ ಮೇಲೊಂದು ನೆನಪಿನ ಅಂಗಳ ತೆರೆಯಲು ಅವಕಾಶವಿದೆ. ಮನೆಯಲ್ಲಿ ಮಕ್ಕಳಿದ್ದರೆ, ಅವರ ಬೆಳವಣಿಗೆಯ ಹಂತದ ಫೋಟೋಗಳು, ಅಥವಾ ಬದುಕಿನ ಪ್ರಮುಖ ಘಟ್ಟದ ಫೋಟೋಗಳನ್ನು ಪ್ರಿಂಟ್ ತೆಗೆಸಿ, ನವೀನಾಕೃತಿಯ ಫೋಟೋ ಫ್ರೇಂಗೆ ಸೇರಿಸಿ ಒಂದು ಗೋಡೆಗೆ ಸೇರಿಸಿದರೆ ನಿಜಕ್ಕೂ ಆಕರ್ಷಕವಾಗಿರುತ್ತದೆ. ಫೋಟೋ ಫ್ರೇಂಗಳು ಅತ್ಯಂತ ಕಡಿಮೆ ದರಕ್ಕೆ ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಒಳಗೆ ಸೇರಿಸಲು ಫೋಟೋ ಮಾತ್ರ ನೀವು ಅಂತಿಮಗೊಳಿಸಬೇಕು. ಆಕರ್ಷಕ ನೋಟವನ್ನು ಆ ಫೋಟೋಗಳೇ ಮನೆಗೆ ನೀಡುತ್ತವೆ.

ಔಷಧ ಸಸ್ಯಗಳು ಪಾಟ್ ಆಕರ್ಷಣೆ: ಸೂರ್ಯನ ಬೆಳಕಿಲ್ಲದೇ ಆಹಾರ ತಯಾರಿಸಿಕೊಳ್ಳಲಾಗದೇ ಬಹುತೇಕ ಸಸಿಗಳು ಸಾವನ್ನಪ್ಪುತ್ತವೆ. ಆದರೆ, ಕೆಲ ಸಸಿಗಳು ಮನೆಯಂಗಳದಲ್ಲೂ ಸೂರ್ಯನ ನೇರ ಬೆಳಕಿಲ್ಲದೇ ಜೀವಂತಿಕೆ ಕಾಯ್ದುಕೊಳ್ಳುತ್ತವೆ. ನಿಮ್ಮ ಸಮೀಪದ ನರ್ಸರಿಗೆ ಅಥವಾ ಕೆಲ ವೆಬ್ ಪೋರ್ಟಲ್‌ಗಳಲ್ಲಿ ಇಂಪೀರಿಯಲ್ ಸಸಿಗಳಿಗೆ ಸಾಕಷ್ಟು ಡಿಮ್ಯಾಂಡ್ ಸೃಷ್ಟಿಯಾಗಿದೆ. ಸಸಿಗೆ ತಕ್ಕಂತೆ ಮನೆಯ ಇಂಟೀರಿಯರ್‌ಗೆ ಹೊಂದುವ ಪಾಟ್ ಸಮೇತ ಮಾರುಕಟ್ಟೆಯಲ್ಲಿ ಲಭ್ಯತೆಯಿದೆ. ನಮ್ಮ ಮನೆಯ ಯಾವ ಮೂಲೆಗೆ ಯಾವ ಸಸಿಯನ್ನಿಟ್ಟರೆ ಹೇಗೆ ಕಾಣಿಸಬಹುದು ಎನ್ನುವ ಚಿಕ್ಕದೊಂದು ಕಲ್ಪನಾಶಕ್ತಿಯ ಮೇಲೆ ಹೊಸ ಲುಕ್ ನಿಶ್ಚಿತವಾಗುತ್ತದೆ. ಆಕರ್ಷಣೆಗೆಂದೇ ಕೆಲ ಸಸಿಗಳಿದ್ದು, ಔಷಧೀಯ ಸಸಿಗಳಲ್ಲೂ ಕೆಲವೊಂದು ಇಂಟೀರಿಯರ್‌ಗೆ ಹೊಂದುತ್ತವೆ. ಈ ಸಸ್ಯಗಳ ಪಾಟ್‌ಗಳನ್ನು ಮನೆಯಂಗಳದಲ್ಲಿಡುವುದು ಹೆಚ್ಚು ಲಾಭದಾಯಕ.

ಪುಸ್ತಕಗಳನ್ನು ಮರೆಯಬೇಡಿ!: ಯಾವುದೇ ಮನೆಯಿರಲಿ. ಅದು ಶ್ರೀಮಂತಗೊಳ್ಳಲು ಪುಸ್ತಕಗಳಿರಬೇಕು. ಮನೆಯಲ್ಲಿ ಒತ್ತಡ ನಿವಾರಣೆಯಾಗಲು, ನೆಮ್ಮದಿ ನೆಲೆಸಲು ಓದಿಗೆ ಹೆಚ್ಚಿನ ಮಹತ್ವ ನೀಡಬೇಕು. ಜತೆಗೆ, ಮನೆಗೆ ಬರುವ ಅತಿಥಿಗಳ ಗಮನ ಸೆಳೆಯಲು ಸಹ ಪುಸ್ತಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಮನೆ ಪುಟ್ಟದಾದರೂ ಅಂಗಳಕ್ಕೆ ಹೊಂದುವಂತೆ ಪುಸ್ತಕಗಳಿಗೆ, ಸಸಿಗಳಿಗೆ, ಫೋಟೋ ಫ್ರೇಂಗಳಿಗೆ ಜಾಗ ಕೊಟ್ಟರೆ ಸಾಕಷ್ಟು ಆಕರ್ಷಕ ರೂಪ ಸಿಗುತ್ತದೆ.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331


ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

PRM/KA/RERA/1251/308/PR/281125/008287

ಡಿಎಸ್ ಮ್ಯಾಕ್ಸ್
ಸ್ಕೈ ಸ್ಟಾಂಜಾ

8880 003 003
www.dsmaxproperties.com



DS MAX®

DS MAX SKY STANZA

2 & 3-BHK HOMES | ▲G + 14 FLOORS▼

LUXURIOUS 2 & 3-BHK APARTMENTS

Jigani | 5 mins. APC Circle

2-BHK STARTS @ ₹ 61 L*

3-BHK STARTS @ ₹ 78 L*

PRICE INCREASE ALERT!

Due to Shifting Market Factors and Rising Material Costs

DS MAX Property Prices will Adjust Upward Soon.
Secure Your Investment at Current Rates Today.

Visit our website or talk to our advisors for the complete portfolio

2, 3 & 4-BHK APARTMENTS FOR SALE IN VARIOUS LOCATIONS

RERA	Location	Landmark	Price	Phone	Floors
PRM/KA/RERA/1251/308/PR/160824/006973	BANNERGHATTA RD	NEAR KOPPA GATE	₹ 59.86 - 85.23 Lakhs*	8880 013 310	G+14
PRM/KA/RERA/1251/310/PR/210324/006724	SILKBOARD	NEAR SINGASANDRA METRO	₹ 91.27 L - 1.47 Cr*	8880 013 310	G+14
PRM/KA/RERA/1251/472/PR/250225/007524	AIRPORT ROAD	NEAR PRESTIGE TECH IT PARK	₹ 87.89 L - 1.21 Cr*	8880 465 465	G+14
PRM/KA/RERA/1251/310/PR/150223/005721	MYSORE ROAD	NEAR CHALLAGHATTA METRO	₹ 75.00 L - 1.06 Cr*	8880 461 461	G+14
PRM/KA/RERA/1250/304/PR/251024/007179	WHITEFIELD	10 MINS. HOPEFARM METRO	₹ 77.91 L - 1.32 Cr*	8880 461 461	G+14
PRM/KA/RERA/1251/310/PR/151223/006489	BANASHANKARI	OPP. NPS SCHOOL	₹ 1.45 - 2.17 Cr* (3 & 4-BHK)	8880 461 461	G+3
PRM/KA/RERA/1251/308/PR/291225/008366	HOSUR ROAD	10 MINS. ELECTRONIC CITY	₹ 62.71 L - 1.01 Cr*	8880 003 003	G+22
PRM/KA/RERA/1250/304/PR/150224/006622	WHITEFIELD	SOUKYA ROAD	₹ 72.86 L - 1.12 Cr*	8880 461 461	G+14
PRM/KA/RERA/1251/308/PR/230126/008427	SARJAPURA	SARJAPUR - ATTIBELE ROAD	₹ 60.01 - 83.25 Lakhs*	8880 003 003	G+4
PRM/KA/RERA/1251/310/PR/050526/008622	MAGADI ROAD	10 MINS. NICE ROAD TOLL	₹ 92.49 L - 1.23 Cr*	8880 465 465	G+14
PRM/KA/RERA/1251/308/PR/160824/006972	HOSA ROAD	NEAR ELECTRONIC CITY	₹ 80.01 L - 1.44 Cr*	8880 013 310	G+4
PRM/KA/RERA/1250/301/PR/251024/007178	YELAHANKA	5 MINS. RAJANUKUNTE	₹ 56.25 - 97.21 Lakhs*	8880 465 465	G+14

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES



We Manage and Maintain Your Apartment

9164 022 000

INTERIORS



We design and style your home.

9164 056 000

REFER A DS MAX HOME



Refer a buyer to earn big

9164 043 000

REFER A LAND TO DS MAX



Offer a Land, Get a Home.

8880 463 463

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಕಲ್ಪವೃಕ್ಷ ಗ್ರೀನ್

PREMIUM PLOTS FOR SALE

A Landmark Opportunity to Own Premium Residential Plots Near Devanahalli
One of the Fastest Developing Areas in Bengaluru.

Plot Size Available : 30x30 | 30x40 | 30x50 | 40x60 | 50x80

Near Devanahalli, North Bangalore



LOCATION ADVANTAGES

- Close to International Airport
- Just 5min Drive to IT/BT Park
- 1km away from Industrial Area
- Near Upcoming Metro Station
- Well Connected to Major Highways
- Near Railway Station









AMENITIES

- Entrance Arch
- Underground Savage Lines With Stp
- Children Play Area
- 24hrs Security
- Solar Street Light
- 60 ft Road & 35 - 40 ft Road
- Park With Jogging Track
- Underground Electricity
- Clubhouse or Party Hall
- Sanitary Connection

FOR BOOKING CONTACT 90355 97620 / 63615 47442